ಗಿರಿಜನ ಉಪ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್ ಡಿ ಮಹಾಪ್ರಬಂಧ

ಸಂಶೋಧಕರು

ಶ್ರೀನಿವಾಸ ಎಂ ಸಿ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು

ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ೫೬೦ ೦೨೭

ಮಾರ್ಗದರ್ಶಕರು

ಡಾ ಕೆ ಎಂ ಮೈತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಅಕ್ಟೋಬರ್ ೨೦೦೪

ಗಿರಿಜನ ಉಪ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್ ಡಿ ಮಹಾಪ್ರಬಂಧ

ಸಂಶೋಧಕರು

ಶ್ರೀನಿವಾಸ ಎಂ ಸಿ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು

ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ೫೬೦ ೦೨೭

ಮಾರ್ಗದರ್ಶಕರು

ಡಾ ಕೆ ಎಂ ಮೈತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಅಕ್ಟೋಬರ್ ೨೦೦೪

ಪ್ರಮಾಣ ಪತ್ರ

ಗಿರಿಜನ ಉಪ ಯೋಜನೆ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಕೆ.ಎಂ.ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨.೧೧.೨೦೦೪

ಸ್ಥಳ : ವಿದ್ಯಾರಣ್ಯ

ಶ್ರೀ.ಎಂ.ಸಿ

(ಶ್ರೀನಿವಾಸ ಎಂ.ಸಿ.)

ಸಂಶೋಧಕ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ಪತ್ರ

ಶ್ರೀ ಶ್ರೀನಿವಾಸ ಎಂ ಸಿ ಇವರು ಗಿರಿಜನ ಉಪ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨.೧೧.೨೦೦೪
ಸ್ಥಳ : ವಿದ್ಯಾರಣ್ಯ

(ಡಾ ಕೆ ಎಂ ಮೈತ್ರಿ)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್ ಡಿ ಅಧ್ಯಯನಕ್ಕೆ ಅನುಮತಿಕೊಟ್ಟ ಶ್ರೀ ಜಾವಿದ್ ಅಕ್ತರ್ ಭಾ.ಆ.ಸೇ, ಹಿಂದಿನ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆರವರಿಗೆ.

ಅಧ್ಯಯನದ ಪ್ರಾರಂಭದಿಂದ ಅಂತ್ಯದವರೆಗೆ ಸೂಕ್ತ ಸಲಹೆಗಳನ್ನು, ನಿರಂತರ ಉತ್ತೇಜನ ಮತ್ತು ಸ್ಫೂರ್ತಿ ನೀಡುವುದರೊಂದಿಗೆ ಮಹಾ ಪ್ರಬಂಧ ರೂಪುಗೊಳ್ಳುವಲ್ಲಿ ಮಾರ್ಗದರ್ಶನ ನೀಡಿದ ಡಾ.ಕೆ.ಎಂ.ಮೈತ್ರಿ ಮುಖ್ಯಸ್ಥರು ಬುಡಕಟ್ಟು ಅಧ್ಯಯನ ವಿಭಾಗ ರವರಿಗೆ

ಅಧ್ಯಯನದ ಸಮಯದಲ್ಲಿ ಸಂಶೋಧನೆಯ ಬಗ್ಗೆ ಇದ್ದ ಅನುಮಾನಗಳನ್ನು ಬಗೆಹರಿಸಿ ಸೂಕ್ತ ಸಲಹೆ ಹಾಗೂ ಮಾಹಿತಿಯನ್ನು ನೀಡಿದ ಡಾ.ಹಿ.ಚಿ.ಬೋರಲಿಂಗಯ್ಯ, ಡಾ.ಕೇಶವನ್ ಪ್ರಸಾದ್, ಡಾ.ಚಲುವರಾಜ್ ಮತ್ತು ಬುಡಕಟ್ಟು ಅಧ್ಯಯನ ವಿಭಾಗದ ಎಲ್ಲಾ ಸಿಬ್ಬಂದಿಯವರಿಗೆ. ಕ್ಷೇತ್ರ ಕಾರ್ಯದಲ್ಲಿ ಸಹಕಾರ ನೀಡಿದ ಶ್ರೀಶ್ರೀಧರರಾವ್, ಶ್ರೀದೇವರಾಜ್, ಶ್ರೀವಿಜೇಂದ್ರ, ಶ್ರೀವೆಂಕಟೇಶ್, ಶ್ರೀರಾಜು, ಶ್ರೀಶ್ರೀನಿವಾಸ ರೆಡ್ಡಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ.

ಅಧ್ಯಯನದುದ್ದಕ್ಕೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ನನ್ನ ಶ್ರೀಮತಿಯವರಾದ ವಿಜಯಶ್ರೀನಿವಾಸ, ಮಕ್ಕಳಾದ ಪೂಜಾಶ್ರೀನಿವಾಸ ಮತ್ತು ಅಭಿಜಿತ್‌ಶ್ರೀನಿವಾಸರವರಿಗೆ.

ಈ ಮಹಾ ಪ್ರಬಂಧವನ್ನು ಅಂದವಾಗಿ ಗಣಕಯಂತ್ರದಲ್ಲಿ ಸಂಯೋಜಿಸಿದ ಶ್ರೀ ಮಾರುತಿ ಪ್ರಸಾದ್ ರವರಿಗೆ.

ದಿನಾಂಕ : ೨.೧೧.೨೦೦೪ ಶ್ರೀನಿವಾಸ ಎಂ ಸಿ

ಪರಿವಿಡಿ

ಪರಿಶಿಷ್ಟಗಳು

ಅಧ್ಯಾಯ ೧

ಅಧ್ಯಯನದ ಮಹತ್ವ, ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಪೀಠಿಕೆ

ಅಧ್ಯಯನದ ಮಹತ್ವ

ಅಧ್ಯಯನದ ಉದ್ದೇಶ

ಅಧ್ಯಯನದ ವಿಧಾನ

ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಯನದ ಮಹತ್ವ, ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಪೀಠಿಕೆ

ಬುಡಕಟ್ಟು ಸಮುದಾಯದವರು ಸಂಸ್ಕೃತಿಯಿಂದ ಅಥವಾ ನಾಗರಿಕತೆಯಿಂದ ದೂರ ಉಳಿದು ದಿನವಿಡಿ ಆಹಾರಕ್ಕಾಗಿ ನಿರಂತರ ಹೋರಾಟ ಮಾಡುವುದರ ಜೊತೆಗೆ, ಮುಂದಿನ ಭವಿಷ್ಯದ ಬಗ್ಗೆ ಚಿಂತಿಸದೆ ತಮ್ಮದೇ ಆದ ಕತ್ತಲೆಯ ಪ್ರಪಂಚದಲ್ಲಿ ವಾಸಿಸುತ್ತಿದ್ದರು. ಭಾರತ ಸ್ವಾತಂತ್ರ್ಯ ಪಡೆದನಂತರ ಈ ಬುಡಕಟ್ಟು ಸಮುದಾಯ ಎದುರಿಸುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಹಲವಾರು ಯೋಜನೆಗಳನ್ನು ಭಾರತ ಸರ್ಕಾರ ರೂಪಿಸಿತು. ಆ ಯೋಜನೆಗಳಲ್ಲಿ ಗಿರಿಜನ ಉಪ ಯೋಜನೆ ಅತಿ ಮುಖ್ಯವಾದುದ್ದು. ಈ ಯೋಜನೆಯು ಬಳ್ಳಾರಿ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ, ಯಾವ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಿದೆ, ಯಾವ ಸಮುದಾಯ ಹೆಚ್ಚಿನ ಸೌಲತ್ತುಗಳನ್ನು ಪಡೆದುಕೊಂಡಿದೆ, ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಬಾಧಕಗಳನ್ನು ಶೋಧಿಸಿ ಅವುಗಳಿಗೆ ಸೂಕ್ತ ಮಾರ್ಗೋಪಾಯಗಳನ್ನು ಮತ್ತು ಸಲಹೆಗಳನ್ನು ನೀಡುವ ಅಧ್ಯಯನ ಇದಾಗಿದೆ.

ಪ್ರಸ್ತುತ ಅಧ್ಯಯನವು ಗಿರಿಜನ ಉಪಯೋಜನೆ ಅಡಿಯಲ್ಲಿಯ ಯೋಜನೆ, ತತ್ವ ಹಾಗೂ ಬುಡಕಟ್ಟು ಜನರ ಪುನರ್ವಸತಿಗೆ ಸಂಬಂಧಪಟ್ಟ ಅಧ್ಯಯನವಾಗಿದೆ. ಇದಕ್ಕಾಗಿ ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ಬುಡಕಟ್ಟು ಫಲಾನುಭವಿಗಳನ್ನು ಭೇಟಿ ಮಾಡಿ, ಆ ಮೂಲಕ ಅವರ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಸಮೀಕ್ಷಿಸಲಾಗಿದೆ. ಈ ಅಧ್ಯಯನವು ಗಿರಿಜನ ಉಪಯೋಜನೆಯ ಒಂದು ಸಮಗ್ರ ಅಧ್ಯಯನವಾಗಿದ್ದು, ಇದು ಸರ್ಕಾರದ ಇತರೆ ಇಲಾಖೆಗಳು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇತ್ತೀಚಿನ ದಿನಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ಶೋಧನೆಯೂ ಆಗಿದೆ.

ಅಧ್ಯಯನದ ಮಹತ್ವ

೧. ಬುಡಕಟ್ಟು ಜನರ ಆಚಾರ, ವಿಚಾರ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಹಲವಾರು ಅಧ್ಯಯನಕಾರರು ಅಧ್ಯಯನ ಮಾಡಿರುವುದು ಸರಿಯಷ್ಟೆ. ಆದರೆ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಗಿರಿಜನ ಉಪಯೋಜನೆ ಅಡಿಯಲ್ಲಿಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿರುವುದಿಲ್ಲ. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡದೇ ಇರುವ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದು ಇತರೆ ಅಧ್ಯಯನಗಳಿಗಿಂತ ವಿಶಿಷ್ಟವಾಗಿರುವುದು.

೨. ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆಯಡಿಯಲ್ಲಿ ಲಾಭ ಪಡೆದ ಬುಡಕಟ್ಟು ಜನರು ವಾಸ್ತವವಾಗಿ ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆಯೇ? ಒಂದು ವೇಳೆ ಬರದಿದ್ದರೆ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಈ ಕುರಿತು ಯೋಜನೆಯ ಮೌಲ್ಯಮಾಪನ ಮಾಡಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗಿದೆ.

೩. ಈ ಗಿರಿಜನ ಉಪಯೋಜನೆಯಿಂದ ಎಷ್ಟರ ಮಟ್ಟಿಗೆ ಬುಡಕಟ್ಟು ಜನರ ಅಭಿವೃದ್ಧಿ ಆಗಿದೆ ಎಂಬುದರ ಬಗ್ಗೆ ಸರ್ಕಾರ, ಸಮಾಜ ಮತ್ತು ಬುಡಕಟ್ಟು ಸಮುದಾಯಗಳಿಗೆ ಮನವರಿಕೆ ಮಾಡಲು ಹಾಗೂ ಯಾವ ಕ್ಷೇತ್ರದಲ್ಲಿ ಏಕೆ ಅಭಿವೃದ್ಧಿಯಾಗಿಲ್ಲ ಎಂಬುದಕ್ಕೆ ಕಾರಣಗಳನ್ನು ಕಂಡುಹಿಡಿಯಲು ಈ ಅಧ್ಯಯನ ಮುಖ್ಯವಾಗಿದೆ.

೪. ಈ ಅಧ್ಯಯನದ ಮೂಲಕ ಬುಡಕಟ್ಟು ಜನರಿಗೆ ಸರ್ಕಾರದಿಂದ ಒದಗಿಸುತ್ತಿರುವ ಸೌಲಭ್ಯಗಳ ಬಗ್ಗೆ ಹಾಗೂ ಅವುಗಳ ಸದುಪಯೋಗಗಳ ಬಗ್ಗೆ ಅರಿವು ಮೂಡಿಸುವುದು ಮಹತ್ವದ ಸಂಗತಿಯಾಗಿದೆ.

೫. ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸುವಾಗ ಇರುವ ಬಾಧಕಗಳನ್ನು ಸರಿಪಡಿಸಲು ಇದುವರೆವಿಗೆ ನೀಡಿರುವ ಸಲಹೆಗಳನ್ನು ಅವಲೋಕನ ಮಾಡುವುದು. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬೇಕಾಗಿರುವ ಕ್ರಮಗಳನ್ನು ಪತ್ತೆಹಚ್ಚುವುದು ಈ ಅಧ್ಯಯನದ ಮಹತ್ವವಾಗಿದೆ.

ಭಾರತ ಸರ್ಕಾರ ಕರ್ನಾಟಕದಲ್ಲಿ ಗುರುತಿಸಿದ ೬೩ ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟ ಜಾತಿಗೂ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಲಾಗಿದೆ. ಈ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕುರಿತು ಕರ್ನಾಟಕದಲ್ಲಿ ಹೆಚ್ಚಿನ ಅಧ್ಯಯನ ನಡೆದಿರುವುದಿಲ್ಲ. ಬುಡಕಟ್ಟುಗಳನ್ನು ಕುರಿತು ಇಂಗ್ಲೀಷಿನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿಲ್ಲ. ಇದಕ್ಕೆ ಸರ್ಕಾರಿ ಖಾಸಗಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು ಹೊಂದಿರುವ ನಿರಾಸಕ್ತಿಯೇ ಕಾರಣವಾಗಿದೆ. ಈಚೆಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಇದಕ್ಕಾಗಿ ಪ್ರತ್ಯೇಕ ಅಧ್ಯಯನ ವಿಭಾಗ ಆರಂಭಿಸಿದೆ. ಇಲ್ಲಿ ನಿರ್ಲಕ್ಷಿತರ ಅಧ್ಯಯನಕ್ಕೆ ಗಮನ ಹರಿಸಲಾಗುತ್ತಿದೆ.

ಅಧ್ಯಯನದ ಉದ್ದೇಶ

೧. ಬಳ್ಳಾರಿ ಜಿಲ್ಲೆಯಲ್ಲಿರುವ ಬುಡಕಟ್ಟುಗಳ ಕುಟುಂಬ, ಜನಸಂಖ್ಯೆ, ಶೈಕ್ಷಣಿಕ ಮಟ್ಟ, ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳ ಬಗ್ಗೆ ವಿವರವಾಗಿ ಅಧ್ಯಯನ ಮಾಡುವುದು.

೨. ಬುಡಕಟ್ಟುಗಳಲ್ಲಿ ಹಲವಾರು ಪಂಗಡಗಳಿದ್ದು, ಅವುಗಳಲ್ಲಿ ಹೆಚ್ಚಿನ ಜನಸಂಖ್ಯೆಯು ಯಾವ ಪಂಗಡಕ್ಕೆ ಸೇರಿರುತ್ತಾರೆಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು.

೩. ಬುಡಕಟ್ಟುಗಳು ಎದುರಿಸುತ್ತಿರುವ ತೊಂದರೆಗಳ ಬಗ್ಗೆ ಪಟ್ಟಿಯನ್ನು ಮಾಡಿ ಪರಾಮರ್ಶಿಸುವುದು.

೪. ಗಿರಿಜನ ಉಪಯೋಜನೆಯಡಿಯಲ್ಲಿ ಮುಂದುವರೆಯುತ್ತಿರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮೌಲ್ಯಮಾಪನ ಮಾಡುವುದು.

೫. ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ಬಾಧಕಗಳನ್ನು ಪತ್ತೆ ಹಚ್ಚುವುದು, ಹಾಗೂ ಅವುಗಳಿಗೆ ಸೂಕ್ತ ಸಲಹೆಗಳನ್ನು ನೀಡುವುದು.

೬. ಈ ಯೋಜನೆಯಡಿಯಲ್ಲಿ ಬುಡಕಟ್ಟು ಜನರನ್ನು ಸಮಗ್ರ ಅಭಿವೃದ್ಧಿಪಡಿಸಲು ಬೇಕಾಗುವ ಇತರೆ ಪೂರಕ ಯೋಜನೆಗಳನ್ನು ರೂಪಿಸಲು ಸಲಹೆಗಳನ್ನು ನೀಡುವುದು.

೭. ಗಿರಿಜನ ಉಪಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ಆಗಿರುವ ಪ್ರಗತಿ ನಿರೀಕ್ಷಿಸಿದ ಮಟ್ಟದಲ್ಲಿ ಗುರಿ ತಲುಪಿದೆಯೇ ? ಅಥವಾ ಇಲ್ಲವೇ ? ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣವನ್ನು ನೀಡುವಂತೆ ಮಾಹಿತಿಯನ್ನು ಸಂಗ್ರಹಿಸಿ ಪರಾಮರ್ಶಿಸುವುದು.

೮. ಗಿರಿಜನರ ಅಭಿವೃದ್ಧಿಗಾಗಿ ಇರುವ ಯೋಜನೆಗಳ ಬಗ್ಗೆ ಬುಡಕಟ್ಟುಗಳಿರುವ ಅರಿವನ್ನು ಅರಿಯುವುದು.

೯. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಜನರ ಬಗ್ಗೆ ಸಂಗ್ರಹಿಸಿರುವ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆದುಕೊಂಡು ಅವುಗಳ ನಿಖರತೆಯನ್ನು ಪರಿಶೀಲಿಸುವುದು.

೧೦. ಕರ್ನಾಟಕದಲ್ಲಿ ಅದರಲ್ಲೂ ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆಯ ಅಧ್ಯಯನ ನಡೆಯದೇ ಇರುವುದರಿಂದ ಪ್ರಸ್ತುತ ಪ್ರಬಂಧದಲ್ಲಿ ಆನುಷಂಗಿಕ ಸಾಮಗ್ರಿಗಳಿಗಿಂತ ಹೆಚ್ಚಾಗಿ ಭೌತಿಕ ವಸ್ತುಗಳ ವಿಷಯಕ್ಕೆ ಹಾಗೂ ಅಭಿವೃದ್ಧಿಗೆ ಬಹಳ ಮಹತ್ವ ಕೊಟ್ಟು ವಿವರಣಾತ್ಮಕ ಅಧ್ಯಯನ ಮಾಡುವುದು.

೧೧. ಗಿರಿಜನ ಉಪಯೋಜನೆಯ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಅಭಿವೃದ್ಧಿಯನ್ನು ಇಲಾಖಾವಾರು ಪರಾಮರ್ಶಿಸುವುದು. ಬುಡಕಟ್ಟುಗಳ ಅಭಿವೃದ್ಧಿ ಅಧ್ಯಯನವನ್ನು ತೌಲನಿಕವಾಗಿ ಅಂಕಿ ಸಂಖ್ಯೆಗಳ ಮುಖೇನ ವಿಮರ್ಶಿಸುವುದು.

ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನಕ್ಕೆ ಈ ಕೆಳಕಂಡ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧. **ಪ್ರಶ್ನಾವಳಿ ವಿಧಾನ :** ಬುಡಕಟ್ಟು ಜನರ ಅಭಿವೃದ್ಧಿ ಅಧ್ಯಯನಕ್ಕೆ ಅಗತ್ಯವಿರುವ ಉದ್ದೇಶಿತ ಮಾಹಿತಿಗಳನ್ನು ಸಂಗ್ರಹಿಸಲು ಪ್ರಶ್ನಾವಳಿ ವಿಧಾನ ಅಳವಡಿಸಲಾಗಿದೆ.

೨. **ಸಂದರ್ಶನ ವಿಧಾನ :** ಈ ವಿಧಾನದಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಆಯ್ದ ಫಲಾನುಭವಿಗಳ ಜೊತೆಯಲ್ಲಿ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ.

೩. **ಐತಿಹಾಸಿಕ ವಿಧಾನ :** ಪ್ರತಿಯೊಂದು ಬುಡಕಟ್ಟುಗಳ ಆಚಾರ, ವಿಚಾರ, ಸಂಪ್ರದಾಯ ಸಂಸ್ಕೃತಿ, ನಂಬಿಕೆ ಇತ್ಯಾದಿಗಳ ಬಗ್ಗೆ ಆ ಬುಡಕಟ್ಟಿನ ಹಿರಿಯರು ಅವರ ಅನುಭವದ ಆಧಾರದ ಮೇರೆಗೆ ನೀಡಿರುವ ಮಾಹಿತಿಗಳು ಹಾಗೂ ಅವರು ಆಚರಿಸುವ ಹಬ್ಬ, ಹರಿದಿನಗಳು, ಹುಟ್ಟು, ಮದುವೆ, ಶವಸಂಸ್ಕಾರ ಇತ್ಯಾದಿ ಕಾರ್ಯಗಳಲ್ಲಿ ಭಾಗವಹಿಸಿ ಅವರ ಸಂಸ್ಕೃತಿಯ ಇತಿಹಾಸವನ್ನು ತಿಳಿಯಲಾಗಿದೆ.

೪.**ಅಂಕಿ ಸಂಖ್ಯಾಶಾಸ್ತ್ರೀಯ ವಿಧಾನ :** ಈ ವಿಧಾನದ ಮೂಲಕ ಸರ್ಕಾರದ ಸಂಸ್ಥೆಗಳು ಈಗಾಗಲೇ ಬುಡಕಟ್ಟು ಜನರ ಬಗ್ಗೆ ಸಂಗ್ರಹಿಸಿರುವ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆದು ಅದರ ನಿಖರತೆಯನ್ನು ಪರಿಶೀಲಿಸಲಾಗಿದೆ.

೫. **ತೌಲನಿಕ ವಿಧಾನ :** ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೂಪಿಸಿರುವ ಇತರ ಯೋಜನೆಗಳ ಜೊತೆ ಗಿರಿಜನ ಉಪಯೋಜನೆಯನ್ನು ತೌಲನಿಕವಾಗಿ ಅಧ್ಯಯನ ಮಾಡಲು ಮತ್ತು ಬುಡಕಟ್ಟು ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಗಿರಿಜನ ಉಪಯೋಜನೆ ಪ್ರಾರಂಭಿಸುವ ಮೊದಲು ಹಾಗೂ ನಂತರದ ಅವಧಿಯಲ್ಲಿನ ಸಾಧನೆಯ ಬಗ್ಗೆ ತುಲನಾತ್ಮಕವಾಗಿ ಅಧ್ಯಯನಿಸಲು ಈ ವಿಧಾನ ಬಳಲಾಗಿದೆ.

೬. **ಸಹಭಾಗಿತ್ವ ವಿಧಾನ :** ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಅನುಷ್ಠಾನ ಅಧಿಕಾರಿಗಳನ್ನು ಭೇಟಿ ಮಾಡಿ, ಗಿರಿಜನ ಉಪಯೋಜನೆಯಲ್ಲಿ ಪ್ರಗತಿಯನ್ನು ಸಾಧಿಸಲು ಇರುವ ಅಡೆತಡೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಅವರು ಸೂಚಿಸುವ ವಿಧಾನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಈ ವಿಧಾನ ಬಳಸಲಾಗಿದೆ.

೭. **ವಿಷಯ ಅಥವಾ ವ್ಯಕ್ತಿ ಅಧ್ಯಯನ ವಿಧಾನ :** ಯಾವ ಕ್ಷೇತ್ರದಲ್ಲಿ ಹೆಚ್ಚಿನ ಗುರಿ ಸಾಧಿಸಲಾಗಿದೆ. ಇತರೆ ಕ್ಷೇತ್ರಗಳಲ್ಲಿ ಗುರಿಯನ್ನು ಸಾಧಿಸಲು ಸಾಧ್ಯವಾಗದೇ ಇರುವುದಕ್ಕೆ ಕಾರಣ ಇತ್ಯಾದಿಗಳನ್ನು ಅರಿಯಲು ಈ ವಿಧಾನ ಬಳಸಲಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

ಸಂಶೋಧನಾಕಾರರು ಯಾವುದೇ ವಿಷಯವನ್ನು ಅಧ್ಯಯನ ಮಾಡುವ ಮೊದಲು, ವ್ಯಾಪ್ತಿ ಅಥವಾ ಪ್ರದೇಶವನ್ನು ಆಯ್ಕೆಮಾಡಿಕೊಳ್ಳುವರು. ನಂತರ ಆ ಪ್ರದೇಶಗಳನ್ನು ಭೂಪುಟದಲ್ಲಿ ಗುರುತಿಸಿ ಆ ಪ್ರದೇಶಕ್ಕೆ ಸೇರಿರುವ ಭೂಪ್ರದೇಶ, ಅಲ್ಲಿರುವ ಆಡಳಿತ ವ್ಯವಸ್ಥೆ, ನೈಸರ್ಗಿಕ ಸಂಪತ್ತು, ನದಿಗಳ ವ್ಯವಸ್ಥೆ, ಅರಣ್ಯ, ಮಣ್ಣಿನ ಗುಣ, ಹವಾಗುಣ, ಜನಸಂಖ್ಯೆ, ಅವರ ವೃತ್ತಿ, ವ್ಯವಸಾಯಕ್ಕೆ ಲಭ್ಯವಿರುವ ಭೂಮಿ, ಬೆಳೆಗಳು, ಖನಿಜಸಂಪತ್ತು, ಕೈಗಾರಿಕೆಗಳು, ಸಾರಿಗೆ ಸಂಪರ್ಕ, ವಿದ್ಯುತ್ತೀಕರಣ, ಆರೋಗ್ಯ ಕೇಂದ್ರಗಳು, ಇತರೇ ಸಾಮಾಜಿಕ ಸೇವೆಗಳ ಬಗ್ಗೆ ಅಧ್ಯಯನ ಮಾಡಿ ಮಾಹಿತಿಯನ್ನು ಸಂಗ್ರಹಿಸಿ ನಂತರ ವಿಷಯದ ಬಗ್ಗೆ ಅಧ್ಯಯನ ಮಾಡುವರು. ಇದು ಸೂಕ್ತವಾಗಿದ್ದರಿಂದ, ಮೇಲೆ ತಿಳಿಸಿರುವ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳ ವಿವರವನ್ನು ಅಧ್ಯಾಯ ೩ ರಲ್ಲಿ ವಿವರಿಸಲಾಗಿದೆ.

ಬಳ್ಳಾರಿ ಜಿಲ್ಲೆಯು ೭ ತಾಲೂಕುಗಳನ್ನು ಹೊಂದಿದೆ. ಅವು ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು ಮತ್ತು ಸಿರುಗುಪ್ಪ. ಗಿರಿಜನ ಉಪಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ ೯೯ ಗುಂಪು ಗ್ರಾಮಗಳನ್ನು ವೈಜ್ಞಾನಿಕವಾಗಿ ಕ್ಷೇತ್ರಕಾರ್ಯಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಈ ೯೯ ಗ್ರಾಮಗಳಲ್ಲಿ ೫೪೩ ಬುಡಕಟ್ಟು ಫಲಾನುಭವಿಗಳ ಮನೆಗಳಿಗೆ ಭೇಟಿಕೊಟ್ಟು, ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟಂತೆ ಸಿದ್ಧಪಡಿಸಿದ ಪ್ರಶ್ನಾವಳಿಯಲ್ಲಿ ಗಿರಿಜನ ಉಪಯೋಜನೆಯ ಪ್ರಗತಿಯ ಮಾಹಿತಿಯನ್ನು ಪರಾಮರ್ಶಿಸಲು ಉತ್ತರವನ್ನು ಪಡೆದುಕೊಳ್ಳಲಾಗಿದೆ. ಗಿರಿಜನ ಉಪಯೋಜನೆಯ ಬಗ್ಗೆ ಸಮಗ್ರ ಸಮೀಕ್ಷೆ ಮಾಡುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕ್ಷೇತ್ರಕಾರ್ಯ ಮತ್ತು ಪೂರಕ ಸಾಹಿತ್ಯದ ಆಧಾರದ ಮೇಲೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಊಹೆಗಳು

೧.ಗಿರಿಜನ ಉಪ ಯೋಜನೆಯು ಬುಡಕಟ್ಟುಗಳ ಅಭಿವೃದ್ಧಿಗೆ ಸಹಕಾರಿಯಾಗಿದೆ.

೨.ಗಿರಿಜನ ಉಪ ಯೋಜನೆಯ ಪ್ರತಿಫಲವಾಗಿ ಬುಡಕಟ್ಟುಗಳು ಮುಖ್ಯ ವಾಹಿನಿಯತ್ತ ಸಾಗಿವೆ.

ಅಧ್ಯಯನದ ಅಧ್ಯಾಯಗಳು

ಪ್ರಸ್ತುತ ಮಹಾ ಪ್ರಬಂಧವನ್ನು ೮ ಅಧ್ಯಾಯಗಳಾಗಿ ವಿಭಜಿಸಲಾಗಿದೆ. ಅವು

೧. ಅಧ್ಯಯನದ ಮಹತ್ವ, ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

೨. ಬುಡಕಟ್ಟುಗಳು ಮತ್ತು ಬುಡಕಟ್ಟು ಪರ ಯೋಜನೆಗಳು

೩. ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಪರಿಚಯ

೪. ಪಂಚವಾರ್ಷಿಕ ಯೋಜನೆ ಮತ್ತು ಬುಡಕಟ್ಟುಗಳ ಅಭಿವೃದ್ಧಿ

೫. ಗಿರಿಜನ ಉಪ ಯೋಜನೆ

೬. ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ಬಾದಕಗಳು ಮತ್ತು ಪರಿಹಾರೋಪಾಯಗಳು

೭. ಬಳ್ಳಾರಿ ಜಿಲ್ಲೆಯ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ

೮ ಉಪ ಸಂಹಾರ

ಗಿರಿಜನ ಉಪ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿಯ ಬಗ್ಗೆ ಅಧ್ಯಯನಿಸಲು ೭ ತಾಲೂಕುಗಳಲ್ಲೂ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಸಮೀಕ್ಷೆ ಕಾಲದಲ್ಲಿ ೧೯೯೯-೨೦೦೦ ಮತ್ತು ೨೦೦೦-೨೦೦೧ ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಆಯ್ಕೆಗೊಂಡ ಗುಂಪು ಗ್ರಾಮಗಳಿಗೆ ಭೇಟಿ ಕೊಟ್ಟು ಫಲಾನುಭವಿಗಳ ಜೊತೆ ಸಂದರ್ಶನವನ್ನು ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಇದಲ್ಲದೆ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಸರ್ಕಾರದ ಇತರೆ ಅಭಿವೃದ್ಧಿ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದುಕೊಂಡು ಅವರು ನೀಡಿರುವ ಮಾಹಿತಿ ಕೇವಲ ಗುರಿಯನ್ನು ಸಾಧಿಸಲು ನಿಗಧಿಪಡಿಸಿರುವ ಗುರಿಯಾಗಿದೆಯೇ ? ಅಥವಾ ಅದರಿಂದ ಬುಡಕಟ್ಟು ಜನರ ಅಭಿವೃದ್ಧಿಗೆ ಸಹಾಯಕವಾಗಿದೆಯೇ ? ಎಂಬುದರ ಬಗ್ಗೆ ಮೌಲ್ಯಮಾಪನ ನಡೆಸಲಾಗಿದೆ.

ಅಂಕಿ ಸಂಖ್ಯಾಶಾಸ್ತ್ರೀಯ ವಿಧಾನದ ಮೂಲಕ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಜನರ ಬಗ್ಗೆ ಸಂಗ್ರಹಿಸಿರುವ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆದುಕೊಂಡು ಅವುಗಳ ನಿಖರತೆಯನ್ನು ಪರಿಶೀಲಿಸಲಾಗಿದೆ.

ತೌಲನಿಕ ವಿಧಾನದ ಮೂಲಕ ಈಗಾಗಲೇ ಬುಡಕಟ್ಟು ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಗಿರಿಜನ ಉಪಯೋಜನೆಯನ್ನು ಪ್ರಾರಂಭಿಸುವ ಮೊದಲು ಹಾಗೂ ಪ್ರಾರಂಭಿಸಿದ ನಂತರದ ಸಾಧನೆಯ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಲಾಗಿದೆ.

ಯಾವ ಕ್ಷೇತ್ರದಲ್ಲಿ ಹೆಚ್ಚಿನ ಗುರಿ ಸಾಧಿಸಲಾಗಿದೆ ಹಾಗೂ ಯಾವ ಕ್ಷೇತ್ರದಲ್ಲಿ ಗುರಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಇದರ ಹಿಂದಿರುವ ಕಾರಣಗಳನ್ನು ಪತ್ತೆಹಚ್ಚಲಾಗಿದೆ.

ಈ ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಈಗ ನೀಡುತ್ತಿರುವ ಸೌಲಭ್ಯಗಳ ಜೊತೆಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೀಡಿರುವ ಮಾರ್ಗಸೂಚಿಯನ್ನು ಚಾಚು ತಪ್ಪದೇ ಅನುಸರಿಸಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಪ್ರದರ್ಶಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಿದಲ್ಲಿ ತ್ವರಿತ ಗತಿಯಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದು.

ಅಧ್ಯಾಯ ೨

ಬುಡಕಟ್ಟುಗಳು ಮತ್ತು ಬುಡಕಟ್ಟು ಪರ ಯೋಜನೆಗಳು

ಬುಡಕಟ್ಟುಗಳು ಮತ್ತು ಬುಡಕಟ್ಟು ಪರ ಯೋಜನೆಗಳು

ಬುಡಕಟ್ಟುಗಳೆಂದು ಕರೆಸಿಕೊಳ್ಳುವ ಆದಿವಾಸಿಗಳು ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. ಅದರಂತೆ ಭಾರತದಲ್ಲೂ ಬಹಳಷ್ಟು ಬುಡಕಟ್ಟು ಜನರು ಕಾಡು-ಮೇಡುಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ, ಗಿರಿ-ಶಿಖರಗಳಲ್ಲಿ, ದುರ್ಗಮಗಳಲ್ಲಿ ವಾಸಿಸುವ ಗಿರಿಜನರು, ಅಲೆಮಾರಿಗಳಾಗಿದ್ದಾರೆ ಹಾಗೂ ಕೆಲವು ಸಮುದಾಯಗಳು ಅರೆ ಅಲೆಮಾರಿಗಳಾಗಿ ನೆಲೆಸಲು ಶಾಶ್ವತ ನೆಲೆ ಇಲ್ಲದೆ, ಒಂದೇ ಕಡೆ ನೆಲೆಸದೆ ಜೀವನೋಪಾಯಕ್ಕಾಗಿ ಊರಿನಿಂದ ಊರಿಗೆ ಅಲೆದು ಅಲ್ಲಿರುವ ಹಾಳು ಮಂಟಪ, ದೇವಸ್ಥಾನ, ಗುಡಿ ಗುಂಡಾರಗಳಲ್ಲಿ ಗುಡಿಸಲು, ಟೆಂಟುಗಳನ್ನು ಹಾಕಿಕೊಂಡು ವಾಸಿಸುವವರೂ ಅಲ್ಲಲ್ಲಿ ಕಾಣಿಸುವರು. ಆರ್ಯರು ಭಾರತಕ್ಕೆ ಬಂದೊಡನೆ ಭಾರತದಲ್ಲಿದ್ದ ಮೂಲನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ ಹೊಡೆದೋಡಿಸಿದ ನಂತರ ಮೂಲನಿವಾಸಿಗಳು ಚದುರಿ ಗುಡ್ಡಗಾಡು, ಅರಣ್ಯಗಳಲ್ಲಿ ವಾಸಿಸುತ್ತಿದ್ದಾರೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ನುಡಿದಿರುವಂತೆ ಮಾನವನು ಮೂಲತಃ ಸಮಾಜ ಜೀವಿ, ಆತನಿಗೆ ಸಮೂಹದೊಂದಿಗೆ ಬದುಕುವುದು ಅನಿವಾರ್ಯವಾಗಿತ್ತು. ಸಾಮಾನ್ಯವಾಗಿ ಭಾರತದಲ್ಲಿ ಕಂಡುಬರುವ ಬುಡಕಟ್ಟಿನವರು ಪ್ರಶಾಂತರು ಮತ್ತು ಶಾಂತಿಪ್ರಿಯರು. ಪ್ರಚೋದನಗೊಂಡಾಗ ಮಾತ್ರ ಹೋರಾಟಕ್ಕೆ ಇಳಿಯುತ್ತಿದ್ದವರು. ಬುಡಕಟ್ಟು ಸಮುದಾಯಗಳು ಆಹಾರಕ್ಕಾಗಿ ಸ್ಥಳೀಯವಾಗಿ ದೊರೆಯುವ ಗೆಡ್ಡೆ-ಗೆಣಸು, ಹಣ್ಣು- ಹಂಪಲು, ಕಾಳು-ಕಡ್ಡಿ, ಸೊಪ್ಪು ಇತ್ಯಾದಿಗಳನ್ನು ಉಪಯೋಗಿಸುವುದರ ಜೊತೆಗೆ ಮೀನು ಹಿಡಿಯುವುದು, ಬೇಟೆಯಾಡಿ ಪ್ರಾಣಿ-ಪಕ್ಷಿಗಳ ಮಾಂಸಗಳಿಂದ ಹೊಟ್ಟೆ ತುಂಬಿಸಿ ಕೊಳ್ಳುವವರಾಗಿದ್ದಾರೆ. ಇದಲ್ಲದೆ ಇನ್ನೂ ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ಭಿಕ್ಷೆ ಬೇಡಿ ಜೀವನ ನಡೆಸುವವರಾಗಿದ್ದಾರೆ. ಬಹಳಷ್ಟು ಬುಡಕಟ್ಟು ಜನರು ಮುಂದಿನ ಆಗು ಹೋಗುಗಳ ಬಗ್ಗೆ ಯೋಚಿಸದೆ ತಮ್ಮ ಮುಂದಿನ ಭವಿಷ್ಯದ ಬಗ್ಗೆ ಚಿಂತಿಸದೆ ಸದ್ಯದ ಈಗಿನ ಜೀವನಕ್ಕೆ ಹೆಚ್ಚು ಒತ್ತು ಕೊಟ್ಟು, ತಮ್ಮದೇ ಆದ ಆಚಾರ, ವಿಚಾರ, ಸಂಪ್ರದಾಯ ಹಬ್ಬ, ಹರಿದಿನಗಳನ್ನು,ಮದುವೆ, ಮುಂಜಿಗಳನ್ನು ಆಚರಿಸುತ್ತಾ, ಜೀವನ ನಡೆಸುತ್ತಿರುವ ಮುಗ್ಧ ಅಮಾಯಕ ಸಮುದಾಯ.

ಬಹಳಷ್ಟು ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರದ ಅಧ್ಯಯನಕಾರರು ಭಾರತದಲ್ಲಿರುವ ಬುಡಕಟ್ಟು ಜನರನ್ನು ಅನಾಗರಿಕರು, ಅಸಂಸ್ಕೃತರು ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿರುವ ಜನರಿಗಿಂತ ಭಿನ್ನರು, ಇವರು ನಿಗೂಢ ಪ್ರದೇಶದಲ್ಲಿ ವಾಸಿಸುವ ಗುಂಪೆಂದು ವರ್ಣಿಸಿದ್ದಾರೆ. ಬುಡಕಟ್ಟುಗಳು ಬಹುಮಟ್ಟಿಗೆ ಆದಿವಾಸಿ ಜನಾಂಗ, ಆದರೆ ಸಂವಿಧಾನದ ಉದ್ದೇಶದಿಂದ ತಯಾರಿಸಲಾದ ಪಟ್ಟಿ ಮತ್ತು ಮಾನವಶಾಸ್ತ್ರಜ್ಞರು ತಮ್ಮ ಮಾನದಂಡಗಳನ್ನು ಅವಲಂಬಿಸಿ ಬುಡಕಟ್ಟುಗಳೆಂದು ವರ್ಗೀಕರಿಸುವ ಪಟ್ಟಿಯಲ್ಲಿ ಏಕತೆಯಾಗಲಿ ಅಥವಾ ಅನನ್ಯತೆಯಾಗಲಿ ಅಥವಾ ಹೋಲಿಕೆಯಾಗಲಿ ಇರುವುದಿಲ್ಲ. ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಥರ್ಸ್‌ಟನ್, ಎಂಥೋವನ್, ನಂಜುಂಡಯ್ಯ, ಅನಂತಕೃಷ್ಣ ಅಯ್ಯರ್ ಮತ್ತು ಲೂಯಿಸ್ ಇವರು ಬುಡಕಟ್ಟುಗಳ ಬಗ್ಗೆ ಕೆಲವು ವಿವರಗಳನ್ನು ನೀಡಿದ್ದಾರೆ. ಈ ವಿವರಗಳು ಬಹುಮಟ್ಟಿಗೆ ೧೯ ಮತ್ತು ೨೦ ನೇ ಶತಮಾನದ ಆದಿಭಾಗದಲ್ಲಿನ ಸ್ಥಿತಿಗತಿಗಳ ವಿವರಗಳನ್ನು ಒಳಗೊಂಡಿವೆ.

ಪ್ರತಿಯೊಂದು ಬುಡಕಟ್ಟು ಸಮೂಹವು ತನ್ನದೇ ಆದ ಅನನ್ಯತೆಯನ್ನು (Identity) ಹೊಂದಿರುತ್ತದೆ. ಭಾರತದಲ್ಲಿ ಕಂಡು ಬರುವ ಬುಡಕಟ್ಟುಗಳು ಒಂದೇ ಬಗೆಯ ಅಥವಾ ಸ್ವಜಾತಿಯ ಬುಡಕಟ್ಟುಗಳ ಸಮೂಹಕ್ಕೆ ಸೇರದೆ, ಬೇರೆ ಬೇರೆ ಬುಡಕಟ್ಟು ಸಮೂಹಗಳಿಗೆ ಸೇರಿದ್ದಾಗಿದೆ. ಇವುಗಳನ್ನು ಸಮತಲವಾಗಿ ವಿವಿಧ ರೀತಿಯ ಅನಾಗರಿಕ ಹಾಗೂ ಸಾಂಸ್ಕೃತಿಕ ಗುಂಪುಗಳೆಂದು ವಿಂಗಡಿಸಲಾಗಿದೆ(Chaudhuri-1982).[೧]

ಇಂದಿಗೂ ಬಹುಸಂಖ್ಯಾತ ಬುಡಕಟ್ಟುಗಳು ಅರಣ್ಯದಲ್ಲಿ ವಾಸಿಸುವಂತಹ ಸಮುದಾಯಗಳಾಗಿವೆ. ಅವರ ಆರ್ಥಿಕ ಚಟುವಟಿಕೆಗಳು ಅವರು ವಾಸಿಸುತ್ತಿರುವ ಅರಣ್ಯದ ಮೇಲೆ ಅವಲಂಬಿತವಾಗಿರುತ್ತದೆ. ಬುಡಕಟ್ಟುಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಮ್ಮ ಜೀವನಕ್ಕೆ ಬೇಕಾಗುವ ಅವಶ್ಯಕತೆಗಳನ್ನು ಅರಣ್ಯದಿಂದ ಪಡೆದುಕೊಳ್ಳುತ್ತಿದ್ದಾರೆಂದು ವಿಶ್ವಸಂಸ್ಥೆಯು ವರದಿ ಮಾಡಿದೆ. ಆದರೆ, ಕರ್ನಾಟಕದಲ್ಲಿ ಬಹುಸಂಖ್ಯಾತ ಬುಡಕಟ್ಟು ಸಮುದಾಯಗಳು ಬಯಲು ಪ್ರದೇಶಗಳಲ್ಲಿ ವಾಸಿಸುತ್ತಿವೆ. ಬುಡಕಟ್ಟು ಜನರು ತಮ್ಮದೇ ಆದ ಮನೆಗಳನ್ನು ಮರಗಳಿಂದ, ಹುಲ್ಲು ಹಾಗೂ ಬಿದಿರಿನಿಂದ ಕಟ್ಟಿಕೊಂಡು, ಸ್ಥಳೀಯವಾಗಿ ದೊರೆಯುವ ಕಚ್ಚಾ ಪದಾರ್ಥಗಳನ್ನು ಉಪಯೋಗಿಸಿಕೊಂಡು ಕರ ಕುಶಲ ಕೆಲಸಗಳಲ್ಲಿ ತೊಡಗಿರುತ್ತಾರೆ. ಇದರ ಜೊತೆಗೆ ಕಾಡಿನಲ್ಲಿ ದೊರೆಯುವಂತಹ ಗಿಡ ಮೂಲಿಕೆಗಳು, ಔಷಧಿ ಗಿಡಗಳನ್ನು ಉಪಯೋಗಿಸುವುದರ ಮೂಲಕ ಕೆಲವು ಕಾಯಿಲೆಗಳನ್ನು ವಾಸಿ ಮಾಡುತ್ತಿರುತ್ತಾರೆ.[೨] ಅವರ ಧರ್ಮ ಮತ್ತು ಜನಪದ ಈ ಕಾಡಿನ ಸುತ್ತ ಹೆಣೆದುಕೊಂಡಿರುತ್ತದೆ. ಬೇಟೆ ಹಾಗೂ ಪಶುಪಾಲನೆ ಮೂಲದ ಬುಡಕಟ್ಟುಗಳು ಮೂಲತಃ ಅಲೆಮಾರಿ ಬುಡಕಟ್ಟುಗಳಾಗಿದ್ದವು. ಈ ಬುಡಕಟ್ಟು ಜನರು ಉತ್ಪಾದಕರು ಹಾಗೂ ಭೋಗಕರಾಗಿದ್ದು, (Producers and Consumers) ಶೇ ೮೦ರಷ್ಟು ಬುಡಕಟ್ಟು ಜನರು ಕೃಷಿಯನ್ನೇ ಪ್ರಧಾನ ಕಸುಬಿಗೆ ಅವಲಂಬಿತರಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇವರ ಆರ್ಥಿಕತೆಯು ಅವರ ಜೀವನಾಧಾರವನ್ನು ಅವಲಂಬಿಸಿರುವ ಹೊಟ್ಟೆಪಾಡನ್ನು ತುಂಬಿಸಿಕೊಳ್ಳಲು ಇರುವಂತಹ ಆರ್ಥಿಕ ವ್ಯವಸ್ಥೆಯಾಗಿದೆ (Subsistence Economy).[೩]

ಭಾರತದ ಬುಡಕಟ್ಟುಗಳಲ್ಲಿ ಜಾತಿ ಪಂಚಾಯತಿ ಕಠಿಣವಾಗಿತ್ತು, ಜಾತಿ ನಿಯಮಗಳನ್ನು ಮೀರಿದವರನ್ನು ಪಂಚಾಯತಿ ಕಟ್ಟೆ ಅಥವಾ ಚಾವಡಿಯಲ್ಲಿ ಆಯಾ ಬುಡಕಟ್ಟು ಸಮುದಾಯದ ಎಲ್ಲಾ ಮುಖ್ಯಸ್ಥರು ಸೇರಿ ವಿಚಾರಣೆ

ನಡೆಸಿ ತಪ್ಪಿತಸ್ಥರನ್ನು ಅಪರಾಧಿಗಳೆಂದು ತೀರ್ಮಾನಿಸಿ ಜಾತಿಯಿಂದ ಹೊರಗೆ ಹಾಕುತ್ತಿದ್ದರು. ಈ ರೀತಿ ಜಾತಿ ಸಮೂಹಗಳ ಆಶ್ರಯವನ್ನು ಕಳೆದುಕೊಂಡ ಕುಟುಂಬಗಳು ಬಲಹೀನವಾಗಿ ಅಲೆಮಾರಿ ಅಪರಾಧಿ ಬುಡಕಟ್ಟುಗಳಾಗಿ ಹುಟ್ಟಿಕೊಂಡವು. ಈ ಅಪರಾಧಿ ಬುಡಕಟ್ಟುಗಳು ಎಚ್ಚರದಿಂದ ಇರಲು ಹಾಗೂ ಇವುಗಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಬ್ರಿಟೀಷ್ ಸರ್ಕಾರ ಇಂತಹ ಗುಂಪುಗಳನ್ನು ಪತ್ತೆ ಹಚ್ಚಿ ಅಧಿನಿಯಮಗಳನ್ನು ರಚಿಸಿತು. ಅವು

೧. ಅಪರಾಧಿ ಬುಡಕಟ್ಟು ಅಧಿನಿಯಮ ೧೮೭೧

೨. ಅಪರಾಧಿ ಬುಡಕಟ್ಟು (ತಿದ್ದುಪಡಿ) ಅಧಿನಿಯಮ ೧೮೯೭

೩. ಅಪರಾಧಿ ಬುಡಕಟ್ಟು ಅಧಿನಿಯಮ ೧೯೧೧

೪. ಅಪರಾಧಿ ಬುಡಕಟ್ಟು ಅಧಿನಿಯಮ ೧೯೨೪

೫. ಅಪರಾಧಿ ಬುಡಕಟ್ಟು (ತಿದ್ದುಪಡಿ) ಅಧಿನಿಯಮ ೧೯೪೭

ಈ ಅಧಿನಿಯಮಗಳಲ್ಲಿ ಬೇಡ, ಭಿಲ್, ಪಾರ್ಧಿ, ತಡ್ವಿ, ಇರುಳ, ಕುರುಬ, ಯನಾದಿ, ಗೊಂಡ ಇತ್ಯಾದಿ ಬುಡಕಟ್ಟುಗಳು ಅಲ್ಲಲ್ಲಿ ಸೇರಿಕೊಂಡಿವೆ.[7]

ಈ ಬುಡಕಟ್ಟು ನ್ಯಾಯಗಳು ಆಧುನಿಕ ನ್ಯಾಯ ವ್ಯವಸ್ಥೆಗೆ ಮುಖಾಮುಖಿಯಾಗುತ್ತಿವೆ. ಇವು ಅಭಿವೃದ್ಧಿಗೆ ಕಂಟಕವಾಗಿರಬಹುದು. ಆದರೆ ಬುಡಕಟ್ಟುಗಳು ಆಧುನಿಕ ನ್ಯಾಯ ವ್ಯವಸ್ಥೆಗೆ ಸ್ಪಂದಿಸುತ್ತಿಲ್ಲ. ಅವು ತಮ್ಮ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಯನ್ನು ನಂಬಿ ಬದುಕುತ್ತಿವೆ. ಆದರೆ ಭಾರತದಲ್ಲಿ ಬುಡಕಟ್ಟು ಕಾನೂನುಗಳು ಇದುವರೆಗೆ ಜಾರಿಗೆ ಬರಲಿಲ್ಲ. ಆದರೆ ಬಹುಸಂಖ್ಯಾತ ಬುಡಕಟ್ಟುಗಳು ತಮ್ಮ ಹಳೆಯ ನ್ಯಾಯ ಪಂಚಾಯತಿ ಪದ್ಧತಿಯನ್ನು ಅನುಸರಿಸುತ್ತಿವೆ. ಬುಡಕಟ್ಟು ನ್ಯಾಯ ಪಂಚಾಯ್ತಿಯ ವ್ಯವಸ್ಥೆಯನ್ನು ಆಧುನಿಕ ಸಾಮಾಜಿಕ ಸತ್ಯಗಳಿಗೆ ಹೊಂದಾಣಿಕೆಯಾಗುವಂತಹ ಪರಿವರ್ತನೆಗೆ ಒಳಪಡಿಸುವುದು ಅನಿವಾರ್ಯವಾಗಿದೆ.

ಈ ಬುಡಕಟ್ಟು ಜನರನ್ನು

೧. ಬೇಟೆಗಾರರು

೨. ಆಹಾರ ಸಂಗ್ರಹಣೆಗಾರರು

೩. ಕುಶಲಕರ್ಮಿಗಳು

೪. ಸಣ್ಣ ಕೈಗಾರಿಕೆ ಮತ್ತು ಗೃಹಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕೂಲಿಗಳೆಂದು ವಿಭಜಿಸಲಾಗಿದೆ.[8]

ಸಾಮಾನ್ಯವಾಗಿ ಒಂದು ದೇಶದ ಮೂಲ ನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಪ್ರಪಂಚದ ಪ್ರಥಮ ಮಾನವರೇ ಆದಿವಾಸಿಗಳು. ಇವರನ್ನು ಆದಿವಾಸಿ, ಮೂಲ ನಿವಾಸಿ, ಗಿರಿವಾಸಿ, ಬನವಾಸಿ, ಗಿರಿಜನ, ಬುಡಕಟ್ಟು, ಟ್ರೈಬ್ಸ್ ಎಂಬ ಇತ್ಯಾದಿ ಹೆಸರುಗಳಿಂದ ಅಲ್ಲಲ್ಲಿ ಗುರುತಿಸಲಾಗುತ್ತಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮೊಟ್ಟಮೊದಲ ಬಾರಿಗೆ ಆದಿವಾಸಿಗಳನ್ನು 'ಗಿರಿಜನ'ರೆಂದು ಕರೆದಿದ್ದಾರೆ. ಡಾ. ಜಿ.ಎಸ್.ಘುರ್ಯೆರವರು ಆದಿವಾಸಿಗಳನ್ನು

'ಹಿಂದುಳಿದ ಹಿಂದುಗಳು' ಎಂದು ಕರೆದಿದ್ದಾರೆ. ಆದರೆ ಸಮಾಜಶಾಸ್ತ್ರಜ್ಞರ ಪ್ರಕಾರ ಯಹೂದಿಯರು, ಆಂಗ್ಲೋಸ್ಯಾಕ್ಸನರು, ಫ್ರೆಂಚರು, ಜಿಪ್ಸಿಗಳು, ಮಂಗೋಲರು, ಮೊದಲಾದ ಜನಾಂಗಗಳ ಬಗ್ಗೆ ಬುಡಕಟ್ಟು ಎಂಬ ಪದವನ್ನು ಉಪಯೋಗಿಸಿದ್ದಾರೆ. ಹಾಗೆಯೇ ಯಹೂದಿ ಎಂಬ ಪದ ಬುಡಕಟ್ಟನ್ನು ಸೂಚಿಸುವುದಿಲ್ಲವೆಂದು ಸಮಾಜಶಾಸ್ತ್ರಜ್ಞರು ವಿರೋಧಿಸಿರುತ್ತಾರೆ.[೬]

ಇಂದು ಬುಡಕಟ್ಟು ಎಂಬ ಪದವನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ವಿಭಿನ್ನ ರೀತಿಯ ಜನರ ಸಮೂಹಕ್ಕೆ ಉಪಯೋಗಿಸಲಾಗುತ್ತಿದೆ. ಅದರ ಬದಲು ಬುಡಕಟ್ಟು ಎಂಬ ಪದಕ್ಕೆ ಪರ್ಯಾಯವಾಗಿ ಆದಿವಾಸಿ ಎಂಬ ಪದವನ್ನು ಬಳಸುವುದು ಸೂಕ್ತವಾದುದೆಂದು ಹಲವಾರು ಮಾನವಶಾಸ್ತ್ರದ ಅಧ್ಯಯನಕಾರರು ವಿವರಿಸಿದ್ದಾರೆ.[೭] ಅವರ ಪ್ರಕಾರ 'ಆದಿ' ಎಂದರೆ ಪುರಾತನ. 'ವಾಸಿ' ಎಂದರೆ ನಿವಾಸಿಗಳು ಎಂದು ವಿವರಿಸಲಾಗಿದೆ. ಈ ಪದವು ಬುಡಕಟ್ಟು ಜನರಿಗೆ ಸೂಕ್ತವಾಗಿರುತ್ತದೆ. ಭಾರತ ಸಂವಿಧಾನದ ೩೪೨ ನೇ ಕಾಲಂನಲ್ಲಿ ಆದಿವಾಸಿಗಳನ್ನು ಪರಿಶಿಷ್ಟ ವರ್ಗ ಅಥವ ಪಂಗಡಗಳೆಂದು ಉಲ್ಲೇಖಿಸಲಾಗಿದೆ.

೧೯೫೭ರ ಜೂನ್ ೫ ರಂದು ಜಿನಿವಾದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕರ ಸಮ್ಮೇಳನ ೧೦೭ ರಲ್ಲಿ ಈ ಬುಡಕಟ್ಟು ಜನರನ್ನು ದೇಶೀಯರು, ಸ್ವದೇಶೀಯರೆಂದು ವರ್ಗೀಕರಿಸಿರುವುದನ್ನು ಚೆವುರಾ ಎನ್.ಕೆ. ಅವರು ದಾಖಲಿಸಿರುವರು.[೮] ಬುಡಕಟ್ಟು ಎಂಬ ಪದಕ್ಕೆ ಅರ್ಥ ವಿವರಣೆ ಕೊಡುವುದು ಕಷ್ಟಕರವಾಗಿದೆ. ಈ ಪದವನ್ನು ಜೀವ ವಿಜ್ಞಾನಿಗಳು, ಮಾನಶಾಸ್ತ್ರಜ್ಞರು, ಇತಿಹಾಸಕಾರರು, ವಿದ್ವಾಂಸರು, ಲೇಖಕರು ಹಾಗೂ ಸಂಶೋಧಕರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾಯನ ಮಾಡಿರುತ್ತಾರೆ. 'ಬುಡಕಟ್ಟು' ಎಂಬ ಪದಕ್ಕೆ ಆಂಗ್ಲ ಭಾಷೆಯ ಟ್ರೈಬ್ಸ್ ಎಂಬ ಪದವನ್ನು ಸಮಾನಾರ್ಥ ಪದವಾಗಿ ಬಳಸಲಾಗುತ್ತಿದೆ. ಇದು ಲ್ಯಾಟಿನ್ ಭಾಷೆಯ 'ಟ್ರೈಬಸ್' ಎಂಬ ಪದದಿಂದ ಉಗಮಗೊಂಡಿದೆ. ನಾಗರಿಕ ಸಮಾಜದ ಜೊತೆ ಬೆರೆಯದೆ, ಭಿನ್ನವಾದ ಪ್ರತ್ಯೇಕ ಜೀವನವನ್ನು ನಡೆಸಿಕೊಂಡು ತಮ್ಮ ವಿಶಿಷ್ಟವಾದ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಒಂದು ಗುಂಪಿಗೆ ಸಾಮಾನ್ಯವಾಗಿ ಬುಡಕಟ್ಟು ಎಂದು ಕರೆಯಲಾಗುತ್ತದೆ.

"ಯಾವ ಜನಾಂಗ ಗತಕಾಲದಿಂದಲೂ ನಿಸರ್ಗದ ಮಡಿಲಲ್ಲಿ ಸಹಜವಾಗಿ ಬದುಕಲು ಬಯಸುವುದೋ, ಪ್ರಕೃತಿ ಜನ್ಯ ಉತ್ಪನ್ನಗಳನ್ನೇ ಭಕ್ಷಿಸಲು ಯತ್ನಿಸುವುದೋ, ತನ್ನದೇ ಆದ ಒಂದು ವಿಶಿಷ್ಟ ರೀತಿಯ ಜೀವನ ವಿಧಾನದಿಂದ ಜೀವಿಸುವ ಆಶಯವನ್ನು ಹೊಂದಿ ಆ ರೀತಿಯಲ್ಲಿಯೇ ಜೀವನ ನಡೆಸುವುದೋ, ಆ ಸಮುದಾಯಕ್ಕೆ ಆದಿವಾಸಿ ಅಥವಾ ಬುಡಕಟ್ಟು, " ಎಂದು ಕರೆಯಬಹುದು.[೯]

'ಡಬ್ಲ್ಯೂ.ಜೆ. ಫೆರ್ರಿ'ಯವರ ಪ್ರಕಾರ "ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನು ಮಾತನಾಡುವ ಜನಗಳ ಗುಂಪಿಗೆ ಆದಿವಾಸಿಗಳೆಂದು" ಕರೆಯಬಹುದೆಂದು ಹೇಳಿದ್ದಾರೆ. ಮಾನವಶಾಸ್ತ್ರದ ನಿಘಂಟಿನ ಪ್ರಕಾರ "ಒಂದು ಸಾಮಾಜಿಕ ಸಮೂಹವು ನಿರ್ದಿಷ್ಟ ನೆಲೆ, ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಂಘಟನಾ ಸ್ವರೂಪವನ್ನು ಹೊಂದಿದ್ದರೆ ಅಂತಹ ಸಮೂಹವು ಬುಡಕಟ್ಟು ಎನ್ನಿಸಿಕೊಳ್ಳುತ್ತದೆ."

ಬೋಗಾರ್ಡಸ್ ಎಂಬಾತನ ಪ್ರಕಾರ "ರಕ್ಷಣೆಯ ಅವಶ್ಯಕತೆ ರಕ್ತ ಸಂಬಂಧ ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಆದಿವಾಸಿ ಸಮೂಹ ಎಂದಿದ್ದಾರೆ." ಒಂದು ದೇಶದ ಮೂಲ ನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವಜರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗಿದೆ.

ಭಾರತದ ಇಂಪೀರಿಯಲ್ ಗೆಜಟಿಯರ್‌ನಲ್ಲಿ ನಮೂದಿಸಿರುವ ಪ್ರಕಾರ " ಒಂದೇ ವಾಸ ಪ್ರದೇಶವನ್ನು ಹೊಂದಿ ಏಕರೂಪದ ಪದ್ಧತಿಗಳನ್ನು ಅನುಸರಿಸುತ್ತಾ ನಾಡಿನ ಸಮಾಜದ ಭಾಗವಾಗದೇ ಪ್ರತ್ಯೇಕವಾಗಿರುವ ಜನರ ಯಾವುದೇ ಗುಂಪಿಗೆ 'ಬುಡಕಟ್ಟು' ಎಂಬ ಪದವನ್ನು ಅನ್ವಯಿಸಬಹುದು." ಈ ಮೇಲಿನ ವ್ಯಾಖ್ಯಾನವನ್ನು ಎಲ್ಲರೂ ಒಪ್ಪುವಂತಹದ್ದಾಗಿದೆ. ದೇಶದ ನಾಗಾಲ್ಯಾಂಡ್, ಅಸ್ಸಾಂ, ಓರಿಸ್ಸಾ, ಬಿಹಾರ್, ಮಧ್ಯಪ್ರದೇಶ, ಅರುಣಾಚಲ ಪ್ರದೇಶ, ಮಿಜೋರಾಂ ಮತ್ತು ಉತ್ತರ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ. ಆದಿವಾಸಿ ಸಮುದಾಯಗಳ ಬಗ್ಗೆ ಆಳವಾದ ಸಂಶೋಧನೆಯನ್ನು ನಡೆಸಿ ಬುಡಕಟ್ಟು ಜನರ ಬಗ್ಗೆ ಮಾಹಿತಿಯನ್ನು ಹೊರಗಿನ ಪ್ರಪಂಚಕ್ಕೆ ಚೆಲ್ಲಿದ ಕೀರ್ತಿ ವಿದ್ವಾಂಸರಾದ ಥರಸ್ಟನ್, ವೇರಿಯರ್ ಎಲ್ವಿನ್, ಮಿಲ್ಸ್, ಸ್ಮಿತ್, ಎ.ಎ.ಡಿ. ಲೂಯಿಸ್, ಕೆ.ರಂಗಾಚಾರಿ, ಎಲ್.ಕೆ.ಅಯ್ಯರ್, ಡಿ.ಎಂ.ಮಜುಂದಾರ್ ಮತ್ತು ಎಚ್.ವಿ. ನಂಜುಂಡಯ್ಯರವರಿಗೆ ಸಲ್ಲುತ್ತದೆ. ೧೯೦೯ರಲ್ಲಿ ಎಡ್ಗರ್ಡ್ ಥರಸ್ಟನ್ ಮತ್ತು ಕೆ. ರಂಗಾಚಾರಿ ಇವರಿಂದ ಬಿಡುಗಡೆಯಾದ Caste and tribes of Southern India ಎಂಬ ೭ ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡ ಉತ್ತಮ ಕೃತಿಯಾಗಿದೆ.

ಭಾರತದ ಸಂವಿಧಾನವು ೧೯೫೦ರಲ್ಲಿ ಜಾರಿಗೆ ಬಂದಿದ್ದು, ಅಂದಿನಿಂದ ಆಡಳಿತದ ಎಲ್ಲಾ ವಿಷಯಗಳನ್ನು ರಾಜ್ಯ, ಕೇಂದ್ರ ಹಾಗೂ ಸಮವರ್ತಿ ಪಟ್ಟಿಯಲ್ಲಿ ಸೇರಿಸಿರುವುದು ಸರಿಯಷ್ಟೆ. ಆದರೆ ಬುಡಕಟ್ಟು ಅಭಿವೃದ್ಧಿ ಅಥವಾ ಬುಡಕಟ್ಟು ನಿರ್ವಹಣೆಯ ವಿಷಯ ಯಾವುದೇ ಪಟ್ಟಿಯಲ್ಲಿ ಸೇರದೆ ಇರುವುದು ಆಶ್ಚರ್ಯಕರ ಸಂಗತಿಯಾಗಿದೆ. ಆದರೆ ಬುಡಕಟ್ಟು ಜನರು ಇರುವ ಪ್ರದೇಶವನ್ನು ೫ ಮತ್ತು ೬ನೇ ಅನುಸೂಚಿತದ ಅಡಿಯಲ್ಲಿ ಸೇರಿಸಲಾಗಿದೆ.[೧೦]

ಭಾರತದ ಸಂವಿಧಾನದ ಯಾವುದೇ ಭಾಗದಲ್ಲಿ 'ಬುಡಕಟ್ಟು' ಎಂಬ ಪದವನ್ನು ವಿವರಿಸಿರುವುದಿಲ್ಲ. ಆದರೆ ಭಾರತ ಸಂವಿಧಾನದ ೩೬೬ ರ ಅನುಚ್ಛೇದಲ್ಲಿ ಅನುಸೂಚಿತ ಪಂಗಡದವರು ಬುಡಕಟ್ಟು ಸಮುದಾಯದ ಬುಡಕಟ್ಟು ಜನಾಂಗವೆಂದು ವಿವರಿಸಲಾಗಿದೆ.[೧೧] (Artical 366 of the Indian constitution observes scheduled tribes means such tribes or tribal communities or part of or groups within such tribes, or tribal communities as are deemed under article 342 to the Seheulded tribes for the purpose of this constitution) ಯಾವುದೇ ಸಮೂಹವನ್ನು ಬುಡಕಟ್ಟು ಪಂಗಡಕ್ಕೆ ಸೇರಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದ್ದು, ಭಾರತ ಸಂವಿಧಾನ ಅನುಚ್ಛೇದದ ೩೪೨ (೧) ರಲ್ಲಿ ನೀಡಿದ್ದು, ಅವರು ಕಾಲ ಕಾಲಕ್ಕೆ ಸಾರ್ವಜನಿಕರಿಗೆ ಅಧಿಸೂಚನೆಯನ್ನು ಹೊರಡಿಸುವುದರ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. ಅದೇ ರೀತಿ ಅನುಚ್ಛೇದ ೩೪೨ (೨) ರಲ್ಲಿ ಭಾರತದ ಸಂಸತ್ತಿಗೆ ಹೆಚ್ಚಿನ ಅಧಿಕಾರ ನೀಡಿ ಯಾವುದೇ ಜನಸಮೂಹವನ್ನು ಬುಡಕಟ್ಟು ಪಂಗಡದಿಂದ ತೆಗೆಯುವ ಅಥವಾ ಸೇರಿಸುವ ಅಧಿಕಾರವಿದೆ. ರಾಜ್ಯ ಸರ್ಕಾರಗಳು ಬುಡಕಟ್ಟು ಜನಾಂಗದವರಿಗೆ ಆಗುತ್ತಿರುವ ಸಾಮಾಜಿಕ ಅನ್ಯಾಯ ಹಾಗೂ ಎಲ್ಲಾ ರೀತಿಯ ಶೋಷಣೆಗಳನ್ನು

ನಿಲ್ಲಿಸಿ, ಅವರನ್ನು ಸಂರಕ್ಷಿಸಬೇಕಾಗಿದೆ. ಅದಕ್ಕಾಗಿ, ಅನುಚ್ಛೇಧ ೨೪೪ ರಲ್ಲಿ ಭಾರತದ ರಾಷ್ಟ್ರಪತಿಯವರಿಗೆ, ಬುಡಕಟ್ಟು ಸಾಂದ್ರವಾಗಿರುವ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಿ ವಿಶೇಷ ಸೌಲಭ್ಯಗಳನ್ನು ಒದಗಿಸುವ ಅಧಿಕಾರವಿದೆ. ಅಂತಹ ಪ್ರದೇಶಗಳನ್ನು ಬುಡಕಟ್ಟು ಪ್ರದೇಶವೆಂದು ಅನುಸೂಚಿ ೫ ಮತ್ತು ೬ ರಲ್ಲಿ ಘೋಷಿಸಲು ಪರಮಾಧಿಕಾರವಿದೆ. ಆದರೆ ಕರ್ನಾಟಕದಲ್ಲಿ ಅಂತಹ ಬುಡಕಟ್ಟು ಸಾಂದ್ರ ಪ್ರದೇಶಗಳು ಇಲ್ಲವಾದ್ದರಿಂದ ಯಾವುದೇ ಪ್ರದೇಶವನ್ನು ಅನುಸೂಚಿತ ಪ್ರದೇಶವೆಂದು ಘೋಷಿಸಿಲ್ಲ. ಆ ಕಾರಣ ಕೆಲವು "ಸಮಗ್ರ ಬುಡಕಟ್ಟು ಅಭಿವೃದ್ಧಿ ಘಟಕಗಳನ್ನು" (ಐ.ಟಿ.ಡಿ.ಪಿ.) ಸ್ಥಾಪಿಸಲಾಗಿದೆ. ಈ ಘಟಕಗಳು ಹೆಗ್ಗಡದೇವನಕೋಟೆ, ನಾಗರಹೊಳೆ, ಸೋಮವಾರಪೇಟೆ, ಬೆಳತಂಗಡಿ, ಉಡುಪಿ ಮತ್ತು ಕಾರ್ಕಳದಲ್ಲಿವೆ. ಯಾವುದೇ ಪ್ರದೇಶವನ್ನು ಬುಡಕಟ್ಟು ಪ್ರದೇಶವೆಂದು ಅನುಸೂಚಿತ ೫ ಮತ್ತು ೬ರಲ್ಲಿ ಘೋಷಿಸಲು ರಾಷ್ಟ್ರಪತಿಯವರಿಗೆ ಪರಮಾಧಿಕಾರವನ್ನು ನೀಡಿದೆ.

ಅನುಚ್ಛೇದ ೩೩೯ (೨) ರಲ್ಲಿ ಕೇಂದ್ರ ಸರ್ಕಾರಕ್ಕೆ ಇರುವ ಕಾರ್ಯಾಂಗದ ಅಧಿಕಾರ ವ್ಯಾಪ್ತಿಯಲ್ಲಿ, ಯಾವುದೇ ರಾಜ್ಯ ಸರ್ಕಾರಕ್ಕೆ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ನಿರ್ದೇಶನವನ್ನು ಕೊಡುವ ಅಧಿಕಾರವಿದೆ. ಅನುಚ್ಛೇದ ೨೭೫ ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಕ್ಕೆ ಬೇಕಾಗುವ ಹಣಕಾಸಿನ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಹಾಗೂ ಅನುಸೂಚಿತ ಪ್ರದೇಶದಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿದೆ.

ಭಾರತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಸಂವಿಧಾನ ನೀಡಿರುವ ಭರವಸೆಗಳನ್ನು ಸಮಯೋಚಿತವಾಗಿ ಅನುಷ್ಠಾನಗೊಳ್ಳುತ್ತಿವೆಯೇ ಎಂಬುದನ್ನು ಅಧ್ಯಯನ ಮಾಡಲು ಆಯುಕ್ತರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ನೇಮಿಸಲಾಗಿದೆ. ಇವರು ತಮ್ಮ ಅಧ್ಯಯನದ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ರಾಷ್ಟ್ರಪತಿಯವರಿಗೆ ಸಲ್ಲಿಸುತ್ತಾರೆ. ಹಾಗೂ ಇದೇ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವುದರಿಂದ ಇವರ ಸದಸ್ಯರು ಬುಡಕಟ್ಟು ಪ್ರದೇಶದ ಪ್ರಗತಿಯ ಬಗ್ಗೆ ಪರಿಶೀಲಿಸಬಹುದಾಗಿದೆ. ಬುಡಕಟ್ಟು ಪಂಗಡಗಳ ಪಟ್ಟಿಯನ್ನು ೧೯೫೦ರಲ್ಲಿ ಆ ಪಂಗಡದ ಆದಿವಾಸಿತನ (Primitiveness) ಹಾಗೂ ಹಿಂದುಳಿದಿರುವಿಕೆಗಳ (Backwardness) ಆಧಾರದ ಮೇಲೆ ರಚಿಸಲಾಗಿತ್ತು.[೨] ಭಾರತ ಸಂವಿಧಾನದ ೫ನೇ ಅನುಸೂಚಿಯಲ್ಲಿ ಅನುಸೂಚಿತ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು, ಕೆಲವು ನಿಯಮಾವಳಿಯನ್ನು ರಚಿಸಲು ರಾಜ್ಯದ ರಾಜ್ಯಪಾಲರುಗಳಿಗೆ ಅನಿರ್ದಿಷ್ಟ ಅಧಿಕಾರಗಳನ್ನು ನೀಡಲಾಗಿದೆ.[೩] ೫ನೇ ಅನುಸೂಚಿಯ ಅಡಿಯಲ್ಲಿ ರಾಜ್ಯ ಸರ್ಕಾರದ ರಾಜ್ಯಪಾಲರ ಅನುಮತಿ ಮೇರೆಗೆ ಬುಡಕಟ್ಟು ಸಲಹಾ ಸಮಿತಿ (Tribal advisory Council) ಯನ್ನು ರಚಿಸಲು ಅವಕಾಶವನ್ನು ಮಾಡಲಾಗಿದೆ.

ಬುಡಕಟ್ಟುಗಳ ಮುಖ್ಯ ಲಕ್ಷಣಗಳು

ಒಂದೊಂದು ಬುಡಕಟ್ಟುಗಳು ಒಂದೊಂದು ಗುಣಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಈ ಕೆಳಕಂಡ ಪ್ರಮುಖ ಲಕ್ಷಣಗಳನ್ನು ಹೊಂದಿರುತ್ತದೆ.

೧. ಮೂಲ ನಿವಾಸಿ ಆದಿವಾಸಿಗಳಿಂದ ಉಗಮವಾದ ಪಂಗಡ

೨. ನಿರ್ಧಿಷ್ಟ ಭೂ ಪ್ರದೇಶವನ್ನು ಹೊಂದಿರುತ್ತಾರೆ

೩. ನಿರ್ಧಿಷ್ಟ ಹೆಸರನ್ನು ಹೊಂದಿರುತ್ತಾರೆ

೪. ಆದಿವಾಸಿ ಜೀವನ ಶೈಲಿ

೫. ಬುಡಕಟ್ಟುಗಳು ತಮ್ಮದೇ ಆದ ಭಾಷೆಯನ್ನು ಹೊಂದಿರುತ್ತಾರೆ

೬. ನಿರ್ಜನ ಇಲ್ಲವೇ ಕಾಡು ಮೇಡುಗಳಲ್ಲಿ ಅಥವಾ ಬೆಟ್ಟ ಗುಡ್ಡಗಳಲ್ಲಿ ವಾಸಿಸುತ್ತಾರೆ

೭. ಸರಳ ಮತ್ತು ಸ್ವತಂತ್ರ ಜೀವನ

೮. ಬಹುಪಾಲು ಬುಡಕಟ್ಟು ಪಂಗಡಗಳು ಮಾಂಸಹಾರಿಗಳಾಗಿರುತ್ತಾರೆ

೯. ಸೌಂದರ್ಯಪ್ರಜ್ಞೆಯುಳ್ಳರಾಗಿರುತ್ತಾರೆ

೧೦. ಎಲ್ಲಾ ರೀತಿಯಲ್ಲೂ ಹಿಂದುಳಿದಿರುತ್ತಾರೆ

೧೧. ಬೆತ್ತಲೆ ಅಥವಾ ಅರೆ ಬೆತ್ತಲ ಪ್ರವೃತ್ತಿ

೧೨. ಬುಡಕಟ್ಟು ಸಮುದಾಯಗಳಿಗೆ ಮಧ್ಯಪಾನ ಹಾಗೂ ನೃತ್ಯ ಬಹಳ ಪ್ರಿಯಕರವಾದುದು.

೧. ಮೂಲ ನಿವಾಸಿ ಆದಿವಾಸಿಗಳಿಂದ ಉಗಮವಾದ ಪಂಗಡ

ಮೂಲನಿವಾಸಿಗಳು ಆದಿವಾಸಿ ಮೂಲದಿಂದ ಉಗಮಗೊಂಡಿರುತ್ತಾರೆ. ದ್ರಾವಿಡ ಮೂಲದಿಂದ ಉಗಮವಾಗಿರುವ ಪಂಗಡಕ್ಕೆ ಆದಿವಾಸಿಗಳೆಂದು ಕರೆಯುತ್ತಾರೆ. ದ್ರಾವಿಡರು ಈ ದೇಶದ ಪ್ರಾಚೀನ ನಿವಾಸಿಗಳಾಗಿದ್ದರಿಂದ ಬುಡಕಟ್ಟು ಜನರನ್ನು ಆದಿವಾಸಿಗಳೆಂದು ಕರೆಯುತ್ತಾರೆ. ಬುಡಕಟ್ಟು ಜನರು ಈ ದೇಶದ ಮೂಲನಿವಾಸಿಗಳಾದ್ದರಿಂದ ಇವರನ್ನು ಮೂಲನಿವಾಸಿಗಳಿಂದ ಉಗಮವಾದ ಪಂಗಡವೆಂದು ಕರೆಯುವುದುಂಟು.

೨. ನಿರ್ಧಿಷ್ಟ ಭೂ ಪ್ರದೇಶವನ್ನು ಹೊಂದಿರುತ್ತಾರೆ

ಬುಡಕಟ್ಟು ಜನರು ಒಂದು ನಿರ್ಧಿಷ್ಟ ಪ್ರದೇಶವನ್ನು ಹೊಂದಿರುತ್ತಾರೆ. ಪ್ರತಿಯೊಂದು ಬುಡಕಟ್ಟುಗಳಿಗೆ ತಮ್ಮದೇ ಆದ ನಿಶ್ಚಿತ ನೆಲೆ ಇರುತ್ತದೆ. ಇವರು ಆಹಾರಕ್ಕಾಗಿ, ವ್ಯಾಪಾರಕ್ಕಾಗಿ, ಪಶುಪಾಲನೆಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆಹೋದರೂ ತಾವು ಹುಟ್ಟಿದ ಸ್ಥಳ ಮತ್ತು ಪ್ರದೇಶದ ಬಗ್ಗೆ ಸದಾ ಜಾಗರೂಕರಾಗಿರುತ್ತಾರೆ. ಇವರು ವಾಸಿಸುವ ಪ್ರದೇಶಗಳಿಗೆ ಹಾಡಿ, ಹಟ್ಟಿ, ದೊಡ್ಡಿ, ಪಾಳ್ಯ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ನಾಗಾ, ಗಾರೋ ಜನರು ಅಸ್ಸಾಂ ಭಾಗದಲ್ಲಿಯೂ, ತೋಡರು, ಬಡಗರು, ನೀಲಗಿರಿ ಬೆಟ್ಟಗಳಲ್ಲಿಯೂ, ಗೊಂಡರು, ಗೊಂಡಾರಣ್ಯಗಳಲ್ಲಿಯೂ, ಕಾಡು ಕುರುಬ, ಜೇನು ಕುರುಬ, ಕುರುಬರು ಕರ್ನಾಟಕದಲ್ಲಿಯೂ, ಚೆಂಚರು ಆಂಧ್ರಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಇಂತಹ ನಿರ್ಧಿಷ್ಟ ಭೂ ಪ್ರದೇಶದಲ್ಲಿ ವಾಸಮಾಡುವುದರಿಂದ ಅವರಲ್ಲಿ ಸಹಕಾರ, ಒಗ್ಗಟ್ಟು ಮತ್ತು ಸಾಮುದಾಯಿಕ ಭಾವನೆ ಹೆಚ್ಚಾಗಿರುತ್ತದೆ.

೩. ನಿರ್ದಿಷ್ಟ ಹೆಸರನ್ನು ಹೊಂದಿರುತ್ತಾರೆ

ಬುಡಕಟ್ಟು ಸಮುದಾಯಗಳು ನಿರ್ದಿಷ್ಟ ಹೆಸರನ್ನು ಹೊಂದಿರುತ್ತಾರೆ. ಭಾರತದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಬುಡಕಟ್ಟುಗಳಿಗೂ ತಮ್ಮದೇ ಆದ ವಿಶಿಷ್ಟ ಹೆಸರುಗಳಿವೆ. ಉದಾ : ನಾಗಾ, ತೋಡ, ಭಿಲ್, ಚೆಂಚು, ಜೇಡ, ಗೊಂಡ, ಕಾಡುಕುರುಬ, ಕೊರಗ ಮುಂತಾದ ಆದಿವಾಸಿಗಳ ಹೆಸರುಗಳಿವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.

೪.ಆದಿವಾಸಿ ಜೀವನ ಶೈಲಿ

ಆದಿವಾಸಿಗಳು ಆಹಾರಕ್ಕಾಗಿ ಅಲೆಮಾರಿ ಹಾಗೂ ಅರೆಅಲೆಮಾರಿಗಳಾಗಿ ಕಾಡಿಂದ ಕಾಡಿಗೆ ಮತ್ತು ಊರಿಂದ ಊರಿಗೆ ಅಲೆಯುತ್ತಾ ಜೀವನವನ್ನು ನಡೆಸುತ್ತಿದ್ದಾರೆ. ಆಹಾರಕ್ಕಾಗಿ ಸ್ಥಳೀಯವಾಗಿ ದೊರಯುವ ಗೆಡ್ಡೆ ಗೆಣಸುಗಳು, ಹಣ್ಣು-ಹಂಪಲಗಳಿಂದ ಜೀವನ ನಡೆಸುತ್ತಿದ್ದಾರೆ. ಇದು ಲಭ್ಯವಾಗದ ಕಡೆ ಬೇಟೆ ಆಡುವುದು, ಮೀನು ಹಿಡಿಯುವುದರ ಮೂಲಕ ಮಾಂಸ ಮತ್ತು ಮೀನುಗಳನ್ನು ತಿನ್ನವುದರ ಮೂಲಕ ತಮ್ಮ ದೈನಂದಿನ ಜೀವನವನ್ನು ನಡೆಸುತ್ತಿದ್ದಾರೆ. ಆಹಾರದ ಸಂಗ್ರಹಣೆಯಲ್ಲಿ ಮಹಿಳೆಯರು ಮತ್ತು ಪುರುಷರು ಇಬ್ಬರೂ ತೊಡಗುತ್ತಾರೆ.

೫. ಬುಡಕಟ್ಟುಗಳು ತಮ್ಮದೇ ಆದ ಭಾಷೆಯನ್ನು ಹೊಂದಿರುತ್ತವೆ

ಪ್ರತಿಯೊಂದು ಬುಡಕಟ್ಟುಗಳು ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುತ್ತವೆ. ಅದನ್ನು ಬೇರೆಯವರು ಅರ್ಥ ಮಾಡಿಕೊಳ್ಳುವುದು ಕಷ್ಟ. ಇವರ ಭಾಷೆಗೆ ಲಿಪಿ ಇಲ್ಲದೇ ಇರುವುದರಿಂದ ಇವರು ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದಾರೆ. ಆದಿವಾಸಿ ಭಾಷೆಗಳಲ್ಲಿ ನೆರೆಹೊರೆ ಪ್ರದೇಶಗಳ ಭಾಷೆಯ ಪ್ರಬಾವವನ್ನು ಕಾಣಬಹುದು. ಕನ್ನಡ ನಾಡಿನ ಬಹು ಸಂಖ್ಯಾತ ಬುಡಕಟ್ಟುಗಳ ಮಾತೃ ಭಾಷೆ ಕನ್ನಡವಲ್ಲ. ಅಡಿಯನ್‌ರು ಅಡಿಯಾ, ಬಾರ್ಡ್ಮರು ಮರಾಠಿ, ಚೆಂಚರು ಚೆಂಚು, ಹಕ್ಕಿಪಿಕ್ಕಿ ವಾಗ್ರಿ, ರಾಜಗೊಂಡರು ಗೊಂಡಿ, ಇರುಳರು ತಮಿಳ್, ಕಣಿಯನ್ನರು ಕಣಿಯಾ, ಕಥೋಡಿಯರು ಕಥೋಡಿ, ಕೊರಗರು ಕೊರಗ, ವಿಠೋಲಿಯರು ಮರಾಠಿ, ಎರವರು ಯರವಿ, ಮಾತೃ ಭಾಷೆಗಳನ್ನು ಹೊಂದಿದ್ದಾರೆ.

೬. ನಿರ್ಜನ ಇಲ್ಲವೇ ಕಾಡು-ಮೇಡುಗಳಲ್ಲಿ ಅಥವಾ ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿರುವುದು

ಬುಡಕಟ್ಟು ಜನರು ಪುರಾತನ ಕಾಲದಿಂದಲೂ ತಮ್ಮದೇ ಆದ ಶಾಶ್ವತ ನೆಲೆಯನ್ನು ಹೊಂದದೇ ಊರಿಂದ ಊರಿಗೆ ಕಾಡಿನಿಂದ ಕಾಡಿಗೆ ಅಲೆಯುತ್ತಾ ಅಲ್ಲಿ ದೊರೆಯುವ ಕಾಡು-ಬೆಟ್ಟ, ಗುಡ್ಡ, ದುರ್ಗಮಗಳಲ್ಲಿ ವಾಸಿಸುತ್ತಾ ಅಲ್ಲಿ ದೊರೆಯುವ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಾ, ಜಲಚರ ಪ್ರಾಣಿಗಳು ವನ್ಯ ಮೃಗಗಳನ್ನು ಬೇಟೆಯಾಡುತ್ತಾ ಅವುಗಳ ಮಾಂಸದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಾ ಜೀವನ ನಡೆಸುತ್ತಿರುವ ಆದಿವಾಸಿ ಪಂಗಡಗಳಾಗಿವೆ. ಇದರ ಜೊತೆಗೆ ಪಶುಪಾಲನೆ ಮತ್ತು ಕೃಷಿ ಆಧಾರಿತ ವೃತ್ತಿಗಳನ್ನು ಹೊಂದಿರುವ ಬುಡಕಟ್ಟಿನವರು ಸಾಕಿರುವ ಪ್ರಾಣಿಗಳಿಗೆ ಆಹಾರವನ್ನು ಹುಡುಕುತ್ತಾ ಲಭ್ಯವಿರುವ ಕಾಡುಗಳಲ್ಲಿ ನೆಲೆಸಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

೭. ಸರಳ ಮತ್ತು ಸ್ವತಂತ್ರ ಜೀವನ

ಆದಿವಾಸಿ ಪಂಗಡಗಳು ಬಹುಮಟ್ಟಿಗೆ ಸರಳವು ಮತ್ತು ಸ್ವತಂತ್ರವಾಗಿ ಜೀವನ ನಡೆಸುವಂತಹ ಗುಂಪಾಗಿರುತ್ತವೆ. ಅರಣ್ಯ ಕಾಯ್ದೆಗಳು ಜಾರಿಗೆ ಬಂದನಂತರ ಅಲ್ಲಿ ನೆಲೆಸಿದ್ದ ಬುಡಕಟ್ಟು ಜನರನ್ನು ಬಲತ್ಕಾರವಾಗಿ ಅರಣ್ಯದಿಂದ

ಹೊರದೂಡಲ್ಪಟ್ಟಿದ್ದರಿಂದ ಆಶ್ರಯ ರಹಿತ ಬುಡಕಟ್ಟು ಜನರು ಆಶ್ರಯಕ್ಕಾಗಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಲಸೆ ಬಂದು ಸಿಕ್ಕ ಸಿಕ್ಕಲ್ಲಿ ಟೆಂಟು ಗುಡಾರಗಳನ್ನು ಹಾಕಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇವರು ನಗರದ ಕೃತಕ ಮತ್ತು ಆಡಂಬರದ ಜೀವನಕ್ಕೆ ಹೆಚ್ಚು ಬೆಲೆಕೊಡದೆ ಅವುಗಳಿಂದ ದೂರವಿದ್ದು, ಬೇಟೆಯಾಡಿ ಮೀನು, ಮಾಂಸ ಮತ್ತು ಗಡ್ಡೆ-ಗೆಣಸುಗಳನ್ನು ತಿಂದು ಸರಳ ಮತ್ತು ಸ್ವತಂತ್ರ ಜೀವನವನ್ನು ನಡೆಸುತ್ತಿದ್ದಾರೆ.

೮. ಬಹುಪಾಲು ಬುಡಕಟ್ಟು ಪಂಗಡಗಳು ಮಾಂಸಹಾರಿಗಳು

ಬಹುಪಾಲು ಬುಡಕಟ್ಟು ಪಂಗಡಗಳು ಮಾಂಸಹಾರಿಗಳಾಗಿರುತ್ತಾರೆ. ಇದು ಅವರ ಮೂಲ ಲಕ್ಷಣಗಳಲ್ಲಿ ಒಂದಾಗಿದೆ. ಮಾಂಸಕ್ಕಾಗಿ ಇವರು ಮೀನು ಹಿಡಿಯುವುದು, ಬೇಟೆಯಾಡುವುದು ಇದರಿಂದ ಜಿಂಕೆ, ಮೊಲ, ನರಿ, ತೋಳ, ಮುಂಗುಸಿ, ಕಾಡು ಇಲಿ, ಕಾಡು ಬೆಕ್ಕು, ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡಿ ಅದರ ಮಾಂಸಗಳಿಂದ ಹೊಟ್ಟೆ ತುಂಬಿಸಿ ಕೊಳ್ಳುತ್ತಿದ್ದರು. ಈಗ ವನ್ಯಜೀವಿ ಕಾಯ್ದೆಗಳು ಬಂದ ನಂತರ ಈ ಬುಡಕಟ್ಟು ಜನರು ಬೇಟೆಯಾಡುವುದನ್ನು ನಿಲ್ಲಿಸಿ ಕದ್ದು ಯಾರಿಗೂ ಕಾಣದಂತೆ ಬೇಟೆಯಾಡಿ ಕಾಡಿನಲ್ಲಿ ಸಿಕ್ಕ ಪ್ರಾಣಿ ಪಕ್ಷಿಗಳ ಮಾಂಸವನ್ನು ಉಪಯೋಗಿಸುತ್ತಿದ್ದಾರೆ. ಸಂತೋಷದ ಕೂಟಗಳಲ್ಲಿ ಮಾಂಸದ ಊಟಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ.[೧೫]

೯. ಸೌಂದರ್ಯ ಪ್ರಜ್ಞೆಯುಳ್ಳವರು

ಬುಡಕಟ್ಟು ಜನರು ಸರಳ ಮತ್ತು ಸ್ವತಂತ್ರ ಜೀವಿಗಳಾಗಿರುವುದರ ಜೊತೆಗೆ ತಮ್ಮ ಸೌಂದರ್ಯಕ್ಕೆ ಅಷ್ಟೇ ಮಹತ್ವವನ್ನು ಕೊಡುತ್ತಾರೆ. ಸ್ತ್ರೀ ಪುರುಷರಿಬ್ಬರೂ ಅಲಂಕಾರ ಪ್ರಿಯರಾಗಿದ್ದು ತಮಗೆ ಪ್ರಿಯವಾದುದನ್ನು ತಮ್ಮ ದೇಹದ ಭಾಗಗಳಲ್ಲಿ ಅಚ್ಚೆಗಳನ್ನು ಹಾಕಿಸಿಕೊಳ್ಳುವುದರ ಮೂಲಕ ವ್ಯಕ್ತಪಡಿಸುತ್ತಿದ್ದರು. ಬುಡಕಟ್ಟು ಮಹಿಳೆಯರು ಕೇಶವನ್ನು ವಿವಿಧ ರೀತಿಯಲ್ಲಿ ಅಲಂಕರಿಸಿಕೊಳ್ಳುತ್ತಿದ್ದರು. ಹೂ ಮುಡಿಯುವುದು, ಕೈ ಬಳೆಗಳನ್ನು ಮತ್ತು ಕಡಗಗಳನ್ನು ತೊಡುವುದು ಇವರ ಪದ್ಧತಿಯಾಗಿತ್ತು. ಕೆಲವು ಬುಡಕಟ್ಟುಗಳಲ್ಲಿ ಗಂಡಸರು ಸಹ ಉದ್ದವಾದ ಕೂದಲುಗಳನ್ನು ಬಿಟ್ಟು ಅಲಂಕರಿಸಿಕೊಳ್ಳುತ್ತಿದ್ದರು. ಓಲೆ ಬೆಂಡೋಲೆಗಳನ್ನು ಇಬ್ಬರು ಧರಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಮದುವೆ ಮುಂಜಿಗಳಲ್ಲಿ ವಿಶೇಷ ಉಡುಗೆಗಳನ್ನು ಧರಿಸುತ್ತಿದ್ದರು.

೧೦. ಎಲ್ಲಾ ರೀತಿಯಲ್ಲೂ ಹಿಂದುಳಿದಿರುವುದು

ಬುಡಕಟ್ಟು ಜನರು ಸಮಾಜದ ನಾಗರಿಕ ಜನರ ಜೊತೆ ಬೆರೆಯದೆ ಸಮಾಜದ ಮುಖ್ಯವಾಹಿನಿಯಿಂದ ಹೊರಗಡೆ ಇದ್ದು, ಸರ್ಕಾರದಿಂದ ದೊರೆಯುತ್ತಿರುವ ಸೌಲತ್ತುಗಳ ಅರಿವಿಲ್ಲದೆ, ಮುಂದಿನ ಆಗುಹೋಗುಗಳ ಬಗ್ಗೆ ಚಿಂತಿಸದೆ, ಸರ್ಕಾರ ನೀಡುವ ಸೌಲತ್ತುಗಳನ್ನು ಪಡೆಯಲು ಪ್ರಯತ್ನಿಸದೆ, ತಮ್ಮ ಪ್ರಾಚೀನ ಕಾಲದ ಬದುಕನ್ನೇ ಮುಂದುವರಿಸಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ತೀರ ಹಿಂದುಳಿದ ಬುಡಕಟ್ಟುಗಳಾಗಿವೆ.

೧೧. ಬೆತ್ತಲೆ ಅಥವಾ ಅರೆ ಬೆತ್ತಲೆ ಪ್ರವೃತ್ತಿ

ಬುಡಕಟ್ಟು ಜನರು ಬಹುಪಾಲು ಅರಣ್ಯಗಳಲ್ಲಿ ವಾಸಿಸುತ್ತಿದ್ದು ಮೈಮೇಲಿನ ಬಟ್ಟೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡದೆ ಹಾಗೂ ನಿರೀಕ್ಷಿಸಿದ ಬೇಡಿಕೆಗೆ ಅನುಗುಣವಾಗಿ ಉಡುಗೆಗಳು ದೊರೆಯದ ಕಾರಣ ಮತ್ತು ಅವರ ಕಾಯಕಕ್ಕೆ ತೊಂದರೆಯಾಗುವ ಉಡುಪುಗಳನ್ನು ಧರಿಸಲು ಇಚ್ಛಿಸದೇ ಇದ್ದು, ಬೆತ್ತಲೆ ಮತ್ತು ಅರೆ ಬೆತ್ತಲೆಯಾಗಿ ಜೀವನ

ನಡೆಸುತ್ತಿದ್ದರು. ಅರೆ ಬೆತ್ತಲೆಯಾದ ಬುಡಕಟ್ಟು ಜನರು ಉಪಯೋಗಿಸುತ್ತಿದ್ದ ತುಂಡು ಬಟ್ಟೆಯನ್ನು ಕಾಡಿನಲ್ಲಿ ದೊರೆಯುವ ಪ್ರಾಣಿಗಳ ಚರ್ಮ, ಕಾಡಿನ ಎಲೆ, ಮರದ ತೊಗಟೆ, ಹುಲ್ಲಿನಿಂದ ಮಾಡಿದ ಅರೆ ಉಡುಪುಗಳನ್ನು ಧರಿಸಿ ಜೀವನ ನಡೆಸುತ್ತಿದ್ದರು.

೧೨. ಬುಡಕಟ್ಟು ಜನರಿಗೆ ಮದ್ಯಪಾನ ಹಾಗೂ ನೃತ್ಯ ಬಹಳ ಪ್ರಿಯಕರವಾದುದು

ಬುಡಕಟ್ಟು ಜನರು ವಿನೋದ ಪ್ರಿಯರಾಗಿದ್ದು ಮನೋರಂಜನೆಗಾಗಿ ಸಂಗೀತ ವಾದ್ಯದ ಪರಿಕರಗಳನ್ನು ನುಡಿಸುವುದು, ಮದ್ದಳೆಗಳನ್ನು ಬಾರಿಸುವುದು ಹವ್ಯಾಸವಾಗಿತ್ತು. ಹಬ್ಬ ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ ವಿವಿಧ ರೀತಿಯ ಸಂಗೀತವನ್ನು ನುಡಿಸುತ್ತಾ ಸ್ತ್ರೀ ಪುರುಷರಿಬ್ಬರೂ ತಮ್ಮದೇ ಆದ ಭಂಗಿಯಲ್ಲಿ ನೃತ್ಯವನ್ನು ಮಾಡುತ್ತಿದ್ದರು. ಸಂಗೀತ ಬುಡಕಟ್ಟು ಜನರಿಗೆ ಎಷ್ಟು ಪ್ರಿಯಕರವಾಗಿತ್ತೋ ಅಷ್ಟೇ ಮದ್ಯಪಾನವೂ ಸಹ ಪ್ರಿಯಕರವಾಗಿತ್ತು. ಬುಡಕಟ್ಟು ಜನರು ಕಾಡುಗಳಲ್ಲಿ ದೊರೆಯುವ ಹೂವು, ಮರದ ತೊಗಟೆಗಳಿಂದ, ಕಾಡಿನಲ್ಲಿ ದೊರೆಯುವ ಹುಳಿಹಣ್ಣುಗಳಿಂದ, ಭತ್ತದಿಂದ ಮದ್ಯವನ್ನು ತಯಾರಿಸುತ್ತಿದ್ದರು. ಜೊತೆಗೆ ಮರಗಳಲ್ಲಿ ಸೇಂದಿಯನ್ನು ಇಳಿಸುವುದರ ಮೂಲಕ ಮದ್ಯವನ್ನು ಸೇವಿಸುತ್ತಿದ್ದರು. ಪ್ರತಿಯೊಂದು ಸಂತೋಷ ಕೂಟಗಳಲ್ಲಿ ಮಾಂಸ ಮತ್ತು ಮದ್ಯವನ್ನು ಕಡ್ಡಾಯವಾಗಿ ಸೇವಿಸುತ್ತಿದ್ದರು. ಹಾಗೂ ಬಂದ ಅತಿಥಿಗಳಿಗೆ ಬಡಿಸುತ್ತಿದ್ದರು ಎಂಬ ಮಾಹಿತಿಯನ್ನು ೧೯೫೨ರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಆಯೋಗದ ವರದಿಯಲ್ಲಿ ದಾಖಲಾಗಿದೆ.

ಭಾರತ ದೇಶದಲ್ಲಿ ೬೯೮ ಬುಡಕಟ್ಟು ಸಮುದಾಯಗಳಿದ್ದು, ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೮.೦೮ ರಷ್ಟು ಜನ ಬುಡಕಟ್ಟಿನವರಿರುವರು. ನೂರಾರು ಭಾಷೆಗಳ್ನನು ಮಾತನಾಡುತ್ತಾರೆ.

೧೯೫೦ರಲ್ಲಿ ಅನುಸೂಚಿತ ಪಂಗಡಗಳ ಆದೇಶದಲ್ಲಿ ಕೇವಲ ೨೧೨ ಪಂಗಡಗಳನ್ನು ಮಾತ್ರ ಗಿರಿಜನರ ಪಟ್ಟಿಗೆ ಸೇರಿಸಿದ್ದು, ಸದರಿ ಬುಡಕಟ್ಟು ಪಂಗಡಗಳ ಸಂಖ್ಯೆ ಕಾಲಾನುಕ್ರಮದಲ್ಲಿ ರಾಜಕೀಯ ಮತ್ತು ಇತರೆ ಒತ್ತಡಗಳಿಂದ ಅವುಗಳ ಸಂಖ್ಯೆ ಬದಲಾಗುತ್ತಿದೆ.[೧೬]

ಪ್ರಪಂಚದಲ್ಲಿರುವ ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ದೇಶಗಳಲ್ಲಿ ಭಾರತ ದೇಶ ೨ನೇ ಸ್ಥಾನದಲ್ಲಿದೆ. ಇದು ಫ್ರಾನ್ಸ್ ಮತ್ತು ಬ್ರಿಟನ್ ಜನಸಂಖ್ಯೆಗಿಂತ ಹೆಚ್ಚಾಗಿದ್ದು, ಆಸ್ಟ್ರೇಲಿಯಾದ ಜನಸಂಖ್ಯೆಯ ನಾಲ್ಕರಷ್ಟಿದೆ. ೨೦೦೧ ನೇ ಜನಗಣತಿ ಪ್ರಕಾರ ಭಾರತ ದೇಶದ ಬುಡಕಟ್ಟು ಜನಸಂಖ್ಯೆ ದೇಶದ ಒಟ್ಟು ಜನಸಂಖ್ಯೆ ಶೇ ೮.೦೮ ರಷ್ಟು ಇರುತ್ತದೆ. ಈ ದೇಶದ ಭೌಗೋಳಿಕ ಪ್ರದೇಶದ ಸುಮಾರು ಶೇ ೨೦ರ ಭೂ ಪ್ರದೇಶದಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ.[೧೭] ಭಾರತದಲ್ಲಿ ಸುಮಾರು ೭೦೦ಕ್ಕು ಹೆಚ್ಚು ಬುಡಕಟ್ಟು ಸಮುದಾಯಗಳಿದ್ದು, ಅವು ದೇಶದುದ್ದಗಲಕ್ಕೂ ಹರಡಿಕೊಂಡಿವೆ. ಭಾರತದಲ್ಲಿರುವ ಬುಡಕಟ್ಟುಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

೧. ಉತ್ತರ ಹಾಗು ಈಶಾನ್ಯ ವಲಯದ ಆದಿವಾಸಿಗಳು

೨. ಮಧ್ಯವಲಯದ ಆದಿವಾಸಿಗಳು

೩. ದಕ್ಷಿಣ ವಲಯದ ಆದಿವಾಸಿಗಳು[೧೮]

ಆಧುನಿಕ ಶಿಕ್ಷಣದ ಪರಿಣಾಮ ನಾಗರಿಕತೆಯ ಪ್ರಭಾವದಿಂದ ಆದಿವಾಸಿಗಳ ಮೂಲ ಸಂಸ್ಕೃತಿ, ಸಂಪ್ರದಾಯ,

ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡುಬಂದಿವೆ. ಇತರೆ ಬದಲಾವಣೆಗಳು ಬುಡಕಟ್ಟು ಸಮುದಾಯದ ಮೇಲೆ ಪರಿಣಾಮ ಬೀರಿ ಅವರಲ್ಲಿ ಬುಡಕಟ್ಟು ಜನರ ಹಕ್ಕುಗಳು, ಸಂಘಟಿತ ಚಳುವಳಿ ಬಗ್ಗೆ ಪ್ರಜ್ಞೆಯನ್ನು ಮೂಡಿಸಿವೆ.

ಸ್ವಾತಂತ್ರ್ಯ ಬಂದು ಸುಮಾರು ೫೭ ವರ್ಷಗಳಾದರೂ, ಈ ಬುಡಕಟ್ಟುಗಳ ಮೇಲೆ ಶೋಷಣೆ ನಿಂತಿಲ್ಲ. ಅವರನ್ನು ತಿದ್ದುವ ಅಥವಾ ಕಾಲದ ಸಹಜ ಬದಲಾವಣೆಗೆ ಅವರು ತಾವಾಗಿಯೇ ಬದಲಾಗುವಂತಹ ಪರಿಸ್ಥಿತಿ ನಿರ್ಮಾಣ ಮಾಡುವ ಪ್ರಾಮಾಣಿಕ ಪ್ರಯತ್ನಗಳು ಹೆಚ್ಚಾಗಿ ಜರುಗುತ್ತಿಲ್ಲ. ಬುಡಕಟ್ಟು ಜನರಲ್ಲಿ ಬಹಳಷ್ಟು ಜನ ಪ್ರಾಣಿಗಳಿಗಿಂತ ಕನಿಷ್ಠ ಜೀವನವನ್ನು ನಡೆಸುತ್ತಿದ್ದಾರೆನ್ನುವ ಪ್ರಜ್ಞೆ ಸರ್ಕಾರದಲ್ಲಿ ಮೂಡಿರುವುದರಿಂದ ಅವರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೃಷಿ, ನೀರಾವರಿ, ಪಶುಸಂಗೋಪನೆ, ವಸತಿ ರಸ್ತೆ, ಸಾರಿಗೆ ಸಹಕಾರ, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳ ಮೂಲಕ ಹಲವಾರು ಬುಡಕಟ್ಟುಪರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಗಿದೆ.

ಬುಡಕಟ್ಟು ಜನರ ಅಭಿವೃದ್ಧಿಯ ಉದ್ದೇಶ

೧. ಬುಡಕಟ್ಟು ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಒದಗಿಸುವುದು.

೨. ಬುಡಕಟ್ಟು ಜನರ ಜೀವನ ಮಟ್ಟವನ್ನು ಅಭಿವೃದ್ಧಿಪಡಿಸುವುದು. ಇದಲ್ಲದೆ, ಉದ್ಯೋಗ ಮತ್ತು ಚುನಾವಣೆಯಲ್ಲಿ ಬುಡಕಟ್ಟು ಜನರು ಸ್ಪರ್ಧಿಸಲು ಮೀಸಲಾತಿ ಇತ್ಯಾದಿಗಳನ್ನು ಜಾರಿಗೊಳಿಸಲಾಗಿದೆ. ಮೇಲೆ ತಿಳಿಸಿರುವ ಯೋಜನೆಗಳಲ್ಲಿ ಮುಖ್ಯವಾದವುಗಳು.

ಬುಡಕಟ್ಟು ಪರ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಮುಟ್ಟಿಸಲು ಹಾಗೂ ಅನಾವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿಯಾಗಿ ಯೋಜನೆಗಳನ್ನು ಪರಿವೀಕ್ಷಿಸಲು ಅನುಕೂಲವಾಗುವಂತೆ ಅಧಿಕಾರ ವಿಕೇಂದ್ರೀಕರಿಸಿ ಜಿಲ್ಲಾ, ತಾಲ್ಲೂಕ ಹಾಗೂ ಗ್ರಾಮ ಪಂಚಾಯತ್‌ಗಳ ಮೂಲಕ ಜಾರಿಗೊಳಿಸಲಾಗಿವೆ. ಇವನ್ನು ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನಗೊಳಿಸಲಾಗುತ್ತಿವೆ. ಅವುಗಳ ವಿವರ ಈ ಕೆಳಗಿನಂತಿದೆ.

೦೧. ಶೈಕ್ಷಣಿಕ ನೆರವಿನ ಯೋಜನೆ

ಬುಡಕಟ್ಟು ಜನರಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು, ಅನಕ್ಷರತೆಯನ್ನು ಹೋಗಲಾಡಿಸಲು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ, ಉಚಿತ ಶಿಕ್ಷಣ ನೀಡುವುದರ ಜೊತೆಗೆ, ಶಿಕ್ಷಣವನ್ನು ಪಡೆಯಲು ಬೇಕಾಗುವ ವಿದ್ಯಾರ್ಥಿ ನಿಲಯದ ಸೌಲತ್ತುಗಳನ್ನು ಒದಗಿಸುವುದು.

೧. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು (ಜಿಲ್ಲಾವಲಯ ಕಾರ್ಯಕ್ರಮ)

ಬುಡಕಟ್ಟು ಸಮುದಾಯದ ಮಕ್ಕಳಿಗೆ ಪ್ರಾರಂಭದಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಇಲ್ಲಿ ೫ ವರ್ಷದ ಗಂಡು ಮಗು ಅಥವಾ ೬ ವರ್ಷದ ಹೆಣ್ಣು ಮಕ್ಕಳನ್ನು ದಾಖಲಿಸಿಕೊಂಡು ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಪ್ರತಿ ಕೇಂದ್ರದಲ್ಲಿ ಒಬ್ಬ ಸಂಚಾಲಕಿ ಹಾಗೂ ನಿರ್ವಾಹಕಿ ಇರುತ್ತಾರೆ. ಸಂಚಾಲಕಿಯು ಪ್ರತಿ ದಿನ ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದುಕೊಂಡು

ಬಂದು ಹೋಗುವುದರ ಜೊತೆಗೆ, ಆ ಮಕ್ಕಳಿಗೆ ಪ್ರತಿದಿನ ಒಂದು ಮಗುವಿಗೆ ಒಂದು ರೂಪಾಯಿ ಮೌಲ್ಯದ ಮಧ್ಯಾಹ್ನದ ಉಪಹಾರವನ್ನು ನೀಡಬೇಕಾಗಿರುವುದು ಕರ್ತವ್ಯವಾಗಿರುತ್ತದೆ.

ಕರ್ನಾಟಕ ರಾಜ್ಯವಲ್ಲಿ ಈ ರೀತಿಯ ಮಹಿಳಾ ಮಕ್ಕಳ ಕೇಂದ್ರಗಳು ೭೦ ಇರುತ್ತವೆ. ಪ್ರತಿ ಕೇಂದ್ರದಲ್ಲಿ ೫೦ ಮಕ್ಕಳಿಗೆ ಪ್ರವೇಶಾವಕಾಶವಿದ್ದು ಒಟ್ಟಾರೆ ಸುಮಾರು ೩೫೦೦ ಮಕ್ಕಳು ಈ ಕೇಂದ್ರಗಳಲ್ಲಿ ಕಲಿಯಬೇಕಾಗಿದೆ. ಆದರೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ೨೦೦೧ರ ದಾಖಲಾತಿಯ ಪ್ರಕಾರ ೩೨೮೮ ಮಕ್ಕಳು ಕಲಿಯುತ್ತಿದ್ದಾರೆ. ದುರಾದೃಷ್ಟವಶಾತ್ ಈ ರೀತಿಯ ಬುಡಕಟ್ಟು ಮಕ್ಕಳಿಗೆ ಬಳ್ಳಾರಿ ಜಿಲ್ಲೆಯಲ್ಲಿ ಯಾವುದೇ ಪ್ರತ್ಯೇಕ ಮಹಿಳಾ ಕಲ್ಯಾಣ ಕೇಂದ್ರಗಳು ಇರುವುದಿಲ್ಲ. ಈ ಕಾರಣದಿಂದ ಪ್ರತ್ಯೇಕ ಕೇಂದ್ರಗಳನ್ನು ಪ್ರಾರಂಭಿಸಲು ಸಲಹೆಗಳನ್ನು ನೀಡ ಬೇಕಾಗಿಲ್ಲ. ಈಗಾಗಲೇ ಬುಡಕಟ್ಟು ಜನರು ವಾಸಿಸುತ್ತಿರುವ ಪ್ರದೇಶಗಳ ಹತ್ತಿರದಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು ಸಹ ಇದೇ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ಕಾರಣವಾಗಿ ಯೋಜನೆಗಳನ್ನು ಪುನರಾವರ್ತಿಸುವ ಬದಲು ಈಗಿರುವ ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಿ, ಸದರಿ ಕೇಂದ್ರಗಳನ್ನು ಬಲವರ್ಧಿಸಿ, ಈ ಬುಡಕಟ್ಟು ಮಕ್ಕಳಿಗೂ ಸಹ ಈ ಸೌಲಭ್ಯವನ್ನು ವಿಸ್ತರಿಸುವುದರಿಂದ ಮೂಲ ಉದ್ದೇಶ ಈಡೇರುವುದರ ಜೊತೆಗೆ ಸರ್ಕಾರಕ್ಕೆ ಆಗುತ್ತಿದ್ದ ಹಣಕಾಸಿನ ಭಾರವನ್ನು ತಗ್ಗಿಸಿದಂತಾಗುತ್ತದೆ.

೨. ಆಶ್ರಮ ಶಾಲೆಗಳು (ಜಿಲ್ಲಾವಲಯ ಕಾರ್ಯಕ್ರಮ)

ಆಶ್ರಮ ಶಾಲೆಗಳ ಪರಿಕಲ್ಪನೆ ಕೇಂದ್ರ ಸರ್ಕಾರದ್ದಾಗಿದ್ದು, ೧೯೯೦-೯೧ ನೇ ಸಾಲಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯಗಳಿಗೆ ಶೇ.೫೦ ರಷ್ಟು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇ. ೧೦೦ ರಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ. ಬುಡಕಟ್ಟು ಪಂಗಡದ ಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ಹಾಗೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ಕೊಡುವ ಉದ್ದೇಶದಿಂದ ಸರ್ಕಾರ ಈ ಆಶ್ರಮ ಶಾಲೆಗಳನ್ನು ತೆರೆದಿದೆ. ೨೦೦೧-೦೨ ಸಾಲಿನಲ್ಲಿ ದೇಶದಾದ್ಯಂತ ೧೩೫ ಆಶ್ರಮ ಶಾಲೆಗಳ ನಿರ್ಮಾಣಕ್ಕಾಗಿ ರೂ.೯.೫೦ ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಈ ಆಶ್ರಮ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವುದರ ಜೊತೆಗೆ ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಶಾಲೆಯನ್ನು ನಡೆಸುವುದರ ಜೊತೆಗೆ ವಸತಿ ನಿಲಯದ ಸೌಕರ್ಯವನ್ನು ಒದಗಿಸಲಾಗಿದೆ. ಇದಕ್ಕಾಗಿಯೇ ಶಿಕ್ಷಕ ವೃಂದದವರನ್ನು ಬೋಧನೆಗಾಗಿ, ಅಡಿಗೆ ಸಿಬ್ಬಂದಿಯವರನ್ನು ಊಟ ಉಪಚಾರಕ್ಕಾಗಿ ನೇಮಕ ಮಾಡಲಾಗಿದೆ. ಈ ಶಾಲೆಗಳಲ್ಲಿ ಶೇ.೭೫ ರಷ್ಟು ಬುಡಕಟ್ಟು ಮಕ್ಕಳಿಗೆ ಹಾಗೂ ಶೇ.೨೫ ರಷ್ಟು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರವೇಶ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಪ್ರತಿಯೊಂದು ಶಾಲೆಯ ಪ್ರತಿ ತರಗತಿಗೆ (೧ ರಿಂದ ೫ನೇ ತರಗತಿಯವರೆಗೆ) ೨೫ ರಂತೆ ೧೨೫ ಮಕ್ಕಳನ್ನು ದಾಖಲಿಸಲು ಅವಕಾಶವಿರುತ್ತದೆ. ಆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ೯೧ ಆಶ್ರಮ ಶಾಲೆಗಳು ಬುಡಕಟ್ಟು ಮಕ್ಕಳ ಶಿಕ್ಷಣಕ್ಕಾಗಿಯೇ ತೆರೆದಿದ್ದು ಅವುಗಳಲ್ಲಿ ಸುಮಾರು ೫೭೨೫ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಆಶ್ರಮ ಶಾಲೆಗಳಿವೆ.

೧. ಆಶ್ರಮ ಶಾಲೆ, ತೆಕ್ಕಲಕೋಟೆ, ಸಿರುಗುಪ್ಪ ತಾಲ್ಲೂಕು.

೨. ಆಶ್ರಮ ಶಾಲೆ, ನಂದಿಹಳ್ಳಿ, ಹಡಗಲಿ ತಾಲ್ಲೂಕು.

೩. ಆಶ್ರಮ ಶಾಲೆ, ಯಶವಂತನಗರ, ಸಂಡೂರು ತಾಲ್ಲೂಕು.

ಈ ಮೂರು ಆಶ್ರಮ ಶಾಲೆಗಳಲ್ಲಿ ೩೦೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುತ್ತಾರೆ. ಈ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಈ ರೀತಿಯ ವೆಚ್ಚಗಳನ್ನು ಭರಿಸಲಾಗುತ್ತಿದೆ. ಅವುಗಳ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೨.೧

ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ನೀಡುವ ಸೌಲತ್ತುಗಳಿಗೆ ತಗಲುವ ವೆಚ್ಚದ ವಿವರ

ಕ್ರ.ಸಂ.	ವೆಚ್ಚದ ವಿವರ ಪ್ರತಿ ವಿದ್ಯಾರ್ಥಿಗೆ	ರೂ.ಗಳಲ್ಲಿ
೧.	ಭೋಜನ ವೆಚ್ಚ ಮಾಹೆಯಾನ ರೂ.೩೫೦.೦೦ ರಂತೆ ೧೦ ತಿಂಗಳಿಗೆ	೩೫೦೦.೦೦
೨.	ಸಮವಸ್ತ್ರ ವಾರ್ಷಿಕವಾಗಿ ರೂ.೨೦೦.೦೦ ರಂತೆ	೦೨೦೦.೦೦
೩.	ಇತರೆ ವೆಚ್ಚ ಮಾಹೆಯಾನ ರೂ.೧೫.೦೦ ರಂತೆ ೧೦ ತಿಂಗಳಿಗೆ	೦೧೫೦.೦೦
೪	ಬಟ್ಟೆ ತೊಳೆಯುವ ಭತ್ಯೆ ರೂ.೧೦.೦೦ ರಂತೆ ೧೦ ತಿಂಗಳಿಗೆ	೦೧೦೦.೦೦
೫	ಕ್ಷೌರದ ವೆಚ್ಚ ರೂ. ೨.೦೦ ರಂತೆ ವಾರ್ಷಿಕ ೬ ಬಾರಿ	೦೦೧೨.೦೦
೬	ವೈದ್ಯಕೀಯ ವೆಚ್ಚ ವಾರ್ಷಿಕ ರೂ.೫.೦೦ ರಂತೆ	೦೦೦೫.೦೦
೭	ಹಾಸಿಗೆ ಹೊದಿಕೆ ೩ ವರ್ಷಗಳಿಗೊಮ್ಮೆ ರೂ.೧೦೦.೦೦	೦೧೦೦.೦೦
	ಒಟ್ಟು	೪೦೬೭.೦೦

(ಕೃಪೆ : ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು -೨೦೦೦)

ಈ ಆಶ್ರಮ ಶಾಲೆಗಳಲ್ಲಿ ಗ್ರಾಮಾಂತರ ಪ್ರದೇಶದ ಬುಡಕಟ್ಟು ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಿ ಅವರೆಲ್ಲರೂ ೫ ರಿಂದ ೧೦ ನೇ ವರ್ಷದ ವಯಸ್ಸಿನ ಒಳಗಿರುವ ಅರ್ಹತೆಯನ್ನು ಹೊಂದಿರಬೇಕು. ಆಶ್ರಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸ ಹಾಗೂ ಊಟ ಉಪಚಾರದ ಬಗ್ಗೆ ಛಾಯಾ ಚಿತ್ರಗಳನ್ನು ಸೆರೆಹಿಡಿದು ಅವುಗಳನ್ನು ಅನುಬಂಧ ೨.೧, ೨.೨, ೨.೩ರಲ್ಲಿ ತೋರಿಸಲಾಗಿದೆ. ೨೦೦೧-೦೨ ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ೧೩೫ ಆಶ್ರಮ ಶಾಲೆಗಳನ್ನು ನಿರ್ಮಿಸಲು ರೂ. ೯.೫೦ ಕೋಟಿ ಅನುದಾನವನ್ನು ಮಂಜೂರು ಮಾಡಿದೆ.

ಬಾಧಕಗಳು

ಈ ಆಶ್ರಮ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ಶಿಕ್ಷಕರಿಲ್ಲದೆ ಕೊರತೆಯಿಂದ ಕೂಡಿದೆ. ಅಲ್ಲದೆ ಈಗ ನಿರ್ವಹಿಸುತ್ತಿರುವ ಶಿಕ್ಷಕರು ಸಹ ಶಿಕ್ಷಣ ಇಲಾಖೆಯಿಂದ ನಿಯೋಜನೆಯ ಮೇರೆಗೆ ಕೆಲಸ ನಿರ್ವಹಿಸುತ್ತಿರುತ್ತಾರೆ. ಆಶ್ರಮ ಶಾಲೆಗಳಲ್ಲಿ ನುರಿತ ಶಿಕ್ಷಕರ ಕೊರತೆ ಇದ್ದು, ಅವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಬೋಧನೆಯ ಬಗ್ಗೆ ತರಬೇತಿ

ನೀಡಿ ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಇಂತಹ ಆಶ್ರಮ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವಾಗ ಸಾಧ್ಯವಾದ ಮಟ್ಟಿಗೆ ಬುಡಕಟ್ಟು ಜನರ ಹಾಗೂ ಅವರ ಭಾಷೆಯ ಬಗ್ಗೆ ಅರಿವು ಇರುವಂತಹ ಶಿಕ್ಷಕರನ್ನು ನೇಮಿಸಿದಲ್ಲಿ ವಿದ್ಯಾರ್ಥಿಗಳು ಬಹುಬೇಗ ಸ್ಪಂದಿಸುತ್ತಾರೆ. ಭಾಷೆ ಶಿಕ್ಷಣಕ್ಕೆ ಅಡ್ಡಿಯಾಗಬಾರದು.

೩. ವಿದ್ಯಾರ್ಥಿನಿಲಯಗಳು (ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು) (ಜಿಲ್ಲಾವಲಯ ಕಾರ್ಯಕ್ರಮ)

ಈ ಕಾರ್ಯಕ್ರಮದ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ, ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಜೀವಿಸುತ್ತಿರುವ ಬುಡಕಟ್ಟು ಕುಟುಂಬಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗುವುದು. ಇದನ್ನು ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತಂದಿದೆ. ದೂರದ ಹಳ್ಳಿಯಲ್ಲಿ ವಾಸಿಸುವ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಶಾಲೆಗಳು ಲಭ್ಯವಿಲ್ಲದ ಕಾರಣ ಹಲವು ಬುಡಕಟ್ಟು ವರ್ಗದ ವಿದ್ಯಾರ್ಥಿಗಳಲ್ಲಿ ಶಾಲೆಬಿಡುವ ಪ್ರವೃತ್ತಿಯಿರುವುದರಿಂದ ಅದನ್ನು ತಪ್ಪಿಸಲು ಈ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ ನೇ ತರಗತಿಯವರೆಗೆ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ಬಾಲಕರಿಗೆ ಮತ್ತು ೩ ರಿಂದ ೧೦ ನೇ ತರಗತಿಯಲ್ಲಿ ಅಭ್ಯಸಿಸುತ್ತಿರುವ ಬಾಲಕಿಯರಿಗೆ ಅವಕಾಶವನ್ನು ನೀಡಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರುವಂತಹ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಈ ವಿದ್ಯಾರ್ಥಿನಿಲಯದ ನಿರ್ವಹಣೆಯನ್ನು ನೋಡಿಕೊಳ್ಳಲು ಪ್ರತಿಯೊಂದು ವಿದ್ಯಾರ್ಥಿನಿಲಯದಲ್ಲಿ ಒಬ್ಬ ಮೇಲ್ವಿಚಾರಕರು, ಇಬ್ಬರು ಅಡಿಗೆಯವರು, ಒಬ್ಬ ಅಡಿಗೆ ಸಹಾಯಕರು ಇರುತ್ತಾರೆ. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಮೇಲಿನ ಸಿಬ್ಬಂದಿಗಳ ಜೊತೆಗೆ ಒಬ್ಬ ರಾತ್ರಿ ಕಾವಲುಗಾರರು ಕೆಲಸ ನಿರ್ವಹಿಸುತ್ತಿದ್ದಾರೆ. ಈ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದರ ಮೂಲಕ ಅರ್ಜಿ ಪಡೆದು, ಪಟ್ಟಿಮಾಡಿ ಅವುಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಆಯ್ಕೆ ಸಮಿತಿಯ ಮುಂದೆ ಇಟ್ಟು ಆಯ್ಕೆ ಮಾಡುತ್ತಾರೆ. ಈ ಆಯ್ಕೆ ಸಮಿತಿಗೆ ಈ ಕೆಳಕಂಡಂತೆ ಅಧ್ಯಕ್ಷರು ಮತ್ತು ಸದಸ್ಯರುಗಳು ಇರುತ್ತಾರೆ.

೧. ತಾಲ್ಲೂಕು ಪಂಚಾಯತ್ ಸಮಿತಿ ಅಧ್ಯಕ್ಷರು	ಅಧ್ಯಕ್ಷರು
೨. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲುಕು ಪಂಚಾಯತ್	ಸದಸ್ಯರು
೩. ಆಯಾ ಕ್ಷೇತ್ರಗಳ ವಿಧಾನಸಭೆ ಹಾಗೂ ವಿಧಾನ ಪರಿಷತ್ ಸಧ್ಯಸರು	ಸದಸ್ಯರು
೪. ಆಯಾ ತಾಲ್ಲೂಕಿನ ತಹಶೀಲ್ದಾರರು	ಸದಸ್ಯರು
೫. ಕ್ಷೇತ್ರ ಶಿಕ್ಷಣಾಧಿಕಾರಿಗಳು	ಸದಸ್ಯರು
೬. ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು	ಸದಸ್ಯರು
೭. ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳು

ಈ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಉಚಿತ ಊಟ ಮತ್ತು ವಸತಿಯನ್ನು ನೀಡುತ್ತಿದ್ದು ಅವರುಗಳಿಗೆ ತಗಲುವ ವೆಚ್ಚವನ್ನು ಈ ಮುಂದಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೨.೨

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳಿಗೆ ತಗಲುವ ವೆಚ್ಚದ ವಿವರ

ಅ. ಪ್ರತಿ ವಿದ್ಯಾರ್ಥಿಗೆ

೧.	ಆಹಾರದ ವೆಚ್ಚ (ಮಾಸಿಕ)	ರೂ ೪೦೦.೦೦
೨.	ವಾರ್ಷಿಕ ೨ ಜೊತೆ ಉಡುಪು (ವಾರ್ಷಿಕ)	ರೂ ೩೫೦.೦೦
೩.	ಪಠ್ಯ ಪುಸ್ತಕ, ಲೇಖನ ಸಾಮಗ್ರಿ (ವಾರ್ಷಿಕ)	ರೂ ೨೫೦.೦೦
೪.	ಹಾಸಿಗೆ ಹೊದಿಕೆ, ೩ ವರ್ಷಗಳಿಗೊಮ್ಮೆ	ರೂ ೩೫೦.೦೦
೫.	ಇತರೆ ವೆಚ್ಚಗಳು (ವಾರ್ಷಿಕ)	ರೂ ೪೦.೦೦
೬.	ಬಾಲಕರಿಗೆ ಕ್ಷೌರಕ್ಕಾಗಿ (ವಾರ್ಷಿಕ)	ರು ೫೦.೦೦

ಆ. ಪ್ರತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಕ್ಕೆ

೧.	ವಿದ್ಯಾರ್ಥಿನಿಲಯಕ್ಕೆ ಪ್ರತಿ ಅರೆಕಾಲಿಕ ಬೋಧಕರಿಗೆ ಮಾಹೆಯಾನ ತಲಾ ರೂ. ೫೦೦ ರಂತೆ ೩ ಬೋಧಕರಿಗೆ (ಮಾಸಿಕ)	ರೂ ೧೫೦೦.೦೦
೨.	ವಾರ ಪತ್ರಿಕೆ, ದಿನಪತ್ರಿಕೆಗಾಗಿ (ವಾರ್ಷಿಕ)	ರೂ ೧೦೦೦.೦೦
೩.	ವೈದ್ಯಕೀಯ ವೆಚ್ಚ (ವಾರ್ಷಿಕ)	ರೂ ೧೦೦೦.೦೦
೪.	ಪಾತ್ರೆ ಸಾಮಾನುಗಳ ಕಲಾಯಿ (ವಾರ್ಷಿಕ)	ರೂ ೬೦೦.೦೦
೫.	ವಿದ್ಯುತ್‌ಚ್ಛಕ್ತಿ ಮತ್ತು ನೀರು ಅಥವಾ ವಾಸ್ತವಿಕವಾಗಿ ತಗಲುವ ವೆಚ್ಚ	ರೂ ೧೦೦೦.೦೦
೬.	ಸ್ವಂತ ಕಟ್ಟಡಗಳಿಲ್ಲದ ವಿದ್ಯಾರ್ಥಿನಿಲಯಗಳ ಬಾಡಿಗೆ ವಾರ್ಷಿಕ ಅಥವಾ ಲೋಕೋಪಯೋಗಿ ಇಲಾಖೆ ನಿಗಧಿ ಪಡಿಸುವ ದರ	ರೂ ೧೨೦೦೦.೦೦
೭.	ಕ್ರೀಡಾ ಸಾಮಗ್ರಿಗಳನ್ನು ನಿಲಯವನ್ನು ಪ್ರಾರಂಭಿಸುವ ವೇಳೆಯಲ್ಲಿ	ರೂ. ೧೦೦೦.೦೦

(ಕೃಪೆ : ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು -೨೦೦೦)

ಇಂತಹ ವಿದ್ಯಾರ್ಥಿನಿಲಯಗಳು ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ರಾಜ್ಯದಾದ್ಯಂತ ೬೧ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು, ಇವುಗಳಲ್ಲಿ ಪ್ರತಿವರ್ಷ ೩೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಈ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ೬ ವಿದ್ಯಾರ್ಥಿನಿಲಯಗಳಿದ್ದು ಅವುಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

೧. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಂಡೂರು

೨. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕಾಲ್ವಿ, ಹಡಗಲಿ ತಾಲ್ಲೂಕು.

೩. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಚಿರತೆಗುಂಡು, ಕೂಡ್ಲಿಗಿ ತಾಲ್ಲೂಕು.

೪. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಸೂಲದಹಳ್ಳಿ, ಕೂಡ್ಲಿಗಿ ತಾಲ್ಲೂಕು.

೫. ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಹಗರಿಬೊಮ್ಮನಹಳ್ಳಿ

೬. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಹಂಪಾಪಟ್ಟಣ, ಹಗರಿಬೊಮ್ಮನಹಳ್ಳಿ, ತಾಲ್ಲೂಕು.

ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ಶೇ. ೭೫ ರಷ್ಟು ಬುಡಕಟ್ಟು ವಿದ್ಯಾರ್ಥಿಗಳಿಗೆ ಉಳಿದ ಶೇ. ೨೫ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಿಗೆ ಕಾಯ್ದಿರಿಸಲಾಗಿದೆ.

ಬಾಧಕಗಳು : ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಇರುವ ಬಾಧಕಗಳೆಂದರೆ,

೧. ವಿದ್ಯಾರ್ಥಿಗಳ ಆಹಾರಕ್ಕಾಗಿ ನಿಗದಿಪಡಿಸಿರುವ ರೂ. ೪೦೦.೦೦ರಲ್ಲಿ ಪ್ರತಿ ದಿನ ಎರಡು ಬಾರಿ ಊಟ ಮತ್ತು ಬೆಳಿಗ್ಗೆ ತಿಂಡಿ ಹಾಗೂ ವಾರದಲ್ಲಿ ೨ ಬಾರಿ ಬಾಳೆಹಣ್ಣು ಮತ್ತು ಮೊಟ್ಟೆಗಳನ್ನು ಹಾಗೂ ವಾರದಲ್ಲಿ ಒಂದು ದಿನ ಸಿಹಿಯನ್ನು ನೀಡಲು ಜೊತೆಗೆ ಗುಣಮಟ್ಟದ ಆಹಾರವನ್ನು ನೀಡಲು ಕಷ್ಟಕರವಾಗಿರುವುದರಿಂದ ಪ್ರತಿ ವಿದ್ಯಾರ್ಥಿಗೆ ಕನಿಷ್ಠ ರೂ. ೬೦೦.೦೦ಗಳನ್ನು ಹೆಚ್ಚಿಸಿದರೆ ವಿದ್ಯಾರ್ಥಿ ನಿಲಯದ ನಿರ್ವಹಣೆಯಲ್ಲಿ ಸುಧಾರಣೆಯನ್ನು ತರಲು ಸಾಧ್ಯವಾಗುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಆಹಾರಕ್ಕಾಗಿ ಅನುದಾನ ನಿಗಧಿಪಡಿಸುವ ಬದಲು ಮಾರುಕಟ್ಟೆಯ ದರದ ಏರಿಳಿತಗಳನ್ನು ಅವಲಂಬಿಸಿ ಅವರಿಗೆ ಪೂರ್ಣಪ್ರಮಾಣದ ಪೌಷ್ಠಿಕ ಹಾಗೂ ಜೀವಸತ್ವವಿರುವ ಆಹಾರಗಳನ್ನು ವಯಸ್ಸಿಗೆ ಅನುಗುಣವಾಗಿ ಗ್ರಾಂ ಮೂಲಕ ನೀಡಿದರೆ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರಕ್ಕೆ ಅಧಿಕಹೊರೆ ಆದರೂ ಇದು ಕಡ್ಡಾಯವಾಗಿ ಖರ್ಚುಮಾಡಬೇಕಾಗಿರುವುದರಿಂದ ಈ ದೃಷ್ಟಿಯಲ್ಲಿ ಆಯವ್ಯಯವನ್ನು ಲೆಕ್ಕಹಾಕುವ ಅವಶ್ಯಕತೆ ಕಂಡುಬರುವುದಿಲ್ಲ.

೨. ಎರಡು ಜೊತೆ ಸಮವಸ್ತ್ರಗಳನ್ನು ನೀಡಲು ರೂ.೩೫೦.೦೦ಗಳು ನಿಗದಿಯಾಗಿದ್ದು, ಇದರಲ್ಲಿ ಉತ್ತಮ ಗುಣಮಟ್ಟದ ಬಟ್ಟೆಯನ್ನು ಒದಗಿಸಲು ತೊಂದರೆಯಾಗಿರುತ್ತದೆ. ಈ ದರವನ್ನು ಕನಿಷ್ಟ ರೂ ೫೦೦.೦೦ಗಳಿಗೆ ಏರಿಸಬೇಕಾಗಿರುತ್ತದೆ.

೩. ಅರೆಕಾಲಿಕ ಬೋಧಕರಿಗೆ ನೀಡುತ್ತಿರುವ ಗೌರವಧನ ರೂ.೫೦೦.೦೦ ಮಾಹೆಯಾನ ತುಂಬಾ ಕಡಿಮೆಯಾಗಿದೆ. ಈ ಕಡಿಮೆ ಗೌರವಧನಕ್ಕೆ ಶಿಕ್ಷಕರು ಬೋಧನೆ ಮಾಡಲು ಬರುತ್ತಿಲ್ಲ. ಇದರಿಂದ ಬಹಳಷ್ಟು ವಿದ್ಯಾರ್ಥಿನಿಲಯಗಳಲ್ಲಿ ಬೋಧಕರಿಲ್ಲದೆ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ. ಈ ದಿಸೆಯಲ್ಲಿ ಕನಿಷ್ಟ ರೂ. ೧೦೦೦.೦೦ ಗೌರವಧನವನ್ನು ಅರೆಕಾಲಿಕ ಬೋಧಕರಿಗೆ ಹೆಚ್ಚಿಸಿದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಿದೆ.

೪. ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ವೆಚ್ಚ ವಾರ್ಷಿಕ ರೂ.೧೦೦೦.೦೦ ನಿಗಧಿಪಡಿಸಿರುವುದು ತುಂಬಾ ಕಡಿಮೆಯಾಗಿದೆ ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಪರಿಣಾಮಕಾರಿ ವೈದ್ಯಕೀಯ ತಪಾಸಣೆಯನ್ನು ಅಥವಾ ಚಿಕಿತ್ಸೆಯನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇದನ್ನು ಕನಿಷ್ಠಮಾಸಿಕ ರೂ. ೫೦೦.೦೦ ರಂತೆ ವಾರ್ಷಿಕ ಅನುದಾನ

ರೂ. ೫೦೦೦.೦೦ ಗಳಿಗೆ ನಿಗಧಿ ಪಡಿಸಿದಲ್ಲಿ ವಿದ್ಯಾರ್ಥಿಗಳ ಉತ್ತಮ ಆರೋಗ್ಯ ಬೆಳವಣಿಗೆಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

೫. ಬಳ್ಳಾರಿ ಜಿಲ್ಲೆಯಲ್ಲಿ ಈ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ಮಂಜೂರಾಗಿರುವ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಸರಿಯಾದ ಮೂಲಭೂತ ಸೌಕರ್ಯಗಳಿಲ್ಲದೇ ಗಾಳಿ, ಬೆಳಕು, ನೀರು, ಆಟದ ಮೈದಾನ, ಅಡುಗೆ ಮನೆ, ಊಟದ ಮನೆ, ಗ್ರಂಥಾಲಯ ಮತ್ತು ಕೊಠಡಿಗಳು ಇಲ್ಲದೆ ವಿದ್ಯಾರ್ಥಿಗಳು ಲಭ್ಯವಿರುವ ಸೌಲಭ್ಯ ವಂಚಿತ ಕಟ್ಟಡದಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರವು ಸಹ ಈ ಸಮಸ್ಯೆಗಳನ್ನು ಗಮನಿಸಿ ಮುಂದೆ ಹೊಸ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ನೀಡುವುದರ ಬದಲು ಈಗಿರುವ ವಿದ್ಯಾರ್ಥಿ ನಿಲಯಗಳಿಗೆ ಪೂರ್ಣಪ್ರಮಾಣದ ಮೂಲಭೂತ ಸೌಕರ್ಯಗಳನ್ನು ನೀಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮವಾದ ವಾತಾವರಣವನ್ನು ನಿರ್ಮಿಸಲು ಕ್ರಮಕೈಗೊಂಡಿರುವುದು ನಿಜವಾಗಲು ಶ್ಲಾಘನೀಯ. ಈ ರೀತಿ ತುರ್ತುಕ್ರಮ ಕೈಗೊಂಡಲ್ಲಿ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಇತರೆ ವಿದ್ಯಾರ್ಥಿಗಳಂತೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಭಾಗವಹಿಸಲು ಮನೋಸ್ಥೈರ್ಯವನ್ನು ತುಂಬಿದಂತಾಗುತ್ತದೆ. ಈ ವಿಷಯಕ್ಕೆ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳು ಸಹ ಅತಿ ತುರ್ತಾಗಿ ಕ್ರಮಕೈಗೊಳ್ಳಲು ಪ್ರಯತ್ನಿಸುವ ಅಗತ್ಯವಿದೆ.

೬. ಈ ವಿದ್ಯಾರ್ಥಿ ನಿಲಯಗಳಲ್ಲಿ ವ್ಯವಸ್ಥಿತವಾದ ಗ್ರಂಥಾಲಯದ ವ್ಯವಸ್ಥೆ ಇರುವುದಿಲ್ಲ. ಇದರ ಬಗ್ಗೆ ಸರ್ಕಾರ ಆಧ್ಯತೆ ನೀಡ ಬೇಕಾಗಿದೆ.

೭. ಬಾಲಕರಿಗೆ ಕ್ಷೌರಕ್ಕಾಗಿ ನಿಗಧಿಪಡಿಸಿದ ಅನುದಾನ ರೂ. ೪೦.೦೦ (ವಾರ್ಷಿಕ) ಗಳು ತುಂಬಾ ಕಡಿಮೆಯಾಗಿದ್ದು, ಈ ಬೆಲೆಗೆ ಯಾವುದೇ ಕ್ಷೌರಿಕರು ವಿದ್ಯಾರ್ಥಿಗಳಿಗೆ ಕ್ಷೌರ ಮಾಡಲು ಮುಂದೆ ಬರುತ್ತಿಲ್ಲ. ಇದರಿಂದ ಮತ್ತೊಮ್ಮೆ ವಿದ್ಯಾರ್ಥಿಗಳಲ್ಲಿ ಕೀಳರಿಮೆ ಬೆಳೆಯಲು ಸಾಧ್ಯವಾಗಿದೆ. ಆ ಕಾರಣ ಈ ಅನುದಾನವನ್ನು ಕನಿಷ್ಠ ವಾರ್ಷಿಕ ರೂ. ೧೦೦.೦೦ ಗಳಿಗೆ ಹೆಚ್ಚಿಸಬೇಕಾಗಿದೆ.

ಸಲಹೆಗಳು

ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳ ಜೊತೆಗೆ ವರ್ಷಕ್ಕೆ ಒಂದು ಬಾರಿ ರಾಜ್ಯದ ವಿವಿಧ ಐತಿಹಾಸಿಕ, ಶೈಕ್ಷಣಿಕ, ಪ್ರೇಕ್ಷಣೀಯ ಪ್ರವಾಸಿ ಸ್ಥಳಗಳಿಗೆ ಕಡ್ಡಾಯವಾಗಿ ಪ್ರವಾಸ ಕರೆದುಕೊಂಡು ಹೋಗಿ ಆ ಸ್ಥಳದ ಇತಿಹಾಸ, ಅಲ್ಲಿನ ನಿಸರ್ಗ, ಪ್ರಕೃತಿ, ಜಲಪಾತ, ಸಮುದ್ರ, ಅಲ್ಲಿನ ಜನರ ಉಡುಗೆ, ತೊಡಿಗೆ, ಆಚಾರ, ಭಾಷೆ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಪರಿಚಯಿಸಿ ವಿದ್ಯಾರ್ಥಿಗಳ ಜ್ಞಾನ ಭಂಡಾರವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕಾಗಿದೆ.

೪. ನವೋದಯ ಶಾಲೆ

ಬುಡಕಟ್ಟು ಪಂಗಡದ ಮಕ್ಕಳಿಗೆ ೫ ರಿಂದ ೧೦ ನೇ ತರಗತಿಯವರೆಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡುವ ದೃಷ್ಟಿಯಿಂದ ನವೋದಯ ಶಾಲೆಗಳನ್ನು ಸ್ಥಾಪಿಸಲಾಗಿದೆ. ಇದು ರಾಜ್ಯದ ಕಾರ್ಯಕ್ರಮವಾಗಿದ್ದು, ಅನುದಾನ ಪೂರ್ಣ ರಾಜ್ಯದ್ದಾಗಿರುತ್ತದೆ. ಈ ಶಾಲೆಯಲ್ಲಿ ೫ ರಿಂದ ೧೦ನೇ ತರಗತಿಯವರೆಗೆ ಓದಲು ಅವಕಾಶವಿದೆ, ವಿದ್ಯಾರ್ಥಿ,

ವಿದ್ಯಾರ್ಥಿನಿಯರ ಪ್ರವೇಶ ಅನುಪಾತ ೫೦ : ೫೦ ಆಗಿದ್ದು ಪೂರ್ವಭಾವಿ ಪರಿಕ್ಷೇಯಲ್ಲಿ ಉತ್ತೀರ್ಣರಾದವರಿಗೆ ಪ್ರವೇಶ ನೀಡಲಾಗುವುದು. ಇಲ್ಲಿ ಉಚಿತ ಊಟ, ವಸತಿ ಸೌಲಭ್ಯವನ್ನು ನೀಡಲಾಗುತ್ತಿದೆ. ಸದರಿ ಶಾಲೆಯ ಪ್ರವೇಶದ ಆಯ್ಕೆಯನ್ನು ಆಯ್ಕೆ ಸಮಿತಿಯ ಅನುಮೋದನೆಯ ಮೂಲಕ ನೀಡಲಾಗುತ್ತಿದೆ. ಆಯ್ಕೆ ಸಮಿತಿಯು ಕೆಳಕಂಡಂತಿರುತ್ತದೆ.

೧. ಜಿಲ್ಲಾಧಿಕಾರಿಗಳು	ಅಧ್ಯಕ್ಷರು
೨. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಸದಸ್ಯರು
೩. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
೪. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು	ಸದಸ್ಯರು
೫. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳು

ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಮಕ್ಕಳಿಗಾಗಿ ೪ ನವೋದಯ ಶಾಲೆಗಳನ್ನು ಆರಂಭಿಸಲಾಗಿದೆ. ಅವುಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ, ದಕ್ಷಿಣ ಕನ್ನಡ ಜಿಲ್ಲೆಯ ಮುಂಡಾಜೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ರಾಯಚೂರುಗಳಲ್ಲಿ ಈ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಆಹಾರಕ್ಕಾಗಿ ಮಾಸಿಕ ೫೦೦.೦೦ ರೂ ಗಳನ್ನು, ಸಮವಸ್ತ್ರಕ್ಕಾಗಿ ವಾರ್ಷಿಕ ೮೦೦.೦೦ಗಳನ್ನು ಇತರೆ ಖರ್ಚುಗಳಿಗಾಗಿ ನೂರು ರೂಪಾಯಿಗಳನ್ನು ನೀಡುವುದರ ಜೊತೆಗೆ ಊಟದತಟ್ಟೆ, ಲೋಟ, ಮಂಚ, ಕುರ್ಚಿ, ಟೇಬಲ್, ಗ್ರಂಥಾಲಯ, ಪ್ರಯೋಗಾಲಯ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೫. ರಾಮಕೃಷ್ಣ ಆಶ್ರಮ, ಚೆನ್ನೇನಹಳ್ಳಿ ಇತ್ಯಾದಿ ಗೌರವಾನ್ವಿತ ವಿದ್ಯಾಸಂಸ್ಥೆಗಳಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ

ಬುಡಕಟ್ಟು ಮಕ್ಕಳು ಉತ್ತಮವಾದ ಪರಿಸರದಲ್ಲಿ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಮೈಸೂರಿನ ರಾಮಕೃಷ್ಣ ಆಶ್ರಮ, ಜೆ.ಎಸ್.ಎಸ್. ಮತ್ತು ಜನಸೇವಾ ವಿದ್ಯಾ ಕೇಂದ್ರ, ಚೆನ್ನೇನಹಳ್ಳಿಯಂತಹ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗೆ ೨೦೦೦-೦೧ ನೇ ಸಾಲಿನಿಂದ ಪ್ರವೇಶ ನೀಡಲಾಗುತ್ತಿದೆ. ಈ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಸಂಬಂಧ ಪಟ್ಟ ಶಿಕ್ಷಣ ಸಂಸ್ಥೆಯವರು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಇದರ ಜೊತೆಗೆ ೭ ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದ ಬುಡಕಟ್ಟು ವಿದ್ಯಾರ್ಥಿಗಳನ್ನು ೮ ತರಗತಿಗೆ ಸೇರಿಸುವುದಕ್ಕೆ ಪ್ರವೇಶ ಅವಕಾಶವನ್ನು ನೀಡಲಾಗುತ್ತಿದೆ. ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ಎಲ್ಲಾ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ತಗಲುವ ಎಲ್ಲಾ ಖರ್ಚುಗಳನ್ನು ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯೇ ಭರಿಸುತ್ತದೆ.

೬. ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ

ಬಡಮಕ್ಕಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ, ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿ ನಿಲಯಗಳಿಗೂ ಧನ ಸಹಾಯ ನೀಡಲಾಗುತ್ತಿದೆ. ಈ ಖಾಸಗಿ ಸಂಸ್ಥೆಗಳು ಸರ್ಕಾರದಿಂದ ಮಾನ್ಯತೆ ಪಡೆದು ನಡೆಸುವ ವಿದ್ಯಾರ್ಥಿನಿಲಯಗಳಾಗಿರಬೇಕು. ಈ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಕಲ್ಪಿಸುವುದು. ಇದರಿಂದ ಸರ್ಕಾರಿ ವಿದ್ಯಾರ್ಥಿ ನಿಲಯಕ್ಕೆ ಇರುವ ಬೇಡಿಕೆಯಲ್ಲಿ

ಸ್ವಲ್ಪ ಪ್ರಮಾಣ ಕಡಿಮೆಯಾದಂತಾಗುತ್ತದೆ.. ಈ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ೧೬ ಅನುದಾನಿತ ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ ೮೮೮ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುತ್ತಾರೆ. ಈ ವಿದ್ಯಾರ್ಥಿನಿಲಯದಲ್ಲಿ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.೩೫೦.೦೦ ಗಳನ್ನು ಆಹಾರಕ್ಕಾಗಿ ಖರ್ಚು ಮಾಡಲಾಗುತ್ತಿದೆ. ಅನುದಾನಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೂ ಸಹ ಅನುದಾನವನ್ನು ನೀಡಲಾಗುತ್ತಿದ್ದು, ಗರಿಷ್ಠ ರೂ.೨೫,೦೦೦.೦೦ಗಳ ಅಂದಾಜು ನಕ್ಷೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆರವರಿಗೆ ಅಧಿಕಾರವಿರುತ್ತದೆ. ಇದಕ್ಕೆ ಮೀರಿದ ಅಂದಾಜು ನಕ್ಷೆಗಳ ಮಂಜೂರಾತಿಯ ಅಧಿಕಾರ ಸರ್ಕಾರದ ಅಧೀನಕ್ಕೆ ಒಳಪಟ್ಟಿರುತ್ತದೆ.

ಸಲಹೆ

ಈ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ದುರುಪಯೋಗಕ್ಕೆ ತುಂಬಾ ಅವಕಾಶವಿರುವುದರಿಂದ ಈ ಸಂಸ್ಥೆಗಳನ್ನು ಕಾಲಕಾಲಕ್ಕೆ ತಪಾಸಣೆ ನಡೆಸಿ, ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಬೇಕು ವಿದ್ಯಾರ್ಥಿನಿಲಯಗಳನ್ನು ಸಮರ್ಪಕವಾಗಿ ನಡೆಸುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಎಚ್ಚರಿಕೆ ನೀಡಬೇಕು. ಇವರ ಕಾರ್ಯನಿರ್ವಹಣೆಯ ಬಗ್ಗೆ ಉಸ್ತುವಾರಿ ಇಟ್ಟಲ್ಲಿ ಮಾತ್ರ ಈ ಸಂಸ್ಥೆಗಳು ನಿಗದಿತ ಮಟ್ಟದಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನಲ್ಲಿ ಒಂದು ಅನುದಾನಿತ ವಿದ್ಯಾರ್ಥಿನಿಲಯವಿದೆ. ಅದನ್ನು ಸಮೀಕ್ಷೆಯ ಕಾಲದಲ್ಲಿ ಭೇಟಿ ಕೊಟ್ಟು ಪರಿಶೀಲಿಸಿದಾಗ ಅದರ ಕಾರ್ಯನಿರ್ವಹಣೆ ತೃಪ್ತಿಕರವಾಗಿರಲಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಾದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾಪಂಚಾಯತ್, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ತಾಲ್ಲೂಕ ಸಮಾಜ ಕಲ್ಯಾಣ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿದೆ.

೨. ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು

ಈ ಕಾರ್ಯಕ್ರಮದ ಹಿನ್ನೆಲೆ ಹಾಗೂ ಉದ್ದೇಶ, ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುವುದು ಮತ್ತು ಓದಲು ಉತ್ತಮವಾದ ವಾತಾವರಣವನ್ನು ನಿರ್ಮಿಸುವುದು. ಆ ಕಾರಣದಿಂದ ಈ ಯೋಜನೆಯನ್ನು ಪ್ರಾರಂಭಿಸಿ ಇದರಲ್ಲಿ ೬ ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ಇಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರವೇಶದ ಅನುಪಾತ ೫೦ : ೫೦ ಆಗಿರುತ್ತದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ೧೯೯೬-೯೭ ನೇ ಸಾಲಿನಲ್ಲಿ ಪ್ರಾರಂಭಿಸಿ ಉತ್ತಮವಾದ ಶಿಕ್ಷಣವನ್ನು ನೀಡಲು ಅವಕಾಶ ಮಾಡಿದೆ. ಇಲ್ಲಿನ ವಸತಿ ಶಾಲೆಗಳಿಗೆ ಪ್ರವೇಶ ನೀಡಲು ವಿದ್ಯಾರ್ಥಿಗಳನ್ನು ಪೂರ್ವಭಾವಿ ಪರೀಕ್ಷೆಯನ್ನು ಜಿಲ್ಲಾ ಮಟ್ಟದಲ್ಲಿ ನಡೆಸಿ, ಸದರಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು, ಮೀಸಲಾತಿ ಅನ್ವಯ ದಾಖಲು ಮಾಡಿಕೊಳ್ಳಲಾಗುತ್ತದೆ. ಈ ವಸತಿ ಶಾಲೆಯ ನಿರ್ವಹಣೆಗಾಗಿ ಒಂದು ಬೋರ್ಡ ಆಫ್ ಗವರ್ನರ್ ಸಮಿತಿಯನ್ನು ರಚಿಸಲಾಗಿದೆ. ಅದರ ವಿವರ ಹೀಗಿದೆ.

೧. ಜಿಲ್ಲಾಧಿಕಾರಿಗಳು ಅಧ್ಯಕ್ಷರು

೨. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಸದಸ್ಯರು

೩. ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳು ಸದಸ್ಯರು

೪. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಸದಸ್ಯರು

೫. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳು

ಈ ವಸತಿ ಶಾಲೆಯಲಿ ಇರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಉಚಿತ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಆಹಾರಕ್ಕಾಗಿ ಮಾಸಿಕ ರೂ.೫೦೦.೦೦ ಗಳನ್ನು ವೆಚ್ಚ ಮಾಡಲಾಗುತ್ತಿದೆ. ಉಚಿತ ಪಠ್ಯ ಪುಸ್ತಕದ ಜೊತೆಗೆ ರೂ. ೫೦೦.೦೦ ರಲ್ಲಿ ೨ ಜೊತೆ ಟೆರಿಕಾಟ್ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. ಈ ವಸತಿ ಶಾಲೆಗಳಲ್ಲಿ ಶೇ. ೭೫ ರಷ್ಟು ಪರಿಶಿಷ್ಟ ಜಾತಿ, ಶೇ. ೨೫ ರಷ್ಟು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೪೭ ಈ ರೀತಿಯ ಶಾಲೆಗಳು ನಡೆಯುತ್ತಿದ್ದು, ಇದರಲ್ಲಿ ೮೧೦೦ ವಿದ್ಯಾರ್ಥಿಗಳು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲೂ ಎರಡು ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

೧. ತಿಮ್ಮಲಾಪುರ, ಹೊಸಪೇಟೆ ತಾಲ್ಲೂಕು.

೨. ವಲ್ಲಭಾಪುರ, ಹಗರಿಬೊಮ್ಮನಹಳ್ಳಿ ತಾಲ್ಲೂಕು.

ಈ ೨ ಶಾಲೆಗಳಲ್ಲಿ ೭೦೦ ವಿದ್ಯಾರ್ಥಿಗಳು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಈ ವಸತಿ ಶಾಲೆಗಳು ಇತರೆ ವಿದ್ಯಾರ್ಥಿ ನಿಲಯಗಳಿಗಿಂತ ಭಿನ್ನವಾಗಿದ್ದು ವಿದ್ಯಾಭ್ಯಾಸಕ್ಕೆ ಉತ್ತಮವಾದ ವಾತಾವರಣವನ್ನು ಸೃಷ್ಟಿಸಲು ಕಾರಣವಾಗಿದೆ.

ಸಲಹೆ

ಇಂತಹ ಉತ್ತಮ ಮಾದರಿ ವಸತಿ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ಬೋಧಕರು ನೇಮಕಾತಿಯಾಗದೆ ಇರುವುದು ದುರಾದೃಷ್ಟಕರ. ಈ ದಿಸೆಯಲ್ಲಿ ಸರ್ಕಾರ ಪೂರ್ಣ ಪ್ರಮಾಣದ ಬೋಧಕ ವರ್ಗ ಹಾಗೂ ಸಿಬ್ಬಂದಿಯವರನ್ನು ನೇಮಕ ಮಾಡಿದರೆ ಈ ಸಂಸ್ಥೆಗಳು ಹೆಸರಿಗೆ ತಕ್ಕಂತೆ ಮಾದರಿ ಸಂಸ್ಥೆಗಳಾಗುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ.

೮. ಕಾಲೇಜು ವಿದ್ಯಾರ್ಥಿಗಳಿಗಾಗಿ ಸರ್ಕಾರಿ ವಿದ್ಯಾರ್ಥಿನಿಲಯಗಳ ಪ್ರಾರಂಭ

ಗ್ರಾಮಾಂತರ ಪ್ರದೇಶಗಳಿಂದ ವಿವಿಧ ಕಾಲೇಜುಗಳಿಗೆ ವ್ಯಾಸಂಗ ಮಾಡಲು ಬರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಅವರ ಶಿಕ್ಷಣವನ್ನು ಮುಂದುವರಿಸಲು ಅನುಕೂಲವಾಗುವಂತೆ ಕಾಲೇಜು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಉಚಿತ ಊಟ ಮತ್ತು ವಸತಿಯನ್ನು ಒದಗಿಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ನಿಲಯದ ಮೇಲ್ವಿಚಾರಕರು, ಇಬ್ಬರು ಅಡಿಗೆಯವರು, ಒಬ್ಬ ಅಡಿಗೆ ಸಹಾಯಕ ನೇಮಕವಾಗಿದ್ದು ಕಾರ್ಯನಿರ್ವಹಿಸುತ್ತಿರುತ್ತಾರೆ. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಮೇಲೆ ತಿಳಿಸಿರುವ ಸಿಬ್ಬಂದಿಗಳ ಜೊತೆಗೆ ಒಬ್ಬ ರಾತ್ರಿ ಕಾವಲುಗಾರನನ್ನು ನೇಮಿಸಲಾಗಿದೆ.

ಇದರ ಉದ್ದೇಶ ಬಡತನ ಉನ್ನತ ಶಿಕ್ಷಣಕ್ಕೆ ಅಡ್ಡಿಬಾರದಂತೆ ಮಾಡುವ ಸಲುವಾಗಿ ಈ ಕಾರ್ಯಕ್ರಮವನ್ನು

ರೂಪಿಸಲಾಗಿದೆ. ಇಂತಹ ವಿದ್ಯಾರ್ಥಿನಿಲಯಗಳಲ್ಲಿ ಪಿ.ಯು.ಸಿ ಯಿಂದ ಡಿಪ್ಲೋಮೋ, ಪದವಿ ತರಗತಿಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತಿದೆ. ಗ್ರಾಮಾಂತರ ಪ್ರದೇಶದಿಂದ ಬರುವಂತಹ ಬಡ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳು ಅಂಗೀಕೃತ ವಿದ್ಯಾಸಂಸ್ಥೆಗಳಲ್ಲಿ ಓದುತ್ತಿರಬೇಕು. ಈ ವಿದ್ಯಾರ್ಥಿನಿಲಯಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಭೋಜನ ವೆಚ್ಚಕ್ಕಾಗಿ ಪ್ರತಿ ತಿಂಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಹಾಗೂ ಇ.ಬಿ.ಎಲ್. ವೆಚ್ಚಗಳು ಸೇರಿ ತಲಾ ರೂ. ೪೫೦.೦೦ ಮೀರದಂತೆ ಭರಿಸಲಾಗುವುದು. ಇದರ ಜೊತೆಗೆ ಗ್ರಂಥಾಲಯದ ಸೌಲಭ್ಯ, ಆಟದ ಸಾಮಗ್ರಿಗಳು, ಟಿ.ವಿ. ಇತ್ಯಾದಿಗಳನ್ನು ಪೂರೈಸಲಾಗುತ್ತಿದೆ. ಇದರ ಜೊತೆಗೆ ಬಾಡಿಗೆ ಕಟ್ಟಡದಲ್ಲಿ ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದರೆ, ಅದರ ಬಾಡಿಗೆಯನ್ನು ಸರ್ಕಾರವೇ ಭರಿಸುತ್ತಿದೆ. ಜೊತೆಗೆ ಅವಶ್ಯಕವಾಗಿ ಬೇಕಾಗುವ ಪೀಠೋಪಕರಣಗಳನ್ನು ಒದಗಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ.

೧. ಬಾಲಕರ ಕಾಲೇಜು ವಿದ್ಯಾರ್ಥಿನಿಲಯ, ಬಳ್ಳಾರಿ

೨. ಬಾಲಕಿಯರ ಕಾಲೇಜು ವಿದ್ಯಾರ್ಥಿನಿಲಯ, ಬಳ್ಳಾರಿ

೩. ಬಾಲಕರ ತಾಂತ್ರಿಕ ಕಾಲೇಜು ವಿದ್ಯಾರ್ಥಿನಿಲಯ, ಬಳ್ಳಾರಿ

೪. ಬಾಲಕಿಯರ ಕಾಲೇಜು ವಿದ್ಯಾರ್ಥಿನಿಲಯ, ಹೊಸಪೇಟೆ

ಈ ನಾಲ್ಕುವಿದ್ಯಾರ್ಥಿ ನಿಲಯಗಳಲ್ಲಿ ೨೫೦ ವಿದ್ಯಾರ್ಥಿಗಳು ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ವಿದ್ಯಾರ್ಥಿ ನಿಲಯದಲ್ಲಿ ಶೇ. ೭೫ ರಷ್ಟು ಬುಡಕಟ್ಟು ವಿದ್ಯಾರ್ಥಿಗಳಿಗೆ ಹಾಗೂ ಶೇ.೨೫ ರಷ್ಟು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಯುತ್ತಿರುವ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಶೇ.೨೫ ರಷ್ಟು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕಾಯ್ದಿರಿಸಲಾಗಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲೂ ಶೇ. ೨೫ ರಷ್ಟು ಸೀಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಲಾಗಿದೆ.

ಸಲಹೆಗಳು

ಬಳ್ಳಾರಿ ಜಿಲ್ಲೆಯಲ್ಲಿ ನಾಲ್ಕು ಬುಡಕಟ್ಟು ಕಾಲೇಜು ವಿದ್ಯಾರ್ಥಿನಿಲಯಗಳಿವೆ. ಮೂರು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳಿಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇದರಿಂದ ಸರಿಯಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗದೆ, ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ಜ್ಞಾನಾರ್ಜನೆಯ ಮಟ್ಟ ಕುಂಠಿತವಾಗಿದೆ. ಆದಷ್ಟು ಬೇಗ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಸರ್ಕಾರ ಸ್ವಂತ ಕಟ್ಟಡಗಳನ್ನು ಒದಗಿಸಬೇಕು. ಆ ಮೂಲಕ ಮೂಲಭೂತ ಸೌಕರ್ಯಗಳನ್ನು ಒದಗಿಸಿದಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಭೋಜನಕ್ಕಾಗಿ ಖರ್ಚುಮಾಡುತ್ತಿರುವ ರೂ. ೪೫೦.೦೦ ಹಣ ತುಂಬಾ ಕಡಿಮೆಯಾಗಿದೆ. ಈ ಹಣದಲ್ಲಿ ಉತ್ತಮ

ಗುಣಮಟ್ಟದ ಹಾಗೂ ಪೂರ್ಣ ಪ್ರಮಾಣದ ಆಹಾರವನ್ನೂ ಒದಗಿಸಲು ಸಾಧ್ಯವಾಗುತ್ತಿಲ್ಲ. ಆ ಕಾರಣ ಈ ಮೊತ್ತವನ್ನು ರೂ. ೬೦೦.೦೦ಗಳಿಗೆ ಏರಿಸಿದರೆ ಸ್ವಲ್ಪ ಸುಧಾರಣೆಯನ್ನು ತಂದಂತಾಗುತ್ತದೆ.

೯. ತಾಂತ್ರಿಕ ವಿದ್ಯಾರ್ಥಿ ನಿಲಯಗಳು

ದೂರದ ಗ್ರಾಮೀಣ ಪ್ರದೇಶಗಳಿಂದ ವೈದ್ಯಕೀಯ ಮತ್ತು ತಾಂತ್ರಿಕ ಕೋರ್ಸ್‌ಗಳಿಗೆ ಪ್ರವೇಶ ಪಡೆದು ಬರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಅವರ ಉನ್ನತ ಶಿಕ್ಷಣವನ್ನು ಮುಂದುವರಿಸಲು ಇಂತಹ ತಾಂತ್ರಿಕ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಈ ವಿದ್ಯಾರ್ಥಿನಿಲಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಭೋಜನ ವೆಚ್ಚಕ್ಕಾಗಿ ಪ್ರತಿ ಮಾಹೆಯಾನ ಭಾರತ ಸರ್ಕಾರದ ವಿದ್ಯಾರ್ಥಿವೇತನ ಹಾಗೂ ಇ.ಬಿ.ಎಲ್ ವೆಚ್ಚಗಳು ಸೇರಿ ತಲಾ ರೂ. ೪೫೦.೦೦ ರಂತೆ ಪ್ರತಿ ತಿಂಗಳು ಭರಿಸಲಾಗುತ್ತಿದೆ. ಇಂತಹ ವಿದ್ಯಾರ್ಥಿನಿಲಯಗಳಲ್ಲಿ ಅಂಗೀಕೃತ ವಿದ್ಯಾ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಲಾಗುವುದು. ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಯನ್ನು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರದಲ್ಲಿ ಇಂತಹ ಒಂದು ವಿದ್ಯಾರ್ಥಿನಿಲಯವಿದೆ. ಇದರಲ್ಲಿ ೧೦೦ ವಿದ್ಯಾರ್ಥಿಗಳು ಈ ನಿಲಯದ ಸೌಕರ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

೧೦. ವಿದ್ಯಾರ್ಥಿ ನಿಲಯಗಳ ಬಲವರ್ಧನೆ

ಈ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಪ್ರಾರಂಭವಾಗಿರುವ ವಿದ್ಯಾರ್ಥಿನಿಲಯಗಳಿಗೆ ಹಾಸಿಗೆ, ಹೊದಿಕೆ, ಪೀಠೋಪಕರಣ, ಸೋಲಾರ್ ಹೀಟರ್, ಸೋಲಾರ್ ಲೈಟ್, ಟಿ.ವಿ ಹಾಗೂ ಇತರೆ ಉಪಯುಕ್ತ ಸಾಮಗ್ರಿಗಳನ್ನು ಒದಗಿಸುವ ಕಾರ್ಯಕ್ರಮದಿಂದ ವಿದ್ಯಾರ್ಥಿನಿಲಯಗಳ ಬಲವರ್ಧನೆಗೆ ಶ್ರಮಿಸಲಾಗುತ್ತಿದೆ. ಇದು ರಾಜ್ಯದ ಕಾರ್ಯಕ್ರಮವಾಗಿದ್ದು, ಅನುದಾನ ಪೂರ್ಣ ರಾಜ್ಯದ್ದಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಪ್ರಾರಂಭಿಸಲಾದ ವಿದ್ಯಾರ್ಥಿನಿಲಯದಲ್ಲಿ ಕೊರತೆ ಇರುವ ಹಾಸಿಗೆ, ಹೊದಿಕೆ, ಪೀಠೋಕರಣಗಳು, ಪಾತ್ರೆಗಳು ಇತ್ಯಾದಿಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

ಬಾಧಕಗಳು

ಈ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಸ್ಥಳೀಯ ವಾತಾವರಣಕ್ಕೆ ಅನುಗುಣವಾಗಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಉದಾ : ಬಳ್ಳಾರಿಯಲ್ಲಿ ಬಿಸಿಲಿನ ತಾಪಕ್ಕೆ ಕೊರತೆಯಿಲ್ಲ. ಇಲ್ಲಿ ಸೋಲಾರ್ ಹೀಟರ್ ಅಳವಡಿಸುವುದರಲ್ಲಿ ಪ್ರಯೋಜನವಿಲ್ಲ. ಅದೇ ರೀತಿ ಮಲೆನಾಡು ಪ್ರದೇಶದಲ್ಲಿ ಬಿಸಿಲಿನ ತಾಪ ಕಡಿಮೆ ಇದ್ದು, ಅಲ್ಲಿವಿದ್ಯಾರ್ಥಿಗಳಿಗೆ ಹೆಚ್ಚಿನ ಬಿಸಿನೀರಿನ ಅವಶ್ಯಕತೆ ಇರುವುದರಿಂದ ಅಲ್ಲಿ ಸೋಲಾರ್ ವಾಟರ್ ಹೀಟರ್ ಅಳವಡಿಸುವುದರ ಬದಲು ವಿದ್ಯುತ್ ಗೀಜರ್‌ಗಳನ್ನು ಅಳವಡಿಸಿ ಸೌಲಭ್ಯಗಳನ್ನು ನೀಡಬೇಕಾಗಿದೆ. ಈ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಏಕರೂಪದಲ್ಲಿ ಅನುಷ್ಠಾನಗೊಳಿಸಿದರೆ ಉದ್ದೇಶ ಈಡೇರುವುದಿಲ್ಲ.

೨. ಶಿಕ್ಷಣಕ್ಕೆ ಪ್ರೋತ್ಸಾಹವಾಗಿ ೧ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೂ ವಿವಿಧ ರೀತಿಯ ವಿದ್ಯಾರ್ಥಿ ವೇತನ ವಿತರಣೆ

೧. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಈ ಯೋಜನೆಯಡಿಯಲ್ಲಿ ಮೆಟ್ರಿಕ್ ಪೂರ್ವ ೧ ರಿಂದ ೧೦ ನೇ ತರಗತಿಯಲ್ಲಿ ಓದುತ್ತಿರುವ ಹಾಗೂ ಸರ್ಕಾರಿ ಅಥವಾ ಅನುದಾನಿತ ನಿಲಯಗಳಲ್ಲಿ ಸೌಲಭ್ಯಪಡೆಯದ ಬುಡಕಟ್ಟು ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಬುಡಕಟ್ಟು ವಿದ್ಯಾರ್ಥಿಗಳು ಮಧ್ಯದಲ್ಲಿ ಶಾಲೆ ಬಿಡುವುದನ್ನು ತಪ್ಪಿಸಲು ಹಾಗೂ ಪೋಷಕರು ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಈ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

ವಾರ್ಷಿಕ ೧ ರಿಂದ ೭ ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ರೂ. ೭೫.೦೦ ಹಾಗೂ ೮ ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.೧೦೦.೦೦. ಮೊದಲ ಸಲ ಪಾಸಾದ ಬುಡಕಟ್ಟು ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾರ್ಥಿಗಳ ಅರ್ಜಿಪಟ್ಟಿಯನ್ನು ಪಡೆದು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಈ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ಚೆಕ್ ಮೂಲಕ ಸಂಬಂಧಪಟ್ಟ ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯರಿಗೆ ಕಳುಹಿಸಿ ನಂತರ ವಿತರಣೆ ಮಾಡಲಾಗುತ್ತದೆ.[೨೦]

ಬಾಧಕಗಳು

ಈ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ರೂ. ೭೫.೦೦ ಹಾಗೂ ರೂ. ೧೦೦.೦೦ ಬಹಳ ಕಡಿಮೆಯಾಗಿದ್ದು ಇದನ್ನು ಪಡೆಯಲು ವಿದ್ಯಾರ್ಥಿಗಳು ತಹಶೀಲ್ದಾರರ ಕಛೇರಿಗೆ ಜಾತಿ ಪ್ರಮಾಣ ಪತ್ರ ಪಡೆಯಲು ಓಡಾಡುವ ಖರ್ಚು ವಿದ್ಯಾರ್ಥಿ ವೇತನಕ್ಕಿಂತ ಹೆಚ್ಚಾಗುವ ಪ್ರಯುಕ್ತ ಬಹಳಷ್ಟು ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಜಿ ಸಲ್ಲಿಸುತ್ತಿಲ್ಲ. ಹಾಗೂ ಈ ಯೋಜನೆಯಡಿ ಸರ್ಕಾರವು ಸಹ ಬೇಡಿಕೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ. ಆ ಕಾರಣ ಈ ಯೋಜನೆಯ ಅನುಷ್ಠಾನ ಅಷ್ಟು ಪರಿಣಾಮಕಾರಿಯಾಗದೇ ದುರುಪಯೋಗಕ್ಕೆ ದಾರಿಯಾಗಿದೆ.

ಸಲಹೆಗಳು

ಈ ಯೋಜನೆಯು ತುಂಬಾ ಒಳ್ಳೆಯ ಯೋಜನೆಯಾಗಿದ್ದು ಈಗ ನೀಡುತ್ತಿರುವ ರೂ. ೭೫.೦೦ ಮತ್ತು ರೂ.೧೦೦.೦೦ರ ಬದಲಾಗಿ ರೂ. ೨೫೦.೦೦ ಹಾಗೂ ೫೦೦.೦೦ ರೂ.ಗಳಿಗೆ ಹೆಚ್ಚಿಸುವ ಕ್ರಮ ಕೈಗೊಳ್ಳಬೇಕಾಗುತ್ತದೆ. ಹಾಗೂ ಈ ರೀತಿಯ ವಿದ್ಯಾರ್ಥಿ ವೇತನದ ವಿತರಣೆಯನ್ನು ಪರಿಶೀಲಿಸಲು ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳನ್ನು ಒಳಗೊಂಡ ತಂಡಗಳನ್ನು ರಚಿಸಿ ತಪಾಸಣೆ ನಡೆಸುತ್ತಿದ್ದರೆ ದುರುಪಯೋಗ ತಡೆಗಟ್ಟುವುದರಿಂದ ಪರಿಣಾಮಕಾರಿಯಾಗಿ ವಿದ್ಯಾರ್ಥಿವೇತನವು ವಿತರಣೆಯಾಗುವ ಸಾಧ್ಯತೆ ಇದೆ.

೨. ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನಗದು ಬಹುಮಾನ

ಬುಡಕಟ್ಟು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುವ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.೬೦ ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಬಾರಿಗೆ, ಪ್ರಥಮ ದರ್ಜೆಯಲ್ಲಿ ತೇರ್ಗಡೆಹೊಂದುವ ಎಲ್ಲಾ ವಿದ್ಯಾರ್ಥಿಗಳಿಗೆ ಈ ಯೋಜನೆಯಲ್ಲಿ ಬಹುಮಾನದ ಹಣವನ್ನು ನೀಡಲಾಗುತ್ತಿದೆ. ಇದಕ್ಕೆ ಯಾವುದೇ ವರಮಾನದ ಮಿತಿ ಇರುವುದಿಲ್ಲ. ಪ್ರತಿಯೊಬ್ಬ ಬುಡಕಟ್ಟು ವಿದ್ಯಾರ್ಥಿಗೆ ಈ ಯೋಜನೆಯಡಿಯಲ್ಲಿ ರೂ. ೫೦೦.೦೦ಗಳು ನೀಡಲಾಗುತ್ತಿದೆ. ಶೈಕ್ಷಣಿಕ ಸಂಸ್ಥೆಗಳಿಂದ ವಿದ್ಯಾರ್ಥಿಗಳ ಪಟ್ಟಿಯನ್ನು ತರಿಸಿಕೊಂಡು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಮಂಜೂರು ಮಾಡಿ ಇದನ್ನು ವಿತರಿಸುತ್ತಾರೆ.

೩. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಆಯಾ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ರೂ.೫೦೦೦.೦೦ಗಳ ಬಹುಮಾನ

ಇತ್ತೀಚಿನ ವರ್ಷಗಳಲ್ಲಿ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ವಿದ್ಯಾಭ್ಯಾಸದ ಕಡೆಗೆ ಗಮನಹರಿಸಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮೂಡಿಸಲು ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಈ ಯೋಜನೆಯಲ್ಲಿ ಆಯಾ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಅತಿ ಹೆಚ್ಚು ಅಂಕಗಳಿಸಿದ ಐದು ಬುಡಕಟ್ಟು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ತಲಾ ರೂ. ೫೦೦೦.೦೦ ಬಹುಮಾನದ ಹಣವನ್ನು ವಿತರಣೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಆಯ್ಕೆಯನ್ನು ಉಪ ನಿರ್ದೇಶಕರು ಶಿಕ್ಷಣ ಇಲಾಖೆರವರಿಂದ ಮಾಹಿತಿ ಪಡೆದು ಹಾಗೂ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸಹ ಆಹ್ವಾನಿಸಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ.

೪. ಪ್ರತಿಭಾ ವಿದ್ಯಾರ್ಥಿ ವೇತನ ನೀಡಿಕೆ

ಈ ಯೋಜನೆಯಡಿಯಲ್ಲಿ ೫ ರಿಂದ ೧೦ ನೇ ತರಗತಿಯವರೆವಿಗೆ ಅಭ್ಯಾಸ ಮಾಡುತ್ತಿರುವ ಹಾಗೂ ಶೇ.೬೦ ಕ್ಕಿಂತ ಹೆಚ್ಚು ಅಂಕ ಪಡೆದ ಬುಡಕಟ್ಟು ವಿದ್ಯಾರ್ಥಿಗಳಿಗೆ ಪ್ರತಿಭಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಇದು ಬುಡಕಟ್ಟು ವಿದ್ಯಾರ್ಥಿಗಳು, ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನುಪಡೆಯುವಂತೆ ಪ್ರೋತ್ಸಾಹಿಸುವ ಹಾಗು ಸ್ಪರ್ಧಾ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಜಾರಿಗೊಳಿಸಿದಂತಹ ಯೋಜನೆಯಾಗಿದೆ.

ಈ ಯೋಜನೆಯಡಿಯಲ್ಲಿ ಶೇ. ೬೦ ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಸತಿ ನಿಲಯದಲ್ಲಿ ವಾಸಿಸುವ, ವಾಸಿಸದ ೫ ರಿಂದ ೭ ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ರೂ. ೭೫.೦೦ ಹಾಗೂ ೮ ರಿಂದ ೧೦ ನೇ ತರಗತಿಯಲ್ಲಿ ಓದುತ್ತಿರುವವರು ರೂ. ೧೦೦.೦೦ ಗಳು ಪಡೆಯಲು ಅರ್ಹರಿರುತ್ತಾರೆ.

ಸಲಹೆ

ಈ ಕಾರ್ಯಕ್ರಮದ ಅಡಿಯಲ್ಲಿ ನೀಡುತ್ತಿರುವ ಪ್ರತಿಭಾ ವಿದ್ಯಾರ್ಥಿ ವೇತನದ ಮೊತ್ತ ಅತ್ಯಂತ ಕಡಿಮೆ. ಆದ್ದರಿಂದ ಅದನ್ನು ಕ್ರಮವಾಗಿ ರೂ.೨೫೦.೦೦ ಹಾಗೂ ೫೦೦.೦೦ಗಳಿಗೆ ಹೆಚ್ಚಿಸಿದರೆ ತುಂಬಾ ಅನುಕೂಲವಾಗುತ್ತದೆ.

೫. ಮೆಟ್ರಿಕ್ ಪೂರ್ವ ಪ್ರೋತ್ಸಾಹ ವಿದ್ಯಾರ್ಥಿ ವೇತನ (ವಿದ್ಯಾರ್ಥಿನಿಯರಿಗೆ)

ವಿದ್ಯಾರ್ಥಿನಿಯರಲ್ಲಿ ಶಾಲೆ ಬಿಡುವ ಪ್ರವೃತ್ತಿ ತಪ್ಪಿಸಿ, ಅವರಲ್ಲಿಯ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಈಗಾಗಲೇ ಸಾಮಾನ್ಯ ಕಾರ್ಯಕ್ರಮದಡಿಯಲ್ಲಿ ನೀಡುವ ರೂ. ೧೦೦.೦೦ಗಳ ಜೊತೆಗೆ ರೂ.೫೦೦.೦೦ ಗಳನ್ನು ಹೆಚ್ಚುವರಿಯಾಗಿ ನೀಡಲಾಗುವುದು. ೨೦೦೨-೦೩ ನೇ ಸಾಲಿನಿಂದ ೬ ಮತ್ತು ೭ನೇ ತರಗತಿಗೆ ಬರುವ ವಿದ್ಯಾರ್ಥಿನಿಯರಿಗೆ ಇದೇ ಮಾದರಿಯಲ್ಲಿ ವಾರ್ಷಿಕ ರೂ. ೨೫೦.೦೦ ಗಳ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಸಮವಸ್ತ್ರ ಮತ್ತು ಪಠ್ಯ ಪುಸ್ತಕ ಖರೀದಿಸಲು ಈ ವಿದ್ಯಾರ್ಥಿವೇತನವನ್ನು ಎರಡು ಹಂತದಲ್ಲಿ ಅಂದರೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಮತ್ತು ವರ್ಷದ ಮಧ್ಯದಲ್ಲಿ ವಿತರಿಸಲಾಗುವುದು.

೬. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ

ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆಯನ್ನು ನೀಡಲಾಗುವುದು. ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಸಾಮಾನ್ಯ ವಿಷಯಗಳಲ್ಲಿ ನುರಿತ ಮತ್ತು ನಿವೃತ್ತಿ ಹೊಂದಿರುವ ಅರೆಕಾಲಿಕ ಅಧ್ಯಾಪಕರುಗಳ ಮೂಲಕ ವಿಶೇಷ ಬೋಧನೆಯನ್ನು ನೀಡಲು ಮಾಹೆಯಾನ ರೂ. ೫೦೦.೦೦ ಗೌರವ ಧನವನ್ನು ನೀಡಲಾಗುವುದು.

೭. ಬುಡಕಟ್ಟು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ

ಬುಡಕಟ್ಟು ವರ್ಗದ ಪ್ರೌಢ ಶಾಲೆ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಇತರೆ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಕ್ಕೆ ಹೋಲಿಸಿ ನೋಡಿದಾಗ ಬಹಳ ಹಿಂದುಳಿದಿರುವುದನ್ನು ಗಮನಿಸಿ, ಅವರಿಗಾಗಿ ವಿಶೇಷ ಬೋಧನಾ ತರಗತಿಯನ್ನು ರೂಪಿಸಿ ವಾರ್ಷಿಕ ಪರೀಕ್ಷೆಯ ಮುಂಚಿತವಾಗಿ ೩ ತಿಂಗಳುಗಳ ಕಾಲ ವಿಶೇಷ ಬೋಧನೆಯನ್ನು ನೀಡಲಾಗುತ್ತಿದೆ. ಇದನ್ನು ಶಿಕ್ಷಣ ಇಲಾಖೆಯ ಸಹಯೋಗದಿಂದ ಶಾಲೆಗಳಲ್ಲಿಯೇ ಬೋಧನಾ ಅವಧಿ ಮುಗಿದ ನಂತರ ವಿಶೇಷ ಬೋಧನೆ ನೀಡಲಾಗುತ್ತಿದೆ. ಇದು ನಿಜವಾಗಿಯೂ ಒಳ್ಳೆಯ ಫಲಿತಾಂಶವನ್ನು ನೀಡಿ ಈ ವರ್ಗದ ವಿದ್ಯಾರ್ಥಿಗಳ ಶಿಕ್ಷಣ ಮಟ್ಟದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ.

ಸಲಹೆ : ಈ ಯೋಜನೆಯನ್ನು ಈಗಿರುವ ಮೂರು ತಿಂಗಳ ಬದಲಾಗಿ ಆರು ತಿಂಗಳ ಕಾಲಕ್ಕೆ ಮುಂದುವರಿಸಿದರೆ ಇನ್ನು ಹೆಚ್ಚಿನ ನಿರೀಕ್ಷಿತ ಪ್ರಗತಿಯನ್ನು ಸಾಧಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

೮. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಈ ಯೋಜನೆಯು ಪೂರ್ಣ ಪ್ರಮಾಣದ ಕೇಂದ್ರ ಪುರಸ್ಕೃತ ಯೋಜನೆಯಾಗಿದೆ. ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಲ್ಲಿ ಅವರ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ಹಿನ್ನೆಲೆಯನ್ನು ಹೊಂದಿದೆ. ವ್ಯಾಸಂಗವನ್ನು ಮಧ್ಯದಲ್ಲಿ ಹಲವಾರು ಕಾರಣದಿಂದ ಬಿಡುವುದನ್ನು ತಡೆಗಟ್ಟುವ ಉದ್ದೇಶದಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ೧೯೪೪-೪೫ ರಲ್ಲಿ ದೇಶದಲ್ಲಿ ಕೇವಲ ೧೪ ವಿದ್ಯಾರ್ಥಿಗಳು

ಮಾತ್ರ ಉಪಯೋಗ ಪಡೆದುಕೊಂಡಿದ್ದರು. ಈಗ ಸುಮಾರು ೬.೩೦ ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಅದೇ ರೀತಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ೧೯೪೪-೪೫ ರಲ್ಲಿ ಕೇವಲ ೧೦೦ ವಿದ್ಯಾರ್ಥಿಗಳು ಉಪಯೋಗ ಪಡೆದು ಕೊಂಡಿದ್ದರು. ಈಗ ಸುಮಾರು ೧೬ ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯಿಂದ ಪ್ರಯೋಜನೆ ಪಡೆದುಕೊಂಡಿದ್ದಾರೆ. ಇದು ೧೦೦ ಕ್ಕೆ ೧೦೦ ಪಾಲು ಕೇಂದ್ರ ಪುರಸ್ಕೃತ ಯೋಜನೆಯಾಗಿದೆ. ಅನುದಾನವೆಲ್ಲಾ ಕೇಂದ್ರದಿಂದ ಬಿಡುಗಡೆಯಾಗುತ್ತದೆ. ೨೦೦೨-೦೩ ರಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಲು ೧೫೩ ಕೋಟಿ ರೂ ಗಳನ್ನು ಖರ್ಚು ಮಾಡಿದ್ದು ಅದೇ ರೀತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ೫೧.೫೪ ಕೋಟಿಗಳು ಬಿಡುಗಡೆಯಾಗಿರುವುದು ದಾಖಲೆಗಳಿಂದ ದೃಢಪಟ್ಟಿದೆ.[೫]

ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ನಿಬಂಧನೆ ಮೇರೆಗೆ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ೬೫,೨೯೦ಇದ್ದುದನ್ನು ಇತ್ತೀಚಿನ ಆದೇಶದಲ್ಲಿ ೧ ಲಕ್ಷಗಳವರೆಗೆ ಏರಿಸಿ ಪೂರ್ಣ ವಿದ್ಯಾರ್ಥಿ ವೇತನ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಮೇಲೆ ತಿಳಿಸಿರುವ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ. ೧ ಲಕ್ಷ ಮೀರಿದಲ್ಲಿ ಅರ್ಧ ದರದಲ್ಲಿ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ. ಈ ವಿದ್ಯಾರ್ಥಿ ವೇತನದ ಮೊತ್ತ ಬೇರೆ ಬೇರೆ ತರಗತಿಗಳಿಗೆ ಬೇರೆಯಾಗಿದ್ದು ಅವುಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೨.೩

ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ದರಗಳು

		ಮಾಸಿಕ ವಿದ್ಯಾರ್ಥಿ ವೇತನ ದರ (ರೂ.ಗಳಲ್ಲಿ)	
ಗುಂಪು	ಕೋರ್ಸು	ನಿಲಯವಾಸಿಗಳಿಗೆ	ನಿಲಯ ವಾಸಿಗಳಲ್ಲದವರಿಗೆ
೧.	ವೈದ್ಯಕೀಯ, ತಾಂತ್ರಿಕ, ಕೃಷಿ ಪಶುಸಂಗೋಪನೆ, ಮೀನುಗಾರಿಕೆ ಪದವಿ ಹಾಗೂ ಸ್ನಾತಕೋತ್ತರ ಪದವಿ.	೪೨೫	೧೯೦
೨.	ವಿಜ್ಞಾನ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಶಿಕ್ಷಣ.	೨೯೦	೧೯೦
೩.	ಕಲೆ ಮತ್ತು ವಾಣಿಜ್ಯ ಸ್ನಾತಕೋತ್ತರ ಪದವಿ ಹಾಗೂ ಸರ್ಟಿಫಿಕೇಟ್ ಕೋರ್ಸುಗಳು.	೨೯೦	೧೯೦
೪.	ಸಾಮಾನ್ಯ ಪದವಿ ಶಿಕ್ಷಣದ ೨ ಮತ್ತು ನಂತರದ ವರ್ಷಗಳು.	೨೩೦	೧೨೦
೫.	ಪಿ.ಯು.ಸಿ. ಮತ್ತು ಸಾಮಾನ್ಯ ಪದವಿ ಮೊದಲನೇ ವರ್ಷ.	೧೫೦	೯೦

(ಕೃಪೆ : ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮಾರ್ಗಸೂಚಿ,೨೦೦೧)

ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಪ್ರಕಟಣೆಗಳ ಮೂಲಕ ಹಾಗೂ ಎಲ್ಲಾ ಕಾಲೇಜುಗಳಿಗೆ ನೀಡಿ ಇದನ್ನು ಭರ್ತಿ ಮಾಡಿ ಪ್ರಾಂಶುಪಾಲರು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗೆ ಕಳುಹಿಸುವರು. ನಂತರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮಂಜೂರಾತಿ ಮಾಡಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಚೆಕ್ ವಿತರಿಸಲು ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಿ ಕೊಡುವರು.

ಸಲಹೆ

ಈ ಯೋಜನೆಯಡಿಯಲ್ಲಿ ನೀಡುತ್ತಿರುವ ವಿದ್ಯಾರ್ಥಿ ವೇತನ ಇತ್ತೀಚಿನ ಮೌಲ್ಯಗಳಿಗೆ ಹೋಲಿಸಿದರೆ ತುಂಬಾ ಕಡಿಮೆಯಾಗಿದ್ದು ಕಾಲ ಕಾಲಕ್ಕೆ ಬೆಲೆಯ ಅನುಬಂಧ ಬದಲಾವಣೆಯಾದಂತೆ ಕನಿಷ್ಠ ೫ ವರ್ಷಕ್ಕೊಮ್ಮೆಯಾದರು ದರವನ್ನು ಬದಲಾಯಿಸಲು ಕ್ರಮಕೈಗೊಂಡರೆ ಸೂಕ್ತ.

೯. ಪರಿಷ್ಕೃತ ವಿದ್ಯಾರ್ಥಿವೇತನ

ಸರ್ಕಾರಿ ಆದೇಶ ಸಂಖ್ಯೆ ನಂ : ೧೧೦೧೭/೭/೨೦೦೨ Ministry of Social justice and Empowerment ದಿನಾಂಕ ೨೮.೧.೨೦೦೪ರಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿ ವೇತನದ ದರವನ್ನು ಪರಿಷ್ಕರಿಸಲಾಗಿದ್ದು ಅವುಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೨.೪

ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಪರಿಷ್ಕೃತ ದರಗಳು

ಗುಂಪು	ಮಾಸಿಕ ವಿದ್ಯಾರ್ಥಿ ವೇತನ ದರ (ರೂ.ಗಳಲ್ಲಿ)		
	ಕೋರ್ಸು	ನಿಲಯವಾಸಿಗಳಿಗೆ	ನಿಲಯ ವಾಸಿಗಳಲ್ಲದವರಿಗೆ
೧.	ವೈದ್ಯಕೀಯ, ತಾಂತ್ರಿಕ, ಕೃಷಿ ಪಶುಸಂಗೋಪನೆ, ಮೀನುಗಾರಿಕೆ ಪದವಿ ಹಾಗೂ ಸ್ನಾತಕೋತ್ತರ ಪದವಿ.	೭೪೦	೩೩೦
೨.	ವಿಜ್ಞಾನ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಶಿಕ್ಷಣ. ಕಲೆ ಮತ್ತು ವಾಣಿಜ್ಯ ಸ್ನಾತಕೋತ್ತರ ಪದವಿ ಹಾಗೂ ಸರ್ಟಿಫಿಕೇಟ್ ಕೋರ್ಸುಗಳು.	೫೧೦	೩೩೦
೩.	ಸಾಮಾನ್ಯ ಪದವಿ ಶಿಕ್ಷಣದ ೨ ಮತ್ತು ನಂತರದ ವರ್ಷಗಳು.	೩೫೫	೧೮೫
೪.	ಪಿ.ಯು.ಸಿ. ಮತ್ತು ಸಾಮಾನ್ಯ ಪದವಿ ಮೊದಲನೇ ವರ್ಷ.	೨೩೫	೧೪೦

(ಕೃಪೆ : ಸರ್ಕಾರಿ ಆದೇಶ ಸಂಖ್ಯೆ ನಂ : ೧೧೦೧೭/೭/೨೦೦೨ Ministry of Social justice and Empowerment ದಿನಾಂಕ ೮.೧.೨೦೦೪)

೧೦. ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತಿದೆ. ಇದು ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದು ಅನುದಾನವು ಪೂರ್ಣ ರಾಜ್ಯದ್ದಾಗಿರುತ್ತದೆ. ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಕಾಲೇಜು ಪ್ರಾಂಶುಪಾಲರ ಮೂಲಕ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕಳುಹಿಸಬೇಕು. ಅದನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಿ ವಿದ್ಯಾರ್ಥಿಗಳ ಪಟ್ಟಿ ಹಾಗೂ

ಚೆಕ್ಕುಗಳ ಸಮೇತ ಸಂಬಂಧಪಟ್ಟ ಕಾಲೇಜುಗಳಿಗೆ ವಿತರಿಸುವ ಸಲುವಾಗಿ ಕಳುಹಿಸಲಾಗುತ್ತದೆ.

೧೧. ಪಿ.ಯು.ಸಿ ದ್ವಿತೀಯ ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತಿ ಹೆಚ್ಚು ಅಂಕಗಳಿಸಿದ ೫ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ. ೧೦,೦೦೦.೦೦ ಬಹುಮಾನ

ಬುಡಕಟ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮೂಡಿಸಲು, ಈ ಯೋಜನೆಯನ್ನು ಇತ್ತೀಚೆಗೆ ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಆಯಾ ಜಿಲ್ಲೆಯ ಪಿ.ಯು.ಸಿ. ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಅತಿ ಹೆಚ್ಚು ಅಂಕಗಳಿಸಿದ ೫ ಬುಡಕಟ್ಟು ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ತಲಾ ರೂ.೧೦,೦೦೦.೦೦ ದಂತೆ ಬಹುಮಾನ ಹಣವನ್ನು ವಿತರಣೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಆಯ್ಕೆಯನ್ನು ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಂದ ಮಾಹಿತಿ ಹಾಗೂ ವಿದ್ಯಾರ್ಥಿಗಳಿಂದಲೂ ಅರ್ಜಿಗಳನ್ನು ಆಹ್ವಾನಿಸಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆಮಾಡಲಾಗುತ್ತಿದೆ.

೧೨. ಪುರಸ್ಕಾರ ಬಹುಮಾನದ ಹಣ

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಈ ಕೆಳಕಂಡ ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ. ಅವುಗಳ ವಿವರಗಳು ಹೀಗಿವೆ.

ಬಹುಮಾನದ ವಿವರ	ಬಹುಮಾನಗಳ ಮೊತ್ತ
೧ ೨ನೇ ಪಿ.ಯು.ಸಿ. ವಿದ್ಯಾರ್ಥಿಗಳಿಗೆ	ರೂ. ೭೫೦.೦೦
೨. ಪದವಿ ತರಗತಿ ವಿದ್ಯಾರ್ಥಿಗಳಿಗೆ	ರೂ. ೧೦೦೦.೦೦
೩. ಸ್ನಾತಕೋತ್ತರ ಪದವಿ ಎಂ.ಎ., ಎಂಎಸ್ಸಿ., ಎಂಕಾಂ.	ರೂ. ೧೨೫೦.೦೦
೪. ತಾಂತ್ರಿಕ ಪದವಿ	ರೂ. ೧೫೦೦.೦೦
೬. ವೈದ್ಯಕೀಯ ಪದವಿ	ರೂ. ೧೫೦೦.೦೦
೭. ಕೃಷಿ ಮತ್ತು ಪಶು ವೈದ್ಯ	ರೂ. ೧೫೦೦.೦೦

ಈ ನಗದು ಬಹುಮಾನಕ್ಕಾಗಿ ಅರ್ಜಿಯನ್ನು ಕರೆದು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ವಿದ್ಯಾರ್ಥಿಯ ಜಾತಿ ಪ್ರಮಾಣ ಪತ್ರ ಮತ್ತು ಪರೀಕ್ಷೆಯಲ್ಲಿ ಪಡೆದ ಅಂಕಪಟ್ಟಿಗಳನ್ನು ಪರಿಶೀಲಿಸಿ ನಗದು ಬಹುಮಾನ ಹಣವನ್ನು ಮಂಜೂರು ಮಾಡಿ, ಸಂಬಂಧಪಟ್ಟ ಕಾಲೇಜುಗಳಿಗೆ ವಿತರಿಸುವ ಸಲುವಾಗಿ ಕಳುಹಿಸುವರು.

೧೩. ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ಭತ್ಯ ಮಂಜೂರಾತಿ

ಈ ಯೋಜನೆಯ ಉದ್ದೇಶ ಹಾಗೂ ಹಿನ್ನೆಲೆ, ಎಸ್.ಎಸ್.ಎಲ್.ಸಿ. ನಂತರ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಗದ ಬುಡಕಟ್ಟು ವಿದ್ಯಾರ್ಥಿಗಳಿಗೆ ಅಂಗೀಕೃತ ಮತ್ತು ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯದಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ರಾಜ್ಯ ಸರ್ಕಾರದಲ್ಲಿರುವ ಅಂಗೀಕೃತ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ಇರುವಂತಹ ಬುಡಕಟ್ಟು ವಿದ್ಯಾರ್ಥಿಗಳು,

ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿದ್ದು, ಭಾರತ ಸರ್ಕಾರ ನಿಗಧಿಪಡಿಸಿರುವ ವಿದ್ಯಾರ್ಥಿ ವೇತನದ ದರಕ್ಕಿಂತಲೂ ಆಯಾ ನಿಲಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಖರ್ಚು ಬಂದಲ್ಲಿ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚವನ್ನು ನೀಡಲಾಗುತ್ತಿದೆ.

ಭಾರತ ಸರ್ಕಾರದ ಆದೇಶ ಸಂಖ್ಯೆ : 11017 :1: 1992, ದಿನಾಂಕ ೧೧.೧೨.೧೯೯೬ರ ಪತ್ರದಲ್ಲಿ ಕಾಲೇಜು ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ದರಗಳನ್ನು ಪರಿಷ್ಕರಿಸಿ, ದಿನಾಂಕ : ೦೧.೧೦.೧೯೯೫ ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಆ ಪ್ರಕಾರ ವೈದ್ಯಕೀಯ, ತಾಂತ್ರಿಕ, ಕೃಷಿ, ಪಶು ಸಂಗೋಪನಾ ಇತ್ಯಾದಿ ಕೋರ್ಸ್‌ಗಳು, ಗ್ರೂಪ್ 'ಎ' ಗೆ ಸೇರಿದ್ದು, ಇದರಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿರುವವರಿಗೆ ಮಾಹೆಯಾನ ರೂ. ೪೨೫.೦೦ ನಿಗಧಿಪಡಿಸಲಾಗಿದೆ. ಇನ್ನಿತರ ಗ್ರೂಪ್ ಬಿ,ಸಿ,ಡಿ,ಇ, ವರ್ಗದ ಕೋರ್ಸ್‌ಗಳಿಗೆ ಸೇರಿರುವ ಇತರೆ ಬುಡಕಟ್ಟು ವಿದ್ಯಾರ್ಥಿಗಳಿಗೆ ರೂ. ೪೫೦.೦೦ ಕ್ಕೆ ಸಮವಾಗಿ ವ್ಯತ್ಯಾಸದ ಹಣವನ್ನು ಮಂಜೂರು ಮಾಡಲಾಗುತ್ತಿದೆ.

೧೪. ರ್‍ಯಾಂಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ

ಎಸ್.ಎಸ್.ಎಲ್.ಸಿ., ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಪಡೆದು ಉತ್ತೀರ್ಣರಾಗುವಂತೆ ಪ್ರೋತ್ಸಾಹಿಸಲು ಮೇಲ್ಕಂಡ ಪರೀಕ್ಷೆಗಳಲ್ಲಿ ೧ ರಿಂದ ೧೦ ರ್‍ಯಾಂಕ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ೧ ರಿಂದ ೩ ನೇ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ರೂ.೫೦೦೦.೦೦ ಗಳ ಬಹುಮಾನ ನೀಡಲಾಗುತ್ತದೆ.

ಅರ್ಹತೆ

೧. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

೨.ಎಸ್.ಎಸ್.ಎಲ್.ಸಿ. ಯಿಂದ ಪದವಿವರೆಗಿನ ಯಾವುದೇ ಪರೀಕ್ಷೆಯಲ್ಲಿ ೧ ರಿಂದ ೧೦ ನೇ ರ್‍ಯಾಂಕ್ ಪಡೆದಿರಬೇಕು.

ಮಂಜೂರಾತಿ ವಿಧಾನ

ಪರಿಶಿಷ್ಟ ಪಂಗಡದ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅರ್ಜಿಯನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ಅಂಕ ಪಟ್ಟಿಯ ನಕಲು, ವಿದ್ಯಾಸಂಸ್ಥೆಯ ಮುಖ್ಯಸ್ಥರು ನೀಡಿದ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು. ಅವರು ನೀಡಿದ ಮಾಹಿತಿಗಳನ್ನು ಪರಿಶೀಲಿಸಿ ಸಮಾಜ ಕಲ್ಯಾಣ ಅಧಿಕಾರಿಗಳು ಮಂಜೂರಾತಿ ನೀಡಿ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಸಾರ್ವಜನಿಕ ಸಮಾರಂಭದಲ್ಲಿ ಬಹುಮಾನದ ಚೆಕ್‌ನ್ನು ನೀಡಲಾಗುತ್ತದೆ.

೧೫. ಎಂ.ಫಿಲ್ ಮತ್ತು ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಫೆಲೋಷಿಪ್

ಈ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಯಲ್ಲಿ

ತೊಡಗಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ, ಸಂಶೋಧನೆ, ಮಾಹಿತಿ ಸಂಗ್ರಹಣೆ ಮುಂತಾದವುಗಳಿಗೆ ಅತಿ ಹೆಚ್ಚಿನ ವೆಚ್ಚ ಭರಿಸಬೇಕಾಗಿರುವುದರಿಂದ ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.೮೦೦೦ ಹಾಗೂ ಪಿಹೆಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.೧೦,೦೦೦ ನೀಡುವ ಯೋಜನೆಯನ್ನು೨೦೦೦ -೦೧ ನೇ ಸಾಲಿನಿಂದ ಗಿರಿಜನ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳಿಸಲಾಗುತ್ತಿದೆ. ಇದಕ್ಕೂ ಹಿಂದೆ, ಈ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು.

ಸಲಹೆ

ಪಿಎಚ್.ಡಿ ಮತ್ತು ಎಂ.ಫಿಲ್ ಅಧ್ಯಯನಕ್ಕೆ ನೀಡುತ್ತಿರುವ ಅನುದಾನ ಕಡಿಮೆಯಾಗಿದ್ದು, ೨ ವರ್ಷದ ಅವಧಿಗೆ ಹೋಲಿಸಿದಲ್ಲಿ ತುಂಬಾ ಕಡಿಮೆ. ಇದರಿಂದ ಸಂಶೋಧನ ವಿದ್ಯಾರ್ಥಿ ತನ್ನ ಸಂಶೋಧನೆಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಸಾಧ್ಯವಾಗದ ಕಾರಣ, ಸಂಶೋಧನೆಯನ್ನು ಅರ್ಧದಲ್ಲಿ ಬಿಡುವ ಸಾದ್ಯತೆ ಇದೆ. ಈ ಅನುದಾನವನ್ನು ಕನಿಷ್ಠ ರೂ.೨೦,೦೦೦ ಗಳಿಗೆ ಏರಿಸಿದರೆ ಸಂಶೋಧನೆಯನ್ನು ಅರ್ಥಪೂರ್ಣವಾಗಿ ಕೈಗೊಳ್ಳಲು ಸಾಧ್ಯವಾಗುತ್ತದೆ.

೧೬. ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ಧನಸಹಾಯ

೨೦೦೧-೦೨ ನೇ ಸಾಲಿನಿಂದ ವಿದೇಶಿ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಪ್ರತಿವಿದ್ಯಾರ್ಥಿಗೆ ಗರಿಷ್ಠ ೧೦.೦೦ಲಕ್ಷ ರೂ.ಗಳು ಅಥವಾ ವಾಸ್ತವಿಕ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುವುದು. ಈ ಧನ ಸಹಾಯ ಪಡೆಯುವವರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

೧.ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಮೂಲ ನಿವಾಸಿಯಾಗಿದ್ದು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.

೨. ರಾಜ್ಯದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಯಾವುದೇ ವಿಭಾಗದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಕನಿಷ್ಠ ೬೦ ಅಂಕಗಳನ್ನು ಗಳಿಸಿರಬೇಕು.

೩. ವಿದೇಶದ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಭ್ಯರ್ಥಿಯು ಆಯ್ಕೆಯಾಗಿರಬೇಕು.

೪. ನಿಯೋಜನೆಗೆ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಲು ಬದ್ಧನಾಗಿರಬೇಕು. ಮಧ್ಯದಲ್ಲಿ ಶಿಕ್ಷಣವನ್ನು ತೊರೆದ ಪಕ್ಷದಲ್ಲಿ ಸರ್ಕಾರದಿಂದ ಮಾಡಿರುವ ವೆಚ್ಚವನ್ನು ಭರಿಸಿಕೊಡಬೇಕು. ವ್ಯಾಸಂಗದಲ್ಲಿ ಅನುತ್ತೀರ್ಣನಾದ ಪಕ್ಷದಲ್ಲಿ ಸ್ವಂತ ಖರ್ಚಿನಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸಬೇಕು.

೫. ಆಯ್ಕೆಯಾದ ಅಭ್ಯರ್ಥಿಯ ಕುಟುಂಬದ ಯಾವುದೇ ಸದಸ್ಯರು ವಿದೇಶದಲ್ಲಿ ನೆಲೆಸಿರಬಾರದು. ಆಯ್ಕೆಯಾಗಿರುವ ಅಭ್ಯರ್ಥಿಯ ವಯಸ್ಸು ತರಬೇತಿಯ ಪ್ರಾರಂಭದಲ್ಲಿ ೩೦ ವರ್ಷ ಮೀರಿರಬಾರದು. ನಿಯಮಗಳಡಿಯಲ್ಲಿ ಸೂಚಿಸುವ ಷರತ್ತುಗಳನ್ನು ಪೂರೈಸಬೇಕು ಮತ್ತು ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆದಿರಬೇಕು.[೨೨]

೩. ಕಾನೂನು ಪದವೀಧರರಿಗೆ ಆಡಳಿತದಲ್ಲಿ ತರಬೇತಿ

ಕಾನೂನು ಪದವಿಯನ್ನು ಪಡೆದು ನಿರುದ್ಯೋಗಿಯಾಗಿರುವ ಯುವಕ-ಯುವತಿಯರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚು ಅನುಭವವನ್ನು ಹಾಗೂ ಜ್ಞಾನವನ್ನು ಪಡೆಯಲು ಅನುಕೂಲವಾಗುವಂತೆ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿಯ ಅವಧಿ, ನಾಲ್ಕು ವರ್ಷದ ದೀರ್ಘಾವಧಿಯಾಗಿದ್ದು, ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ಮಾಸಿಕ ರೂ.೧೦೦೦.೦೦ ಗಳ ಶಿಷ್ಯ ವೇತನವನ್ನಾಗಿ ನೀಡಲಾಗುತ್ತಿದೆ.

ಈ ಯೋಜನೆಗೆ ಆಯ್ಕೆಯಾಗಲು ಕೆಲವು ಅರ್ಹತೆಗಳಿವೆ. ಆ ಪ್ರಕಾರ

೧. ಅಭ್ಯರ್ಥಿಯು ಬುಡಕಟ್ಟು ಸಮುದಾಯದವರಾಗಿಬೇಕು.

೨. ಕಾನೂನು ಪದವಿಯನ್ನು ಮುಗಿಸಿ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿ ಮಾಡಿ ೨ ವರ್ಷಗಳ ಒಳಗಿರಬೇಕು.

೩. ಅಭ್ಯರ್ಥಿಗೆ ೩೫ ವರ್ಷ ವಯಸ್ಸು ಮೀರಿರಬಾರದು.

೪. ನಿರುದ್ಯೋಗಿಯಾಗಿರಬೇಕು.

ಅಂತಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸರ್ಕಾರ ಈಗಾಗಲೇ ಒಂದು ಆಯ್ಕೆ ಸಮಿತಿಯನ್ನು ರಚಿಸಿದೆ. ಅದರಲ್ಲಿ

೧. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು	ಅಧ್ಯಕ್ಷರು
೨. ಜಿಲ್ಲಾ ಸರ್ಕಾರಿ ವಕೀಲರು	ಸದಸ್ಯರು
೩. ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ	ಸದಸ್ಯರು
೪. ಅಧ್ಯಕ್ಷರು, ಕಾನೂನು ನೆರವು ಮಂಡಳಿ	ಸದಸ್ಯರು
೫. ಜಿಲ್ಲಾ ಸರ್ಕಾರಿ ಅಭಿಯೋಜಕರು	ಸದಸ್ಯರು
೬. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಈ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಸರ್ಕಾರಿ ವಕೀಲರು ಅಥವಾ ೨೦ ವರ್ಷ ಅನುಭವವಿರುವ ವಕೀಲರ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು. ಈ ವಕೀಲರು ಆಯ್ಕೆಯಾದ ಅಭ್ಯರ್ಥಿಗಳನ್ನು ತಮ್ಮ ದಿನ ನಿತ್ಯದ ನ್ಯಾಯಾಲಯದ ಕಲಾಪಗಳಲ್ಲಿ ತೊಡಗಿಸಿಕೊಂಡು ನ್ಯಾಯಾಂಗ ಆಡಳಿತದಲ್ಲಿ ತರಬೇತಿಯನ್ನು ನೀಡುತ್ತಾರೆ. ಅವರು ನೀಡುವ ದಿನದ ಹಾಜರಾತಿಯ ಮೇಲೆ ಮಾಸಿಕ ಶಿಷ್ಯವೇತನವನ್ನು ಪಾವತಿಸಲಾಗುತ್ತದೆ.

ಬಾಧಕಗಳು

ಈ ಯೋಜನೆಯು ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂಬುದನ್ನು ಅಳೆಯಲು ಯಾವುದೇ ರೀತಿಯ ಮಾನದಂಡವನ್ನು ನಿಗಧಿ ಮಾಡದೇ ಇರುವುದರಿಂದ ಈ ಯೋಜನೆಯು ಅಷ್ಟೊಂದು ಪರಿಣಾಮಕಾರಿ ಫಲವನ್ನು ನೀಡುತ್ತಿಲ್ಲ. ಕೇವಲ ಹೆಸರಿಗೆ ಮಾತ್ರ ಯೋಜನೆ ನಡೆಯುತ್ತಿದ್ದು, ಸರ್ಕಾರದ ಅನುದಾನ ವ್ಯಯವಾಗುತ್ತದೆ.

ಸಲಹೆಗಳು

೧. ಈ ಯೋಜನೆ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ವರ್ಷಕ್ಕೊಮ್ಮೆ ನ್ಯಾಯಾಂಗ ಆಡಳಿತದಲ್ಲಿ

ಅವರು ಪಡೆದ ತರಬೇತಿಯ ಬಗ್ಗೆ ಪರೀಕ್ಷೆಯನ್ನು ನಡೆಸಬೇಕು. ಅವುಗಳ ಮೌಲ್ಯ ಮಾಪನವನ್ನು ಮಾಡಿ, ನಿರೀಕ್ಷಿತ ಫಲಿತಾಂಶ ದೊರೆಯದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಕೈ ಬಿಟ್ಟು ಬೇರೆ ಬುಡಕಟ್ಟು ಅಭ್ಯರ್ಥಿಗಳಿಗೆ ಅನುವು ಮಾಡಿಕೊಡಬಹುದಾಗಿದೆ.

೨. ಈ ಯೋಜನೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಬರೀ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳುತ್ತಿರುವುದರ ಬದಲು, ಅವರು ನ್ಯಾಯಾಂಗ ಪದವಿಯಲ್ಲಿ ಪಡೆದಿರುವ ಜ್ಞಾನದ ಬಗ್ಗೆ ತಿಳಿದುಕೊಳ್ಳಲು ಒಂದು ಲಿಖಿತ ಪರೀಕ್ಷೆಯನ್ನು ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುವುದು ಸೂಕ್ತವಾಗಿದೆ.

೩. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಪೂರ್ಣ ಪ್ರಮಾಣದ ತರಬೇತಿಯನ್ನು ನಾಲ್ಕು ವರ್ಷಗಳ ಕಾಲ ನೀಡಿ, ಅವರೇ ಸ್ವತಃ ನ್ಯಾಯಾಲಯದ ಕೇಸುಗಳನ್ನು ನಡೆಸುವ ಸಾಮರ್ಥ್ಯವನ್ನು ಹೊಂದುವಂತಹ ತರಬೇತಿಯನ್ನು ನೀಡಬೇಕಾದದ್ದು ಸರ್ಕಾರಿ ವಕೀಲರಿಗೆ ಜವಾಬ್ದಾರಿ ಮಾಡಬೇಕು. ಆಗ ಮಾತ್ರ ಈ ಯೋಜನೆ ತುಂಬಾ ಪರಿಣಾಮಕಾರಿಯಾಗಲು ಸಾಧ್ಯ.

೪. ಕಾನೂನು ಪದವೀಧರರಿಗೆ ಧನ ಸಹಾಯ

ಈ ಯೋಜನೆಯಲ್ಲಿ ಬುಡಕಟ್ಟು ವರ್ಗಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು ಹಾಗೂ ಬಾರ್ ಕೌನ್ಸಿಲ್‌ನಲ್ಲಿ ಅವರ ಹೆಸರನ್ನು ನೋಂದಾಯಿಸಿ ಕೊಳ್ಳಲು ಸಹಾಯವಾಗುವಂತೆ ರೂ. ೫೦೦೦.೦೦ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ಬಾಧಕಗಳು ಮತ್ತು ಸಲಹೆ

ಈ ಯೋಜನೆ ಅಂತಹ ಪರಿಣಾಮಕಾರಿ ಫಲವನ್ನು ನೀಡಿರುವುದಿಲ್ಲ. ಅದರ ಬದಲು ಸರ್ಕಾರವೇ ಬುಡಕಟ್ಟು ಕಾನೂನು ಪದವೀಧರರಿಗೆ ವಕೀಲ ವೃತ್ತಿಯನ್ನು ಪ್ರಾರಂಭಿಸಲು ನೋಂದಣಿ ಶುಲ್ಕವನ್ನು ತುಂಬಿ ಅವರ ವಕೀಲಿ ವೃತ್ತಿಗೆ ಅನುಕೂಲವಾಗುವಂತಹ ಪುಸ್ತಕಗಳನ್ನು ಖರೀದಿಸಿ ವಿತರಣೆ ಮಾಡಿದಲ್ಲಿ, ಈ ಯೋಜನೆ ಯಾವುದೇ ರೀತಿಯ ದುರುಪಯೋಗವಾಗದೇ ಫಲಪ್ರದವಾಗುತ್ತದೆ.

೫. ಐ.ಟಿ.ಐ. ಮತ್ತು ಐ.ಟಿ.ಸಿ. ತರಬೇತಿ ಹೊಂದುವವರಿಗೆ ಶಿಷ್ಯವೇತನ

ಬುಡಕಟ್ಟು ಸಮೂಹದ ಎಸ್.ಎಸ್.ಎಲ್.ಸಿ ಪಾಸಾದ ನಿರುದ್ಯೋಗಿ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಹಿನ್ನಲೆಯನ್ನು ಹೊಂದಿರುತ್ತದೆ. ಇದರ ಉದ್ದೇಶ ಬುಡಕಟ್ಟು ನಿರುದ್ಯೋಗಿ ಯುವಕ-ಯುವತಿಯರಿಗೆ ತರಬೇತಿಯನ್ನು ನೀಡಿ ಸ್ವತಂತ್ರವಾಗಿ ಉದ್ಯೋಗ ಕಲ್ಪಿಸಿಕೊಳ್ಳುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಯಲ್ಲಿ ಬುಡಕಟ್ಟು ಅಭ್ಯರ್ಥಿಗಳಿಗೆ ೧೮ ವರ್ಷದಿಂದ ೩೦ ವರ್ಷಗಳ ಒಳಗಿರಬೇಕು. ಬೆರಳಚ್ಚು ತರಬೇತಿಗೆ ರೂ. ೫೦.೦೦, ಶೀಘ್ರಲಿಪಿ ತರಬೇತಿಗೆ ರೂ. ೭೫.೦೦, ಪದವೀಧರ ಶೀಘ್ರಲಿಪಿ ತರಬೇತಿಗೆ ರೂ. ೨೦೦.೦೦, ಫೋರ್‌ಮೆನ್ ತರಬೇತಿಗೆ ರೂ. ೫೦೦.೦೦ ಸ್ಟೈಫಂಡ್ ನೀಡಲಾಗುತ್ತಿದೆ. ತರಬೇತಿಯ ಅವಧಿ ಒಂದು ವರ್ಷವಾಗಿರುತ್ತದೆ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವವರು ಈ ಯೋಜನೆಗೆ ಅರ್ಹರಲ್ಲ. ಪಾಲಕರ ವಾರ್ಷಿಕ ವರಮಾನ ರೂ. ೨೪,೦೦೦ ಕ್ಕೆ ಮೀರಿರಬಾರದು.

೬. ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು

ಬುಡಕಟ್ಟು ನಿರುದ್ಯೋಗಿ ಯುವಕರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಿ, ಸ್ವತಂತ್ರ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಆಯ್ಕೆಯಾದ ನಗರ ಪ್ರದೇಶದ ಅಭ್ಯರ್ಥಿಗಳಿಗೆ ರೂ. ೧೫೦ ಮತ್ತು ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ರೂ.೩೦೦ ಶಿಷ್ಯವೇತನವನ್ನು ನೀಡಿ ಆಟೋ ಡ್ರೈವಿಂಗ್, ವಾಹನ ಚಾಲನೆ, (ಲಘು ಮತ್ತು ಭಾರಿ), ಕಂಪ್ಯೂಟರ್ ತರಬೇತಿ, ವಿವಿಧ ವೃತ್ತಿಗಳ ತರಬೇತಿಯನ್ನು ನೀಡಲಾಗುತ್ತಿದೆ.

ಬಾಧಕಗಳು

ಈ ಯೋಜನೆಯಡಿಯಲ್ಲಿ ಕೇವಲ ನಿರುದ್ಯೋಗಿ ಬುಡಕಟ್ಟು ಯುವಕ-ಯುವತಿಯರಿಗೆ ತರಬೇತಿಯನ್ನು ನೀಡಿ, ಗುರಿಯನ್ನು ಸಾಧಿಸಲಾಗುತ್ತಿದೆಯೇ ಹೊರತು, ಅವರು ಪಡೆದ ತರಬೇತಿ ಬಗ್ಗೆ ಎಷ್ಟು ಯುವಕ-ಯುವತಿಯರು ಸ್ವಯಂ ಉದ್ಯೋಗವನ್ನು ಅವಲಂಬಿಸಿದ್ದಾರೆ. ಇದರ ಬಗ್ಗೆ ಮೌಲ್ಯಮಾಪನವಿಲ್ಲ.

ಸಲಹೆಗಳು

ಈ ರೀತಿ ತರಬೇತಿ ನೀಡಿದ ಸಂಸ್ಥೆಯವರೇ ಶೇಕಡ ೧೦ ರಷ್ಟು ಅಭ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸುವ ಜವಾಬ್ದಾರಿಯನ್ನು ಹೊರಿಸಬೇಕಾಗಿದೆ. ಹಾಗೂ ಸರ್ಕಾರವು ಸಹ ವಿವಿಧ ವೃತ್ತಿಗಳಿಗೆ ನೇಮಕ ಮಾಡುವಾಗ, ಸಮಾಜ ಕಲ್ಯಾಣ ಇಲಾಖೆ ಹಾಗೂ ಗಿರಿಜನ ಕಲ್ಯಾಣ ಇಲಾಖೆ ವತಿಯಿಂದ ತರಬೇತಿ ಪಡೆದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗುತ್ತದೆ.

೭. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ಸರಬರಾಜು

ತಾಂತ್ರಿಕ ಶಿಕ್ಷಣದಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳು ಬಡವರಾಗಿದ್ದರೆ, ಅವರ ವಿದ್ಯಾಭ್ಯಾಸಕ್ಕೆ ಬೇಕಾಗುವ ತಾಂತ್ರಿಕ ಸಲಕರಣೆಗಳನ್ನು ಪೂರೈಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಪದವಿ ಡಿಪ್ಲೊಮಾ ತರಗತಿಯಲ್ಲಿ ಓದುತ್ತಿರುವ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಬೋರ್ಡ್, ಸೈಂಟಿಫಿಕ್ ಕ್ಯಾಲುಕಲೇಟರ್, ತಾಂತ್ರಿಕ ಸಲಕರಣೆಗಳನ್ನು ನೀಡಲಾಗುತ್ತಿದೆ.

ಈ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಆರ್ಥಿಕ ಅನುಮೋದನೆ ಪಡೆದು ನಿಯಮಾನುಸಾರ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರು ಖರೀದಿಸಿ ಸಂಬಂದಪಟ್ಟ ಕಾಲೇಜುಗಳ ಪ್ರಾಂಶುಪಾಲರ ಮೂಲಕ ಸರಬರಾಜು ಮಾಡುವರು.

ಸಲಹೆ

ಈ ಯೋಜನೆ ಅಡಿಯಲ್ಲಿ ತಾಂತ್ರಿಕ ಸಲಕರಣೆಗಳನ್ನು ವಿತರಿಸಲು ಪ್ರತಿಯೊಬ್ಬ ವಿದ್ಯಾರ್ಥಿಗೆ ರೂ.೭೦೦ ಗಳನ್ನು ವ್ಯಯ ಮಾಡಲಾಗುತ್ತಿದೆ. ಇದರಿಂದ ಗುಣಮಟ್ಟದ ಸಲಕರಣೆಗಳನ್ನು ಖರೀದಿಸಲು ಕಷ್ಟವಾಗಿದೆ. ಅದನ್ನು ಸುಧಾರಿಸಲು ಕನಿಷ್ಠ ರೂ. ೧೫೦೦.೦೦ ಕ್ಕೆ ಏರಿಸುವುದು ಸಮಂಜಸವಾಗಿದೆ.

೮. ಪುಸ್ತಕ ಭಂಡಾರ ಸ್ಥಾಪಿಸುವ ಯೋಜನೆ

ಈ ಯೋಜನೆಯ ಅಡಿಯಲ್ಲಿ ವೈದ್ಯಕೀಯ, ತಾಂತ್ರಿಕ, ವೃತ್ತಿಪರ ವಿಷಯಗಳಾದ ಕೃಷಿ, ಪಶುವಿಜ್ಞಾನ, ಪಾಲಿಟೆಕ್ನಿಕ್, ಕಾನೂನು ಮತ್ತು ಎಂ.ಬಿ.ಎ. ಕೋರ್ಸ್‌ಗಳಲ್ಲಿ ಓದುತ್ತಿರುವ ಹಾಗೂ ಆ ಕೋರ್ಸ್‌ಗಳಿಗೆ ನಿಗಧಿಪಡಿಸಿರುವ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಪ್ರಸ್ತುತ ಇರುವ ಗ್ರಂಥಾಲಯಗಳಲ್ಲಿ ಎಲ್ಲಾ ಬಗೆಯ ಪುಸ್ತಕಗಳು ದೊರೆಯುವುದು ಅಸಾಧ್ಯವಾದ್ದರಿಂದ ಆಯಾ ಸರ್ಕಾರಿ, ಅನುದಾನಿತ, ಅಂಗೀಕೃತ ಕಾಲೇಜುಗಳಲ್ಲಿ ಈ ಪುಸ್ತಕ ಭಂಡಾರವನ್ನು ಸ್ಥಾಪಿಸುವುದಕ್ಕಾಗಿ, ಪುಸ್ತಕಗಳನ್ನು ಖರೀದಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ಪೂರೈಸುವ ಯೋಜನೆಯಾಗಿದೆ. ಇಂತಹ ಪುಸ್ತಕಗಳನ್ನು ಕಾಲೇಜುಗಳಲ್ಲಿ ಮೂರು ವರ್ಷಗಳ ಕಾಲ ಪ್ರತ್ಯೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರಾಮರ್ಶನಕ್ಕಾಗಿ ಕಾಯ್ದಿರಿಸಲಾಗುವುದು. ನಂತರ ಸದರಿ ಪುಸ್ತಕಗಳನ್ನು ಸಾಮಾನ್ಯ ವಿಭಾಗಕ್ಕೆ ವರ್ಗಾಯಿಸಿ ಎಲ್ಲಾ ವಿದ್ಯಾರ್ಥಿಗಳ ಉಪಯೋಗಕ್ಕೆ ಅವಕಾಶ ಮಾಡಿಕೊಡಲಾಗುವುದು.

ಇದರಲ್ಲಿ ಮೇಲೆ ತಿಳಿಸಿರುವ ಕೋರ್ಸ್‌ಗಳಲ್ಲಿ ಅಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮಾತ್ರ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ. ಈ ಯೋಜನೆಯ ವೆಚ್ಚವನ್ನು ೫೦ : ೫೦ ಅನುಪಾತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಭರಿಸುತ್ತವೆ. ಈ ಯೋಜನೆಯಡಿಯಲ್ಲಿ ಖರೀದಿಸಿದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು, ವಿದ್ಯಾರ್ಥಿಗಳು ಪುಸ್ತಕಗಳ ಪ್ರಯೋಜನ ಪಡೆದ ನಂತರ ಪುಸ್ತಕ ಭಂಡಾರಕ್ಕೆ ಹಿಂದುರಿಗಿಸಬೇಕಾಗಿದೆ. ಈ ಯೋಜನೆಯ ಪ್ರಕಾರ ಪ್ರತಿ ಇಬ್ಬರು ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ಪುಸ್ತಕ ಖರೀದಿಸಿ ನೀಡುತ್ತಾರೆ. ಈ ಯೋಜನೆಯಡಿಯಲ್ಲಿ ಕೊಳ್ಳುವ ಪುಸ್ತಕಗಳ ಗರಿಷ್ಠ ಮಿತಿ ಈ ಕೆಳಕಂಡಂತಿರುತ್ತದೆ.

೧. ವೈದ್ಯಕೀಯ, ಹೋಮಿಯೋಪಥಿ, ಆಲೋಪತಿ, ಆಯುರ್ವೇದಿಕ್ ತಾಂತ್ರಿಕ ವಿಷಯಗಳು (ಪ್ರತಿ ಸೆಟ್)	ರೂ. ೭೫೦೦.೦೦
೨. ಪಶುವಿಜ್ಞಾನ ವಿಷಯ (ಪ್ರತಿ ಸೆಟ್)	ರೂ. ೭೫೦೦.೦೦
೩. ಕೃಷಿ ವಿಜ್ಞಾನ ವಿಷಯ (ಪ್ರತಿ ಸೆಟ್)	ರೂ. ೪೫೦೦.೦೦
೪. ಕಾನೂನು ಮತ್ತು ಎಂ.ಬಿ.ಎ. (ಪ್ರತಿ ಸೆಟ್)	ರೂ. ೫೦೦೦.೦೦
೫. ವೃತ್ತಿಪರ ವಿಷಯ (ಪ್ರತಿ ಸೆಟ್)	ರೂ. ೨೪೦೦.೦೦

ಈ ಪುಸ್ತಕಗಳನ್ನು ಸುರಕ್ಷಿತವಾಗಿಡಲು ಅಗತ್ಯವಾದ ಕಪಾಟುಗಳನ್ನು ನೀಡಲು ಅವಕಾಶವಿದೆ. ಈ ಯೋಜನೆಯ ಪ್ರಾರಂಭದಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿಷಯಗಳಿಗೆ ಮಾತ್ರ ಪುಸ್ತಕಗಳನ್ನು ಪೂರೈಸುತ್ತಿತ್ತು. ೧೯೯೧-೯೨ ರಿಂದ ಕೃಷಿ, ಪಶುಸಂಗೋಪನೆ, ವೃತ್ತಿಪರ ವಿಷಯಗಳಿಗೂ ಮುಂದುವರಿಸಲಾಯಿತು. ೨೦೦೨-೦೩ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ದೇಶದಲ್ಲಿ ರೂ. ೪.೭೭ ಕೋಟಿಗಳನ್ನು ಖರ್ಚು ಮಾಡಲಾಗಿದೆ. ನಂತರ ೨೦೦೩-೦೪ ಸಾಲಿನಲ್ಲಿ ಈ ಯೋಜನೆಯನ್ನು ಮೆಟ್ರಿಕನಂತರದ ವಿದ್ಯಾರ್ಥಿ ವೇತನದ ಯೋಜನೆಯಲ್ಲಿ ವಿಲೀನಗೊಳಿಸಲಾಗಿದೆ.[೨೫]

ಈ ಯೋಜನೆಯನ್ನು ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಅನುಷ್ಠಾನಗೊಳಿಸುತ್ತಿದ್ದಾರೆ. ಪುಸ್ತಕಗಳನ್ನು ಖರೀದಿಸಲು ಒಂದು ಸಮಿತಿಯು ಸಹ ಇರುತ್ತದೆ. ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿತ ಅನುದಾನಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿರುವ ಕಾಲೇಜುಗಳಿಗೆ ಪುಸ್ತಕಗಳನ್ನು ಖರೀದಿ ಮಾಡಿ ವಿತರಣೆ ಮಾಡುವ ಮೊದಲು, ಜಿಲ್ಲಾ ಪಂಚಾಯತ್‌ನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಿಂದ ಅನುಮತಿ ಪಡೆಯಬೇಕಾಗಿದೆ.

ಬಾಧಕಗಳು

ಈ ಯೋಜನೆಯು ಬಹಳ ಉತ್ತಮವಾದ ಯೋಜನೆಯಾಗಿರುತ್ತದೆ. ಆದರೆ ಇದನ್ನು ಅನುಷ್ಠಾನಗೊಳಿಸಲು ಇರುವ ತೊಂದರೆ ಏನೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಲು ಅನುದಾನ ಬಿಡುಗಡೆಯಾಗುತ್ತಿಲ್ಲ.

ಸಲಹೆಗಳು

ಈ ಯೋಜನೆ ಬಹಳ ಉಪಯುಕ್ತ ಯೋಜನೆಯಾಗಿದೆ. ಇದನ್ನು ಮೆಟ್ರಿಕ್ ನಂತರದ ಎಲ್ಲಾ ಕೋರ್ಸ್‌ಗಳಿಗೆ ವಿಸ್ತರಿಸಿದರೆ ಅನುಕೂಲವಾಗುತ್ತದೆ. ಮೇಲೆ ತಿಳಿಸಿರುವಂತೆ ವಿದ್ಯಾರ್ಥಿಗಳ ಸಂಖ್ಯಾ ಬಲಕ್ಕೆ ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಿ ವಿತರಿಸಿದರೆ, ಈ ಯೋಜನೆ ಪೂರ್ಣ ಫಲಪ್ರದವಾಗುತ್ತದೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸಮರ್ಪಕ ರೀತಿಯಲ್ಲಿ ಪುಸ್ತಕ ವಿತರಣೆಯಾಗುತ್ತಿರುವುದನ್ನು ಪರಿಶೀಲಿಸಿದಲ್ಲಿ, ಈ ಯೋಜನೆಯ ದುರುಪಯೋಗ ಪಡಿಸಿಕೊಳ್ಳುವುದನ್ನು ತಡೆಗಟ್ಟಿದಂತಾಗುತ್ತದೆ.

೯. ಹೆಣ್ಣು ಮಕ್ಕಳ ಸಾಕ್ಷರತಾ ಮಟ್ಟವನ್ನು ಸುಧಾರಿಸಲು ವಿಶೇಷ ರೀತಿಯ ವಿದ್ಯಾರ್ಥಿ ವೇತನವನ್ನು ನೀಡವುದರ ಜೊತೆಗೆ ಕೇಂದ್ರ ಸರ್ಕಾರದ ನೆರವಿನೊಂದಿಗೆ ಶೈಕ್ಷಣಿಕ ಸಂಕೀರ್ಣ (ಎಜುಕೇಷಲನ್ ಕಾಂಪ್ಲೆಕ್ಸ್) ವನ್ನು ಪ್ರಾರಂಭಿಸುವ ಯೋಜನೆ

ಈ ಯೋಜನೆ ಅಡಿಯಲ್ಲಿ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಸಾಕ್ಷರತಾ ಮಟ್ಟವನ್ನು ಸುಧಾರಿಸಲು ಕೇಂದ್ರ ಸರಕಾರವು ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿಯಲ್ಲಿ ದೇಶದ್ಯಾಂತ ೧೮೩ ಎಜುಕೇಷನಲ್ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಪ್ರತಿ ವರ್ಷ ೨೦,೦೦೦ ವಿದ್ಯಾರ್ಥಿನಿಯರು ದಾಖಲಾಗುತ್ತಿದ್ದಾರೆ. ಈ ಶೈಕ್ಷಣಿಕ ಕಾಂಪ್ಲೆಕ್ಸ್‌ಗಳ ಸ್ಥಾಪನೆಯಿಂದ ೯೧೫ ಶಿಕ್ಷಕರಿಗೆ ಹಾಗೂ ಅಷ್ಟೇ ಪ್ರಮಾಣ ಬೋಧಕೇತರ ಸಿಬ್ಬಂದಿಗಳಿಗೆ ಉದ್ಯೋಗಾವಕಾಶ ಒದಗಿಸಿಕೊಡಲಾಗಿದೆ. ರಾಜ್ಯದಲ್ಲಿ ರಾಯಚೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಇಂತಹ ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇಂತಹ ಶಿಕ್ಷಣ ಕೇಂದ್ರಗಳಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಸಹಿತ ಶಿಕ್ಷಣದ ವ್ಯವಸ್ಥೆಯನ್ನು ಮಾಡಲಾಗುವುದು. ಜೊತೆಗೆ ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತಹ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಇದರಿಂದ ಬುಡಕಟ್ಟು ಸಮೂಹವನ್ನು ಸಮಾಜದ ಮುಖ್ಯವಾಹಿನಿಯೊಂದಿಗೆ ಬೆರೆಯುವಂತೆ ಪ್ರೋತ್ಸಾಹ ನೀಡುವುದು. ಈ ಶಾಲೆಗಳಲ್ಲಿ ಪ್ರಾರಂಭಕ್ಕೆ ೧ ರಿಂದ ೫ ರವರೆಗೆ ತರಗತಿಗಳು ಇದ್ದು, ನಂತರ ಮೇಲ್ದರ್ಜೆಗೇರಿಸಿ

ಹನ್ನೆರಡನೇ ತರಗತಿಯವರೆಗೆ ಶಿಕ್ಷಣ ನೀಡಲು ಅವಕಾಶವಿರುತ್ತದೆ. ಪ್ರತಿ ತರಗತಿಯಲ್ಲಿ ೩೦ ಹೆಣ್ಣು ಮಕ್ಕಳಿಗೆ ಅವಕಾಶವಿರುತ್ತದೆ. ಪ್ರತಿ ವಿದ್ಯಾರ್ಥಿಗೆ ಸುಮಾರು ೯,೦೦೦ ರೂಪಾಯಿಗಳ ವರೆಗೆ ಆವರ್ತ ವೆಚ್ಚವನ್ನು ಭರಿಸಲು ಅನುದಾನವನ್ನು ನೀಡಲಾಗುತ್ತಿದೆ. ಈ ಶಾಲೆಗಳಲ್ಲಿ ಕೆಳಕಂಡ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ನೀಡಲಾಗುವುದು.

೧. ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ ೨ ಜೊತೆ ಸಮವಸ್ತ್ರ

೨. ಪಠ್ಯ ಪುಸ್ತಕಗಳು

೩. ಉಚಿತ ಊಟ ಮತ್ತು ವೈದ್ಯಕೀಯ ಸೌಲಭ್ಯ

೪. ಪ್ರತಿ ವಿದ್ಯಾರ್ಥಿಯ ಪೋಷಕರಿಗೆ ರೂ. ೫೦.೦೦ ಗಳಂತೆ ಮಾಹೆಯಾನ ವಿಶೇಷ ಭತ್ಯೆ

೫. ಪ್ರತಿ ವಿದ್ಯಾರ್ಥಿಗಳಿಗೆ ಅನಾವರ್ತ ವೆಚ್ಚಗಳಾದ ಹಾಸಿಗೆ, ಮಂಚ, ಪಾತ್ರೆ ಇತ್ಯಾದಿಗಳಿಗಾಗಿ ೧,೦೦೦ ರೂ. ಗಳವರೆಗೆ ವೆಚ್ಚವನ್ನು ಭರಿಸಲಾಗುವುದು.[೨೪]

೧೦. ಕೇಂದ್ರೀಯ ಮಾದರಿ ವಸತಿ ಶಾಲೆಗಳು

ಭಾರತ ಸಂವಿಧಾನದ ಅನುಚ್ಛೇದ ೨೭೫ (೧) ಅಡಿಯಲ್ಲಿ ೧೯೯೭-೯೮ ಸಾಲಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಕೇಂದ್ರೀಯ ವಸತಿ ಶಾಲೆಗಳು ಮಂಜೂರಾಗಿದ್ದು ೨ ವಸತಿ ಶಾಲೆಗಳನ್ನು ಸ್ಥಾಪಿಸಲು ರೂ. ೨೦೦.೦೦ ಲಕ್ಷ ಗಳು ಮಂಜೂರಾಗಿದೆ. ಪರಿಶಿಷ್ಟ ವರ್ಗದ ಮೀಸಲು ಕ್ಷೇತ್ರದ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ತವಗ ಗ್ರಾಮದಲ್ಲಿ ಮತ್ತು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಈ ವಸತಿ ಶಾಲೆಗಳನ್ನು ೧೯೯೯-೨೦೦೦ನೇ ಸಾಲಿನಲ್ಲಿ ಕಾರ್ಯಾರಂಭಗೊಳಿಸಲಾಗಿದೆ. ಇಂತಹ ಇನ್ನೊಂದು ವಸತಿ ಶಾಲೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ವಸತಿ ಶಾಲೆಗಳಲ್ಲಿ ೫ ರಿಂದ ೧೦ ರವರೆಗೆ ತರಗತಿಗಳು ಇರುತ್ತವೆ. ಈ ಶಾಲೆಗಳನ್ನು ಆಂಧ್ರ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವಂತೆ ಒಂದು ವಸತಿ ಶಾಲೆಗಳ ಸಂಘದ ಮೂಲಕ ನಿರ್ವಹಿಸಲಾಗುವುದು. ಅನಾವರ್ತ ವೆಚ್ಚಗಳಿಗಾಗಿ ಕೇಂದ್ರ ಸರ್ಕಾರವು ಪ್ರತಿ ವಸತಿ ಶಾಲೆಗೆ ರೂ. ೨೫೦ ಕೋಟಿಗಳನ್ನು ಅನುದಾನವಾಗಿ ನೀಡುತ್ತದೆ.[೨೫]

ಸರ್ಕಾರದ ಆದೇಶ ಸಂಖ್ಯೆ. ಸಕಇ. ೫೩೨, ಎಸ್.ಇ.ಡಬ್ಲ್ಯೂ. ೯೬ ಬೆಂಗಳೂರು ದಿನಾಂಕ ೬.೧೦.೧೯೯೯ರ ಪ್ರಕಾರ ಕರ್ನಾಟಕದ ರೆಸಿಡೆನ್ಸಿಯಲ್ ಎಜುಕೇಶನಲ್ ಇನ್ಸಿಟ್ಯೂಷನ್ಸ್ ಸೊಸೈಟಿಯು ಅಸ್ತಿತ್ವಕ್ಕೆ ಬಂದಿದ್ದು ಕೇಂದ್ರ ಯೋಜನೆಯಡಿ ಮಂಜೂರಾಗಿರುವ ೨ ವಸತಿ ಶಾಲೆಗಳ ನಿರ್ವಹಣೆಯನ್ನು ಸದರಿ ಸೊಸೈಟಿಗೆ ವಹಿಸಿಕೊಡಲಾಗಿದೆ.

೧೧. ನವಚೇತನ ಕಾರ್ಯಕ್ರಮಗಳು

೧೯೯೫-೯೬ ನೇ ಸಾಲಿನಲ್ಲಿ ಹಮ್ಮಿಕೊಂಡ ನೂತನ ಯೋಜನೆ 'ನವಚೇತನ' ಇದರಲ್ಲಿ ಮುಖ್ಯವಾಗಿ ಬುಡಕಟ್ಟು ವರ್ಗದ ವಿದ್ಯಾವಂತ ನಿರುದ್ಯೋಗಿ ಯುವ ಜನತೆಗೆ ಸೂಕ್ತ ಉದ್ಯೋಗ ದೊರಕಿಸುವ ಸಲುವಾಗಿ

ಅವರಲ್ಲಿ ವೃತ್ತಿಪರ ಕೌಶಲ್ಯ ಬೆಳೆಸಲು ಉದ್ದೇಶಿಸಲಾಗಿದೆ. ಇಂತಹವರು ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತೆ ಸಾರ್ವಜನಿಕ, ಖಾಸಗಿ ಸಂಸ್ಥೆಗಳಿಗೆ ತರಬೇತಿ ನೀಡಲಾಗುತ್ತದೆ.

ಅರ್ಹತೆ

೧. ಈ ತರಬೇತಿಗೆ ಸೇರಬಯಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಐ.ಟಿ.ಐ., ಡಿಪ್ಲೋಮಾ, ಡಿಗ್ರಿ, ತಾಂತ್ರಿಕ ಪದವಿ ಪಡೆದವರಾಗಿರಬೇಕು.

೨. ೧೮ ವರ್ಷಕ್ಕೆ ಮೇಲ್ಪಟ್ಟ ೩೦ ವರ್ಷದ ಒಳಗಿನ ವಯೋಮಿತಿಯವರು ಅರ್ಜಿ ಸಲ್ಲಿಸಬಹುದು.

೩. ಪರಿಶಿಷ್ಠ ವರ್ಗಕ್ಕೆ ಸೇರಿದವರಾಗಿರಬೇಕು.

೪. ತರಬೇತಿ ಅವಧಿ ೧ ರಿಂದ ೨ ವರ್ಷದ್ದಾಗಿರುತ್ತದೆ.

೧೨. ಸಾಮಾಜಿಕ ಭದ್ರತೆ ಯೋಜನೆ

ಈ ಯೋಜನೆಯ ಅಡಿಯಲ್ಲಿ ೧೯೯೨-೯೩ ರಿಂದ ೧೮ ರಿಂದ ೬೦ ವರ್ಷದ ಎಲ್ಲಾ ಪರಿಶಿಷ್ಠ ಪಂಗಡಕ್ಕೆ ಸೇರಿದ ಅರಣ್ಯ ಕೂಲಿಗಾರರಿಗೆ ಜೀವ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

೧೩. ಅಸ್ಪೃಶ್ಯತೆ ನಿವಾರಣೆ

ದೌರ್ಜನ್ಯಕ್ಕೊಳಗಾದ ಗಿರಿಜನರಿಗೆ ರೂ.೨,೦೦,೦೦೦ ಗಳವರೆಗೂ ನಷ್ಟದ ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಪರಿಹಾರವನ್ನು ನೀಡಲಾಗುತ್ತಿದೆ. ಮೊದಲು ದೌರ್ಜನ್ಯ ಪ್ರಕರಣದಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ಧನ ಶೇ.೨೫ನ್ನು ಪ್ರಕರಣದ ತನಿಖೆ ಮುಗಿದು ದೋಷಾರೋಪಣ ಪಟ್ಟಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿದನಂತರ ನೀಡಲಾಗುತ್ತಿತ್ತು. ಉಳಿದ ಶೇ.೭೫ ರಷ್ಟು ಪರಿಹಾರ ಧನವನ್ನು ಸದರಿ ಪ್ರಕರಣವು ಶಿಕ್ಷೆಯೊಂದಿಗೆ ಮುಕ್ತಾಯವಾದಲ್ಲಿ ಮಾತ್ರ ನೀಡಲಾಗುತ್ತಿತ್ತು. ಆದರೆ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದ್ದ ಕಾರಣ ಸಂತ್ರಸ್ಥರಿಗೆ ಪೂರ್ಣ ಪ್ರಮಾಣ ಪರಿಹಾರ ಸಿಗುತ್ತಿಲ್ಲವೆಂದು ಕರ್ನಾಟಕ ಸರ್ಕಾರ ಮನಗಂಡು ಪರಿಹಾರ ಧನ ನೀಡುವ ಹಿಂದಿನ ಸರ್ಕಾರಿ ಆದೇಶಕ್ಕೆ ತಿದ್ದುಪಡಿ ತಂದಿತು. ಶೇ.೧೦೦ ರಷ್ಟು ಪರಿಹಾರವನ್ನು ದೌರ್ಜನ್ಯ ಪ್ರಕರಣದಲ್ಲಿ ದೋಷಾರೋಪಣ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ ಕೂಡಲೇ ವಿತರಣೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ. ಅವುಗಳ ವಿವರಗಳನ್ನು ಅನುಬಂಧ ೨.೧ ರಲ್ಲಿ ವಿವರಿಸಲಾಗಿದೆ.[೨೬]

೧೪. ಸ್ವಯಂ ಸೇವಾ ಸಂಸ್ಥೆಗಳು

ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಗಿರಿಜನರ ಅಭಿವೃದ್ಧಿಗಾಗಿ ಹಾಕಿಕೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಲ್ಲಿ ಸಹಾಯಧನವನ್ನು ಪಡೆಯುತ್ತಿದೆ. ಅಂತಹ ಸ್ವಯಂ ಸೇವಾ ಸಂಸ್ಥೆಗಳಲ್ಲಿ

೧. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಯಳಂದೂರು ತಾಲೂಕು, ಚಾಮರಾಜನಗರ ಜಿಲ್ಲೆ.

೨. ಸ್ವಾಮಿ ವಿವೇಕಾನಂದ ಯುತ್ ಮೂಮೆಂಟ್ ಸಂಸ್ಥೆ, ಹೆಗ್ಗಡದೇವನಕೋಟೆ ತಾಲೂಕು, ಮೈಸೂರು ಜಿಲ್ಲೆ.

೩. ಸ್ಫೂರ್ತಿ ಗ್ರಾಮೀಣ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, ಉಡುಪಿ ಇವು ಮುಖ್ಯ ಸೇವಾ ಸಂಸ್ಥೆಗಳಾಗಿರುತ್ತವೆ.

೧೫. ಗಿರಿಜನರು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಶೇ.೪೦ ರಷ್ಟು ಸಹಾಯಧನ ಶೇ.೬೦ ರಷ್ಟು ಬ್ಯಾಂಕ್ ಸಾಲ ನೀಡುವುದರ ಮೂಲಕ ಕೈಗಾರಿಕಾ ಶೆಡ್‌ಗಳನ್ನು ಒದಗಿಸುವುದು.

೧೬. ಬುಡಕಟ್ಟು ಕಾಲೋನಿಗಳಿಗೆ ಉಚಿತ ಟಿ.ವಿ.ಗಳನ್ನು ಒದಗಿಸುವುದರ ಮೂಲಕ ಅವರಲ್ಲಿ ಜಾಗೃತಿಯನ್ನು ಮೂಡಿಸುವುದು.

ಆಧಾರಗಳು

೧. Upadaya H.C (Edited)., ***Status of Scheduled Tribes in India*** (New Delhi : Anmol Publication Pvt, Ltd,1999) P.40.

೨. Tripathy S.N., ***Tribals in India - The Changing Scenario*** (New Delhi : Discovery Publishing house,1998) P.2.

೩. ...., P.4.

೪. ಮೈತ್ರಿ.ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೩೨.

೫. Tripathy S.N. ***Tribals in India - The Changing Scenario*** (New Delhi : Discovery Publishing house,1998)

೬. ನಂಜಮ್ಮಣ್ಣಿ ಎಂ., ***ಸಮಾಜ ಶಾಸ್ತ್ರ ಪರಿಚಯ*** (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ,೧೯೭೪) ಪು. ೮೪

೭. Upadaya H.C (Edited)., ***Status of Scheduled Tribes in India*** (New Delhi : Anmol Publication Pvt, Ltd,1999) P.41.

೮. Padhy K.C., ***The Challenges of Tribal development*** (New Delhi : Sarup and Sarup 2000) (Chapter Tribes of India planned and development by Behura. N.K.)

೯. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೨೧.

೧೦. Tripathy S.N. ***Tribals in India, The Changing Scenario*** (New Delhi : Discovery Publishing house,1998) P. 7

೧೧. Padhy K.C., ***The Challenges of Tribal development*** (New Delhi : Sarup and Sarup 2000) (Chapter Tribes of India planned and development by Behura. N.K.)

೧೨. Upadaya H.C (Edited)., ***Status of Scheduled Tribes in India*** (New Delhi : Anmol Publication Pvt, Ltd,1999) P.39, 262.

೧೩. Tripathy S.N. ***Tribals in India, The Changing Scenario,*** (New Delhi : Discovery Publishing house,1998) P.15

೧೪. Upadaya H.C (Edited)., ***Status of Scheduled Tribes in India*** (New Delhi : Anmol Publication Pvt, Ltd,1999) P.40.

೧೫. .... P.231

೧೬. .... P.261.

೧೭ Awadhesh Kumar Singh., ***Dynamics of Tribal Economy*** (New Dehli : Serials Publications, 2003) P.27

೧೮. Chaturbhuj Salu., ***Indian Tribal life*** (New Delhi : Sarup and Sarup, 2001) P.403.

೧೯. Mamoria C.B. ***Social Problems and Disorganisahion In India,*** (: Kitab Mohal) P. 169-208.

೨೦. ಕರ್ನಾಟಕ ಸರ್ಕಾರ, ***ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ*** (೨೦೦೦) ಪು. ೧ ರಿಂದ ೧೪.

೨೧. ***ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ*** ೨೦೦೧-೦೨ ಪು.೧೦೩ ರಿಂದ ೧೦೬.

೨೨. ***India 2004***., (New Delhi : Publication division, Govt of India, 2004) P 698 to 704.

೨೩. ***ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ*** (೨೦೦೩-೦೪)

೨೪. ***India 2004*** (New Delhi : Publication division, Govt of India, 2004) P 701 to 704.

೨೫. ***ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮಾರ್ಗಸೂಚಿ*** (೨೦೦೦) ಪು. ೩೩.

೨೬. **ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಾರ್ಗಸೂಚಿ,** (೨೦೦೦) ಪು. ೩೪.

ಅಧ್ಯಾಯ ೩

ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಪರಿಚಯ

ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಪರಿಚಯ

ಬಳ್ಳಾರಿ ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ತೆಕ್ಕಲಕೋಟೆಯ ಬಳಿಯ ನಿಟ್ಟೂರಿನಲ್ಲಿ ಇತ್ತೀಚಿಗೆ ಅಶೋಕನ ಎರಡು ಶಾಸನಗಳು ಬೆಳಕಿಗೆ ಬಂದಿವೆ. ಶಾತವಾಹನರು ಮೂಲತಃ ಬಳ್ಳಾರಿ ಜಿಲ್ಲೆಗೆ ಸೇರಿದವರೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಬನವಾಸಿಯ ಕದಂಬರು ಈ ಜಿಲ್ಲೆಗಳನ್ನು ಆಳಿದವರು. ಈ ಜಿಲ್ಲೆಯ ಉಚ್ಚಂಗಿದುರ್ಗದವರೆಗಿನ ಪ್ರದೇಶ ಬನವಾಸಿ ೧೨೦೦೦ ಪ್ರಾಂತ್ಯಕ್ಕೆ ಸೇರಿತ್ತೆಂದು ಹೇಳಲಾಗಿದೆ. ಉಚ್ಚಂಗಿದುರ್ಗವು ಕದಂಬರ ಒಂದು ಶಾಖೆಯ ರಾಜಧಾನಿಯಾಗಿತ್ತು. ಮುಂದೆ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಅವರ ಸಾಮಂತರಾಗಿದ್ದ ನೊಳಂಬರು ಮತ್ತು ಗಂಗರ ಅಧೀನದಲ್ಲಿ ಈ ಜಿಲ್ಲೆಯ ಕೆಲವು ಭಾಗಗಳಿದ್ದವು. ಚಾಲುಕ್ಯರ ಕಾಲದಲ್ಲಿ ಕೆಲವು ಕಾಲ ಈ ಜಿಲ್ಲೆಯ ಕಂಪ್ಲಿ ಪ್ರಾಂತೀಯ ರಾಜಧಾನಿಯಾಗಿತ್ತು. ಇದು ಮಹಮದ್ ಭಿನ್ ತೊಗಲಕ್‌ನ ಕಾಲದಲ್ಲಿ ಅಂತಿಮವಾಗಿ ಪತನವಾಯಿತು. ಮುಂದೆ ಸುಮಾರು ಮುನ್ನೂರು ವರ್ಷಗಳ ಕಾಲ ಇಡಿ ದಕ್ಷಿಣ ಭಾರತವನ್ನು ಒಳಗೊಂಡು ಆಳಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ನೆಲೆಗೊಂಡಿದ್ದು ಈ ಜಿಲ್ಲೆಯ ಹಂಪಿಯಲ್ಲಿ. ೧೫೬೫ರ ರಕ್ಕಸತಂಗಡಿ ಕದನದಲ್ಲಿ ವಿಜಯನಗರದ ಅರಸರು ಸೋತಮೇಲೆ ವಿಜಯನಗರ ಹಾಳು ಹಂಪೆಯಾಯಿತು. ಅನಂತರ ಈ ಜಿಲ್ಲೆ ಅದಿಲ್ ಶಾಹಿ ಸುಲ್ತಾನರ ಹಲವು ಪಾಳೆಗಾರರ ಆಳ್ವಿಕೆಗೆ ಒಳಪಟ್ಟಿತ್ತು. ತರುವಾಯ ಮರಾಠರು ಮತ್ತು ಮೊಗಲರು ಇಲ್ಲಿ ಅಧಿಪತ್ಯ ನಡೆಸಿದರು.

೧೭೯೯ರ ಶ್ರೀರಂಗಪಟ್ಟಣದ ಯುದ್ಧದನಂತರದ ಒಪ್ಪಂದದಂತೆ ಬಳ್ಳಾರಿ ಜಿಲ್ಲೆ ಹೈದರಾಬಾದ್ ನಿಜಾಮರ ವಶಕ್ಕೆ ಹೋದರೂ ೧೮೦೦ರಲ್ಲಿ ಮತ್ತೊಂದು ಒಪ್ಪಂದವಾಗಿ ಬಳ್ಳಾರಿ ಜಿಲ್ಲೆ ಈಸ್ಟ್ ಇಂಡಿಯಾ ಕಂಪನಿಯ ವಶಕ್ಕೆ ಬಂದಿತು. ಕಂಪನಿಯ ಸರ್ ಥಾಮಸ್ ಮನ್ರೋರವರನ್ನು ಕಲೆಕ್ಟರ್ ಆಗಿಯೂ ಮತ್ತು ಕ್ಯಾಂಪ್‌ಬೆಲ್‌ರವರನ್ನು ಬಳ್ಳಾರಿಯಲ್ಲಿದ್ದ ಬ್ರಿಟಿಷ್ ಸೈನ್ಯಕ್ಕೆ ಸೈನ್ಯಾಧಿಕಾರಿಯನ್ನಾಗಿ ನೇಮಿಸಿತು. ೧೮೦೦ರಲ್ಲಿ ಮನ್ರೋ ಅಧಿಕಾರವಹಿಸಿಕೊಂಡ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆ ಪಾಳೆಗಾರರ ದಂಗೆಯೂ ತಲೆದೂರಿತ್ತು. ಇದರಲ್ಲಿ ಅನೇಕ ಪಾಳೆಗಾರರು

ಸೈನಿಕ ಸೇವೆಯ ಶರತ್ತಿಗೆ ಒಳಪಟ್ಟು, ನಿಜಾಮ ಅಥವಾ ಹೈದರಾಲಿಗೆ ನೀಡುತ್ತಿದ್ದ ಕಪ್ಪಕ್ಕಿಂತ ಅತ್ಯಂತ ಹೆಚ್ಚಿನ ಕಪ್ಪವನ್ನು ನೀಡಬೇಕೆಂದು ಮನ್ರೋ ವಿಧಿಸಿದ್ದ. ೧೮೦೧ರಲ್ಲಿ ಬಳ್ಳಾರಿಯಲ್ಲಿ ಸೈನಿಕ ಶಾಲೆಯನ್ನು ಸ್ಥಾಪಿಸಿ ಬ್ರೂಸಪೇಟೆ, ಕೌಲ್‌ಬಜಾರ್, ಮೇಲಾರಪೇಟ್ ಪ್ರದೇಶಗಳನ್ನು ಬ್ರಿಟೀಷರ ಕಾಲದಲ್ಲಿ ಅಭಿವೃದ್ಧಿ ಪಡಿಸಿದರು. ೧೮೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಬ್ರಿಟೀಷರು ಅದುಮಿ ಹಾಕಿದರು. ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಅದರ ಪ್ರಭಾವ ಬಳ್ಳಾರಿ ಜಿಲ್ಲೆಯಲ್ಲಿಯೂ ತಲೆದೂರಿತ್ತು. ಬಳ್ಳಾರಿ ಜಿಲ್ಲೆ ಬ್ರಿಟೀಷರ ಆಡಳಿತದಲ್ಲಿ ಮದರಾಸ್ ಪ್ರಾಂತ್ಯಕ್ಕೆ ಸೇರಿತ್ತು. ೧೯೫೩ರಲ್ಲಿ ಆಂಧ್ರಪ್ರದೇಶ ರಾಜ್ಯ ಸ್ಥಾಪನೆಯಾದಾಗ ಅಂದಿನ ಬಳ್ಳಾರಿ ಜಿಲ್ಲೆ ಮೈಸೂರು ಸಂಸ್ಥಾನಕ್ಕೆ ಸೇರಿತ್ತು. ಆ ಭಾಗವೇ ಇಂದು ಕರ್ನಾಟಕ ರಾಜ್ಯದಲ್ಲಿರುವ ಬಳ್ಳಾರಿ ಜಿಲ್ಲೆ (ಭೂಪಟ೩.೧).[೧]

ಶಿವ ಅಥವಾ ಮಲ್ಲೇಶ ತನ್ನ ಭಕ್ತನಿಗೆ ಇಲ್ಲಿ ಬಳ್ಳಿಯಲ್ಲಿಕಾಣಿಸಿಕೊಂಡಿದ್ದರಿಂದ ಬಳ್ಳಾರಿ ಎಂಬ ಹೆಸರು ಬಂದಿತು. ಬಳ್ಳಾರಿಯಲ್ಲಿರುವ ದುರ್ಗಮ್ಮ ದೇವತೆಯನ್ನು 'ಬಳ್ಳಾರಿ' ಎಂದು ಕರೆಯುತ್ತಿದ್ದರಿಂದ ಊರಿಗೆ ಬಳ್ಳಾರಿ ಎಂಬ ಹೆಸರಾಯಿತು. ಬಳ ಎಂಬ ರಾಕ್ಷಸನನ್ನು ಇಂದ್ರನು ಕೊಂದ ಸ್ಥಳ ಬಳ್ಳಾರಿಯೆಂದು ಸ್ಥಳದ ಇತಿಹಾಸವಿದೆ. ೧೨ನೇ ಶತಮಾನದ ಹೊಯ್ಸಳರ ಶಾಸನಗಳಿಂದ ಈ ಸ್ಥಳಕ್ಕೆ ಬಳ್ಳಾರೆ ಎಂದು ಹೆಸರಿದ್ದುದು ತಿಳಿಮುಬರುತ್ತದೆ. ಜಿಲ್ಲೆ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರವಾಗಿರುವ ಬಳ್ಳಾರಿ, ಬೆಂಗಳೂರು ರಾಯಚೂರು ಹೆದ್ದಾರಿಯಲ್ಲಿ ಬೆಂಗಳೂರಿನಿಂದ ಉತ್ತರಕ್ಕೆ ೩೦೪ ಕಿ.ಮೀ. ದೂರದಲ್ಲಿದೆ. ಗುಂತಕಲ್ಲು, ಹುಬ್ಬಳ್ಳಿ ರೈಲುಮಾರ್ಗ ಈ ಪಟ್ಟಣದ ಮೂಲಕ ಆಯ್ದು ಹೋಗುತ್ತದೆ.

ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯದಲ್ಲಿದ್ದು ಪೂರ್ವ ಭಾಗದ ಮಧ್ಯದಲ್ಲಿ ದಕ್ಷಿಣೋತ್ತರದವರೆಗೆ ಹಬ್ಬಿದೆ. ೧೪^0-೩೦^0 ಮತ್ತು ೧೫^0-೫೦^0 ಉತ್ತರ ಅಕ್ಷಾಂಶ ಹಾಗೂ ೭೫^0-೪೦^0 ಮತ್ತು ೭೭^0-೧೧^0 ಪೂರ್ವ ರೇಖಾಂಶ ಇವುಗಳ ಮಧ್ಯದಲ್ಲಿದೆ. ಜಿಲ್ಲೆಯ ಉತ್ತರದಲ್ಲಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು, ಪಶ್ಚಿಮಕ್ಕೆ ಗದಗ, ಹಾವೇರಿ ಜಿಲ್ಲೆಗಳು, ದಕ್ಷಿಣದಲ್ಲಿ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳು ಹಾಗೂ ಪೂರ್ವದಲ್ಲಿ ಆಂಧ್ರ ಪ್ರದೇಶದ ಕರ್ನೂಲು ಮತ್ತು ಅನಂತರಪುರ ಜಿಲ್ಲೆಗಳಿಂದ ಸುತ್ತುವರೆದಿದೆ.

ಜಿಲ್ಲೆಯ ಪಶ್ಚಿಮ ವಾಯುವ್ಯ ಉತ್ತರ ಮತ್ತು ಈಶಾನ್ಯದಲ್ಲಿ ಗಡಿಯಾಗಿ ಹರಿಯುವ ತುಂಗಭದ್ರಾ ನದಿ ಈ ಜಿಲ್ಲೆಯನ್ನು ಪಶ್ಚಿಮದಲ್ಲಿ ಗದಗ ಹಾವೇರಿ ಜಿಲ್ಲೆಗಳಿಂದಲೂ, ಉತ್ತರದಲ್ಲಿ ರಾಯಚೂರು, ಕೊಪ್ಪಳ ಜಿಲ್ಲೆಗಳಿಂದಲೂ ಬೇರ್ಪಡಿಸುತ್ತವೆ. ಈ ಜಿಲ್ಲೆಯ ಹೆಚ್ಚು ಭಾಗ ತುಂಗಭದ್ರಾ ನದಿಯ ಕಡೆಗೆ ಉತ್ತರಕ್ಕೆ ಇಳಿಜಾರಾಗಿದೆ. ಜಿಲ್ಲೆಯ ವಾಯುವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವ ಪಶ್ಚಿಮವಾಗಿ ಎರಡು ಮುಖ್ಯ ಭೌಗೋಳಿಕ ವಿಭಾಗಗಳನ್ನಾಗಿ ವಿಂಗಡಿಸಿವೆ. ಪೂರ್ವ ಭಾಗ ಬಳ್ಳಾರಿ ಮತ್ತು ಸಿರುಗುಪ್ಪ ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶ ಸಮತಟ್ಟಾಗಿದ್ದು ಬಹುತೇಕ ಮರಗಿಡಗಳಿಲ್ಲದೆ ಹತ್ತಿ ಬೆಳೆಯಲು ಸೂಕ್ತವಾಗಿರುವ ಕಪ್ಪುಮಣ್ಣನ್ನು ಹೊಂದಿರುವ ಪ್ರದೇಶಗಳಾಗಿವೆ. ಈ ಜಿಲ್ಲೆಯ ೭ ತಾಲ್ಲೂಕುಗಳಲ್ಲಿರುವ ಮಣ್ಣಿನ ನಮೂನೆಗಳು ಈ ಕೆಳಕಂಡಂತೆ ಇರುತ್ತದೆ. ಜಿಲ್ಲೆಯಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನ ನಮೂನೆಗಳಿವೆ. ಬಳ್ಳಾರಿ ತಾಲ್ಲೂಕು ಒಂದರಲ್ಲೇ

ಕಪ್ಪು ಮಣ್ಣಿನ ಪ್ರದೇಶ ಹೆಚ್ಚಾಗಿದೆ. ಕಪ್ಪು ಮಣ್ಣು ಮೂಲದಲ್ಲಿ ಫಲವತ್ತಾಗಿದ್ದು, ಹೆಚ್ಚಿನ ನೀರಿನ ಅಂಶವನ್ನು ಹಿಡಿದುಕೊಳ್ಳುವ ಗುಣವನ್ನು ಹೊಂದಿದೆ. ಈ ಕಪ್ಪು ಮಣ್ಣು ಶೇ.೬೨ ರಷ್ಟು ಜೇಡಿ ಮಣ್ಣಿನಿಂದ ಕೂಡಿರುತ್ತದೆ. ಹೊಸಪೇಟೆ, ಹಡಗಲಿ, ಕೂಡ್ಲಿಗಿ ಮತ್ತು ಸಂಡೂರು ತಾಲ್ಲೂಕುಗಳಲ್ಲಿ ಉಸುಕು ಮಿಶ್ರಿತ ಕೆಂಪು ಮಣ್ಣು ಮತ್ತು ಜಿಗಿಟು ಮಣ್ಣುಗಳು ದೊರೆಯುತ್ತವೆ. ತುಂಗಭದ್ರಾ ಜಲಾಶಯದಲ್ಲಿನ ಕಪ್ಪು ಮಣ್ಣಿನಲ್ಲಿ ೨ ರಿಂದ ೪ ಅಡಿಗಳವರೆಗೆ ಆಳವಾಗಿಯೂ ಮತ್ತು ಮಣ್ಣಿನ ರಚನೆಯಲ್ಲಿ ಭಾರವಾಗಿಯೂ ಹಾಗೂ ಶೇ. ೪೫ ರಿಂದ ೫೫ ರಷ್ಟು ಜಿಗಿಟು ಮಣ್ಣಿನಿಂದ ಕೂಡಿರುತ್ತದೆ. ಭೂಗರ್ಭದಲ್ಲಿ ನೀರು ೬.೫ ಮೀ. ನಿಂದ ೩೫ ಮೀ ಗಳವರೆಗೆ ಇರುತ್ತದೆ. ಅಲ್ಲಲ್ಲಿ ಕಲ್ಲು ಬೆಟ್ಟಗಳು ಕಂಡುಬರುತ್ತವೆ. ಪಶ್ಚಿಮದಲ್ಲಿ ಕಪ್ಪುಮಣ್ಣಿನ ಬಯಲು ಮತ್ತು ಹೆಚ್ಚು ಭಾಗದಲ್ಲಿ ಕೆಂಪು ಮಣ್ಣಿನ ಪ್ರದೇಶಗಳು ಇವೆ. ಪಶ್ಚಿಮ ಭಾಗ ಪೂರ್ವ ಭಾಗಕ್ಕಿಂತ ಹೆಚ್ಚು ಎತ್ತರವಾಗಿದ್ದು ಮಳೆಯು ಅಧಿಕವಾಗಿದೆ.

ಈ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳದಿರುವ ಪ್ರಯುಕ್ತ ದಟ್ಟ ಆರಣ್ಯಗಳಲ್ಲಿ ಸಂಡೂರು ತಾಲ್ಲೂಕಿನ ಪ್ರದೇಶಗಳನ್ನು ಬಿಟ್ಟರೆ ಉಳಿದ ಪ್ರದೇಶಗಳಲ್ಲಿ ಗಿಡಮರಗಳು ವಿರಳವೆಂದೇ ಹೇಳಬಹುದು. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ ವಿಸ್ತೀರ್ಣ ೯೭೦೧೬ ಚ.ಕಿ.ಮೀ.ಗಳಿದ್ದು, ಜಿಲ್ಲೆಯ ಒಟ್ಟು ವಿಸ್ತೀರ್ಣದ ಶೇ.೧೬ ರಷ್ಟಾಇದೆ. ಇದರಲ್ಲಿ ಸ್ವಲ್ಪ ಭಾಗ ಎಲೆಉದುರುವ ಕಾಡಿನಿಂದಲೂ ಉಳಿದ ಹೆಚ್ಚು ಭಾಗ ಕುರುಚಲು ಕಾಡಿನಿಂದಲೂ ಕೂಡಿದೆ. ಇಲ್ಲಿಯ ಅರಣ್ಯಗಳಲ್ಲಿ ಜೇನು, ದಿಂಡಿಗದ ಅಂಟು ದೊರೆಯುವುದುಂಟು. ಇಲ್ಲಿಯ ಅರಣ್ಯಗಳಲ್ಲಿ ಕಡವೆ, ಜಿಂಕೆ, ಕರಡಿ, ಕಾಡು ಹಂದಿ, ಚಿರತೆ, ಕಿರುಬ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತದೆ. ತುಂಗಭದ್ರಾ ನದಿಯಲ್ಲಿ ಮೊಸಳೆಗಳೂ ಉಂಟು. ನವಿಲು, ಪಾರಿವಾಳ, ಕೊಕ್ಕರೆ, ಗಿಳಿ, ಗಿಡುಗ, ಹದ್ದು, ಮೊದಲಾದ ಪಕ್ಷಿಗಳು ಇವೆ.

ಈ ಜಿಲ್ಲೆಯಲ್ಲಿ ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಸೀಸದ ಅದಿರುಗಳು, ಜಿಪ್ಸಮ್, ಮ್ಯಾಗ್ನಸೈಟ್, ಗಾರ್ನೆಟ್ ಮತ್ತು ಬೆಣಚುಕಲ್ಲು ಮೊದಲಾದ ಭೂಗರ್ಭ ಸಂಪನ್ಮೂಲಗಳಿವೆ. ಜಿಲ್ಲೆಯ ಹವಾಮಾನವು ವರ್ಷದಲ್ಲಿ ಹೆಚ್ಚಿನ ಭಾಗ ಶುಷ್ಕವಾಗಿದ್ದು, ಬೇಸಿಗೆಯು ಉಷ್ಣಾಂಶಗಳಿಂದ ಕೂಡಿರುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿಯವರೆಗೆ ವಾತಾವರಣ ತಂಪಾಗಿರುತ್ತದೆ. ಚಳಿಗಾಲದಲ್ಲಿ ಕನಿಷ್ಠ ಉಷ್ಣಾಂಶವು ೯ರಿಂದ ೧೦ ಸೆಂ. ಇದ್ದು, ಗರಿಷ್ಠ ಉಷ್ಣಾಂಶವು ೪೫ ವರೆಗೆ ಇರುತ್ತದೆ. ಬೇಸಿಗೆ ಕಾಲವು ಮಾರ್ಚ್‌ನಿಂದ ಮೇ ವರೆಗೆ ಇದ್ದು ರಾಜ್ಯದಲ್ಲಿಯೇ ಹೆಚ್ಚು ಉಷ್ಣಾಂಶತೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಕನಿಷ್ಠ ೧೫ ಸೆಂ. ನಿಂದ ಗರಿಷ್ಠ ೪೫ ಸೆಂ. ವರೆಗೆ ಉಷ್ಣಾಂಶವು ಇರುತ್ತದೆ. ಈ ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ಮಳೆ ೨೮೦೮.೨ ಮೀ.ಮೀ ಇದ್ದು ಮಳೆ ಸಮಪ್ರಮಾಣದಲ್ಲಿ ಬೀಳುವುದಿಲ್ಲ. ಈ ಜಿಲ್ಲೆಯ ಮಳೆಯ ಪ್ರಮಾಣವನ್ನು ಕೋಷ್ಟಕ ಒಂದರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೩.೧

ಬಳ್ಳಾರಿ ಜಿಲ್ಲೆಯ ವಾಡಿಕೆ ಮಳೆ, ವಾಸ್ತವಿಕ ಮತ್ತು ಮಳೆಯ ದಿನಗಳ ವಿವರ

ಕ್ರ.ಸಂ	ತಾಲ್ಲೂಕು	ವಾಡಿಕೆ ಮಳೆ ಮಿ.ಮಿ.ಗಳಲ್ಲಿ	ವಾಸ್ತವಿಕ ಮಳೆ ಮಿ.ಮಿ.ಗಳಲ್ಲಿ	ಮಳೆಯಾದ ದಿನಗಳು ಸರಾಸರಿ
೧.	ಬಳ್ಳಾರಿ	೫೨೫.೪	೩೮೬.೫	೩೦
೨.	ಹಗರಿಬೊಮ್ಮನಹಳ್ಳಿ	೫೫೪.೫	೩೨೭.೯	೨೪
೩.	ಹಡಗಲಿ	೬೧೫.೫	೩೫೨.೧	೨೯
೪.	ಹೊಸಪೇಟೆ	೬೫೮.೩	೩೯೮.೬	೩೧
೫.	ಕೂಡ್ಲಿಗಿ	೬೨೫.೩	೩೦೨.೫	೨೯
೬.	ಸಂಡೂರು	೮೦೬.೮	೭೩೩.೩	೩೮
೭.	ಸಿರುಗುಪ್ಪ	೬೪೫.೦	೩೦೭.೩	೨೬
	ಒಟ್ಟು	೪೪೩೩.೮	೨೮೦೮.೨	೨೦೭

(ಕೃಪೆ : ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೨-೦೩)

ಬಳ್ಳಾರಿ ಜಿಲ್ಲೆಯು ವ್ಯವಸಾಯ ಪ್ರಧಾನವಾದರೂ ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಸ್ಥಾನಗಳಿಸಿದೆ. ಜಿಲ್ಲೆಯಲ್ಲಿ ೨೮೨ ಕಾರ್ಖಾನೆಗಳಿದ್ದು ೧೭,೧೩೦ ಉದ್ಯೋಗಿಗಳಿರುತ್ತಾರೆ. ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ಕೇಂದ್ರ ಸರ್ಕಾರದಿಂದ ಯೋಜಿತವಾಗಿರುವ ವಿಜಯನಗರ ಉಕ್ಕಿನಕಾರ್ಖಾನೆ ಜಿಲ್ಲೆಯ ಭಾರಿ ಉದ್ಯಮ.

ಜಿಲ್ಲೆಯ ಆದಾಯ

ಜಿಲ್ಲೆಯ ಆದಾಯ ನಿವ್ವಳ ೨೦೦೧-೦೨ ನೇ ಸಾಲಿಗೆ ಚಾಲ್ತಿ ಬೆಲೆಗಳಲ್ಲಿ ವಿವಿಧ ಬಾಬ್ತುಗಳಿಂದ ಅಂದರೆ, ಕೃಷಿ ಮತ್ತು ಪಶುಸಂಗೋಪನೆಯಿಂದ ರೂ.೧೧೧೮೧೪ ಲಕ್ಷ ರೂ ಅರಣ್ಯವು ಮತ್ತು ಮರಗೆಲಸದಿಂದ ೫೪೨೫ ಲಕ್ಷ ರೂ. ಮೀನುಗಾರಿಕೆಯಿಂದ ೨೭೩೧ ಲಕ್ಷ ರೂ ಗಣಿ ಮತ್ತು ಕಲ್ಲು ಅಗೆತದಿಂದ ೧೩೨೮೧ ಲಕ್ಷರೂ.ಪ್ರಾಥಮಿಕ ವಲಯದಿಂದ ೧೨೩೨೩೩ ಲಕ್ಷ ರೂ ತಯಾರಿಕೆಯಿಂದ ೫೨೪೩೭ ಲಕ್ಷ ರೂ. ನಿರ್ಮಾಣ ಕಾರ್ಯದಿಂದ ೨೯೪೧ ಲಕ್ಷ ರೂ. ವಿದ್ಯುತ್ ಶಕ್ತಿ ಅನಿಲ ಮತ್ತು ನೀರು ಸರಬರಾಜಿನಿಂದ ೧೧೩೨೨ ಲಕ್ಷ ರೂ. ದ್ವಿತೀಯ ವಲಯದಿಂದ ೮೬೭೦೦ ಲಕ್ಷ ರೂ. ರೈಲ್ವೆಯಿಂದ ೨೬೪೫ ಲಕ್ಷ ರೂ. ಇತರೆ ರೀತಿಯ ಸಾರಿಗೆಯಿಂದ ೧೩೪೬೩ ಲಕ್ಷ ರೂ. ದಾಸ್ತಾನುಗಳಿಂದ ೧೬೨ ಲಕ್ಷ ರೂ. ಸಂಪರ್ಕದಿಂದ ೭೦೧೬ ಲಕ್ಷ ರೂ. ವ್ಯಾಪಾರ ವಸತಿ ಮತ್ತು ಉಪಹಾರ ಗೃಹಗಳಿಂದ ೪೨೭೧೫ ಲಕ್ಷ ರೂ. ಬ್ಯಾಂಕಿಂಗ್ ಮತ್ತು ವಿಮೆಯಿಂದ ೧೩೩೪೮ ಲಕ್ಷ ರೂ. ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯಾಪಾರ ಸೇವೆಗಳಿಂದ ಒಡೆತನ ಸೇವೆಗಳಿಂದ ೨೪೩೬೪ ಲಕ್ಷ ರೂ. ಸಾರ್ವಜನಿಕ ಆಡಳಿತದಿಂದ ೧೧೪೭೬ ಲಕ್ಷ. ರೂ. ಇತರೆ ಸೇವೆಗಳಿಂದ ೪೦೪೨೮ ಲಕ್ಷ ರೂ. ತೃತೀಯ ವಲಯಗಳಿಂದ ೧೫೫೬೧೬ ಲಕ್ಷ ರೂ. ಒಟ್ಟು ಆಂತರಿಕ ಉತ್ಪನ್ನಗಳಿಂದ

ಜಿಲ್ಲೆಯ ಆದಾಯ ೩೬೫೫೪೯ ಲಕ್ಷ ರೂ ಗಳಾಗಿದ್ದು ತಲಾ ಆದಾಯ ೧೮,೧೪೫ ರೂ. ಗಳೆಂದು ಅಂದಾಜು ಮಾಡಲಾಗಿದೆ.

ರಾಜ್ಯದ ಒಟ್ಟು ಆದಾಯ ೧,೦೪,೮೧,೪೮೯ ಲಕ್ಷ ರೂ. ಗಳಲ್ಲಿ ಜಿಲ್ಲೆಯ ಆದಾಯ ೩,೬೫,೫೪೯ ಲಕ್ಷ ರೂ. ಗಳಾಗಿದ್ದು ರಾಜ್ಯದ ಒಟ್ಟು ಆದಾಯಕ್ಕೆ ಹೋಲಿಸಿದರೆ ಶೇ.೩.೬೫ ರಷ್ಟಾಗಿರುತ್ತದೆ. ಜಿಲ್ಲೆಯ ತಲಾ ಆದಾಯ ೧೮,೧೪೫ ರೂ. ಗಳಿರುತ್ತವೆ. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಆದಾಯದಲ್ಲಿ ೫ನೇ ಸ್ಥಾನದಲ್ಲಿದೆ.

ಬಳ್ಳಾರಿ ಜಿಲ್ಲೆಯು ೮,೪೨೦ ಚದರ ಕಿ.ಲೋ ಮೀಟರ್ ವಿಸ್ತೀರ್ಣ ಹೊಂದಿದ್ದು, ರಾಜ್ಯದ ಒಟ್ಟು ಶೇಕಡ ೬ ರಷ್ಟು ವಿಸ್ತೀರ್ಣವನ್ನು ಹೊಂದಿದ್ದು, ೧೧ನೇ ಸ್ಥಾನದಲ್ಲಿದೆ. ಬಳ್ಳಾರಿಯಲ್ಲಿ ೭ ತಾಲೂಕುಗಳು ಇದ್ದು, ಬಳ್ಳಾರಿ, ಕೂಡ್ಲಿಗಿ, ಸಂಡೂರು, ಸಿರುಗುಪ್ಪ, ಹಗರಿಬೊಮ್ಮನಹಳ್ಳಿ, ಹಡಗಲಿ ಮತ್ತು ಹೊಸಪೇಟೆ,. ೨ ನಗರ ಸಭೆ, ೧ ಪುರಸಭೆ ೭ಪಟ್ಟಣ ಪಂಚಾಯತಿಗಳು, ೨೭ ಹೋಬಳಿಗಳು, ೧೮೯ ಗ್ರಾಮಪಂಚಾಯತಿಗಳು, ೫೨೪ ಜನವಸತಿ ಗ್ರಾಮಗಳು, ೩೦ ಜನವಸತಿ ಇಲ್ಲದ ಗ್ರಾಮಗಳನ್ನು ಹೊಂದಿದೆ. ಇವುಗಳ ವಿವರವನ್ನು ಕೋಷ್ಟಕ ೩.೨ ರಲ್ಲಿ ವಿವರಿಸಲಾಗಿದೆ. ಹಾಗೂ ೭ ತಾಲ್ಲೂಕುಗಳನ್ನೊಳಗೊಂಡ ಬಳ್ಳಾರಿ ಜಿಲ್ಲೆಯ ಭೂಪುಟವನ್ನು ೩.೨ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೩.೨

ಬಳ್ಳಾರಿ ಜಿಲ್ಲೆಯ ಸಾಮಾನ್ಯ ವಿವರಗಳು

ಕ್ರ.ಸಂ.	ತಾಲೂಕು	ಹೋಬಳಿ	ಗ್ರಾಮಗಳು ಜನರಿರುವ	ಗ್ರಾಮಗಳು ಜನರಿಲ್ಲದ	ನಗರಸಭೆ	ಪುರಸಭೆ ಘೋಷಿತ	ಪಟ್ಟಣ ಪಂಚಾಯತಿ	ಗ್ರಾಮ ಪಂಚಾಯತಿ
೧	ಬಳ್ಳಾರಿ	೫	೧೦೦	೪	೧	೦	೦	೪೦
೨.	ಹಗರಿಬೊಮ್ಮನಹಳ್ಳಿ	೪	೫೪	೪	೦	೦	೦	೨೨
೩.	ಹಡಗಲಿ	೩	೫೪	೧	೦	೦	೧	೨೪
೪.	ಹೊಸಪೇಟೆ	೪	೭೧	೪೧೧	೧	೧	೧	೨೩
೫.	ಕೂಡಿಗ್ಲಿ	೪	೮೪	೨	೦	೦	೨	೩೩
೬.	ಸಂಡೂರು	೩	೭೭	೧೨	೦	೦	೧	೨೧
೭.	ಸಿರುಗುಪ್ಪ	೪	೮೪	೩	೦	೦	೨	೨೬
	ಒಟ್ಟು	೨೭	೫೨೪	೩೦	೨	೧	೭	೧೮೯

(ಕೃಪೆ : ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೨-೦೩)

೨೦೦೧ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು ೩೪,೬೩,೯೮೬ ಪರಿಶಿಷ್ಟ ವರ್ಗದವರಿದ್ದು, ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೬.೫೫ ರಷ್ಟಾಗುವರು. ೧೯೯೧ರ ನಂತರ ನಾಯ್ಕ, ಬೇಡ, ವಾಲ್ಮೀಕಿ ಪಂಗಡಗಳ ಸೇರ್ಪಡೆಯಿಂದ

ಬುಡಕಟ್ಟು ಜನರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಕಂಡುಬಂದಿದೆ.[೨]

೨೦೦೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೨೭ ಜಿಲ್ಲೆಗಳು ೧೭೫ ತಾಲೂಕುಗಳು ೨೭೦೨೪ ಗ್ರಾಮಗಳನ್ನು ಹೊಂದಿ, ೫,೨೮,೫೦,೫೬೨ ಜನಸಂಖ್ಯೆಯನ್ನು ಹೊಂದಿದೆ. ಅವುಗಳಲ್ಲಿ ಪ್ರತಿ ಜಿಲ್ಲೆಯಲ್ಲಿರುವ ಪರಿಶಿಷ್ಟ ವರ್ಗಗಳ ಜನಸಂಖ್ಯೆಯ ವಿವರವನ್ನು ಅನುಬಂಧ ೩.೧ ರಲ್ಲಿ ವಿವರಿಸಲಾಗಿದೆ.

ಬಳ್ಳಾರಿ ಜಿಲ್ಲೆ ೨೦,೨೭,೧೪೦ ಜನರನ್ನು ಹೊಂದಿದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ೩೪,೬೩,೯೮೬ ಗಿರಿಜನರು ಇದ್ದಾರೆ. ಆ ಪೈಕಿ ಬಳ್ಳಾರಿ ಜಿಲ್ಲೆಯೂ ೩,೬೪,೬೩೮ ಜನರನ್ನು ಹೊಂದಿದೆ. ಇದು ಜಿಲ್ಲೆಯಲ್ಲಿ ಒಟ್ಟು ಜನ ಸಂಖ್ಯೆಯ ಶೇಕಡ ೧೮ ರಷ್ಟು ಬುಡಕಟ್ಟು ಜನರು ವಾಸವಾಗಿರುವುದು ಹಾಗೂ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಬುಡಕಟ್ಟು ಜನರನ್ನು ಹೊಂದಿರುವ ಜಿಲ್ಲೆಯಾಗಿರುವುದು ೨೦೦೧ರ ಜಗಣತಿಯ ವರದಿಯಲ್ಲಿ ದಾಖಲಾಗಿದೆ. ಇದನ್ನು ಅನುಬಂಧ ೩.೨ ಮತ್ತು ೩.೨ (ಅ), ಅನುಬಂಧ ೩.೨ (ಆ) ಹಾಗೂ ಅನುಬಂಧ ೩.೨ (ಇ) ರಲ್ಲಿ ತೋರಿಸಲಾಗಿದೆ. ಕರ್ನಾಟಕದಲ್ಲಿರುವ ಅಡವಿಗೊಲ್ಲ, ಹಾಲಕ್ಕಿ ಒಕ್ಕಲಿಗ, ಕವಲೆತ್ತಿನವರಂತಹ ಹಲವಾರು ಪಂಗಡಗಳು ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದರೂ ಈ ಪಟ್ಟಿಯಲ್ಲಿ ಸೇರಿರುವುದಿಲ್ಲ. ಇದಲ್ಲದೆ, ಕಿನ್ನರ ಜೋಗಿ, ಲಾಳಗೊಂಡ ಹಲವಾರು ಸ್ವತಂತ್ರ ಪಂಗಡಗಳು ಯಾವುದೇ ಮೀಸಲಾತಿ ಪಟ್ಟಿಯಲ್ಲಿ ದಾಖಲಾಗದೇ ಇರುವುದು ವಿಪರ್ಯಾಸ. ಕರ್ನಾಟಕದ ಘೋಷಿತ ಬುಡಕಟ್ಟು ಸಮುದಾಯಗಳಲ್ಲಿ ಹಲವು ಅಲೆಮಾರಿತನ, ಅರೆ ಅಲೆಮಾರಿತನ ಮುಂದುವರೆಸುತ್ತಿದ್ದರೆ, ಇನ್ನು ಕೆಲವು ಬೇಟೆ, ಪಶುಪಾಲನೆ, ಕೃಷಿ ಮತ್ತು ಕೃಷಿ ಕೂಲಿಗಳನ್ನು ಅವಲಂಬಿಸಿವೆ. ಶ್ರಮ ವಿಭಜನೆಯ ಆಧಾರದ ಮೇಲೆ ಜಾತಿಗಳು ಹುಟ್ಟುವ ಮೊದಲು ಅವರೆಲ್ಲರದು ಒಂದೇ ಬುಡಕಟ್ಟು.

ಹಿಂದೆ ಬಹು ಸಂಖ್ಯಾತ ಬುಡಕಟ್ಟುಗಳು ಆಹಾರ ಸಂಗ್ರಹಣೆ ಹಾಗೂ ಬೇಟೆಯನ್ನು ಅವಲಂಬಿಸಿದ್ದವು. ಈ ಮೂಲದ ಬುಡಕಟ್ಟುಗಳು ಮೂಲತಃ ಅಲೆಮಾರಿ ಬುಡಕಟ್ಟುಗಳಾಗಿದ್ದವು. ಇಂದಿಗೂ ಕಾಡು ಕುರುಬರು, ಜೇನು ಕುರುಬರು, ಸೋಲಿಗರು,ರಾಜಗೊಂಡ, ಚಂಚು, ಬೆಂಚುವಾರ್, ಅಡ್ವಿ ಚೆಂಚರ್, ಹಕ್ಕಿ ಪಿಕ್ಕಿ ಇತ್ಯಾದಿ ಬುಡಕಟ್ಟು ಈ ಕಾಯಕಗಳನ್ನು ಮುಂದುವರಿಸಿ ಅಲೆಮಾರಿ ಜೀವನವನ್ನು ನಡೆಸುತ್ತಿವೆ.

ಬೇಟೆ ತಡೆಯ ಕಾನೂನುಗಳು, ಕರ್ನಾಟಕ ಪ್ರಾಣಿಬಲಿ ತಡೆ ಅಧಿನಿಯಮ, ಮರಗಳ ಸಂರಕ್ಷಣಾ ಅಧಿನಿಯಮ ಇತ್ಯಾದಿ ಕಾಯ್ದೆಗಳಿವೆ. ಆ ಕಾಯ್ದೆಗಳ ವಿವರ ಕೆಳಕಂಡಂತಿದೆ.

೧. ೧೯೫೯ ರ ಕರ್ನಾಟಕ ಪ್ರಾಣಿಬಲಿ ಪ್ರತಿಬಂಧಕ ಅಧಿನಿಯಮ

೨. ೧೯೬೩ ಮತ್ತು ೧೯೭೮ರ ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ

೩. ೧೯೭೨ರ ವನ್ಯಜೀವಿ ಸಂರಕ್ಷಣಾ ಅಧಿನಿಯಮ

೪. ೧೯೭೬ರ ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ

೫. ೧೯೭೬ರ ಕರ್ನಾಟಕ ಅರಣ್ಯ ಅಧಿನಿಯಮಗಳು

೬. ೧೯೮೭ರ ಭಾರತ ಮೀನುಗಾರಿಕೆ ಅಧಿನಿಯಮಗಳು ಅರಣ್ಯ ಮತ್ತು ವನ್ಯ ಜೀವಿಗಳ ರಕ್ಷಣೆಗೆ ಅವಕಾಶವನ್ನು ಕಲ್ಪಿಸಿ ಅದರ ಬೇಟೆಯನ್ನು ನಂಬಿದ ಬುಡಕಟ್ಟುಗಳ ಬದುಕನ್ನು ಅತಂತ್ರ ಸ್ಥಿತಿಯಲ್ಲಿಟ್ಟಿವೆ.[೬]

ಅಭಿವೃದ್ಧಿಯ ಹೆಸರಿನಲ್ಲಿ ಅಭಯಾರಣ್ಯಗಳ ರಕ್ಷಣೆ, ಉದ್ಯಾನವನ, ಗಿರಿಧಾಮ, ಪಕ್ಷಿಧಾಮ, ಕೈಗಾರಿಕಾ ಘಟಕಗಳು ಮತ್ತು ಅಣೆಕಟ್ಟುಗಳ ನಿರ್ಮಾಣಾ ಕಾರ್ಯಗಳು ಬುಡಕಟ್ಟು ಜನರು ವಾಸಿಸುತ್ತಿದ್ದ ಪ್ರದೇಶದಲ್ಲಿ ರೂಪಗೊಳ್ಳುತ್ತಿದೆ. ಇದಲ್ಲದೆ ಭೂಮಿಯ ಕೊರತೆಯಿಂದಾಗಿ ಕೆರೆಕಟ್ಟೆಗಳ ನಿರ್ಮಾಣ ನಾಶವಾಗಿದ್ದು, ಪಶುಪಾಲನೆಯ ಅಭಿವೃದ್ಧಿಗೆ ಬೇಕಾಗಿರುವ ವಾತಾವರಣದ ಕೊರತೆಯಿಂದಾಗಿ ಇಂದು ಪಶುಪಾಲನೆ ಕುಂಠಿತವಾಗಿದೆ. ಹೀಗಾಗಿ ಪಶುಪಾಲನೆಯನ್ನು ನಂಬಿದ ಕೆಲವು ಬುಡಕಟ್ಟು ಸಮೂಹಗಳು ವಿಧಿಯಿಲ್ಲದೆ ಅನ್ಯ ಮನಸ್ಸಿನಿಂದ ಹೊಟ್ಟೆ ತುಂಬಿಸಿಕೊಳ್ಳಲು ಬೇರೆ ವೃತ್ತಿಗಳನ್ನು ಅವಲಂಬಿಸಿದ ಕಾರಣ ಪಶುಪಾಲನೆಯನ್ನು ಬುಡಕಟ್ಟು ಜನರಲ್ಲಿ ಪ್ರಧಾನ ಕಸುಬಾಗಿ ಉಳಿಸಿಕೊಳ್ಳಲಾಗಲಿಲ್ಲ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೨೭.೧ ರಷ್ಟು ಬುಡಕಟ್ಟುಗಳನ್ನು ಹೊಂದಿದೆ. ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ತಾಲೂಕು ಇದಾಗಿದೆ. ಹಡಗಲಿ ತಾಲೂಕಿನಲ್ಲಿ ಕೇವಲ ಶೇ.೭.೮ ರಷ್ಟು ಅತಿ ಕಡಿಮೆ ಬುಡಕಟ್ಟು ಜನಸಂಖ್ಯೆಯಿದೆ. ಅವುಗಳ ಪೂರ್ಣ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೩.೩

ಬಳ್ಳಾರಿ ಜಿಲ್ಲೆಯ ತಾಲ್ಲೂಕುವಾರು ಲಿಂಗವಾರು ಬುಡಕಟ್ಟು ಜನಸಂಖ್ಯೆಯ ವಿವರ (೨೦೦೧)

ಕ್ರ.ಸಂ.	ತಾಲೂಕು	ಜನಸಂಖ್ಯೆ			ಪರಿಶಿಷ್ಟ ಪಂಗಡ ಜನಸಂಖ್ಯೆ			(ಬುಡಕಟ್ಟು%)
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಜನಸಂಖ್ಯೆ
೧.	ಬಳ್ಳಾರಿ	೩೧೯೦೦೮	೩೦೬೪೮೬	೬೨೫೪೯೪	೫೧೬೧೯	೫೦೩೪೨	೧೦೧೯೬೧	೧೬.೩ %
೨.	ಹೆಚ್.ಬಿ.ಹಳ್ಳಿ	೮೦೭೭೦	೭೯೧೧೬	೧೫೯೮೮೬	೧೦೯೨೪	೧೦೭೯೨	೨೧೭೧೬	೧೩.೬ %
೩.	ಹಡಗಲಿ	೮೫೦೫೧	೮೩೦೬೭	೧೬೮೧೧೮	೬೬೦೫	೬೪೬೯	೧೩೦೭೪	೭.೮ %
೪.	ಹೊಸಪೇಟೆ	೧೮೯೬೭೪	೧೮೫೨೭೫	೩೭೪೯೪೯	೨೯೯೫೨	೩೦೫೩೯	೬೦೪೯೧	೧೬.೧ %
೫.	ಕೂಡ್ಲಿಗಿ	೧೩೯೨೦೨	೧೩೨೯೮೧	೨೭೨೧೮೩	೩೭೨೯೮	೩೬೩೫೨	೭೩೬೫೦	೨೭.೧ %
೬.	ಸಿರುಗುಪ್ಪ	೧೧೭೭೩೧	೧೧೭೬೧೩	೨೩೫೩೪೪	೨೦೯೫೦	೨೧೦೫೯	೪೨೦೦೯	೧೭.೯ %
೭.	ಸಂಡೂರು	೯೮೨೭೮	೯೨೮೮೮	೧೯೧೧೬೬	೨೬೩೧೪	೨೫೪೨೩	೫೧೭೩೭	೨೪.೧ %

(ಕೃಪೆ : ೨೦೦೧ರ ಜನಗಣತಿ)

ಇದಲ್ಲದೆ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿರುವ ಬುಡಕಟ್ಟು ಕುಟುಂಬ ಹಾಗೂ ಜನಸಂಖ್ಯೆಯ ವಿವರಗಳನ್ನು ಅನುಬಂಧ ೩.೩ ರಿಂದ ೩.೯ ರಲ್ಲಿ ನೀಡಲಾಗಿದೆ. ಹಾಗೂ ನಗರ ಪ್ರದೇಶದಲ್ಲಿರುವ ಪರಿಶಿಷ್ಟರ ವಿವರಗಳನ್ನು

ಅನುಬಂಧ ೩.೧೧ರಲ್ಲಿ ತೋರಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ೫೦ ಬುಡಕಟ್ಟುಗಳಿವೆ. ಇವುಗಳಲ್ಲಿ ಕೊರಗ ಮತ್ತು ಜೇನುಕುರುಬ ಪಂಗಡಗಳು ಇತರೆ ಪಂಗಡಗಳಿಗಿಂತ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದವರೆಂದು ಮನಗಂಡು ಈ ಪಂಗಡದವರನ್ನ ಆದಿವಾಸಿ ಪಂಗಡ (ಪ್ರಿಮಿಟಿವ್ ಟ್ರೈಬ್ಸ್) ಎಂದು ಗುರುತಿಸಲಾಗಿದೆ.[೪] ಇವುಗಳ ಜೊತೆಗೆ ಹಕ್ಕಿಪಿಕ್ಕಿ, ಇರುಳಿಗ, ಸೋಲಿಗ ಮತ್ತು ಎರವ ಈ ನಾಲ್ಕು ಪಂಗಡಗಳನ್ನು ಸಹ ಆದಿವಾಸಿ ಪಂಗಡಗಳೆಂದು ಗುರುತಿಸಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದರ ಜೊತೆಗೆ ಹಸಲರು, ಸಿದ್ದಿ, ಗೌಳಿಗ, ಗೊಂಡ, ಕುಡುಬಿ, ಹಾಲಕ್ಕಿ ಒಕ್ಕಲಿಗರು, ಕೆರೆ ಒಕ್ಕಲಿಗರು, ಕುಡಿಯರು, ಮಲೆಕುಡಿಯರು, ಮನ್ನರು, ಕಾಡು ಕುರುಬರು, ಕಾಡು ಗೊಲ್ಲರು, ಮ್ಯಾಸ ಬೇಡರು, ಈ ಎಲ್ಲಾ ಬುಡಕಟ್ಟುಗಳನ್ನು ಕರ್ನಾಟಕದಲ್ಲಿ ಇತರೆ ಪರಿಶಿಷ್ಟ ಪಂಗಡದ ಜಾತಿಗಳಿಗಿಂತ ಹಿಂದುಳಿದಿರುವುದರಿಂದ ಇವರನ್ನೂ ಸಹ ಆದಿವಾಸಿಗಳೆಂದು (ಪ್ರಿಮಿಟಿವ್ ಟ್ರೈಬ್ಸ್) ಗುರುತಿಸಬಹುದಾಗಿದೆ.

ಕರ್ನಾಟಕದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಬುಡಕಟ್ಟುಗಳು

೧. ಅಡಿಯನ್

೨. ಬಾರ್ಡಾ

೩. ಬಾವಚ, ಬಾಮ್ಚ

೪. ಭಿಲ್, ಭಿಲ್ ಗರಾಸಿಯ, ಧೋಳಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿ ಭಿಲ್, ರಾವಲ್ ಭಿಲ್, ತಾಡ್ವಿ ಭಿಲ್, ಭಾಗಾಲಿಯ, ಭಿಲಾಲ, ಪಾವರಾ, ವಾಸವ, ವಾಸವೆ

೫. ಚೆಂಚು, ಚೆಂಚವಾರ್

೬. ಚೋಧರಾ

೭. ಡುಬ್ಲ, ತಲವಿಯ, ಹಲ್ಪತಿ

೮. ಗಮಿಟ್, ಗಾಮ್ಟ್, ಗವಿಟ್, ಮಾವ್ಚಿ, ಪಡ್ವಿ, ವಾಳ್ವಿ

೯. ಗೊಂಡ್, ನಾಯ್ಕಪೋಡ್, ರಾಜಗೊಂಡ್

೧೦. ಗೌಡಲು

೧೧. ಹಕ್ಕಿಪಕ್ಕಿ

೧೨. ಹಸಲರು

೧೩. ಇರುಳರ್

೧೪. ಇರುಳಿಗ

೧೫. ಜೇನು ಕುರುಬ

೧೬. ಕಾಡು ಕುರುಬ

೧೭. ಕಮ್ಮಾರ (ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಮಾತ್ರ)

೧೮. ಕಣಿಯನ್, ಕಣ್ಯನ್ (ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ)

೧೯. ಕಥೋಡಿ,ಕಟಕಾರಿ,ಢೋರ್ ಕಥೋಡಿ,ಢೋರ್ ಕಟಕಾರಿ, ಸೋನ್ ಕಥೋಡಿ, ಸೋನ್ ಕಟಕಾರಿ

೨೦. ಕಾಟ್ಟುನಾಯಕನ್

೨೧. ಕೋಕ್ನ, ಕೋಕ್ನಿ, ಕುಕ್ನ

೨೨. ಕೋಳಿ ಧೋರ್, ಟೋಕ್ರೆ ಕೋಳಿ, ಕೋಲ್ಚಾ, ಕೊಲ್ಗ

೨೩. ಕೊಂಡ ಕಾಪುಸ್

೨೪. ಕೊರಗ

೨೫. ಕೋಟ

೨೬. ಕೋಯ, ಭಿನೆ ಕೋಯ, ರಾಜಕೋಯ

೨೭. ಕುಡಿಯ, ಮೆಲಕುಡಿ

೨೮. ಕುರುಬ (ಕೊಡಗು ಜಿಲ್ಲೆಯಲ್ಲಿ ಮಾತ್ರ)

೨೯. ಕುರುಮನ್ಸ್

೩೦. ಮಹಾ ಮಲಸರ್

೩೧. ಮಲೈಕುಡಿ

೩೨. ಮಲಸರ್

೩೩. ಮಲಯೆಕಂಡಿ

೩೪. ಮಲೆರು

೩೫. ಮರಾಠ (ಕೊಡಗು ಜಿಲ್ಲೆಯಲ್ಲಿ ಮಾತ್ರ)

೩೬. ಮರಾಟಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮಾತ್ರ)

೩೭. ಮೇದ, ಮೇದಾರಿ, ಬುರಡ್, ಗೌರಿಗ

೩೮. ನಾಯಕ್ದ, ನಾಯಕ, ಚೋಳಿವಾಲ ನಾಯಕ, ಕಪಾಡಿ ನಾಯಕ, ಮೋಟಾ ನಾಯಕ, ನಾನಾ ನಾಯಕ, ನಾಯಕ್, ಬೇಡ, ಬೇಡರ್, ವಾಲ್ಮೀಕಿ

೩೯. ಪಳ್ಳಿಯನ್

೪೦. ಪಣಿಯನ್

೪೧. ಪಾರ್ಧಿ, ಅಡ್ವಿಚಂಚೇರ್, ಫಾನ್ಸೆ ಪಾರ್ಧಿ, ಹರಣಶಿಕಾರಿ

೪೨. ಪಟೇಲಿಯ

೪೩. ರಾಥ್ವಾ

೪೪. ಶೋಲಗ

೪೫. ಸೋಲಿಗ

೪೬. ತೋಡ

೪೭. ವಾರ್ಲಿ

೪೮. ವಿಟೋಲಿಯ, ಕೋತ್ವಾಲಿಯ ಬರೋಡಿಯ

೪೯. ಯೆರವ [*]

೫೦. ಸಿದ್ದಿ (ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ)[೬]

ಈ ಮೇಲಿನ ೫೦ ಬುಡಕಟ್ಟುಗಳಲ್ಲಿ ಮೇದ ಬುಡಕಟ್ಟಿಗೆ ಪರ್ಯಾಯವಾದ ಮೇದಾರಿ, ಬುರಡ್, ಗೌರಿಗ ಹಾಗೂ ಪಾರ್ಧಿ, ಫಾನ್ಸೆ ಪಾರ್ಧಿ, ಅಡವಿಚೆಂಚರ್ ಬುಡಕಟ್ಟಿಗೆ ಪರ್ಯಾಯವಾದ ಹರಣಶಿಕಾರಿ ಮತ್ತು ಸಿದ್ದಿ ಬುಡಕಟ್ಟುಗಳು ಹಿಂದುಳಿದ ವರ್ಗದ ಪ್ರವರ್ಗ ಒಂದರಲ್ಲಿ ಇದ್ದಂತಹ ಬುಡಕಟ್ಟುಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲು.ಎಲ್ ೨೨೫ ಬಿ.ಸಿ.ಎ.೨೦೦೦ ದಿನಾಂಕ ೩೦.೩.೨೦೦೨ ಬೆಂಗಳೂರು, ಪ್ರಕಾರ ಬುಡಕಟ್ಟು ಪಂಗಡಗಳಿಗೆ ಸೇರಿಸಲಾಗಿದೆ. ಈ ಸಂಬಂಧ ಮೇಲೆ ತಿಳಿಸಿರುವ ಸರ್ಕಾರಿ ಆದೇಶವನ್ನು ಅನುಬಂಧ ೩.೧೧ ರಲ್ಲಿರಿಸಲಾಗಿದೆ.

ಮೇಲೆ ತಿಳಿಸಿರುವ ಬುಡಕಟ್ಟು ಪೈಕಿ ಈ ಕೆಳಕಂಡ ಬುಡಕಟ್ಟಿನ ಜನರು ಬಳ್ಳಾರಿ ಜಿಲ್ಲೆಯ ಉದ್ದ ಅಗಲಕ್ಕೂ ಹರಡಿ ವಾಸಿಸುತ್ತಿರುವ ಮಾಹಿತಿ ೧೯೯೧ರ ಜನಗಣತಿಯ ಪ್ರಕಾರ ದಾಖಲಾಗಿರುತ್ತದೆ.

೧. ಅಡಿಯನ್

೨. ಬಾರ್ದಾ

೩. ಭಿಲ್, ಭಿಲ್ ಗರಾಸಿಯ, ಧೋಳಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿ ಭಿಲ್, ರಾವಲ್ ಭಿಲ್, ತಾಡ್ವಿ ಭಿಲ್, ಭಾಗಾಲಿಯ, ಭಿಲಾಲ, ಪಾವರಾ, ವಾಸವ, ವಾಸವೆ

೪. ಚೆಂಚು, ಚೆಂಚವಾರ್

೫. ಡುಬ್ಲ, ತಲವಿಯ, ಹಲ್ಪತಿ

೬. ಗೊಂಡ್, ನಾಯ್ಕಪೋಡ್, ರಾಜಗೊಂಡ್

೭. ಗೌಡಲು

೮. ಹಕ್ಕಿಪಕ್ಕಿ

೯. ಹಸಲರು

೧೦. ಇರುಳರ್

೧೧. ಇರುಳಿಗ

೧೨. ಜೇನು ಕುರುಬ

೧೩. ಕಾಡು ಕುರುಬ

೧೪. ಕಥೋಡಿ,ಕಟಕಾರಿ,ಢೋರ್ ಕಥೋಡಿ,ಢೋರ್ ಕಟಕಾರಿ, ಸೋನ್ ಕಥೋಡಿ, ಸೋನ್ ಕಟಕಾರಿ

೧೫. ಕೋಳಿ ಧೋರ್, ಟೋಕ್ರೆ ಕೋಳಿ, ಕೋಲ್ಚಾ, ಕೊಲ್ಘ

೧೬. ಕೊಂಡ ಕಾಪುಸ್

೧೭. ಕೊರಗ

೧೮. ಕೋಯ, ಭಿನೆ ಕೋಯ, ರಾಜಕೋಯ

೧೯. ಕುರುಮನ್ಸ್

೨೦. ಮಹಾ ಮಲಸರ್

೨೧. ಮಲೈಕುಡಿ

೨೨. ಮಲಸರ್

೨೩. ಮಲಯೆಕಂಡಿ

೨೪. ಮಲೆರು

೨೫. ಮೇದ, ಮೇದಾರಿ, ಬುರಡ್, ಗೌರಿಗ

೨೬. ನಾಯಿಕ್ಡ, ನಾಯಕ, ಚೋಳಿವಾಲ ನಾಯಕ, ಕಪಾಡಿ ನಾಯಕ, ಮೋಟಾ ನಾಯಕ, ನಾನಾ ನಾಯಕ, ನಾಯಕ್, ಬೇಡ, ಬೇಡರ್, ವಾಲ್ಮೀಕಿ

೨೭. ಪಳ್ಳಿಯನ್

೨೮. ಪಾರ್ಧಿ, ಅಡ್ವಿಚಂಚೇರ್, ಫಾನ್ಸೆ ಪಾರ್ಧಿ, ಹರಣಶಿಕಾರಿ

೨೯. ರಾತ್ವಾ

೩೦. ವಿಟೋಲಿಯ, ಕೋತ್ವಾಲಿಯ ಬರೋಡಿಯ

೩೧. ಯೆರವ

ಈ ೩೧ ಬುಡಕಟ್ಟುಗಳು ಮಾತ್ರ ಬಳ್ಳಾರಿ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ವಾಸ ಮಾಡುತ್ತಿರುವುದು ೧೯೯೧ರ ಜನಗಣತಿಯಲ್ಲಿ ದಾಖಲಾಗಿದೆ. ಈ ೩೧ ಬುಡಕಟ್ಟು ಪಂಗಡಗಳಲ್ಲಿ ಇಡೀ ಜಿಲ್ಲೆಯ ಬುಡಕಟ್ಟು ಪಂಗಡಗಳ ಜನಸಂಖ್ಯೆ ಶೇ.೯೭ ರಷ್ಟು ವಾಲ್ಮೀಕಿ, ನಾಯಕ, ಬೇಡ ಪಂಗಡಕ್ಕೆ ಸೇರಿದ್ದು, ಉಳಿದ ಶೇಕಡ ೩ ರಷ್ಟು ಇತರೆ ೩೦ ಬುಡಕಟ್ಟುಗಳಿಗೆ ಸೇರಿರುವುದು ದೃಢಪಟ್ಟಿದೆ.[೬] ಅವುಗಳ ಬುಡಕಟ್ಟುಗಳ ಸಂಕ್ಷಿಪ್ತ ಪರಿಚಯ ಈ ಕೆಳಗಿನಂತಿದೆ.

೦೧. ಅಡಿಯನ್

ಇವರನ್ನು ಅಡಿಯನ್ ಅಥವಾ ಅಡಿಯಾರ್ ಎಂದು ಕರೆಯುತ್ತಾರೆ. ಅಡಿಯನ್ ಕರ್ನಾಟಕದಲ್ಲಿ ಅತ್ಯಂತ

ಹಿಂದುಳಿದ ಒಂದು ಸಮುದಾಯ. ಅಡಿಯನ್ ಎಂದರೆ 'ಆಳು' ಸೇವೆ ಮಾಡುವವರು ಎಂದು ಅರ್ಥಬರುತ್ತದೆ.[೮] ಇವರು ಕೇರಳದಿಂದ ವಲಸೆ ಬಂದು ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ೧೯೮೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಇವರ ಜನಸಂಖ್ಯೆ ೩೬೮ ಎಂದು ದಾಖಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಒಬ್ಬರು ಇದ್ದದ್ದು ದಾಖಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕೊಡಗಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿದ್ದಾರೆ. ಇವರ ಮಾತೃಭಾಷೆ ಮಲೆಯಾಳಂ ಆಗಿದೆ. ತುಳು, ಕೊಡಗು, ತಮಿಳು ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಪಿತೃವಂಶೀಯ ಕುಲಗಳಿವೆ. ಅವು ವಡಕ್ಕು, ಥಿರುನೆಲ್ಲಿ, ಪೋಥೂರ್ ಇತ್ಯಾದಿ. ತಮ್ಮದೇ ಬುಡಕಟ್ಟಿನಲ್ಲಿ ಹೊರಗಿನ ಭಾಂದವ್ಯಗಳ ಜತೆಯಲ್ಲಿ ವಿವಾಹಗಳು ಜರುಗುತ್ತವೆ. ತಾಯಿಯ ಸಹೋದರನ ಮಗಳು ಅಥವಾ ತಂದೆಯ ಸಹೋದರಿಯ ಮಗಳ ಜೊತೆಗಿನ ಮದುವೆಯನ್ನು ಒಪ್ಪಿಕೊಳ್ಳಲಾಗುತ್ತದೆ.

ಅಡಿಯನ್ ಸಮುದಾಯದ ಮಹಿಳೆಯರು ಕುಟುಂಬದ ಆರ್ಥಿಕ ಚಟುವಟಿಕೆಗಳಲ್ಲಿ ನೆರವಾಗುತ್ತಾರೆ. ಇವರಲ್ಲಿ ಬಹಳಷ್ಟು ಜನರಿಗೆ ಭೂಮಿಗಳು ಇಲ್ಲದ ಪ್ರಯುಕ್ತ ಬಹುಮಂದಿ ಕೃಷಿ ಕೂಲಿಗಾರರಾಗಿದ್ದಾರೆ. ಇವರು ಹೆಚ್ಚಾಗಿ ಕಾಫಿತೋಟಗಳಲ್ಲಿ ಕೆಲಸ ಮಾಡುತ್ತಾರೆ. ಬೇಟೆಯಾಡುವುದು ಇವರ ಮುಖ್ಯ ಹವ್ಯಾಸ. ಇದರ ಜೊತೆಗೆ ಬಿದಿರಿನ ಬುಟ್ಟಿ, ಮೊರ, ಮಂಕರಿ ಇತ್ಯಾದಿ ಬಿದಿರಿನ ವಸ್ತುಗಳನ್ನು ಹೆಣೆಯುವುದು ಹಾಗು ಹಬ್ಬ ಹರಿದಿನಗಳಲ್ಲಿ ಸಂಗೀತವಾದ್ಯದ ಪರಿಕರಗಳನ್ನು ನುಡಿಸುವುದು ಇವರ ಸಾಂಪ್ರದಾಯಿಕ ವೃತ್ತಿಗಳಾಗಿವೆ. ಬಣ್ಣ ಬಣ್ಣದ ಬಳೆಗಳನ್ನು ಮತ್ತು ಬೆಂಡೋಲೆಗಳನ್ನು ಧರಿಸುವುದೆಂದರೆ ಗಂಡಸರು ಮತ್ತು ಹೆಂಗಸರಿಗೆ ಬಹಳ ಇಷ್ಟ. ಇವರು ಹಿಂದೂ ಧರ್ಮವನ್ನು ಅನುಸರಿಸುತ್ತಾರೆ. ಪ್ರಸನ್ನಮೂರ್ತಿ, ಭಗವತಿಯಂತಹ ದೇವರ ಜೊತೆಗೆ ಗ್ರಾಮ ದೇವತೆಗಳನ್ನು ಮತ್ತು ದೆವ್ವ ಭೂತಗಳನ್ನು ಪೂಜಿಸುತ್ತಾರೆ. ಬ್ರಾಹ್ಮಣರು ಇವರ ಕೆಲವು ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಮಹತ್ವವನ್ನು ನೀಡಿಲ್ಲ. ಸರ್ಕಾರ ನೀಡುತ್ತಿರುವ ಸೌಲಭ್ಯವನ್ನು ಪಡೆದುಕೊಳ್ಳುವವರಲ್ಲಿ ಅತ್ಯಂತ ಹಿಂದುಳಿದಿದ್ದಾರೆ. ಇವರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗು ಶೈಕ್ಷಣಿಕ ಪರಿಸ್ಥಿತಿ ಅತ್ಯವಶ್ಯಕವಾಗಿ ಸುಧಾರಣೆಯಾಗಬೇಕಾಗಿದೆ. ಕರ್ನಾಟಕದಲ್ಲಿ ಅಡಿಯನ್ ಒಂದು ಅಲ್ಪ ಸಂಖ್ಯಾತ ಬುಡಕಟ್ಟು, ಇದಕ್ಕೆ ವಿಶೇಷ ರಕ್ಷಣೆಯನ್ನು ನೀಡಬೇಕಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಜನಗಣತಿಯಲ್ಲಿ ದಾಖಲಾಗಿದೆ. ಆದರೆ ವಾಸ್ತವದಲ್ಲಿ ಇದರ ಹುಡುಕಾಟ ಜಿಲ್ಲೆಯಲ್ಲಿ ಕಷ್ಟಸಾಧ್ಯ.

೦೨. ಬಾರ್ದಾ

ಬಾರ್ದಾ ಬುಡಕಟ್ಟು ಬರೆಯ ಭಿಲ್‌ರಿಂದ ಕವಲೊಡೆದ ಒಂದು ಸಮುದಾಯ. ಇವರು ತಮ್ಮನ್ನು ತಾವು ಖಾನದೇಶಿ (ಮಹಾರಾಷ್ಟ್ರ) ಭಿಲ್ ರೆಂದು ಗುರುತಿಸಿಕೊಳ್ಳುತ್ತಾರೆ. ಇವರ ಇನ್ನೊಂದು ಹೆಸರು ಲೈನಿಯ. ಇವರು ಮಹಾರಾಷ್ಟ್ರ, ಗುಜರಾತ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿದ್ದಾರೆ. ಬಹಳ ವರ್ಷಗಳವರೆಗೆ ಇವರು ಗುಡ್ಡ ಗಾಡುಗಳಲ್ಲಿ ವಾಸವಾಗಿದ್ದರು. ಇವರು ವಾಸವಾಗಿರುವ ಸ್ಥಳಕ್ಕೆ ಸ್ಥಳೀಯರು ಬಾರ್ದಾ ಎಂದು ಕರೆಯುತ್ತಾರೆ.[೯] ೧೯೮೧ ಜನಗಣತಿ ಪ್ರಕಾರ ಇವರು ಕರ್ನಾಟಕದಲ್ಲಿ ೭೨೯ ಜನಸಂಖ್ಯೆಯನ್ನು ಹೊಂದಿದ್ದರೆಂದು

ದಾಖಲಾಗಿದೆ. ಕರ್ನಾಟಕದ ಬುಡಕಟ್ಟುಗಳಲ್ಲಿ ಇವರು ಅಲ್ಪ ಸಂಖ್ಯಾತರಾಗಿರುವವರು. ಇವರು ದೇವನಾಗರಿ ಲಿಪಿಯನ್ನು ಬಳಸುವರು. ಮರಾಠಿ ಹಾಗು ಗುಜರಾತಿ ಭಾಷೆಯನ್ನೂ ಮಾತನಾಡುವರು.

ಬಾರ್ದಾಗಳು ಮಾಂಸಹಾರಿಗಳು. ಇವರು ಮೀನು, ಹಂದಿ, ಕುರಿ, ಮೇಕೆಗಳ ಮಾಂಸವನ್ನು ಸಜ್ಜೆ, ಜೋಳ, ಗೋಧಿ, ಅಕ್ಕಿ, ತೊಗರಿ ಬೇಳೆ, ಉದ್ದಿನ ಬೇಳೆ, ಕಡ್ಲಿಬೇಳೆ ಇತ್ಯಾದಿಗಳನ್ನು ಉಪಯೋಗಿಸುವರು. ಇವರನ್ನು ಗುಜರಾತಿನಲ್ಲಿ ಶೂದ್ರ ವರ್ಣದವರೆಂದು ಪರಿಗಣಿಸಲಾಗಿದೆ. ಇವರಲ್ಲಿ ಹಲವಾರು ಹೊರಬಾಂಧವ್ಯದ ಭಿನ್ನ ಗೋತ್ರಗಳಿವೆ. ಇವರಲ್ಲಿ ಹಿಂದೂ ಧರ್ಮೀಯರು ಮತ್ತು ಬೌದ್ಧ ಧರ್ಮೀಯರು ಇದ್ದಾರೆ. ಇವರು ಶಿವರಾತ್ರಿ,ಹೋಳಿ, ದಸರಾ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಆಚರಿಸುವರು.[೧೦] ಬಾರ್ದಾಗಳ ಸಾಂಪ್ರದಾಯಿಕ ಕಸುಬು ಬೇಟೆಗಾರಿಕೆ ಹಾಗೂ ಆಹಾರ ಸಂಗ್ರಹಣೆ. ಇವರಲ್ಲಿ ಬಹು ಸಂಖ್ಯಾತರು ಕೃಷಿ ಕೂಲಿಗಳಾಗಿದ್ದಾರೆ. ಕೆಲವರು ಕೃಷಿಕರಾಗಿದ್ದಾರೆ. ಇನ್ನೂ ಕೆಲವರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಬುಡಕಟ್ಟಿನಲ್ಲಿ ಮಕ್ಕಳು ಮತ್ತು ಮುದುಕರು ಕೂಡ ಕುಟುಂಬದ ಆದಾಯಕ್ಕೆ ಸಹಕಾರಿಯಾಗುವರು. ಇವರು ಕರ್ನಾಟಕದ ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವುದಾಗಿ ಜನಗಣತಿಯಲ್ಲಿ ದಾಖಲಾಗಿದೆ.

೦೩. ಭಿಲ್

ಭಿಲ್ ಗರಾಸಿಯಾ, ಧೋಳಿ ಭಿಲ್, ಡುಂಗ್ರಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿ ಭಿಲ್, ರಾವಲ್ ಭಿಲ್, ತಾಡ್ವಿ ಭಿಲ್, ಭಾಗಾಲಿಯಾ, ಭಿಲಾಲ, ಪಾವ್ರ, ವಾಸನ ಮತ್ತು ವಾಸವೆ ಇವು ಬೀಲ್‌ರ ಪರ್ಯಾಯ ಸಮೂಹಗಳು. ಭಿಲ್ ಜನಸಂಖ್ಯೆಯಲ್ಲಿ ಭಾರತದ ಎರಡನೆಯ ಬಹುದೊಡ್ಡ ಬುಡಕಟ್ಟು. ಇವರು ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ತ್ರಿಪುರಾ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ಹರಡಿಕೊಂಡಿದ್ದಾರೆ. ಭಿಲ್ ಎಂಬ ಶಬ್ದವು ಬಿಲ್ಲಿನಿಂದ ಬಂದಿದೆ. ಇವರು ಬಿಲ್ಲುದಾರಿಗಳಾಗಿರುವುದರಿಂದ ಇವರಿಗೆ ಈ ಹೆಸರು ಬಂದಿರುವುದು. ಭಿಲಿ ಇವರ ಮಾತೃ ಭಾಷೆಯಾಗಿದೆ. ಭಿಲ್‌ರಲ್ಲಿ ಹಲವಾರು ಬಳಿಗಳಿವೆ. ಇವರು ಮಹದೇವ ಹಾಗು ಗ್ರಾಮದೇವತೆಗಳಾದ ಸಿತ್ಲಾದೇವಿ, ಭೈರವ, ಖಂಡೋಬಾ, ಹನುಮಾನ್ ಮುಂತಾದ ದೈವಗಳನ್ನು ಆರಾಧಿಸುತ್ತಾರೆ. ಇವರು ಹೋಳಿ, ದಸರಾ ಮತ್ತು ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.[೧೧]

ಮಹಾರಾಷ್ಟ್ರದ ಭಿಲ್‌ರು ಮುಖ್ಯವಾಗಿ ಕೃಷಿಕರು ಹಾಗೂ ಕೂಲಿಗಳು ಇಂದಿಗೂ ಅರಣ್ಯೋತ್ಪಾದನೆಯ ಬೇಟೆ ಮತ್ತು ಆಹಾರ ಸಂಗ್ರಹಣೆ ಇವರಲ್ಲಿ ಪ್ರಚಲಿತವಾಗಿರುವುದು. ಇವೇ ಇವರ ಜೀವನಕ್ಕೆ ಆಧಾರವಾಗಿರುವುದು. ಇದರ ಜೊತೆಗೆ ಪಶುಪಾಲನೆ, ಅರಣ್ಯ ಉತ್ಪಾದನೆ ಮತ್ತು ಬೇಟೆ ಇತ್ಯಾದಿಗಳನ್ನು ಅವಲಂಬಿಸಿರುವರು. ಇವರು ಜೇನು, ಅಂಟು, ಕಾಡು ಹಣ್ಣುಗಳು, ಉರುವಲು ಕಟ್ಟಿಗೆಗಳನ್ನು ಸಂಗ್ರಹಿಸುವರು. ಇಪ್ಪೆಯ ಹೂವಿನಿಂದ ಪಾನೀಯವನ್ನು ತಯಾರಿಸುವರು. ಕರ್ನಾಟಕದ ಬೀದರ್, ರಾಯಚೂರು ಜಿಲ್ಲೆಗಳಲ್ಲಿ ೧೯೭೧ ಜನಗಣಿಯ ಪ್ರಕಾರ ಕೇವಲ ೮ ಜನ ಭಿಲ್‌ರು, ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ೩೪೫ ಡುಂಗ್ರಿ ಭಿಲ್ಲರು

ದಾಖಲಾಗಿದ್ದಾರೆ. ೧೯೮೧ರ ಜನಗಣತಿಯ ಪ್ರಕಾರ ೧೮೬೭ ಜನ ಭಿಲ್ಲರು ಕರ್ನಾಟಕದಲ್ಲಿ ದಾಖಲಾಗಿದ್ದಾರೆ. ಕರ್ನಾಟಕದಲ್ಲಿ ಭಿಲ್‌ರು ಅಲ್ಪಸಂಖ್ಯಾತರು.

೦೪. ಚೆಂಚು, ಚೆಂಚುವಾರ್

ಆಂಧ್ರಪ್ರದೇಶದಲ್ಲಿ ಚೆಂಚು, ಚೆಂಚುವಾರ್ ಸಮುದಾಯವನ್ನು ಬುಡಕಟ್ಟು ಪಟ್ಟಿಗೆ ಸೇರಿಸಿರುವಂತೆ ಕರ್ನಾಟಕದಲ್ಲಿಯೂ ಸೇರಿಸಲಾಗಿದೆ. ಇವರ ಮಾತೃ ಭಾಷೆ ತೆಲುಗು, ಇವರು ಮಾಂಸಹಾರಿಗಳಾಗಿರುತ್ತಾರೆ. ಥರ್‌ಸ್ಟನ್‌ರವರು ಚೆಂಚು ಬುಡಕಟ್ಟಿನ ೮ ಹೊರ ಬಾಂಧವ್ಯದ ಕುಲಗಳನ್ನು ಪತ್ತೆಹಚ್ಚಿದ್ದಾರೆ. ಚೆಂಚುಗಳು ೨೬ ಹೊರಬಾಂಧವ್ಯದ ಬಳಿಗಳನ್ನು ಹೊಂದಿರುತ್ತಾರೆ. ಸಮ ಬಳಿಗಳಲ್ಲಿ ವಿವಾಹ ನಿಷೇಧವಿದೆ. ಚಂಚು ಜನಾಂಗದವರು ಓಬಳೇಶ್ವರ ಸ್ವಾಮಿಗೆ ಹುಟ್ಟಿದ ಮಕ್ಕಳೆ ಮುಂದೆ ಚೆಂಚರಾದರೆಂದು ಹೇಳಿಕೊಳ್ಳುತ್ತಾರೆ. ಇಂದಿಗೂ ಚೆಂಚುಗಳು ಅರಣ್ಯಗಳಿಂದ ಚೆಂಚು ಗೆಡ್ಡೆ ಅಗೆದು ತಿನ್ನುವುದು ಸರ್ವೆಸಾಮಾನ್ಯ. ಗುಲಬರ್ಗಾ ಜಿಲ್ಲೆಯಲ್ಲಿ ಚೆಂಚುಗಳು ಕಂಡುಬರುವರು. ಇವರ ಒಟ್ಟು ಜನಸಂಖ್ಯೆಯಲ್ಲಿ ೨೩೦ ಜನ ಕೃಷಿ ಕೂಲಿಯನ್ನೇ ಅವಲಂಬಿಸಿರುವರು. ಚೆಂಚುಗಳು ದೇವರು ಮತ್ತು ಭೂತಗಳನ್ನು ಭಯ, ಭಕ್ತಿಯಿಂದ ಪೂಜಿಸುವರು.

ಪಾರಂಪರಿಕವಾಗಿ ಚೆಂಚುಗಳು ಅರಣ್ಯವನ್ನು ತಮ್ಮ ಬದುಕಿಗಾಗಿ ಆಶ್ರಯಿಸಿದವರು. ಇವರು ಅರಣ್ಯದಿಂದ ಜೇನು, ಗಿಡ ಮೂಲಿಕೆಗಳನ್ನು ಸಂಗ್ರಹಿಸುವುದರೊಂದಿಗೆ ಉಡ, ಮೊಲ, ಕಾಡು ಕುರಿ, ಇತ್ಯಾದಿಗಳನ್ನು ಬೇಟೆಯಾಡುವರು. ಇಂಬೂ ಇವರು ಕೃಷಿ ಮತ್ತು ಕೃಷಿ ಕೂಲಿಯುನ್ನು ಅವಲಂಬಿಸಿದ್ದಾರೆ.[೨] ೧೯೭೧ರ ಜನಗಣತಿಯ ಪ್ರಕಾರ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಇವರ ಜನಸಂಖ್ಯೆ ೨೨೯. ೧೯೮೧ರಲ್ಲಿ ೨೭೬ ಜನ ಎಂದು ಕರ್ನಾಟಕದಲ್ಲಿ ದಾಖಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಚೆಂಚುಗಳು ಅಲ್ಪಸಂಖ್ಯಾತರು.

೦೫. ಡುಬ್ಲ, ತಲವಿಯ, ಹಲ್ಪತಿ

ಡುಬ್ಲರನ್ನು ಹಲಪತಿ ಎಂದು ಗುರುತಿಸುತ್ತಾರೆ. ಹಿಂದಿ ಭಾಷೆಯಲ್ಲಿ ಹಲ್ ಎಂದರೆ ನೇಗಿಲು ಮತ್ತು ಪತಿಯೆಂದರೆ ಒಡೆಯ ಎಂದರ್ಥ. ಅಂದರೆ ನೇಗಿಲು ಒಡೆಯ ಅಥವಾ ನೇಗಿಲುಯೋಗಿ ಎಂದು ಅರ್ಥವಾಗುವುದು. ಡುಬ್ಲಾ ಎಂದರೆ ಅಶಕ್ತ ಅಥವಾ ತೆಳ್ಳಗೆ ಎಂದರ್ಥ. ಡುಬ್ಲಾಗಳು ಜೀತಗಾರರಾಗಿದ್ದಾರೆ. ಇವರು ಜೀತ ಮುಕ್ತಿಗಾಗಿ ಮಹಾತ್ಮಾ ಗಾಂಧಿಯವರು ಇವರನ್ನು ಹಲ್ಪತಿ ಎಂದು ಕರೆದರು. ಡುಬ್ಲಾಗಳು ಗುಜುರಾತ್, ಸೂರತ್, ಬರೋಡಾ, ವಡೋದರ ಜಿಲ್ಲೆಗಳಲ್ಲಿ ಹೆಚ್ಚಾಗಿ ಹರಡಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿಯೂ ಅತಿ ಹೆಚ್ಚಿನ ಜನಸಂಖ್ಯೆಯಲ್ಲಿದ್ದಾರೆ. ಗುಜರಾತಿನ ಡುಬ್ಲಾಗಳಲ್ಲಿ ಸುಮಾರು ೨೦ ಒಳ ಪಂಗಡಗಳಿವೆ. ಡುಬ್ಲಗಳೂ ಅಗೋಚರ ಶಕ್ತಿಗಳನ್ನು ನಂಬುವರು. ಆರಾಧನೆ ಮತ್ತು ಪ್ರಾಣಿಬಲಿಯಿಂದ ಅವುಗಳನ್ನು ಸಂತೃಪ್ತಿಸುವರು. ಡುಬ್ಲಗಳು ರಕ್ಷಾಬಂಧನ್, ನವರಾತ್ರಿ ಮತ್ತು ಮೆಹೂಬ ಹಬ್ಬಗಳನ್ನು ಆಚರಿಸುವರು.[೨] ಇವರ ಹೆಣ್ಣು ಮಕ್ಕಳು ಹಚ್ಚೆ ಕಲೆಗೆ ಹೆಸರುವಾಸಿಯಾಗಿರುವರು. ಪಾರಂಪರಿಕ ಜನಪದ ನೃತ್ಯ ಸಂಗೀತ ಹಾಗೂ ಮೌಖಿಕ ಸಾಹಿತ್ಯ ಇವರಲ್ಲಿ ಹೇರಳವಾಗಿದೆ.

ಡುಬ್ಲಗಳು ವಂಶಪಾರಂಪರ್ಯವಾಗಿ ಜೀತದಾಳುಗಳು. ಅವರು ಭೂ ಒಡೆಯರು ನೀಡುವ ಊಟ, ಬಟ್ಟೆಬರೆಗಾಗಿ ಜೀವನ ಪರ್ಯಂತ ತಮ್ಮನ್ನು ತಾವೇ ಜೀತಕ್ಕೆ ತೊಡಗಿಸಿಕೊಂಡವರಾಗಿದ್ದರು. ಕೃಷಿ ಕೂಲಿಗಳಾಗಿ ಜೀವನ ಸಾಗಿಸುವವರೇ ಹೆಚ್ಚು. ಹಲವು ಗ್ರಾಮಗಳಲ್ಲಿ ಹೈನುಗಾರಿಕೆ ಮತ್ತು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಕರ್ನಾಟಕದಲ್ಲಿಯೂ ಡಬ್ಲಗಳನ್ನು ಬುಡಕಟ್ಟಿನ ಪಟ್ಟಿಗೆ ಸೇರಿಸಲಾಗಿದೆ. ೧೯೭೧ರ ಜನಗಣತಿಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇವಲ ಒಬ್ಬನು ಮತ್ತು ೧೯೮೧ರ ಜನಗಣತಿ ಪ್ರಕಾರ ಇಬ್ಬರು ದಾಖಲಾಗಿದ್ದಾರೆ.

೦೬. ಗೊಂಡ

ಗೊಂಡ ಎಂಬ ಪದ ತೆಲುಗು ಭಾಷೆಯ ಕೊಂಡ ಎಂಬ ಪದದಿಂದ ಬಂದಿದೆಯೆಂದು ಭಾಷಾ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಕೊಂಡ ಎಂದರೆ ತೆಲುಗಿನಲ್ಲಿ ಗುಡ್ಡ ಅಥವಾ ಬೆಟ್ಟ ಎಂದರ್ಥ. ಕಾಲಾನುಕ್ರಮ 'ಕ' ಕಾರ 'ಗ' ಕಾರವಾಗಿ ಪರಿವರ್ತನೆಯಾಗಿ ಗೊಂಡಯೆಂದು ರೂಪಾಂತರಗೊಂಡಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ವಿಂಧ್ಯಾ ಪರ್ವತದಲ್ಲಿ ಇವರು ಒಂದು ಬುಡಕಟ್ಟು ಸಮುದಾಯ ಮತ್ತು ಆ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂದು ಕನ್ನಡ ನಿಘಂಟಿನಲ್ಲಿ ತಿಳಿಸಲಾಗಿದೆ. ಗೊಂಡ ಮತ್ತು ಗೌಡ ಎರಡು ಪದಗಳು ಒಂದೇ ಮೂಲದಿಂದ ಬಂದಿರುವುವು. ಬಯಲು ಸೀಮೆಯ ಪ್ರದೇಶದಲ್ಲಿ ಗೌಡ ಪದಕ್ಕೆ ಬದಲಾಗಿ ಗೊಂಡ ಎಂಬ ಪದವನ್ನು ಬಳಸುವುದು ಕಂಡುಬಂದಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗೊಂಡರನ್ನು ಗೌಡರೆಂದೇ ಕರೆಯುತ್ತಾರೆ. ಇವರು ಆಂಧ್ರದಲ್ಲಿ ತಮ್ಮನ್ನು 'ಕೋಯಿತುರ' ಅಥವಾ ಕೋಯಿ ಎಂದು ಕರೆದುಕೊಳ್ಳುತ್ತಾರೆ.[೧೪] ಜನರಲ್ ಕನ್ನಿಂಗ್ ಹ್ಯಾಮ್ ಅವರು ಗೌಡರೇ ಗೊಂಡರಾಗಿರುವುದಾಗಿ ಹಲವಾರು ಸಾಕ್ಷಿಗಳೊಂದಿಗೆ ಪ್ರತಿಪಾದಿಸಿದ್ದಾರೆ.

ಗೊಂಡರು ತಮ್ಮದೇ ಆದ ಭಾಷೆಯನ್ನು ಹೊಂದಿದ್ದಾರೆ. ಅದನ್ನು 'ಗೊಂಡಿ' ಮಾತನಾಡುತ್ತಾರೆ. ಈ ಗೊಂಡಿ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಒಂದು ಭಾಷೆ. ಆದರೆ ಗೊಂಡರು ಎಂದು ಕರೆಯಲ್ಪಡುವ ವಿವಿಧ ಬುಡಕಟ್ಟಿನ ಜನರು ಗೊಂಡಿ ಭಾಷೆಯನ್ನು ಮಾತನಾಡುತ್ತಾರೆಂದು ಹೇಳಲು ಸಾಧ್ಯವಾಗುವುದಿಲ್ಲ.

ಬೇರೆ ಬೇರೆ ಕಡೆ ವಲಸೆ ಹೋಗಿ ನೆಲೆಸಿರುವ ಗೊಂಡರು ಅಲ್ಲಿಯ ಸ್ಥಳೀಯ ಭಾಷೆಗಳನ್ನು ಮಾತನಾಡುತ್ತಿದ್ದಾರೆ. ಇದರಿಂದ ಗೊಂಡಿ ಭಾಷೆ ಗೊತ್ತಿಲ್ಲದೇ ಇತರೆ ಭಾಷೆಗಳನ್ನು ಮಾತನಾಡುವ ಗೊಂಡ ಜನರು ಇದ್ದಾರೆ. ಕರ್ನಾಟಕದಲ್ಲಿ ಇವರು ಉತ್ತರ ಕನ್ನಡ, ಗುಲಬರ್ಗಾ, ಶಿವಮೊಗ್ಗ, ದಕ್ಷಿಣ ಕನ್ನಡ, ಬೀದರ್ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬಂದರೂ ಇತರೆ ಜಿಲ್ಲೆಗಳಲ್ಲಿ ಇವರನ್ನು ಗುರುತಿಸಬಹುದು. ಇವರ ಪೂರ್ವಜರು ಆಂಧ್ರಪ್ರದೇಶದಿಂದ ಬಂದವರೆಂಬ ನಂಬಿಕೆಯಿದೆ. ಇದನ್ನು ಸಮರ್ಥಿಸಲು ಇರುವ ಆಧಾರ ಇವರ ಕುಲದೇವರು 'ತಿರುಪತಿ ತಿಮ್ಮಪ್ಪ'.

ಗೊಂಡರಲ್ಲಿ ಹಲವಾರು ಬಳಿಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು ಅಜ್ಜರ, ಆನೇ, ನೆಟ್ಟಿ, ಸಿರಿನ, ಹೊನ್ನ, ಹಾಲ, ರಾಯ, ದಾವತರ, ನಾಗ, ಮಲ್ಲಿಗೆ ಇತ್ಯಾದಿ. ಈ ಬಳಿಗಳಲ್ಲಿ ಕೆಲವು ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳಲ್ಲಿ ಕಂಡು ಬರುತ್ತವೆ. ಗೊಂಡರಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಿದೆ. ಹಿಂದೆ ಹೆಚ್ಚಾಗಿ ಅವಿಭಕ್ತ ಕುಟುಂಬಗಳಿದ್ದು, ಈಗ ವಿಭಕ್ತ ಕುಟುಂಬ ಪದ್ಧತಿಗಳು ಕಂಡು ಬರುತ್ತಿದೆ. ಈ ಬುಡಕಟ್ಟು ಸಮುದಾಯದಲ್ಲಿ

ಬಾಲ್ಯ ವಿವಾಹ, ವಿಧವಾ ವಿವಾಹಕ್ಕೆ ಅವಕಾಶವಿದೆ. ಮದುವೆಯ ಸಮಯದಲ್ಲಿ ವಧು-ವರರ ವಯಸ್ಸಿಗೆ ಮಹತ್ವವಿಲ್ಲದಿದ್ದರೂ ಬಳಿಯ ವಿಷಯದಲ್ಲಿ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಒಂದೇ ಬಳ್ಳಿಯ ಹೆಣ್ಣು ಗಂಡುಗಳ ವಿವಾಹಕ್ಕೆ ಅವಕಾಶವಿರುವುದಿಲ್ಲ. ಮಹಿಳೆಯರು ಕೃಷಿ, ಕಟ್ಟಿಗೆ ಸಂಗ್ರಹಣೆ, ಸಾಮಾಜಿಕ ಹಾಗು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಗೊಂಡರ ಪ್ರಧಾನ ವೃತ್ತಿ ಪಶುಸಂಗೋಪನೆ ಕುರಿಗಳ ಸಾಕಣೆ,ವ್ಯಾಪಾರ, ಇತ್ತೀಚಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಮಾಡುತ್ತಿದ್ದಾರೆ. ಕಂಬಳಿಯನ್ನು ನೇಯುವುದು, ಚಾಪೆ ಹೆಣೆಯುವುದು ಈ ಸಮುದಾಯದ ವೃತ್ತಿಯಾಗಿದೆ. ಇವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪರಿಸ್ಥಿತಿಗಳನ್ನು ಗಮನಿಸಿದರೆ ಪ್ರಗತಿಯ ಹಾದಿಯಲ್ಲಿರುವುದು ಧೃಡಪಟ್ಟಿದೆ. ಕರ್ನಾಟಕದಲ್ಲಿ ೩ ತರಹದ ಗೊಂಡರು ಕಾಣ ಸಿಗುವರು. ಅದರಲ್ಲಿ ರಾಜಗೊಂಡರು ಅಲೆಮಾರಿಗಳು. ಗೊಂಡಿ ಮಾತೃಭಾಷೆ ಹೊಂದಿದವರು. ಇವರು ಬೀದರ, ಹರಿಹರ ಮತ್ತು ಬೆಂಗಳೂರಿನಲ್ಲಿ ನೆಲೆಗೊಂಡವರು. ಬೀದರ, ಗುಲಬರ್ಗಾ ಜಿಲ್ಲೆಯ ಗೊಂಡರು ಕುರಿ ಸಾಕಾಣಿಕೆಯನ್ನು ಅವಲಂಬಿಸಿದವರು. ಇವರ ಸಂಸ್ಕೃತಿಯನ್ನು ಕರ್ನಾಟಕದ ಕುರುಬರಲ್ಲಿ ಕಾಣಸಿಗುವುದು. ಉತ್ತರ ಕನ್ನಡ ಜಿಲ್ಲೆಯ ಗೊಂಡರು ಕೃಷಿಯನ್ನು ಅವಲಂಬಿಸಿದವರು. ಇವರ ಸಂಸ್ಕೃತಿಯನ್ನು ಕರ್ನಾಟಕದ ಗೌಡರಲ್ಲಿ ಕಾಣಸಿಗುವುದು.

೦೭. ಗೌಡಲು

ಕರ್ನಾಟಕ ರಾಜ್ಯದಲ್ಲಿ ಗೌಡಾಲು ಬುಡಕಟ್ಟಿನವರು ಚಿಕ್ಕಮಗಳೂರು ಜಿಲ್ಲೆಯ ಕಡೂರು, ಕೊಪ್ಪ ಮತ್ತು ತರಿಕೆರೆ ತಾಲ್ಲೂಕುಗಳಲ್ಲಿ, ಉತ್ತರ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಹಾಸನ, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಗೌಡಲು ಎಂಬ ಪದವು ಗೋವು ಎಂಬುದರಿಂದ ಉಗಮಗೊಂಡಿದೆ. ಗೋವು ಎಂದರೆ ಗೋಪಾಲಕನೆಂದರ್ಥ. ಹೀಗೇ ಗೋವು ಪಾಲಕರೆ ಗೌಡಲು ಆದರೆಂದು ಅರ್ಥೈಸಲಾಗಿದೆ. ಇನ್ನೊಂದು ಅರ್ಥದಲ್ಲಿ ಗೌಡ ಎಂದರೆ ಮುಖ್ಯಸ್ಥ ಎಂಬ ಅರ್ಥವು ಇದೆ. ಅದು ಇವರ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸುತ್ತದೆ. ಹಿಂದೆ ಇವರು ಒಕ್ಕಲಿಗ ಸಮುದಾಯದ ಮಧು ಮಕ್ಕಳ ಪಲ್ಲಕ್ಕಿಯನ್ನು ಹೋರುವವರಾಗಿರುವುದರಿಂದ ಇವರಿಗೆ ಕೊಡಿಗೆಯವರು ಎಂದು ಸಹ ಕರೆಯಲಾಗುತ್ತಿತ್ತು. ಇವರು ಸೇಂದಿ ಇಳಿಸುವ ಬಿಲ್ಲವರಿಗಿಂತಲೂ ಭಿನ್ನರು. ಇವರು ಹಿಂದೆ ಖರ್ಜೂರ ಸಂಗ್ರಹಿಸುವ ಕಾಯಕದಲ್ಲಿದ್ದರು. ಈ ಸಮುದಾಯದ ಪುರುಷರು ತಮ್ಮ ಹೆಸರಿನಲ್ಲಿ ಗೌಡ ಎಂಬ ಪದವನ್ನು ಸೇರಿಸಿಕೊಳ್ಳುವ ಸಂಪ್ರದಾಯ ಹೊಂದಿದ್ದಾರೆ.

ಗೌಡಲು ಬುಡಕಟ್ಟು ೫ ಪಂಗಡಗಳನ್ನು ಹೊಂದಿದೆ. ಇವರು ಕುಂಬ್ರಿ ಬೇಸಾಯ ಮಾಡುತ್ತಾರೆ. ಅಂದರೆ ಅರಣ್ಯವನ್ನು ಬೆಂಕಿ ಇಟ್ಟು ಶುಚಿಗೊಳಿಸಿ ಬೇಸಾಯ ಮಾಡುವುದು ಎಂದರ್ಥ. ಗೌಡಲುರನ್ನು ಗೌಡಲ, ಗಂಡೋ ಹಾಗೂ ಗೌಡ ಎಂತಲೂ ಕರೆಯುತ್ತಾರೆ. ಇವರಲ್ಲಿ ಜಾತಿ ಪಂಚಾಯ್ತಿ ಉಂಟು. ಇವರದು ಕನ್ನಡ ಮಾತೃ ಭಾಷೆಯಾಗಿದೆ. ೧೯೭೧ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ೫೧೪೬ ಇದ್ದರೆ, ೧೯೮೧ರ ಜನಗಣತಿ ಪ್ರಕಾರ ೬೨೨೩ ಎಂದು ದಾಖಲಾಗಿದೆ. ಇವರು ಶೈವ ಮತ್ತು ವೈಷ್ಣವ ಮತಾವಲಂಬಿಗಳಾಗಿದ್ದಾರೆ. ವೆಂಕಟರಮಣ, ಲಕ್ಷ್ಮಿ, ಕೈಲಾಸೇಶ್ವರ ಇತ್ಯಾದಿ ದೇವತೆಗಳನ್ನು ಆರಾಧಿಸುತ್ತಿದ್ದರು. ಯುಗಾದಿ, ದಸರಾ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಇವರು

ಆಚರಿಸುತ್ತಿದ್ದರು.[೧೯]

ಈ ಬುಡಕಟ್ಟಿನ ಕುಲಕಸಬುಗಳನ್ನು ಹೇಳುವುದು ಕಷ್ಟಕರ. ಹಿರಿಯರ ಹೇಳಿಕೆ ಪ್ರಕಾರ, ಬೇಟೆಗಾರಿಕೆ ಮತ್ತು ಪಶುಪಾಲನೆ ಇವರ ಮೂಲ ಕಸಬೆಂದು ಹೇಳಬಹುದು. ಇಂದಿಗೂ ಪಕ್ಷಿ, ಪ್ರಾಣಿ ಮತ್ತು ಮೀನಿನ ಬೇಟೆ ಇವರಲ್ಲಿ ಸಹಜವಾಗಿರುತ್ತದೆ. ಬೇಟೆಗಾಗಿ ಬಿಲ್ಲು, ಬಾಣ, ಬಲೆ, ಕತ್ತಿಗಳನ್ನು ಬಳಸುತ್ತಾರೆ. ಕೋಳಿ, ಕುರಿ, ಹಂದಿ, ಜೇನು, ದನ ಕರುಗಳು ಇತ್ಯಾದಿಗಳ ಸಾಕಾಣಿಕೆಯು ಇವರ ಆರ್ಥಿಕತೆಯನ್ನು ಉತ್ತಮ ಪಡಿಸುವುದರಲ್ಲಿ ಸಹಕಾರಿಯಾಗಿದೆ. ಇವರಲ್ಲಿ ಇಂದು ಬಹುಸಂಖ್ಯಾತರು ಕೃಷಿಯನ್ನೇ ಅವಲಂಬಿಸಿರುವರು. ಗೌಡಲು ಸ್ತ್ರೀಯರು, ಉರುವಲು, ಗೆಡ್ಡೆ-ಗೆಣಸು ಸಂಗ್ರಹಿಸುವುದರೊಂದಿಗೆ, ಆರ್ಥಿಕ, ಸಾಮಾಜಿಕ ಸಂಪ್ರದಾಯ, ಧಾರ್ಮಿಕ ಕಾರ್ಯಗಳಲ್ಲಿ ಕುಟುಂಬಕ್ಕೆ ಮತ್ತು ಸಮುದಾಯಕ್ಕೆ ಸಹಕಾರಿಯಾಗುವರು.

೦೮.ಹಕ್ಕಿಪಿಕ್ಕಿ

ಈ ಬುಡಕಟ್ಟು ಜನರು ಗುಜರಾತ, ರಾಜಸ್ಥಾನದ ಗಡಿಯಿಂದ ಆಂಧ್ರಪ್ರದೇಶದ ಮೂಲಕ ಕರ್ನಾಟಕಕ್ಕೆ ಬಂದವರು. ಇವರು ಹೆಚ್ಚಾಗಿ ಬೆಂಗಳೂರು, ಮೈಸೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಬಳ್ಳಾರಿ ಜಿಲ್ಲೆಗಳಲ್ಲಿ ವಾಸವಾಗಿದ್ದರೂ ಇವರನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಮಾನ್ಯವಾಗಿ ಕಾಣಬಹುದು. ಪಿಕ್ಕಿ ಇವರ ಮೂಲ ವೃತ್ತಿ. ಹಕ್ಕಿ ಹಿಡಿಯುವುದರಿಂದ ಹಕ್ಕಿಪಿಕ್ಕಿ ಎಂದು ಕರೆಯಲಾಗಿದೆ. ಕನ್ನಡದಲ್ಲಿ ಹಕ್ಕಿ ಎಂದರೆ ಪಕ್ಷಿ ಎಂದರ್ಥ. ಹಕ್ಕಿಗೆ ಪಕ್ಕಿ ಎನ್ನುವ ಬೇರೆ ಪದ ಸೇರಿಸಲಾಗಿದೆ. ಇವರು ಮೂಲತಃ ಗುಜರಾತಿ ಗಡಿಯವರು. ಇಂಡೋ ಆರ್ಯನ್ ಭಾಷೆಯಾದ ವಾಘ್ರಿಯನ್ನು ಮಾತನಾಡುತ್ತಾರೆ. ಗಂಡಸರು ಮತ್ತು ಹೆಂಗಸರು ಈ ಜನಾಂಗದಲ್ಲಿ ತುರುಬು ಕಟ್ಟಿಕೊಳ್ಳುವುದೊಂದು ವಿಶೇಷ. ಹೆಣ್ಣು ಹೆಚ್ಚಾಗಿ ಸೀರೆಯನ್ನು ಧರಿಸಿದರೆ, ಗಂಡಸರು ಪಂಚೆ ಧರಿಸುತ್ತಾರೆ. ಹಕ್ಕಿಪಿಕ್ಕಿಯಲ್ಲಿ ಮುಖ್ಯವಾಗಿ ಎರಡು ಉಪಜಾತಿಗಳಿವೆ. ಅವುಗಳು ವೊಹೊತೋ ಹಾಗೂ ನಾಹ್ನೋ. ಮೊದಲನೆಯದರಲ್ಲಿ ಗುಜರಾತಿ, ಪನವಾರ್, ಕಲಿವಾಲ ಹಾಗೂ ಮೇವಾರ ಎಂಬ ನಾಲ್ಕು ಬೆಡಗುಗಳಿವೆ.[೨೦] ಇವುಗಳನ್ನು ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಯ ಆಧಾರಗಳ ಮೇಲೆ ವಿಭಾಗಿಸಲಾಗಿದೆ. ತಂದೆಯ ಸಹೋದರಿಯ ಮಗಳ ಅಥವಾ ತಾಯಿಯ ಸಹೋದರನ ಮಗಳ ಜೊತೆಗೆ ಮದುವೆಯು ಸಾಧ್ಯವಿದೆ. ವಿಧವಾ ವಿವಾಹಕ್ಕೆ ಅವಕಾಶವಿದೆ. ನವಿಲಿನಂತೆ ಕೂಗಿ ನವಿಲುಗಳನ್ನು ಹಿಡಿಯುವುದಾಗಲಿ, ಹಕ್ಕಿಗಳನ್ನು ಹೊಡೆದು ಕೆಡುವುವುದಾಗಲಿ ಇವರಿಗೆ ಬಹಳ ಸುಲಭವಾದ ಕೆಲಸ. ಹಕ್ಕಿಗಳನ್ನು ಹಿಡಿಯುವುದು, ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು ಇವರ ವೃತ್ತಿಯಾಗಿದೆ. ಕರಿಮಣಿ, ಸೂಜಿ, ಡಬ್ಬಣ, ಟೇಪು, ಬಾಚಣಿಗೆ, ಪೌಡರ್ ಇತರೆ ಅಲಂಕಾರಿಕ ಸಾಮಗ್ರಿಗಳನ್ನು ಮಾರುತ್ತಾ, ಬಹಳಷ್ಟು ಜನ ಅಲೆಮಾರಿಗಳಾಗಿ ಜೀವಿಸುತ್ತಿದ್ದಾರೆ. ಇತ್ತೀಚಿಗೆ ಕೆಲವರು ಕೃಷಿ ಕೂಲಿಗಳಾಗಿಯೂ ದುಡಿಯುತ್ತಾರೆ. ಇವರು ಚಾಮುಂಡಿ, ದುರ್ಗಮ್ಮ, ಕಲ್ಲಮ್ಮ, ಯಲ್ಲಮ್ಮ, ದೇವತೆಗಳನ್ನು ಆರಾಧಿಸುತ್ತಾರೆ. ಆಧುನಿಕ ಶಿಕ್ಷಣದಲ್ಲಿ ಹೆಚ್ಚಿನ

ಆಸಕ್ತಿ ಇರುವುದಿಲ್ಲ. ಕುಟುಂಬ ಯೋಜನೆಯ ಬಗ್ಗೆ ಕಾಳಜಿಯೂ ಇಲ್ಲ. ಇವರನ್ನು ಹಲವಾರು ಅಭಿವೃದ್ಧಿ ಯೋಜನೆಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಇವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ಇವರ ಅಭಿವೃದ್ಧಿಗಾಗಿ ಸರ್ಕಾರ ಪ್ರತ್ಯೇಕ ಯೋಜನೆಯನ್ನು ರೂಪಿಸಿ ಅಭಿವೃದ್ಧಿ ಪಥದಲ್ಲಿ ತರಲು ಶ್ರಮಿಸುತ್ತಿದೆ.

೦೯. ಹಸಲರು

ಇವರು ಕಪ್ಪು ಬಣ್ಣದ ಗುಂಗರು ಕೂದಲಿನ ಮತ್ತು ದಪ್ಪ ತುಟಿಯ ಜನ. ಈ ಜನ ಅಲೆಮಾರಿಗಳಾಗಿದ್ದವರು, ಕಾಡಿನಲ್ಲಿ ಶಂಖು ತಲೆಯಾಕಾರದ ಗುಡಿಸಲುಗಳಲ್ಲಿ ವಾಸವಾಗಿದ್ದವರು. ಬಹಳಷ್ಟು ಜನ ತಮ್ಮ ಜೀವನಕ್ಕೆ ಕಾಡಿನಲ್ಲಿ ಸಿಗುವ ಜೇನು ಮತ್ತು ಇತರೆ ವಸ್ತುಗಳನ್ನು ಅವಲಂಬಿಸಿರುತ್ತಾರೆ. ಇನ್ನೂ ಕೆಲವರು ಕಾಫಿತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ.[೧೭] ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ.

೧೦. ಇರುಳರು

ಇವರು ಕಪ್ಪು ಬಣ್ಣದ ಅಗಲ ಮೂಗಿನ ಗುಂಗುರು ಕೂದಲಿನ ಜನ. ಇವರ ಹೆಸರೇ ಸೂಚಿಸುವಂತೆ ಬಹಳ ಕಪ್ಪು ಬಣ್ಣದವರು. ಕಾಡಿನ ವಸ್ತುಗಳನ್ನು ಸಂಗ್ರಹಿಸುವುದು ಇವರ ಮುಖ್ಯ ಕಸಬು. ಇವರಾಡುವ ಭಾಷೆಯಲ್ಲಿ ತಮಿಳಿನ ಮತ್ತು ಕನ್ನಡದ ಅಂಶಗಳನ್ನು ಕಾಣಬಹುದು. ಇವರ ಮಾತೃ ಭಾಷೆ ಇರುಳ್. ಥರಸ್ಟನ್ ಇವರನ್ನು ತಮಿಳುನಾಡಿನ ಉತ್ತರ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಗುರುತಿಸಿದ್ದಾರೆ. ೧೯೮೧ರ ಜನಗಣತಿಯ ಪ್ರಕಾರ ಈ ಬುಡಕಟ್ಟಿನ ಜನಸಂಖ್ಯೆ ಕೇವಲ ೩೧೩ ಎಂದು ದಾಖಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ೧೧ ದಾಖಲಾಗಿದೆ. ಮೊದಲಿನಿಂದಲೂ ಕುಮರಿ ಬೇಸಾಯ ಮಾಡುತ್ತಿರುವರಾದರೂ ಈಗೀಗ ವ್ಯವಸ್ಥಿತ ಬೇಸಾಯಕ್ಕೆ ನಿಂತಿದ್ದಾರೆ. ಬಿದಿರು, ಜೇನು ಮತ್ತು ಕಟ್ಟಿಗೆಗಳನ್ನು ಕಾಡಿನಿಂದ ಸಂಗ್ರಹಿಸಿ ತಂದು ಮಾರುವುದನ್ನು ಕೂಡ ಮಾಡುತ್ತಿದ್ದಾರೆ. ಕೆಲವರು ಕೋಳಿ ಮತ್ತು ಕುರಿಗಳನ್ನು ಸಾಕುತ್ತಿದ್ದಾರೆ.

೧೧. ಇರುಳಿಗ

ಇವರನ್ನು ಇರುಳ, ಇರುಳರ್, ಇರುಳಿಗರ್, ಕಾಡು ಪೂಜಾರಿ, ಕಸುಬ ಎಂತಲೂ ಕರೆಯುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ, ಮಾಗಡಿ, ಕನಕಪುರ ಹಾಗೂ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕುಗಳಲ್ಲಿ ಇರುಳಿಗರು ಇರುವುದನ್ನು ಎಂ. ಭೈರೇಗೌಡರು ದಾಖಲಿಸಿದ್ದಾರೆ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಪ್ಪನಕಟ್ಟೆ, ಅನುಗೋಡು, ನೇರಳೆಕುಪ್ಪೆ, ಪಿರಿಯಾಪಟ್ಟಣ ತಾಲ್ಲೂಕಿನ ಹಂದಿಗುಡ್ಡೆ ಇತ್ಯಾದಿ ಹಾಡಿಗಳಲ್ಲಿ ಕಂಡು ಬರುವ ಇರುಳಿಗರನ್ನು ಕಾಡು ಕುರುಬ ಮತ್ತು ಜೇನು ಕುರುಬರೆಂದು ಸರ್ಕಾರ ದಾಖಲಿಸಿದೆ. ಇದಕ್ಕೆ ಪುಷ್ಟಿ ನೀಡುವಂತೆ ೧೮೯೧ರ ಜನಗಣತಿ ಹೀಗೆ ವರದಿ ಮಾಡಿದೆ. (The Madras Census report 1891 suggest that the triblas are the representatives of kurubas. who fled to the jungles at the close of the anicent kurumba supremacy. (Luiz A.A.D. 1963.P.71)[೧೮] ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಕೊಳ್ಳೆಗಾಲ ತಾಲ್ಲೂಕುಗಳಲ್ಲಿಯೂ ಹಾಗೂ ಕೋಲಾರ,

ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಮತ್ತು ಕಾವೇರಿ ನದಿ ಬಯಲು ಪ್ರದೇಶಗಳಲ್ಲಿಯೂ ಇವರು ಹರಡಿ ಕೊಂಡಿದ್ದಾರೆ. ಹಿಂದೆ ಕೆಲವೊಮ್ಮೆ ಇವರನ್ನು ಚೆಂಚು ಮತ್ತು ಯೆರವ ಯನಾದಿಗಳೆಂದು ಕರೆಯುತ್ತಿದ್ದರಂತೆ. ಇರುಳ್ ಎಂಬ ಪದಕ್ಕೆ ಅರ್ಥ ರಾತ್ರಿ, ಕತ್ತಲು, ಕಪ್ಪು ಎಂಬ ಅರ್ಥಗಳಿವೆ. ಇವರು ಇಲಿ ಹಿಡಿದು ತಿನ್ನುವುದರಿಂದ ಈ ಸಮೂಹವನ್ನು ಇಲ್ಲಿಗರೆಂದು ಕರೆದರು. ಆದರೆ ಇವರು ಇಲ್ಲಿಗರೆಂದು ಕರೆದು ಕೊಳ್ಳಲು ಇಷ್ಟಪಡದೆ, ಕಾಡು ಪೂಜಾರಿಗಳೆಂದು ಕರೆದುಕೊಳ್ಳಲು ಇಷ್ಟ ಪಡುತ್ತಾರೆ. ಹಿಂದೆ ಗುಹೆಗಳು ಇವರ ವಾಸ ಕೇಂದ್ರವಾಗಿದ್ದವು. ಅಲ್ಲಿ ಕಾಡೇ ದೇವರುಗಳನ್ನು ಪೂಜಿಸುತ್ತಿದ್ದರಿಂದ ಇವರಿಗೆ ಕಾಡು ಪೂಜಾರಿಗಳೆಂದು ಹೆಸರು ಬಂದಿರಬಹುದು.

ಇರುಳಿಗರನ್ನು ಶಾರೀರಿಕ ಲಕ್ಷಣಗಳಿಂದ ಪತ್ತೆ ಹಚ್ಚಬಹುದು. ನೀಗ್ರೋ ಮತ್ತು ಮಂಗೋಲಿಯನ್ ಜನಾಂಗದಂತೆ ಗುಂಗುರು ಕೂದಲು, ಉಬ್ಬಿದಹಲ್ಲು ಕಂದು ಅಥವಾ ಕಪ್ಪು ಮೈ ಬಣ್ಣದಂತಹ ಲಕ್ಷಣಗಳನ್ನು ಹೊಂದಿದ್ದಾರೆ. ಇವರನ್ನು ೧೮೭೧ರ ಅಪರಾಧಿ ಬುಡಕಟ್ಟೆಂದು ಪಟ್ಟಿಗೆ ಸೇರಿಸಲಾಗಿತ್ತು. ೧೯೨೧ರ ಜನಗಣತಿಯಲ್ಲಿ ಇದೊಂದು ಅಪರಾಧಿ ಬುಡಕಟ್ಟೆಂದು ಹಾಗೂ ಅನುಸೂಚಿತವಲ್ಲದ ಬುಡಕಟ್ಟು (De notifed Tribe) ಎಂದು ದಾಖಲಾಗಿದೆ. ಕರ್ನಾಟಕದ ಇರುಳಿಗರು, ಕೇರಳದ ಇರುಳರು ಹಾಗೂ ತಮಿಳು ನಾಡಿನ ಇರುಳಿಗರು ಇದ್ದು, ಕೇರಳದ ಇರುಳರು ಹಾಗೂ ತಮಿಳುನಾಡಿನ ಇರುಳರ್ ಒಂದೇ ಮೂಲದವರಾಗಿರುವರು. ಅವರೆಲ್ಲರು ಬುಡಕಟ್ಟಿನ ಪಟ್ಟಿಗೆ ಸೇರಿರುತ್ತಾರೆ. ಇವರು ಬೆಟ್ಟದ ತಪ್ಪಲಿನಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಅವರೆಲ್ಲರು ಬುಡಕಟ್ಟಿನ ಪಟ್ಟಿಗೆ ಸೇರಿರುತ್ತಾರೆ. ಇವರು ಮದ್ದೂರಮ್ಮ, ಮರಿಯಮ್ಮ, ಶಿವ, ಮುತ್ತರಾಯ, ತಿಮ್ಮರಾಯ, ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಹುಲಿ ಮತ್ತು ಹಾವುಗಳನ್ನು ಪೂಜಿಸುವುದುಂಟು, ಮಾಂಸಹಾರಿಗಳಾಗಿದ್ದರು. ಇರುಳಿಗರ ಜಾತಿ ಪಂಚಾಯ್ತಿ ವ್ಯವಸ್ಥಿತವಾಗಿತ್ತು. ಇವರಲ್ಲಿ ಸಾಕ್ಷರತೆ ಕಡಿಮೆ. ೧೯೮೧ರ ಜನಗಣತಿಯ ಪ್ರಕಾರ ಶೇ. ೧೨.೯೦ ರಷ್ಟು ಸಾಕ್ಷರತೆ ದಾಖಲಾಗಿದೆ. ಬೇಟೆ, ಪಶುಪಾಲನೆ, ಕೃಷಿಕೂಲಿ, ಹಾಗೂ ಕೃಷಿ ಇವು ಇರುಳಿಗರ ಆರ್ಥಿಕ ಚಟುವಟಿಕೆಗಳಾಗಿವೆ. ಇವರು ಕಾಡುಕೋಳಿ ಹಾಗೂ ಮೊಲದ ಬೇಟೆಗಾಗಿ ವಿಭಿನ್ನ ತಂತ್ರಗಳನ್ನು ಅಳವಡಿಸಿ ಕೊಂಡಿದ್ದಾರೆ. ಗೆಡ್ಡೆ ಗೆಣಸು ಸಂಗ್ರಹಣೆಯಲ್ಲಿ, ಜೇನು ಕೀಳುವುದರಲ್ಲಿ ಇವರು ಪರಿಣಿತರು. ಕೃಷಿ, ಕೃಷಿಕೂಲಿ ಇವರ ಬದುಕಿಗೆ ಆಶ್ರಯ ನೀಡಿದೆ.

೧೨. ಜೇನು ಕುರುಬ

ಇವರು ಕಾಡಿನಲ್ಲಿ ವಾಸಿಸುತ್ತಿರುವ ಒಂದು ಬುಡಕಟ್ಟು ಸಮುದಾಯ. ಇವರ ಮೂಲ ಕಸಬು ಅರಣ್ಯಗಳಲ್ಲಿ ಜೇನು ತುಪ್ಪವನ್ನು ಸಂಗ್ರಹಿಸುವುದಾಗಿದ್ದರಿಂದ ಜೇನುಕುರುಬರೆಂದು ಗುರುತಿಸಲ್ಪಟ್ಟಿದ್ದಾರೆ. ಈ ಬುಡಕಟ್ಟು ಸಮುದಾಯ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಚಾಮರಾಜನಗರ ಜಿಲ್ಲೆ, ಬಿಳಿಗಿರಿರಂಗನ ಬೆಟ್ಟ, ಕೊಡಗು ಜಿಲ್ಲೆಯ ನಾಗರಹೊಳೆ, ವಿರಾಜಪೇಟೆ, ಸೋಮವಾರಪೇಟೆಗಳಲ್ಲಿ ಹೇರಳವಾಗಿ ಕಂಡುಬರುತ್ತಾರೆ. ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಮಂಡ್ಯಗಳಲ್ಲಿ ಮತ್ತು ಶಿವಮೊಗ್ಗಗಳಲ್ಲಿ ಕಾಣಬಹುದು. ಇವರನ್ನು ೧೯೭೦ರ ಕೊಡಗಿನ ಗೆಜಿಟಿಯರ್‌ನಲ್ಲಿ ಪ್ರತ್ಯೇಕವಾಗಿ ವರ್ಗೀಕರಿಸಿರುತ್ತಾರೆ. ರಿಕ್ಬರ್‌ರವರ ಪ್ರಕಾರ "ಜೇನುಕುರುಬರು, ಕಕೇಷಿಯನ್ನರಿಗಿಂತ ಮಂಗೋಲಿಯನ್ ಜನಾಂಗದವರನ್ನು ಹೋಲುತ್ತಿದ್ದು, ಇವರ ಕೆನ್ನೆ ಮೂಳೆಯು

ಉಬ್ಬಿಕೊಂಡು ಎದ್ದುಕಾಣುವುದಾಗಿದೆ”.[೧೯] ಎಂದು ವಿವರಿಸಿದ್ದಾರೆ.

ಈ ಬುಡಕಟ್ಟು ಜನಾಂಗದಲ್ಲಿ ಸೋದರ ಸಂಬಂಧಿಗಳ ನಡುವೆ ವಿವಾಹ ಹೆಚ್ಚಾಗಿ ಕಂಡುಬಂದಿರುತ್ತದೆ. ವಿಧವಾ ವಿವಾಹಕ್ಕೆ ಅವಕಾಶವಿದೆ. ಗಂಡು ಮಕ್ಕಳನ್ನು ವಂಶದ ಉದ್ಧಾರಕರೆಂದು ಭಾವಿಸಿದ್ದಾರೆ. ತಂದೆಯ ಮರಣದ ನಂತರ ಹಿರಿಯ ಮಗ ಮನೆಯ ಯಜಮಾನನಾಗುತ್ತಾನೆ. ಮಹಿಳೆಯರು ಮನೆಯ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಮನೆಯ ಆದಾಯ ಹೆಚ್ಚಾಗಲು ಸಹಾಯವಾಗುತ್ತಿದ್ದಾರೆ. ಹೆಣಗಳನ್ನು ಹೂಳುವ ಪದ್ಧತಿಯನ್ನು ಅನುಸರಿಸಿ ಸೂತಕ ವಿಧಾನವನ್ನು ಅನುಸರಿಸುತ್ತಾರೆ. ಜೇನು ಸಂಗ್ರಹಣೆ, ಗಿಡಮೂಲಿಕೆ, ಹಣ್ಣು ಹಂಪಲಗಳು, ಗೆಡ್ಡೆಗೆಣಸುಗಳನ್ನು ಸಂಗ್ರಹಿಸುವುದು ಇವರ ಮೂಲ ವೃತ್ತಿಯಾಗಿದೆ. ಇವರು ಚಿಕ್ಕಮ್ಮ, ದೊಡ್ಡಮ್ಮ, ಪಟಾಲಮ್ಮ, ಇತ್ಯಾದಿ ಗ್ರಾಮದೇವತೆಗಳನ್ನು ಪೂಜಿಸುತ್ತಾರೆ. ಕುಟುಂಬ ನಿಯಂತ್ರಣಕ್ಕೆ ಇವರಲ್ಲಿ ಆಸಕ್ತಿಯಿಲ್ಲ. ಸರ್ಕಾರವು ಇವರಲ್ಲಿ ಕೆಲವರಿಗೆ ಉಳಿಮೆ ಮಾಡಲು ಭೂಮಿಯನ್ನು ನೀಡಿದೆ. ಇದರ ಜೊತೆಗೆ ವಸತಿ ಯೋಜನೆಯಡಿ ಮನೆಗಳನ್ನು ನೀಡಿದ್ದು, ಅವುಗಳು ಸರಿಯಾದ ರೀತಿ ಉಪಯೋಗಕ್ಕೆ ಬರುತ್ತಿಲ್ಲ. ಸರ್ಕಾರದಿಂದ ನೀಡುವಂತಹ ಯೋಜನೆಗಳನ್ನು ಪಡೆಯುವಲ್ಲಿ ತೀರಾ ಹಿಂದುಳಿದ ಇತರೆ ಬುಡಕಟ್ಟು ರೀತಿಯಲ್ಲಿವೆ.

೧೩. ಕಾಡು ಕುರುಬ

ಕುರುಬ ಎಂಬುದು ಕುರಿಕಾಯುವ ಸಾಂಪ್ರದಾಯಿಕ ವೃತ್ತಿಯನ್ನು ಅವಲಂಬಿಸಿರುವ ಸಮುದಾಯದ ಹೆಸರು. ಮೈಸೂರು ಪ್ರಾಂತ್ಯದ ದಕ್ಷಿಣ ಭಾಗದಲ್ಲಿಯ ಕುರುಬರನ್ನು ಊರುಕುರುಬ ಮತ್ತು ಕಾಡು ಕುರುಬ ಎಂದು ಕರೆಯುತ್ತಾರೆ. ಕಾಡುಕುರುಬರನ್ನು ಮತ್ತೇ ಬೆಟ್ಟ ಕುರುಬ ಹಾಗೂ ಜೇನುಕುರುಬ ಎಂದು ವಿಂಗಡಿಸಿದ್ದಾರೆ.

ಮಾನವಶಾಸ್ತ್ರಜ್ಞರು ಕಾಡು ಕುರುಬರು, ಊರು ಕುರುಬರಿಗಿಂತ ಅಥವಾ ಕುರುಬರಿಗಿಂತ ಭಿನ್ನವಾಗಿದ್ದರೆಂದು ಅಭಿಪ್ರಾಯ ಪಡುತ್ತಾರೆ.[೨೦] ಈ ಬುಡಕಟ್ಟು ಸಮುದಾಯ ಕಾಡುವಾಸಿಗಳಾಗಿದ್ದು, ಬೆತ್ತ ಅಥವಾ ಬಿದಿರನ್ನು ಬಳಸಿ ಮೊರ, ಬುಟ್ಟಿ ಇತ್ಯಾದಿ ವಸ್ತುಗಳನ್ನು ತಯಾರಿಸುವ ಬುಡಕಟ್ಟಿನ ಜನರನ್ನು ಬೆಟ್ಟ, ಬೆತ್ತ ಅಥವಾ ಕಾಡುಕುರುಬರೆಂದು ಕರೆಯಲಾಗಿದೆ.

ಜೇನು ಕುರುಬ ಮತ್ತು ಕಾಡು ಕುರುಬರಲ್ಲಿ ಶಾರೀರಿಕ ಲಕ್ಷಣಗಳಲ್ಲಿ ಹೆಚ್ಚು ವ್ಯತ್ಯಾಸಗಳು ಕಂಡುಬರದಿದ್ದರೂ ಭಾಷೆ, ತೊಡುಗೆ, ವೃತ್ತಿ ಹಾಗೂ ಮತ್ತಿತರ ಸಾಂಸ್ಕೃತಿಕ ಅಂಶಗಳಲ್ಲಿ ಈ ಬುಡಕಟ್ಟು ಸಮುದಾಯಗಳ ನಡುವೆ ಹೆಚ್ಚಿನ ಭಿನ್ನತೆ ಇರುವುದನ್ನು ಗುರುತಿಸಬಹುದು. ಕಾಡುಕುರುಬರನ್ನು ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಹುಣಸೂರು, ನಂಜನಗೂಡು, ಗಂಡ್ಲುಪೇಟೆ, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಾಣಬಹುದು. ಇದಲ್ಲದೆ ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಮೈಸೂರು, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರುಗಳಲ್ಲಿ ಕಾಣಬಹುದು. ಕಾಡು ಕುರುಬರು ವಾಸ ಮಾಡುವ ಪ್ರದೇಶವನ್ನು ‘ಹಾಡಿ’ ಎಂಬುದಾಗಿ ಕರೆಯುತ್ತಾರೆ. ಇವರು ಹಾಡಿಗಳನ್ನು ಹೆಚ್ಚಾಗಿ ಒಂದು ತೊರೆ ಅಥವಾ ನೀರಿನ ಸೌಲಭ್ಯಗಳಿರುವ ಸ್ಥಳದಲ್ಲಿ ನಿರ್ಮಿಸಿಕೊಳ್ಳುತ್ತಾರೆ. ಕಾಡುಗಳಲ್ಲಿ

ವಾಸಿಸುವ ಕುಳ್ಳ ಜನಾಂಗದವರಾಗಿರುತ್ತಾರೆ.

೧೯೦೧ರ ಮೈಸೂರು ಜನಗಣತಿ ಪ್ರಕಾರ ಕಾಡು ಕುರುಬರಲ್ಲಿ ಆನೆ, ಜೀವಿನ ಮತ್ತು ಕೊಳ್ಳಿ ಎಂಬ ಮೂರು ಬೆಡಗುಗಳನ್ನು ಕಾಣಬಹುದು. ಇದರ ಜೊತೆಗೆ ಇನ್ನೂ ಹಲವಾರು ಬೆಡಗುಗಳನ್ನು ಗುರುತಿಸಿದ್ದಾರೆ. ಕಾಡು ಕುರುಬರಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಇದರಲ್ಲಿ ಪಿತೃ ಪ್ರಧಾನ ಕುಟುಂಬ ಇರುತ್ತವೆ. ಕಾಡುಕುರುಬರ ವಿವಾಹ ಪದ್ಧತಿ ಸರಳ. ಇವರಲ್ಲಿ ವಿವಾಹಕ್ಕೆ ಯೋಗ್ಯರಾದ ಹುಡುಗಿಯರನ್ನು ಹುಡುಗ ಹೇಳದೆ ಕೇಳದೆ ಕರೆದೊಯ್ಯುವ ಪದ್ಧತಿ ಜಾರಿಯಲ್ಲಿತ್ತೆಂದು ತಿಳಿದು ಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ತಂದೆ ತಾಯಿಗಳೇ ಅವರ ಮಕ್ಕಳ ವಿವಾಹವನ್ನು ನಿರ್ಧರಿಸುವ ಪದ್ಧತಿ ಪ್ರಾಮುಖ್ಯತೆ ಪಡೆಯುತ್ತಿದೆ. ಇವರು ಏಕ ಪತಿತ್ವ : ಏಕಪತ್ನಿತ್ವ ಪದ್ಧತಿಯನ್ನು ಪಾಲಿಸುತ್ತಾರೆ. ವಿಧವಾ ವಿವಾಹಕ್ಕೆ ಅವಕಾಶವಿದೆ. ಎಲ್ಲಾ ಗಂಡು ಮಕ್ಕಳು ತಂದೆಯ ಆಸ್ತಿಯಲ್ಲಿ ಸಮಪಾಲು ಹೊಂದಿರುತ್ತಾರೆ. ಹಿರಿಯ ಮಗನು ತಂದೆಯ ನಂತರ ಮನೆಯ ವಾರಸುದಾರನಾಗುತ್ತಾನೆ. ಹೆಂಗಸರು ಮನೆಯ ಸಾಮಾಜಿಕ, ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

ಕಾಡುಕುರುಬರ ಸಾಂಪ್ರದಾಯಿಕ ವೃತ್ತಿಯೆಂದರೆ, ಬೇಟೆ, ಕೃಷಿ, ಕೃಷಿಕಾರ್ಮಿಕರು ಬುಟ್ಟಿ ಹೆಣೆಯುವುದು ಇತ್ಯಾದಿ. ಇವರು ನೇಗಿಲಿಲ್ಲದೆ ವ್ಯವಸಾಯ ಮಾಡುತ್ತಾರೆ. ಇವರ ಭಾಷೆಯಲ್ಲಿ ಮಲೆಯಾಳಂ, ತುಳು, ತಮಿಳು ಶಬ್ದಗಳನ್ನು ಕಾಣಬಹುದಾಗಿದೆ. ಈ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಗ್ರ ಗಿರಿಜನ ಯೋಜನೆಯನ್ನು ವ್ಯವಸ್ಥೆಗೊಳಿಸಿವೆ. ವಿವೇಕಾನಂದ ಯುವಜನ ಚಳುವಳಿ, ಡೀಡ್, ಸಿ.ಎಸ್.ಐ. ಮುಂತಾದ ಸ್ವಯಂ ಸೇವಾ ಸಂಸ್ಥೆಗಳು ಈ ಜನರ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿ ದುಡಿಯುತ್ತಿವೆ. ಈ ಎಲ್ಲಾ ಸರ್ಕಾರಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಪ್ರಯತ್ನಗಳಿಂದ ಇವರಲ್ಲಿ ಶಿಕ್ಷಣಮಟ್ಟ, ಆರ್ಥಿಕ ಚಟುವಟಿಕೆ ಹಾಗೂ ಆರೋಗ್ಯ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಂಡುಬಂದಿದೆ.

೧೪. ಕಥೋಡಿ, ಕಟ್‌ಕಾರಿ

ಈ ಬುಡಕಟ್ಟು ಕಟ್‌ಕಾರಿ ಎಂತಲೂ ಗುರುತಿಸಲಾಗಿದೆ. ಡೋರ್ ಕಥೋಡಿ, ಡೋರ್ ಕಟಕಾರಿ, ಸೋನ್ ಕಥೋಡಿ, ಸೋನ್ ಕಟ್‌ಕಾರಿ ಬುಡಕಟ್ಟುಗಳು ಕಥೋಡಿಯ ಪರ್ಯಾಯ ಬುಡಕಟ್ಟುಗಳಾಗಿರುವುದರಿಂದ ಇವೆಲ್ಲವುಗಳನ್ನು ೧೯೫೦ರಲ್ಲಿ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಿರುತ್ತಾರೆ.[೨೧] ಕರ್ನಾಟಕ ರಾಜ್ಯದ ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಬುಡಕಟ್ಟು ಜನರನ್ನು ಕಾಣಬಹುದಾಗಿದೆ. ಇವರು ಮರಾಠಿ ಭಾಷೆಯನ್ನು ಹಾಗೂ ದೇವನಾಗರಿ ಲಿಪಿಯನ್ನು ಬಳಸುವರು. ಹಸುವಿನ ಮಾಂಸವನ್ನು ಢೂರ ಕಟ್‌ಕಾರಿಯವರು ತಿನ್ನುವರು. ಆದರೆ ಸೋನ್ ಕಟ್ಕಾರಿಯವರು ಇದನ್ನು ನೀಷೇಧಿಸುವರು. ಇವರು ವಾಸಿಸುವ ನೆಲೆಗೆ ವಾಡಿಗಳೆಂದು ಕರೆಯುತ್ತಾರೆ. ಇವರು ಇದ್ದಿಲು ವ್ಯಾಪಾರವನ್ನು ಮಾಡುತ್ತಾರೆ. ಪೆರೆನ್ ಮತ್ತು ಡೋಲ್ ನೃತ್ಯಗಳು ಇವರ ಸಾಂಪ್ರದಾಯಿಕ ನೃತ್ಯಗಳಾಗಿವೆ. ಕಥೋಡಿಗಳಲ್ಲಿ ಜಾತಿ ಪಂಚಾಯ್ತಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇವರ ಪಂಚಾಯ್ತಿಯಲ್ಲಿ ೫ ಪ್ರಮುಖರಿರುತ್ತಾರೆ. ಇವರು ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದಾರೆ. ಇವರು ಕೃಷಿ

ಆಧಾರಿತ ಕಸುಬುಗಳನ್ನು ಅವಲಂಬಿಸಿದ್ದಾರೆ. ಇವರಲ್ಲಿ ಹಲವರು ದಿನಗೂಲಿ ಕೆಲಸಗಾರರಿದ್ದಾರೆ. ಪಸುಪಾಲನೆ, ಕೋಳಿ ಸಾಕಾಣಿಕೆ ಇವರಿಗೆ ಆದಾಯದ ಮೂಲಾಧಾರಗಳು ಇದರ ಜೊತೆಗೆ ಅರಣ್ಯದಲ್ಲಿ ದೊರೆಯುವ ಕಟ್ಟಿಗೆ ಜೇನು, ಅಂಟು ಇತ್ಯಾದಿಗಳನ್ನು ಸಂಗ್ರಹಿಸುವರು. ಹೆಣ್ಣು ಮಕ್ಕಳು ಸಹ ಕೃಷಿ ಕಾರ್ಯಗಳಲ್ಲಿ ಮನೆಗೆಲಸಗಳಲ್ಲಿ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಗುರುತರವಾದ ಪಾತ್ರವಹಿಸುವರು.

೧೬. ಕೋಲಿಧೋರ್, ಟೋಕರೆ ಕೋಳಿ

ದೇಶದ ಅತ್ಯಂತ ಮುಖ್ಯ ಮತಗಳಲ್ಲಿ ಗಂಗಾಮತವೂ ಒಂದು. ಇದು ನೂರಾರು ನೀರು ಆಶ್ರಿತ ಸಮುದಾಯಗಳಿಗೆ ಜನ್ಮ ನೀಡಿರುವುದು ಅಂಥಹ ನಿರಾಶ್ರಿತರಲ್ಲಿ ಟೋಕರೆ ಕೋಳಿ ಬುಡಕಟ್ಟು ಒಂದು. ಟೋಕರೆ ಅಂದರೆ ದೋಣಿ ಎಂದರ್ಥ. ಕಬ್ಬಲಿ ಎಂಬ ಪದಕ್ಕೆ ಸಂಸ್ಕೃತದಲ್ಲಿ ದೋಣಿ ಎಂದರ್ಥ. ಕಬ್ಬಲಿಗರಿಗೆ ಮರಾಠಿ ಭಾಷೆಯಲ್ಲಿ ಕೋಳಿ ಎಂದೆನ್ನುವರು ಇದರಿಂದ ಕೋಳಿಗಳೇ ಕಬ್ಬಲಿಗರೆಂದು ಅರ್ಥೈಸಲಾಗಿದೆ. ಥರ್ಸ್ಟನ್ ಮತ್ತು ಕೆ. ರಂಗಾಚಾರಿಯವರು ಸಹ ಕೋಳಿಗಳನ್ನು ತಮ್ಮ " Castes and tribes of southern India "ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ. " In the Madras census report 1901 the kolis are described as being a Bombay caste of fishermen and boatmen in south canara ......" ಅಂದರೆ ಕೋಳಿಗಳು ಮುಂಬೈ ಮೀನುಗಾರರು ಹಾಗೂ ದಕ್ಷಿಣ ಕನ್ನಡ ನಾವಿಕರು ಇಲ್ಲವೆ ದೋಣಿ ನಡೆಸುವವರು ಎಂದು ವೇದ್ಯವಾಗುತ್ತದೆ.[೨]

ಕಬ್ಬಿಲಿಗರ ಹುಟ್ಟನ್ನು ಕುರಿತು ಶ್ರೀ ರುದ್ರಭಾರತವೆಂಬ ಬ್ರಹ್ಮಾಂಡ ಪುರಾಣದಲ್ಲಿ ಆದಿರುದ್ರನ ಬಲಪಾದದ ಬೆರಳಿನಲ್ಲಿ ಬಿಲ್ಲ ಕಬ್ಬಿಲರು ಹುಟ್ಟಿದರು ಎಂದು ವಿವರಿಸಲಾಗಿದೆ.

ಈ ಕಬ್ಬಲಿಗರಿಗೆ ೧೦೧ ಕುಲ ಮಿಶ್ರಿಗಳಿದ್ದವು. ಕೋಳಿ ಮತ್ತು ಟೋಕರೆ ಕೋಳಿ ಹಲವಾರು ಪರ್ಯಾಯ ನಾಮಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರದೆ ಇರುವುದರಿಂದ ಮೀಸಲಾತಿಯನ್ನು ಸಮರ್ಪಕವಾಗಿ ಬಳಸಲಾಗಲಿಲ್ಲ. ಇದನ್ನು ಮನಗಂಡ ಕರ್ನಾಟಕ ಸರ್ಕಾರ ಡಿ.ಕೆ. ನಾಯ್ಕರ್ ರವರ ನೇತೃತ್ವದಲ್ಲಿ ಉಪಸಮಿತಿ ಪತ್ತೆಹಚ್ಚಿದೆ. ಗಂಗಾಮತದ ೩೯ ಪರ್ಯಾಯ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ದಿನಾಂಕ ೧೪.೧೧.೧೯೯೬ ರಲ್ಲಿ ಕೇಂದ್ರ ಸರ್ಕಾರಕ್ಕೆ (ಅನುಬಂಧ) ಶಿಫಾರಸ್ಸು ಮಾಡಿದೆ. ಆ ಪಾರ್ಯಯ ಜಾತಿಗಳ ಹೆಸರು ಹೀಗಿದೆ.

೧. ಗಂಗಾಮತ	೨. ಗಂಗಾಕುಲ
೩. ಗೌರಿಮತ	೪. ಅಂಬಿಗ
೫. ಕಬ್ಬಲಿಗ	೬.ಕಬ್ಬೇರ
೭. ಕಬ್ಬೇರಾ	೮.ಬಾಮ್ಮಿ
೯. ಭೋವಿ	೧೦. ಭೊಯಿ
೧೧. ಬೊಯಿ	೧೨. ತೊರೆಯ

೧೩. ಗಾಬ್ಬಿಟ್ ೧೪. ಗೊಬಿಟ್

೧೫. ದಾವತ್ ೧೬. ಗಂಗಾ ಮಕ್ಕಳು

೧೭. ಗಂಗಾಪುತ್ರ ೧೮. ಅಂಬಿಗ್

೧೯. ಬೆಸ್ತ ೨೦. ಕೋಳಿ

೨೧. ಹರಿಕಾಂತ್ರ ೨೨. ಹರಕಾಂತ್ರ

೨೩. ಮೀನುಗಾರ ೨೪. ಬಾರಿಯಾ

೨೫. ಸಿವಿಯಾರ್ ೨೬. ಪರಿವಾರ

೨೭. ಬುಂಡೆ ಬೆಸ್ತರ್ ೨೮. ಮಹಾದೇವ್ ಕೋಳಿ

೨೯. ತಳವಾರ್ ೩೦. ಮಚಲ

೩೧. ಮೊಗವೀರ ೩೨. ಸುಣ್ಣಗಾರ

೩೩. ಬಾರ್ಕಿ ೩೪. ಬೆಸ್ತಾರ್

೩೫. ಸೂರ್ಯವಂಶಿಕೊಳಿ ೩೬. ಜಾಲಗಾರ

೩೭. ಮಚ್ಚಿಗಾಭಿಟ್ ೩೮. ಗಬೀಟ್

೩೯. ದಾಲಿಜ್

ಪ್ರಾದೇಶಿಕ ಹಾಗೂ ಕಾಯಕಗಳಲ್ಲಿಯ ಭಿನ್ನತೆಯಿಂದಾಗಿ ಈ ಸಮುದಾಯವನ್ನು ಮೇಲಿನ ಭಿನ್ನ ಭಿನ್ನ ಹೆಸರುಗಳಿಂದ ಗುರುತಿಸಲಾಗಿದೆ. ದನದ ಚರ್ಮದ ಕೆಲಸ ಮಾಡುವವರಿಗೆ ಡೋರ್ ಎಂದು ಕರೆಯುವರು. ದನದ ಚರ್ಮದಿಂದ ಟೊಕ್ರೆಯ ತಳಭಾಗ ಹೆಣೆದು ಅದನ್ನು ನಡೆಸುವ ಕೋಳಿ ಸಮುದಾಯಕ್ಕೆ ಕೋಳಿ 'ಡೋರ್ ಎಂದು ಕರೆಯಲಾಗಿದೆಯೆಂದು ಎಂದು ಹಲವರ ಅಭಿಪ್ರಾಯವಾಗಿದೆ. ಇವರು ಬ್ರಹ್ಮ, ಭವಾನಿ, ವಾಲ್ಮೀಕಿ. ವ್ಯಾಸ, ಗಂಗಾಪರಮೇಶ್ವರಿ ಇತ್ಯಾದಿಗಳೊಂದಿಗೆ ಸ್ಥಳೀಯ ದೇವರುಗಳನ್ನು ಆರಾಧಿಸುವರು. ಮೀನಿನ ಪಾಲನೆ, ಪೋಷಣೆ, ಮಾಡುವುದು ಇವರ ಮೂಲ ಕಸುಬುಗಳಲ್ಲಿ ಒಂದಾಗಿದೆ. ಬೇಟೆ, ಪಶುಪಾಲನೆ ಹಾಗೂ ಕೃಷಿಯೂ ಇವರಲ್ಲಿ ಪ್ರಮುಖ ಕಸುಬಾಗಿದೆ. ಸುಣ್ಣ ಮಾರುವುದು, ದೋಣಿ ನಡೆಸುವುದು ಇವರ ವೃತ್ತಿಯಾಗಿದೆ. ಸೇತುವೆಗಳ ನಿರ್ಮಾಣದಿಂದಾಗಿ ಇಂದು ಇದು ಅವಸಾನದ ಗತಿಯಲ್ಲಿದೆ. ಹೀಗಾಗಿ ಕೂಲಿ, ಕೃಷಿ ಅನಿವಾರ್ಯವಾಗಿದೆ.

೧೬. ಕೊಂಡ ಕಾಪುಸ್

ಕೊಂಡ ಕಾಪು ಬುಡಕಟ್ಟು ಮುಖ್ಯವಾಗಿ ಆಂಧ್ರಪ್ರದೇಶದಲ್ಲಿ ವಾಸಿಸುವುದು. ಈ ಬುಡಕಟ್ಟಿಗೆ ಕೊಂಡ ದೊರಾ

ಎಂತಲೂ ಕರೆಯಲಾಗುತ್ತಿದೆ. ಕೊಂಡ ಕಾಪು ಎಂಬ ಪದವು ಬೆಟ್ಟ ಮತ್ತು ಕಾವಲಿನಿಂದ ಬಂದಿರುವುದು. ಕೊಂಡ ಕಾಪು ಬೆಟ್ಟ, ಪರ್ವತ, ಗುಡ್ಡ ಎಂದರ್ಥ. ಕಾಪು ಅಂದರೆ ಬೆಟ್ಟದಲ್ಲಿ ಜೀವಿಸುವ ಎಂದರ್ಥ. ೧೯೭೧ರ ಜನಗಣತಿಯ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಕೇವಲ ೭ ಜನ ಕೊಂಡಕಾಪುಗಳು ಇರುವುದು ದಾಖಲಾಗಿದೆ. ಇವರ ಮಾತೃ ಭಾಷೆ ತೆಲುಗು ಇವರು ಮಾಂಸಹಾರಿಗಳು,[೨೩] ಸಂಪ್ರದಾಯ ಜಾತಿ ಪಂಚಾಯ್ತಿಯು ಇವರ ಸಾಮಾಜಿಕ ತಕರಾರುಗಳನ್ನು ಪರಿಹರಿಸುವುದು. ಇವರು ಹಿಂದೂ ಧರ್ಮೀಯರು ಪೂಜಿಸುವ ದೇವತೆಗಳನ್ನು, ಗ್ರಾಮದೇವತೆಗಳನ್ನು ಪ್ರಾದೇಶಿಕ ದೈವಗಳನ್ನು ಆರಾಧಿಸುವರು. ಈ ಕೊಂಡ ಕಾಪುಗಳು ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ವಾಸಿಸುವರು. ಇವರ ಮುಖ್ಯ ವೃತ್ತಿ ಬೇಟೆಗಾರಿಕೆ. ಆಹಾರ ಸಂಗ್ರಹಣೆ, ಕುಮರಿ ಬೇಸಾಯ ಮಾಡುತ್ತಾರೆ.

೧೭. ಕೊರಗ

ಕೊರಗರು ಕರ್ನಾಟಕದ ಆದಿಮ ಬುಡಕಟ್ಟು ಪಟ್ಟಿಗೆ ಸೇರಿದವರು. ಕೊರಗ ಎಂಬುದು ಮಂಗಳೂರಿನ ಬಜಪೆಯ ಹತ್ತಿರ ಇರುವ ಒಂದು ಊರಿನ ಹೆಸರು. ಅದು ಪುರಾತನ ಕಾಲದಲ್ಲಿ ಕೊರಗರು ನೆಲಸಿದ ಕೇರಿಯಾಗಿತ್ತು ಎಂದು ಪೂರ್ವಿಕರ ಅಭಿಪ್ರಾಯವಿದೆ. ಇವರು ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಒಂದು ಉಪ ಪಂಗಡವೆಂದು ಹೇಳಲಾಗಿದೆ. ಕುರುವರ್ ಎಂಬ ಪದಕ್ಕೆ ಬೆಟ್ಟದಲ್ಲಿ ವಾಸಮಾಡುವವರು ಎಂಬ ಅರ್ಥವಿದೆ. ಈ ಪದದಿಂದ ಕೊರಗ ಎಂಬ ಪದ ಬಂದಿರಬಹುದು. ಈ ಪದದ ಉಗಮದ ಬಗ್ಗೆ ನಿಖರವಾಗಿ ಹೇಳುವುದು ಕಷ್ಟಕರವಾಗಿದೆ. ಕೊರಗರು ತುಳು ಮತ್ತು ಕನ್ನಡ ಭಾಷೆಯನ್ನು ಮಾತನಾಡಿ, ಕನ್ನಡ ಭಾಷೆಯನ್ನು ಬಳಸುತ್ತಾರೆ. ಇವರು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯ ಅಲ್ಲಲ್ಲಿ ನೆಲೆಸಿದ್ದು, ಕಾಲಾನುಕ್ರಮ ರಾಜ್ಯದ ಕೆಲವು ಭಾಗಗಳಲ್ಲಿ ಒಂದಲ್ಲಾ ಒಂದು ಕಾರಣದಿಂದ ವಲಸೆ ಬಂದು ನೆಲೆಸಿರುತ್ತಾರೆ.[೨೪]

ಇವರಲ್ಲಿ ಕಂಡುಬರುವ ಮುಖ್ಯ ಉಪ ಪಂಗಡಗಳೆಂದರೆ, ಸೊಪ್ಪು ಕೊರಗ, ಕುಂಟು ಕೊರಗ, ಚಿಪ್ಪಿ ಕೊರಗ, ಒಂಟಿ ಕೊರಗ, ಕುಪ್ಪಟ್ಟ ಕೊರಗ, ಅಂಡೆ ಕೊರಗ, ಬಾಪುಡ ಕೊರಗ ಇತ್ಯಾದಿ. ಈ ವರ್ಗೀಕರಣವನ್ನು ಮಾಡುವಾಗ ವಿದ್ವಾಂಸರು ಇವರ ಉಡುಗೆ ತೊಡುಗೆ ಹಾಗೂ ಆಚಾರ ವಿಚಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುತ್ತಾರೆ. ಕೆ.ಬಿ.ಕೊಪ್ಪದ (೧೯೭೧) ರವರು ಕೊರಗರಲ್ಲಿ ಇರುವ ಹದಿನೇಳು ಬಳಿಗಳನ್ನು ಗುರುತಿಸಿರುತ್ತಾರೆ. ಅವುಗಳೆಂದರೆ ಉಪ್ಪರು, ಅಲೇರು, ಪದ್ವಮ್ಮ, ಚೆರ್ಕಾಡಿ, ಮುಕ್ಕ, ಕೋನಾರು, ಗುತ್ತಾರು, ಕುತ್ತಾರು, ತಾಡಿಯಾರು, ಹಂಜಾರು, ಖಜಗಾರು, ಎಲ್ಕಿಜಿಯಾರು, ಒಜಾರ್ತು, ತಾಲಿಮನೆ, ಕುಂಕರಿಸಿ, ಒಡಿಯರು ಒಂಗೇರು ಇವುಗಳ ಜೊತೆಗೆ ಎ.ವಿ ನಾವಡರವರು ಕೊರಗರು ಪೂಜಿಸುವ ದೈವ ಅಥವಾ ಭೂತಕ್ಕೆ ಸಂಬಂಧಿಸಿದ ಬಳ್ಳಿಗಳನ್ನು ಗುರತಿಸಿದ್ದಾರೆ. ಕುಂದನಾಯ, ಮುಂಜಿತ್ತೆನ್ನಾಯ, ಖಂಗೆರನ್ನಾಯ, ತಡ್ವೆನ್ನಾಯ, ತಿರ್ಗನ್ನಾಯ ಇತ್ಯಾದಿ.[೨೫]

ಸಮುದಾಯ ಮಟ್ಟದಲ್ಲಿ ಒಳಬಾಂಧವ್ಯ ವಿವಾಹ ನಡೆದರೆ, ಬಳಿಗಳ ಮಟ್ಟದಲ್ಲಿ ಹೊರ ಬಾಂಧವ್ಯ ವಿವಾಹ ಪದ್ಧತಿಯನ್ನು ಅನುಸರಿಸುತ್ತಾರೆ. ಇವರಲ್ಲಿ ಗಂಡು ಹೆಣ್ಣುಗಳು ಪರಸ್ಪರ ಭೇಟಿ ಮಾಡಿ ಅವರ ಒಪ್ಪಿಗೆಯ ನಂತರವೇ ಹಿರಿಯರ ಮದುವೆಯ ನಿಶ್ಚಯ ಮಾಡುತ್ತಾರೆ. ಹಿಂದೆ ಮದುವೆ ಮಾಡಬೇಕಾದರೆ ಅವರ ಭೂ ಮಾಲಿಕರ ಒಪ್ಪಿಗೆ

ಪಡೆಯಬೇಕಿತ್ತು. ಆದರೆ ಇಂದು ಈ ಪದ್ಧತಿ ಬದಲಾಗಿದೆ. ಮದುವೆಯು ತಂದೆಯ ಸಹೋದರಿಯ ಮಗಳು ಅಥವಾ ತಾಯಿಯ ಸಹೋದರನ ಮಗಳ ಜೊತೆ ಸಾಧ್ಯವಿದೆ. ಹೆಂಡತಿಯು ವಿಚ್ಛೇದನ ಬಯಸಿದರೆ, ವಧು ದಕ್ಷಿಣೆಯನ್ನು ಗಂಡನಿಗೆ ಹಿಂತಿರುಗಿಸಬೇಕಾಗುತ್ತದೆ. ವಿಧುರ, ವಿಧವೆ ವಿವಾಹಗಳಿಗೆ ಅವಕಾಶವಿದೆ. ಇವರಲ್ಲಿ ಹೆಂಗಸರು ಸಹ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

ಇವರ ಸಾಂಪ್ರದಾಯಕ ವೃತ್ತಿ ಬುಟ್ಟಿ ಹೆಣೆಯುವುದು, ಭಿಕ್ಷೆ ಬೇಡುವುದು ಜೊತೆಗೆ ವ್ಯವಸಾಯದ ಕೂಲಿಗಳಾಗಿ ದುಡಿಯುತ್ತಾರೆ. ಇತ್ತೀಚೆಗೆ ಸರ್ಕಾರ ನೀಡಿದ ಭೂಮಿಯಲ್ಲಿ ಕೆಲವರು ಉಳಿಮೆ ಮಾಡುತ್ತಿದ್ದಾರೆ. ಇವರು ಮೊಸಳೆಗಳನ್ನು ಹಿಡಿಯುವದರಲ್ಲಿ ಪರಿಣಿತರು. ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುವಂತೆ ಕೊರಗ ಸಮುದಾಯದಲ್ಲಿ ಅವರದೇ ನ್ಯಾಯ ವ್ಯವಸ್ಥೆ ಇದೆ. ಇವರ ನೇತೃತ್ವವನ್ನು ಸಮುದಾಯದ ಹಿರಿಯ ವ್ಯಕ್ತಿ ವಹಿಸುತ್ತಾರೆ. ಆತನಿಗೆ ಗುರಿಕಾರ ಎಂದು ಕರೆಯುತ್ತಾರೆ. ನ್ಯಾಯ ವಿಚಾರಣೆಯನ್ನು ಸಾಮಾನ್ಯವಾಗಿ ದೇವರ ಹಬ್ಬ, ಉತ್ಸವ, ಭೂತ ಕೋಲ, ಮದುವೆ, ಸತ್ತವರಿಗೆ ನಡೆಸುವ ವಾರ್ಷಿಕ ಆಚರಣೆಗಳ ಸಂದರ್ಭದಲ್ಲಿ ಕುಟುಂಬದ ಎಲ್ಲಾ ಸದಸ್ಯರೂ ಸೇರಿ, ಸಮಸ್ಯೆಗಳನ್ನು ವಿಚಾರಣೆಗೆ ಒಳಪಡಿಸುವುದು ವಾಡಿಕೆಯಾಗಿದೆ. ಇವರು ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿ ಕೊಳ್ಳುವುದರಲ್ಲಿ ಹಿಂದುಳಿದಿದ್ದಾರೆ. ಆಧುನಿಕ ಶಿಕ್ಷಣದ ಪ್ರಯೋಜನವನ್ನು ಪಡೆದುಕೊಂಡು ಕೊರಗ ಯುವಕ ವಿದ್ಯಾವಂತರು ವ್ಯವಸ್ಥಿತವಾದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಮಾಡುತ್ತಿದ್ದಾರೆ. ಆದರೆ ಇವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಇನ್ನೂ ಸುಧಾರಣೆಯಾಗಬೇಕಾಗಿದೆ.

೧೮. ಕೋಯ, ಭಿನೆ ಕೋಯ

ಇವರು ಆಂಧ್ರಪ್ರದೇಶ, ಮಧ್ಯಪ್ರದೇಶ, ಓರಿಸ್ಸಾ, ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ವಾಸಿಸುತ್ತಿದ್ದಾರೆ. ಒಂದು ಐತಿಹ್ಯದ ಪ್ರಕಾರ ಮಹಾಭಾರತದ ಭೀಮನು ವನವಾಸದಲ್ಲಿದ್ದಾಗ ಕಾಡಿನ ಹೆಣ್ಣೊಂದನ್ನು ಪ್ರೀತಿಸಿ ಮದುವೆಯಾಗಿ ಪಡೆದ ಸಂತಾನವೇ ಕೋಯ ಬುಡಕಟ್ಟು ಎಂದು ಹೇಳುತ್ತಾರೆ. ಕುಯಿ ಇವರ ಮಾತೃಭಾಷೆ. ಇದರ ಜೊತೆಗೆ ಆಯಾ ಪ್ರದೇಶಗಳ ಸ್ಥಳೀಯ ಭಾಷೆಗಳನ್ನು ಮಾತನಾಡುವರು. ಸುಮಾರು ೩೦೦ ವರ್ಷಗಳ ಹಿಂದೆ ಉಂಟಾದ ಬರಗಾಲ, ಕಲಹಗಳಿಂದ ಮಧ್ಯಭಾರತದ ಬಸ್ತರ್‌ನಿಂದ ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕದ ಬೀದರ್, ಗುಲಬರ್ಗಾ, ರಾಯಚೂರುಗಳತ್ತ ವಲಸೆ ಬಂದು ನೆಲೆಸಿರುತ್ತಾರೆ.[೨೬]

ಮಧ್ಯಪ್ರದೇಶದ ಕೋಯಗಳು ತಮ್ಮನ್ನು ದೊರ್ಲಾ ಎಂದು ಕರೆದುಕೊಳ್ಳುತ್ತಾರೆ. ಓರಿಸ್ಸಾದ ಕೋಯಗಳನ್ನು ಕಮರ ಮತ್ತ ಮುಸ್ಕೀ ಕೋಯಗಳೆಂದು ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ರಾಜಕೋಯಾಗಳೆಂದು ಕರೆಯುತ್ತಾರೆ. ಇವರು ಸ್ಥಳೀಯ ದೇವತೆಗಳನ್ನು ಪೂಜಿಸುತ್ತಾರೆ. ಶಿವರಾತ್ರಿ, ದಸರಾ, ಹೋಳಿ ಇತ್ಯಾದಿ ಹಿಂದೂ ಹಬ್ಬಗಳನ್ನು ಆಚರಿಸುವರು. ಇವರಲ್ಲಿ ಜಾತಿ ಪಂಚಾಯ್ತಿ ಇದ್ದು, ಅವರು ಎಲ್ಲಾ ಸಮಸ್ಯೆಗಳನ್ನು ಅಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ೧೯೭೧ರ ಜನಗಣತಿಯ ಪ್ರಕಾರ ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ೩೦ ಜನ ಕೋಯಾಗಳಿದ್ದಾರೆ ೧೯೮೧ರ

ಜನಗಣತಿಯಲ್ಲಿ ಕರ್ನಾಟಕದ ಕೋಯ ಬುಡಕಟ್ಟಿನ ಸಂಖ್ಯೆ ೨೭೮೦೭. ಅಂದರೆ ಕೇವಲ ೧೦ ವರ್ಷಗಳಲ್ಲಿ ೩ ರಿಂದ ೨೭೮೦೭ ಕ್ಕೆ ಏರಲು ಸಾಧ್ಯವಿರುವುದಿಲ್ಲ. ಇದಕ್ಕೆ ಅನ್ಯ ಪಂಗಡಗಳು ಈ ಬುಡಕಟ್ಟಿನ ಹೆಸರನ್ನು ಬಳಸಿಕೊಂಡಿರಬಹುದೆಂದು ಊಹಿಸಲಾಗಿದೆ. ಕೋಯಗಳು ಸಾಂಪ್ರದಾಯಿಕವಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಇವರು ಬೇಟೆ ಹಾಗೂ ಆಹಾರ ಸಂಗ್ರಹಣೆಯಲ್ಲಿ ತೊಡಗುವರು.

೧೯. ಕುರುಮನ್ಸ್

ಇವರು ತಮಿಳುನಾಡು, ಕೇರಳ, ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕುರಮನ್ಸ್ ಎಂದರೆ ಕುರಿಯನ್ನು ಸಾಕುವವರು ಎಂದರ್ಥ. ಥರಸ್ಟನ್‌ರವರ ಪ್ರಕಾರ ಈ ಬುಡಕಟ್ಟಿನ ಮುಖ್ಯ ವೃತ್ತಿ ಮರ ಕಡಿಯುವುದು,[೨೭] ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವುದು. ಇವರನ್ನು ಕುರುಂಬರೆಂದು ಕರೆಯುವರು. ಹಲವಾರು ಅಭಿಪ್ರಾಯಗಳ ಪ್ರಕಾರ ಕುರುಬ, ಕುರಂಬ ಒಂದೇ. ಆದರೆ ಕೆಲವರು ಇದನ್ನು ಒಪ್ಪುವುದಿಲ್ಲ. ಕರ್ನಾಟಕದ ಕುರುಬ, ತಮಿಳುನಾಡಿನ ಕುರುಮನ್ನರ ಬೆಡಗುಗಳು ಒಂದೆಯಾಗಿದೆ. ಇವರ ಮಾತೃ ಭಾಷೆ ಕನ್ನಡ ಹಾಗೂ ತಮಿಳನ್ನು ಬಳಸುತ್ತಾರೆ. ಇವರು ಮಾಂಸಹಾರಿಗಳಾಗಿದ್ದು ದನದ ಮತ್ತು ಹಂದಿಯ ಮಾಂಸವನ್ನು ತಿನ್ನುವುದಿಲ್ಲ. ಮದ್ಯಪಾನಿಗಳು ಇವರಲ್ಲಿ ಜಾತಿ ಪಂಚಾಯ್ತಿ ಇವರ ವ್ಯಾಜ್ಯಗಳನ್ನು ತೀರ್ಮಾನಿಸುವುದು. ಇವರಲ್ಲಿ ಹೆಣವನ್ನು ಹೂಳುವ ಹಾಗೂ ಸುಡುವ ಪದ್ಧತಿ ಇದೆ. ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಶಿಕ್ಷಣದ ಬಗ್ಗೆ ಒಲವು ಇದೆ. ೧೯೭೧ರ ಜನಗಣತಿ ಪ್ರಕಾರ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೇವಲ ೩೨೩ ಕುರುಮನ್ಸ್ ಇದ್ದುದು ದಾಖಲಾಗಿದೆ. ೧೯೮೧ರ ಜನಗಣತಿ ಪ್ರಕಾರ ಈ ಸಂಖ್ಯೆ ೧೩೧ಕ್ಕೆ ಇಳಿದಿರುವುದು ಆಶ್ಚರ್ಯಕರ. ಕುರುಮನ್ನರು ಕಾಳಿ, ಕರಿಯಪ್ಪನ್, ಮರಿಯಮ್ಮ, ಐಯಪ್ಪನ್ ಇತ್ಯಾದಿ ದೈವಗಳನ್ನು ಪೂಜಿಸುತ್ತಿದ್ದಾರೆ. ಕುರಿ ಸಾಕಾಣಿಕೆ ಇವರ ಪ್ರಧಾನ ಕಸಬಾಗಿತ್ತು. ಜೊತೆಗೆ ಕೃಷಿಕರಾಗಿ ಜೀವನ ನಡೆಸುತ್ತಿದ್ದಾರೆ.[೨೮] ಹೆಣ್ಣು ಮಕ್ಕಳು ಮನೆಯಲ್ಲಿ ಕೆಲಸ ಮಾಡಿ ಕೊಂಡು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವರು. ಕಟ್ಟಿಗೆ ಸಂಗ್ರಹಿಸುವುದು, ನೀರು ತರುವುದು, ಮನೆಕೆಲಸಗಳನ್ನು ಹೆಂಗಸರು ಮಾಡುತ್ತಿದ್ದಾರೆ.

೨೦. ಮಹಾಮಲ್ಸರ್

ಇವರನ್ನು ಮಲ್ಲೆ ಮಲಸರು, ಮಲ ಅರಸರ್ ಮತ್ತು ಕುಮತ್ತಿ ಮಕ್ಕಳು ಎಂದು ಕರೆಯಲಾಗುತ್ತಿದೆ. ಇವರು ದಕ್ಷಿಣ ಭಾರತದ ಅಣ್ಣಾಮಲೈ ಬೆಟ್ಟಗಳಲ್ಲಿ ವಾಸಿಸುವರು. ಇವರು ಕೇರಳ ಹಾಗೂ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ವಾಸವಾಗಿದ್ದಾರೆ. ಇವರು ಬೆಟ್ಟದ ಮೂಲದವರೆಂದು ಪರಿಗಣಿಸಿದ್ದಾರೆ. ೧೯೮೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಕೇವಲ ೧೪ ಜನರು ಮಾತ್ರ ದಾಖಲಾಗಿದ್ದಾರೆ. ಇವರು ತಮಿಳು ಮಾತನಾಡುವರು. ಮಾಂಸಹಾರಿಗಳು ಆದರೆ ದನ ಮತ್ತು ಕೋಳಿಯ ಮಾಂಸವನ್ನು ತಿನ್ನುವುದಿಲ್ಲ. ಪುರುಷರು ಮದ್ಯಪಾನ ಮಾಡುವರು. ಪೊಂಗಲ್, ನಂಬಿ ಈ ಹಬ್ಬಗಳನ್ನು ಮುಖ್ಯವಾಗಿ ಆಚರಿಸುತ್ತಾರೆ. ಬಹುಸಂಖ್ಯಾತ ಮಹಾಮಲಸರು ಆಹಾರ ಸಂಗ್ರಾಹಕರು ಹಾಗೂ ಕೃಷಿ ಕೂಲಿಗಳಾಗಿದ್ದಾರೆ. ಇಂದಿಗೂ ಇವರು ದಟ್ಟ ಅರಣ್ಯಗಳಲ್ಲಿ ವಾಸಿಸುತ್ತಿದ್ದಾರೆ. ಇವರನ್ನು ಅರಣ್ಯ ಇಲಾಖೆ, ಕೂಲಿಗೆ ಬಳಸಿಕೊಳ್ಳುತ್ತಿದೆ.[೨೯]

೨೧. ಮಲೈಕುಡಿ

ಕುಡಿಯ ಅಥವಾ ಮಲೆಕುಡಿಯರನ್ನು ಮಲೆಕುಡಿಯಾ, ಕುಡಿಯ, ಬಾರಿಕೆಗೌಡ, ಗೌಡ ಎಂದು ಇತ್ಯಾದಿ ಹೆಸರುಗಳಲ್ಲಿ ಕರೆಯುವರು. 'ಮಲೆಕುಡಿ' ಎಂದರೆ ಮಲೆ ಎಂದರೆ ಬೆಟ್ಟ ಕುಡಿ ಎಂದರೆ ತುದಿ ಎಂದರ್ಥ. ಈ ಪದದ ಅರ್ಥ ಬೆಟ್ಟಗಳ ತುದಿಯಲ್ಲಿ ವಾಸಿಸುವ ಸಮುದಾಯ ಎಂದರ್ಥ. ಅಥವಾ ಬೆಟ್ಟದ ಮಕ್ಕಳೆಂದು ಆಗುತ್ತದೆ. ತುಳು ಮಾತನಾಡುವ ಜನರು ಇವರನ್ನು ಮಲೆತ್ಮಾಯ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡುಗಳ ಬಂಡೆಗಳ ಸಂಧಿಗಳಲ್ಲಿ ಹೆಚ್ಚು ಜನರು ವಾಸವಾಗಿದ್ದಾರೆ. ಆದರೆ ಕೆಲವು ವಿದ್ವಾಂಸರು ಕುಡಿಯ ಮತ್ತು ಮಲೆ ಕುಡಿಯರು ಬೇರೆ ಬೇರೆ ಬುಡಕಟ್ಟು ಪಂಗಡದವರೆಂದು ಅಭಿಪ್ರಾಯಪಡುತ್ತಾರೆ. ಆದರೆ ಥರ್ಸ್ಟನ್ ಮತ್ತು ರಂಗಾಚಾರಿಯವರ ಪ್ರಕಾರ ಕುಡಿಯ ಮತ್ತು ಮಲೆ ಕುಡಿಯ ಗುಂಪುಗಳು ಒಂದೇ ಎಂದು ಹೇಳಿದ್ದಾರೆ.[೩೦] ಮಲೆ ಕುಡಿಯರು ಆಡುವ ಭಾಷೆ ಪ್ರಾಚೀನ ಸ್ವರೂಪದ ತುಳುವಾಗಿರಬೇಕು. ಅವರ ತುಳು ತಮಗೆ ಅರ್ಥವಾಗುವುದಿಲ್ಲವೆಂದು ಇತರೇ ತುಳುಭಾಷಿಗರೇ ಹೇಳುತ್ತಾರೆ. ಕೇರಳ ವಾಸಿಗಳು ಮಲೆಯಾಳಂ ಭಾಷೆಯನ್ನು ಮಾತಾಡಿ ಇತರರೊಂದಿಗೆ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಮತ್ತು ಕನ್ನಡ ಲಿಪಿಯನ್ನು ಉಪಯೋಗಿಸುತ್ತಾರೆ.

ಮಲೆಕುಡಿಯರಲ್ಲಿ 'ಊರುಮಲೆ' ಮತ್ತು 'ನಾಡುಮಲೆ' ಗಳೆಂದು ಎರಡು ಉಪಪಂಗಡಗಳಿವೆ. ಊರಮಲೆ ಪಂಗಡದವರು ತುಂಡು ಭೂಮಿಗಳನ್ನು ಹೊಂದಿ ಕೃಷಿ ಮಾಡುತ್ತಿದ್ದಾರೆ. ಇನ್ನು ಉಳಿದವರು ವ್ಯವಸಾಯ ಮತ್ತು ತೋಟಗಾರಿಕೆಯಲ್ಲಿ ಶ್ರಮಿಕರಾಗಿ ಕೆಲಸ ಮಾಡುತ್ತಿದ್ದರು. ನಾಡುಮಲೆ ಗುಂಪಿನವರು ಕೆಲವೇ ಜನ ಸರ್ಕಾರದಿಂದ ಭೂಮಿಯನ್ನು ಪಡೆದು ಬಿದಿರಿನ ಬುಟ್ಟಿ ಮತ್ತು ಚಾಪೆಯನ್ನು ತಯಾರಿಸಿ ತಮ್ಮ ಆದಾಯವನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ಸಮುದಾಯವು ಸೇರಲ್ಪಟ್ಟಿದೆ. ಆದರು ಆಧುನಿಕ ಸಾಮಾಜಿಕ ವ್ಯವಸ್ಥೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಇವರು ಹಿಂದುಳಿದಿದ್ದಾರೆ. ಇವರನ್ನು ಚಿಕ್ಕಮಗಳೂರು, ಹಾಸನ, ಬಳ್ಳಾರಿ ಜಿಲ್ಲೆಗಳಲ್ಲಿ ಕಾಣಬಹುದು.

೨೨.ಮಲಸರ್

ಇವರನ್ನು ಮಲ್ಸರ್, ಮಲಯಾರ್ ಮತ್ತು ಮಲಸೀರ ಎಂದು ಕರೆಯುತ್ತಾರೆ. ಇವರು ಬೆಟ್ಟದ ತಪ್ಪಲಿನಲ್ಲಿ ವಾಸಿಸುವ ಸಮುದಾಯವಾಗಿದೆ. ಇವರು ಕೇರಳ, ತಮಿಳುನಾಡು ಹಾಗೂ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ೧೯೮೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಈ ಬುಡಕಟ್ಟು ಜನಸಂಖ್ಯೆ ೬೨ ಎಂದು ದಾಖಲಾಗಿದೆ.[೩೧] ಇವರ ಮಾತೃ ಭಾಷೆ, ತಮಿಳು ಹಾಗೂ ಸ್ಥಳೀಯ ಭಾಷೆಗಳನ್ನು ಮಾತನಾಡುತ್ತಾರೆ. ಪ್ರಾಣಿ, ಪಕ್ಷಿಗಳ ಬೇಟೆ, ಪಶುಪಾಲನೆ ಅರಣ್ಯ ಉತ್ಪನ್ನಗಳ ಸಂಗ್ರಹಣೆ ಇವರ ಮುಖ್ಯ ಕಸುಬಾಗಿತ್ತು. ಹೆಂಗಸರು ಕೃಷಿ, ಕೂಲಿ, ಪಶುಪಾಲನೆ ಕಟ್ಟಿಗೆ ಸಂಗ್ರಹಣೆ ಇಂತಹ ಕೆಲಸಗಳಲ್ಲಿ ತೊಡಗುವರು. ಹಲವು ಕೃಷಿಕರಲ್ಲಿ ಜೀತದಾಳುಗಳಾಗಿಯೂ ಇದ್ದಾರೆ.

೨೩. ಮಲಯೆಕಂಡಿ

ಇವರನ್ನು ಕುಡಿಯಾ ಮಲೆಯಕುಡಿಯಾ, ಮಲೇರು ಎಂದು ಕರೆಯಲ್ಪಡುವ ಇವರನ್ನು ಮಲೆಯೆಕಂಡಿ ಎಂದರೆ ಬೆಟ್ಟದ ಮಕ್ಕಳು ಎಂದರ್ಥ. ಇವರನ್ನು ಮಲೆತ್ತಾಯ ಎಂದು ಕರೆಯುವರು. ೧೯೭೧ ಜನಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲಯೆಕಂಡಿ ಜನರ ಸಂಖ್ಯೆ ಕೇವಲ ೪೬ ಎಂದು ದಾಖಲಾಗಿದೆ.[೩೨] ಕುತಿಯಾ ಬುಡಕಟ್ಟುಗಳು ಅನುಸರಿಸುವ ವೃತ್ತಿ ಧಾರ್ಮಿಕ ಜೀವನವನ್ನು ಈ ಸಮುದಾಯವು ಅನುಸರಿಸುತ್ತಿದೆ.

೨೪.ಮಲೇರು

ಈ ಬುಡಕಟ್ಟು ಹಳೇ ಮೈಸೂರು ರಾಜ್ಯದಲ್ಲಿ ೧೯೫೦ ರಿಂದಲೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇದೆ. ಕನ್ನಡ ಮತ್ತು ತುಳುಭಾಷೆಗಳಲ್ಲಿ ಮಲೇರು ಅಂದರೆ ಬೆಟ್ಟಗಳಲ್ಲಿ ವಾಸಿಸುವರು ಎಂದರ್ಥ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. ಇವರನ್ನು ಸಹ ಮಲೆತ್ತಾಯ ಎಂದು ಸಹ ಕರೆಯುವರು. ಮಲೇರು ಕರ್ನಾಟಕದ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯ ಗಿರಿ ಕಂದರಗಳಲ್ಲಿ ಹೆಚ್ಚಾಗಿರುವರು. ೧೯೮೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಇವರ ಜನಸಂಖ್ಯೆ ೯೬೬ ಎಂದು ಧೃಡಪಟ್ಟಿದೆ. ಇವರ ಮಾತೃ ಭಾಷೆ ಕನ್ನಡ. ಇವರು ಕೋಳಿ, ಕುರಿ, ಕಾಡು ಹಂದಿ ಮಾಂಸವನ್ನು ತಿನ್ನುವರು. ಇವರು ಉತ್ತರ ಕನ್ನಡ ಜಿಲ್ಲೆಯಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ.

ಇವರು ನಾಗರಪಂಚಮಿ, ಎಳ್ಳು ಸಂಕ್ರಮಣ, ದೀಪಾವಳಿಯಂತಹ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಮಲೈಕುಡಿಯರಂತೆ ಇವರು ಕೂಡ ಬೇಟೆಗಾರರು, ಆಹಾರ ಸಂಗ್ರಾಹಕರಾಗಿದ್ದರು. ಕ್ರಮೇಣ, ಕೃಷಿ ಹಾಗೂ ತೋಟದ ಕೂಲಿಗಳಾದರು. ಅರಣ್ಯದ ಉತ್ಪನ್ನಗಳ ಸಂಗ್ರಹಣೆ ವರಮಾನದ ಮೂಲವಾಯಿತು. ಕೆಲವು ಕುಟುಂಬಗಳು ಬಿದಿರಿನಿಂದ ಬುಟ್ಟಿ, ಚಾಪೆ, ಹೆಣೆದು ಮಾರುವುದರಿಂದ ತಮ್ಮ ಜೀವನವನ್ನು ನಡೆಸುತ್ತಾರೆ.[೩೩]

೨೫. ಮೇದ, ಮೇದಾರಿ, ಬುರಡ್, ಗೌರಿಗ

ಈ ಬುಡಕಟ್ಟಿನವರು ಉತ್ತರ ಕರ್ನಾಟಕದ ಗುಲಬರ್ಗಾ, ಬಳ್ಳಾರಿ, ಹಾವೇರಿ, ಕೊಪ್ಪಳ, ಕೋಲಾರ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇವರು ಪುರಾತನ ಕಾಲದಿಂದಲೂ ಕಾಡು ಮತ್ತು ಕಾಡಿನಲ್ಲಿ ಬೆಳೆಯುವ ಬಿದಿರುಗಳನ್ನು ಅವಲಂಬಿಸಿದ್ದು ಅವುಗಳಿಂದ, ಜನ್ಮತಾಳುವ ಮಗುವಿಗೆ ತೊಟ್ಟಿಲುಗಳನ್ನು ಹಾಗೂ ಮನುಷ್ಯ ಸತ್ತಾಗ ಆತನ ಶವ ಸಂಸ್ಕಾರಕ್ಕೆ ಬೇಕಾದ ಬೆಟ್ಟದವರೆವಿಗೂ ಎಲ್ಲಾ ರೀತಿಯ ವಸ್ತುಗಳಾದ ಮೊರ, ಬುಟ್ಟಿ, ಬೀಸಣಿಗೆ, ಚಾಪೆ, ಇತ್ಯಾದಿಗಳನ್ನು ಬಿದಿರಿನಿಂದ ಎಣೆದು ದಿನ ನಿತ್ಯದ ವಸ್ತುಗಳನ್ನಾಗಿ ಬಳಸುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯ. ಕರ್ನಾಟಕದಲ್ಲಿ ಬಿದಿರಿನ ಕೆಲಸ ಒಂದು ಜನಾಂಗದ ಕುಲಕಸುಬು ಎಂದರೆ ತಪ್ಪಾಗಲಾರದು. ೧೩ನೇ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿ ಸಮಾಜ ಸುಧಾರಕರಲ್ಲಿ ಒಬ್ಬರಾದ ಮೇದಾರ ಕೇತಯ್ಯ ಇದ್ದುದು ಮೇದಾರ ಜನಾಂಗ ಇರುವಿಕೆಗೆ ಒಂದು ಮಾಹಿತಿಯಾಗಿದೆ. ಹಿರಿಯನಾದ ಮೇದಾರ ಕೇತಯ್ಯನನ್ನು ಈಗಲೂ ಈ ಸಮುದಾಯದವರ ಕುಲದೇವರೆಂದು ಪೂಜಿಸುತ್ತಾರೆ. ಇವರಲ್ಲದೆ, ಕೇತಯ್ಯ, ಕೇತನಾರ,

ಕೇತಮ್ಮ, ಎಂಬ ಹೆಸರು ಧರಿಸಿದ ವ್ಯಕ್ತಿಗಳಿದ್ದಾರೆ.[೩೪]

ಇವರ ಕುಲಕಸುಬಾದ ಬಿದಿರು ಮತ್ತು ಬೆತ್ತಗಳಿಂದ ಗೃಹ ಉಪಯೋಗಿ ವಸ್ತುಗಳ ತಯಾರಿಯಲ್ಲಿಯೂ ನಿರತರಾಗಿದ್ದಾರೆ. ಮೇದಾರರು ಬೆಂಗಳೂರಿನಂತಹ ದೊಡ್ಡ ದೊಡ್ಡ ನಗರಗಳಲ್ಲಿಯೂ ವಾಸವಾಗಿದ್ದಾರೆ. ಬಿದಿರನ್ನು ಕೆಲಸಕ್ಕೆ ಉಪಯೋಗಿಸುವ ಮೊದಲು ಪೂಜಿಸಿ ಹೊಸ ಬಿದಿರಿನ ಪೂಜೆಯೆಂಬ ಹಬ್ಬವನ್ನು ಸಾಮೂಹಿಕವಾಗಿ ಆಚರಿಸಿ, ನಂತರ ನವ ಬಿದಿರನ್ನು ಕೆಲಸಕ್ಕೆ ಉಪಯೋಗಿಸುವುದು ಪದ್ಧತಿ. ಈ ಬುಡಕಟ್ಟು ಜನರು ಕಾಫಿತೋಟ, ಬತ್ತದ ಗದ್ದೆಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಭೂ ಹಿಡುವಳಿದಾರರ ವಿಶೇಷ ಸಾಂಪ್ರದಾಯಕ ಸಮಾರಂಭಗಳಲ್ಲಿ ಡೊಳ್ಳು ಬಡಿಯುತ್ತಾರೆ. ಮತ್ತು ಮದ್ದಳೆಗಳನ್ನು ಬಾರಿಸುತ್ತಾರೆ. ಹಬ್ಬಗಳಲ್ಲಿ ಮೇದರು ಸಂಗೀತ ಗೋಷ್ಠಿಗಳನ್ನು ನಡೆಸುತ್ತಾರೆ. ಸಮೂಹದ ಹಿರಿಯರ ವಿವಾದಗಳನ್ನು ಬಗೆಹರಿಸುತ್ತಾರೆ. ಹಾಗೂ ಅಪರಾಧಿಗಳಿಗೆ ದಂಡವನ್ನು ಹಾಕುತ್ತಾರೆ. ಇವರು ಪಾಶಾಣಮೂರ್ತಿಯಂತಹ ಭೂತದೊಂದಿಗೆ ಭಗವತಿ, ಕಾವೇರಿ, ಶಿವ ಇತ್ಯಾದಿ ದೇವತೆಗಳನ್ನು ಪೂಜಿಸುತ್ತಾರೆ. ಕೊಡಗಿನಲ್ಲಿರುವ ಮೇದರಿಗೆ ಹುತ್ತರಿ, ಮತ್ತು ಕಾಯ್ಲ ಮೂಹೂರ್ತ ವಿಶೇಷ ಹಬ್ಬಗಳಾಗಿವೆ. ಬಡತನದ ಬವಣೆಯ ಮಧ್ಯ ಇವರದು ಛಲದ ಬದುಕು. ಕೆಲವೊಮ್ಮೆ ಬೇಡಿಕೆಯಿಲ್ಲದಿದ್ದಾಗ ಊರು, ಕೇರಿಗಳನ್ನು ಸುತ್ತಿ ಮನೆ ಬಾಗಿಲುಗಳ ಮುಂದೆ ಕಡಿಮೆ ಬೆಲೆಗೆ ಮಾರುವುದುಂಟು. ಮೇದಾರರು ತಯಾರಿಸುವ ಬೆತ್ತದ ವಸ್ತುಗಳನ್ನು ಮಧ್ಯವರ್ತಿಗಳಿಗೆ ಕಡಿಮೆ ಬೆಲೆಗೆ ಮಾರಿಬಿಡುತ್ತಾರೆ. ಇದರಿಂದ ಮಧ್ಯವರ್ತಿಗಳಿಗೆ ಹೆಚ್ಚಿನ ಲಾಭ. ಈ ಬುಡಕಟ್ಟು ವಸ್ತುಗಳಿಗೆ ಮಾರಾಟಕ್ಕಾಗಿ ಪ್ರತ್ಯೇಕ ಮಾರುಕಟ್ಟೆ ಒದಗಿಸಿದರೆ ಸೂಕ್ತವಾಗುತ್ತದೆ. ಸಾಕ್ಷರತೆಯ ಹೆಸರಿನಲ್ಲಿ ಸರ್ಕಾರ ಹಣ ಖರ್ಚು ಮಾಡಿದರು. ನವಸಾಕ್ಷರತೆಯ ಯೋಜನೆಯ ಅರಿವು ಸಹ ಇವರಿಗೆ ಇಲ್ಲ. ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಪರಿಸ್ಥಿತಿ ಸುಧಾರಣೆಯಾಗಬೇಕಾಗಿದೆ.

೨೬. ಬೇಡ, ಬೇಡರ್, ನಾಯಕ, ವಾಲ್ಮೀಕಿ

ಇವರನ್ನು ವಾಲ್ಮೀಕಿ, ಬೇಡರು, ಬೇಡ, ನಾಯಕ, ತಳವಾರ, ಬೆರಡ, ನಾಯಕ ಮಕ್ಕಳು, ನಾಯಕವಾಡು, ರಾಮೋಶಿ, ಬೆಂಡಾರ, ವಾಲ್ಮೀಕಿ ಮಕ್ಕಳು, ಬೋಯರೆಂದು ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರು ತಾವು ವಾಲ್ಮೀಕಿ ಮಹಾಋುಷಿಯ ವಂಶದವರೆಂದು ಹೇಳಿಕೊಳ್ಳುತ್ತಾರೆ. ಉತ್ತರ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಇವರು ಹೆಚ್ಚಾಗಿ ಕಂಡುಬರುತ್ತಾರೆ. ಇವರು ಕನ್ನಡ, ತೆಲುಗು ಭಾಷೆಯನ್ನು ಮಾತನಾಡುತ್ತಾ, ಕನ್ನಡ ಭಾಷೆಯ ಲಿಪಿಯನ್ನು ಬಳಸುತ್ತಾರೆ. ಬೇಡರಲ್ಲಿ ಪ್ರಮುಖವಾಗಿ ಎರಡು ಪಂಗಡಗಳಿದ್ದು, ೧. ಊರ ಬೇಡ ಅಥವಾ ಊರ ನಾಯಕ, ೨. ಮ್ಯಾಸ ನಾಯಕ, ಹೆಸರೇ ಸೂಚಿಸುವಂತೆ ಊರುಗಳಲ್ಲಿ ವಾಸಮಾಡುವವರನ್ನು ಊರಬೇಡರೆಂದು, ಊರಿನ ಹೊರಗೆ ಅಥವಾ ಅರಣ್ಯಗಳಲ್ಲಿ ಅಥವಾ ಕಾಡುಗಳಲ್ಲಿ ವಾಸಮಾಡುವ ಬೇಡರನ್ನು ಮ್ಯಾಸಬೇಡ ಅಥವಾ ಅಡವಿ ಬೇಡರೆಂದು ಕರೆಯಲಾಗಿದೆ.[೩೫]

ಕೆಲವು ಐತಿಹಾಸಿಕ ಆಧಾರಗಳ ಪ್ರಕಾರ ಬೇಡರು ಪಶುಪಾಲನೆ ಮಾಡುತ್ತಿದ್ದು, ಆಂಧ್ರದ ಶ್ರೀಶೈಲ ಕಡೆಯಿಂದ

ಪಶುಗಳನ್ನು ಮೇಯಿಸುತ್ತಾ ಕರ್ನಾಟಕದ ಕಡೆಗೆ ಬಂದರೆಂದು ಧೃಡಪಟ್ಟಿದೆ. ದನಗಳ ಹಿಂಡುಗಳನ್ನು ಮೇಯಿಸಿಕೊಂಡು ಬರುವಾಗ ಮುಂದೆ ಒಬ್ಬ ಹಿಂದೆ ಒಬ್ಬ ಪಾಲಕರು ಬರುತಿದ್ದರು. ಮುಂದೆ ಬರುತ್ತಿದ್ದವನನ್ನು ಊರ ಬೇಡ, ಹಿಂದೆ ಬರುತ್ತಿದ್ದವನನ್ನು ಮ್ಯಾಸ ಬೇಡ ಎಂತಲೂ, ಮೇಯಿಸುವವರು-ಮೇಸುವವರು-ಮ್ಯಾಸರು ಆಗಿದ್ದಾರೆ. ಊರು ನಾಯಕರು ಮತ್ತು ಮ್ಯಾಸ ನಾಯಕರ ನಡುವೆ ವೈವಾಹಿಕ ಸಂಬಂಧವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇವರಲ್ಲಿ ಕೊಂಡುಕೊಳ್ಳುವುದು ನಡೆಯುತ್ತಿದೆ. ಇವರ ಸಾಂಪ್ರದಾಯಿಕ ಆಚಾರ ವಿಚಾರಗಳಲ್ಲಿ ವ್ಯತ್ಯಾಸವಿದೆ.

ಇವರಲ್ಲಿ ಶೇವಂತಿಗೆ, ಬೆಲ್ಲ, ಆಡು, ಎಮ್ಮೆ, ಮಲ್ಲಿಗೆ, ಇತ್ಯಾದಿ ಬಳ್ಳಿಗಳು ಇವೆ. ಇವರು ತಳವಾರು, ನಾಯಕವಾಡ, ಗೂಡಾನಿ ಬಡ್ಡಿ, ಕಟ್ಟಿಮನಿ, ಚಬ್ಬಿ, ಇತ್ಯಾದಿ ವಂಶದ ಹೆಸರುಗಳನ್ನು ಹೊಂದಿದ್ದಾರೆ. ಕೆಲವು ಬಾರಿ ಸ್ಥಳದ ನಾಮವನ್ನು ಕೂಡ ಒಂದು ಕುಟುಂಬ ವಲಸೆ ಹೋದಾಗ ಮನೆತನದ ಹೆಸರಾಗಿ ಬಳಸಿಕೊಳ್ಳುತ್ತಾರೆ. ಮ್ಯಾಸ ಬೇಡರಲ್ಲಿ ಒಂದು ಕುಲಕ್ಕೆ ಸೇರಿದವರೆಲ್ಲ ಅಣ್ಣ ತಮ್ಮಂದಿರ ಭಾವನೆ ಇರುವುದರಿಂದ ಬೇರೆ ಕುಲಗಳಲ್ಲಿ ಹೆಣ್ಣನ್ನು ತರುತ್ತಾರೆ. ಹೆಣ್ಣು ಬರುವುದೆಂದರೆ, ಲಕ್ಷ್ಮಿಯನ್ನು ಮನೆಗೆ ತಂದಂತೆ ಎಂಬ ಭಾವನೆ ಇದೆ. ಲಕ್ಷ್ಮಿಯನ್ನು ಹಾಗೆಯೇ ತರಬಾರದೆಂದು ತೆರ ಕೊಡುವ ಪದ್ಧತಿ ಇವರಲ್ಲಿದೆ. ಇವರ ಧಾರ್ಮಿಕ ಕ್ರಿಯಾ ವಿಧಿಗಳನ್ನು ಬ್ರಾಹ್ಮಣರು, ಲಿಂಗಾಯತರು ನೆರವೇರಿಸುತ್ತಾರೆ. ವರದಕ್ಷಿಣೆಯನ್ನು ನಗದು ಅಥವಾ ಪದಾರ್ಥದ ರೂಪದಲ್ಲಿ ನೀಡುತ್ತಿದ್ದಾರೆ. ಮನೆಯ ಹಿರಿಯ ಮಗ ತಂದೆ ಕಾಲವಾದ ನಂತರ ಮನೆಯ ಯಜಮಾನನಾಗುತ್ತಾನೆ.

ಮೂಲತಃ ಬೇಡ ಅಥವಾ ತಳವಾರರು ಸಾಂಪ್ರದಾಯಿಕವಾಗಿ ಸೈನಿಕ ಹಾಗೂ ಗ್ರಾಮಸೇವಕರಾಗಿ ದುಡಿಯುತ್ತಿದ್ದರು. ಹೆಚ್ಚಿನ ಜನರು ಕೃಷಿಯನ್ನು ಅವಲಂಬಿಸಿ ದುಡಿಯುತ್ತಿದ್ದಾರೆ. ಜೊತೆಗೆ ಕೆಲವೇ ಜನ ಸರ್ಕಾರಿ ಹಾಗೂ ಖಾಸಗಿ ಸೇವೆಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ಪರಂಪರೆಯಿಂದ ಬೇಡರು ಬೇಟೆಯಾಡುತ್ತಿದ್ದರು. ಬಿಲ್ಲು ಮತ್ತು ಬರ್ಚಿಗಳನ್ನು ಬಳಸುವುದರಲ್ಲಿ ನಿಪುಣರಾಗಿದ್ದರು. ಈಗ ಕಾಡುಗಳು ನಾಶವಾಗಿರುವುದರಿಂದ ತಮ್ಮ ಕಸಬುಗಳನ್ನು ಬದಲಾಯಿಸಿಕೊಂಡಿದ್ದಾರೆ. ಆದರೂ ಹೊಸ ವರ್ಷದ ಯುಗಾದಿ ಹಬ್ಬದ ದಿನದಲ್ಲಿ ಸಾಂಪ್ರದಾಯಿಕವಾಗಿ ಬೇಟೆಯಾಡುತ್ತಾರೆ. ಇವರ ದೈವಗಳು ಬೋರ ದೇವರು, ಗಾದ್ರಿಪಾಲಯ್ಯ, ದೊಡ್ಡಮಾರಮ್ಮ, ದುರ್ಗಮ್ಮ, ಮಾರಮ್ಮ, ಇತ್ಯಾದಿಗಳನ್ನು ಪೂಜಿಸುತ್ತಾರೆ. ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿದ್ದಾರೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸುಧಾರಣೆಯಾಗುತ್ತಿದ್ದಾರೆ. ಈ ಬುಡಕಟ್ಟು ೧೯೯೧ರ ನಂತರ ಸರ್ಕಾರಿ ಆದೇಶ ಸಂಖ್ಯೆ ನಂ.Notification No.LAW 26 LCA 91, Bangalore, dated 9th December 1991. ರಲ್ಲಿ ಪರಿಶಿಷ್ಟ ವರ್ಗ I ರಿಂದ ತೆಗೆದು ಬುಡಕಟ್ಟು ಪಂಗಡಗಳಲ್ಲಿ ಸೇರಿಸಲಾಗಿದೆ. ಈ ಸಂಬಂಧ ಸರ್ಕಾರಿ ಆದೇಶವನ್ನು ಅನುಬಂಧ ೩.೧೨ರಲ್ಲಿ ತೋರಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯ ಶೇಕಡ ೧೮ ರಷ್ಟು ಬುಡಕಟ್ಟುಗಳನ್ನು ಹೊಂದಿದ್ದು ಅದರಲ್ಲಿ, ಆ ಬುಡಕಟ್ಟು ಜನಸಂಖ್ಯೆಯ ಶೇ. ೯೭ ರಷ್ಟು ಬೇಡ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಸರ್ಕಾರದ ಎಲ್ಲಾ ಯೋಜನೆಗಳ ಪೂರ್ಣ ಪ್ರಯೋಜನೆಗಳನ್ನು ಪಡೆಯುತ್ತಿದ್ದಾರೆ.

೨೭. ಪಳ್ಳಿಯನ್

ಇವರನ್ನು ಪಳ್ಳಿಯಾರ್, ಪೊಳಿಯಾರ್ ವಳನಿಮಕ್ಕಳ್ ಮತ್ತು ಮಲೈ ವಳಿಯಾರ್ ಎಂತಲೂ ಕರೆಯುತ್ತಾರೆ. ಮಲೈ ಪಳಿಯಾರರು, ಬೆಟ್ಟಗಳಲ್ಲಿ ವಾಸವಾಗಿದ್ದು, ಆಹಾರ ಸಂಗ್ರಹಣೆ ಮಾಡುವ ಸಮುದಾಯಗಳಲ್ಲಿ ಒಂದಾಗಿದೆ. ಇನ್ನೊಂದು ಆಧಾರದ ಪ್ರಕಾರ ಇವರು ಮೂಲತಃ ವಳನಿ ಬೆಟ್ಟದ ನಿವಾಸಿಗಳೆಂದು ನಂಬಲಾಗಿದೆ. ಥರ್ಸ್ಟನ್ ಇವರನ್ನು ಅಲೆಮಾರಿಗಳೆಂದು ದಾಖಲಿಸಿದ್ದಾರೆ. ಇವರು ಸಣ್ಣ ಸಣ್ಣ ತಂಡಗಳಲ್ಲಿ ಅರಣ್ಯದ ಗಿರಿಕಂದರಗಳಲ್ಲಿ ನೆಲೆಸುತ್ತಿದ್ದಾರೆ. ಇವರು ತಮಿಳು ಭಾಷೆ ಮತ್ತು ಲಿಪಿಯನ್ನು ಹೊಂದಿರುತ್ತಾರೆ. ಮಾಂಸಹಾರಿಗಳು, ಹಂದಿ ಮತ್ತು ದನದ ಮಾಂಸವನ್ನು ತಿನ್ನುವುದಿಲ್ಲ. ಹಿಂದೂ ಧರ್ಮದ ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ. ೧೯೭೧ರಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಇವರ ಜನಸಂಖ್ಯೆ ೭೩೮ ಎಂದು ದಾಖಲೆಯಾಗಿದೆ. ಇವರು ಮೂಲತಃ ಆಹಾರ ಸಂಗ್ರಹಣಕಾರರಾಗಿದ್ದು ಕೃಷಿ ಮತ್ತು ಕೂಲಿಗಳನ್ನು ಅವಲಂಬಿಸಿದ್ದಾರೆ.

೨೮. ಅಡವಿಚೆಂಚೇರ್, ಫಾನ್ಸೇಪಾರ್ಧಿ, ಹರಣಶಿಕಾರಿ

ಅಡವಿಚೆಂಚರನ್ನು, ಚೆಂಚುಕುಲಂ, ಚೆಂಚುವಾಡ, ಚಿಕ್ಕುಚೆಂಚು ಮುಂತಾದ ಹೆಸರಿನಿಂದ ಕರೆಯುತ್ತಾರೆ. ಇವರು ಕೆಂಚು ವರ್ಣದಿಂದ ಕೂಡಿದ್ದರಿಂದ ಕೆಂಚ ಎಂದು ಕರೆಯುವ ಬದಲು ಕೆ ಕಾರಕ್ಕೆ ಬದಲಾಗಿ ಚೆ ಕಾರವನ್ನು ಹಚ್ಚಿ ಚೆಂಚರೆಂದು ಕರೆದಿರಬಹುದೆಂದು ಹಲವಾರು ಅಧ್ಯಯನಕಾರರು, ಚರಿತ್ರೆಕಾರರು ಅಭಿಪ್ರಾಯ ಪಟ್ಟಿದ್ದಾರೆ. ಇವರು ಸದಾ ಕಾಲ ಕಾಡು ಅಥವಾ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದರಿಂದ ಇವರನ್ನು ಅಡವಿ ಚೆಂಚರೆಂದು ಸಹ ಕರೆದಿರಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಹಿಂದಿನ ಪುಟಗಳಲ್ಲಿ ವಿವರಿಸಿರುವಂತೆ ಬ್ರಿಟಿಷರ ಕಾಲದಲ್ಲಿ ಕೆಲವು ಬುಡಕಟ್ಟುಗಳನ್ನು ಪತ್ತೆ ಹಚ್ಚಿ ಅವುಗಳನ್ನು ಅಪರಾಧಿತ ಬುಡಕಟ್ಟು (Criminal Tribals) ಗಳ ಪಟ್ಟಿಗೆ ಸೇರಿಸಿದ್ದು, ಅವುಗಳಲ್ಲಿ ಮುಖ್ಯವಾದವುಗಳು ಇರುಳ, ಲಂಬಾಣಿ, ಯನಾಧಿ, ಮರಗೊಲ್ಲ, ಚಿಕ್ಕುಚೆಂಚು ಮುಂತಾದವರೆಲ್ಲ ಅರಣ್ಯದಲ್ಲಿ ವಾಸಿಸುತ್ತಿದ್ದ ಪ್ರಯುಕ್ತ ಇತಿಹಾಸಕಾರರು ಚೆಂಚರನ್ನು ಅಡವಿಚೆಂಚರೆಂದು ಗುರುತಿಸಿರಬಹುದು.

ಅಡವಿ ಚೆಂಚರು ಮೂಲತಃ ಬೇಟೆಗಾರರಾಗಿದ್ದು, ಆಹಾರಕ್ಕಾಗಿ ಬೇಟೆಯನ್ನು ಅವಲಂಬಿಸಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದರು. ಒಂದು ದಾಖಲೆ ಪ್ರಕಾರ ಅಡವಿ ಚೆಂಚರ ಪೂರ್ವಜರು ಮಧ್ಯಭಾರತದ ವಿಂಧ್ಯ ಪರ್ವತದ ಕಾಡುಗಳಲ್ಲಿ ನೆಲೆಸಿದ್ದು, ಕಾಲಾನುಕ್ರಮ ಆಹಾರವನ್ನು ಹುಡುಕುತ್ತಾ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮುಂತಾದ ಪ್ರದೇಶಗಳಿಗೆ ವಲಸೆ ಬಂದಿರಬಹುದು.

೧೯೨೪ರಲ್ಲಿ ಬ್ರಿಟೀಷರು ಜಾರಿಗೆ ತಂದ ಅಪರಾಧಿ ಬುಡಕಟ್ಟು ಕಾಯ್ದೆ ಪ್ರಕಾರ ೨೪ ಸ್ಥಳಗಳಲ್ಲಿ ಬುಡಕಟ್ಟು ಜನರನ್ನು ಹಿಡಿದಿಟ್ಟಿದ್ದರು. ಆ ಸ್ಥಳಗಳಲ್ಲಿ ಮುಖ್ಯವಾದವುಗಳು ಮುಂಬೈ ಕರ್ನಾಟಕದಲ್ಲಿ, ಖಾನಾಪುರ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬಿಜಾಪುರ, ಇಂಡಿ ಮುಂತಾದ ಸ್ಥಳಗಳು ಇವೆ. (ಪ್ರಹ್ಲಾದ್ ಬೆಟಿಗೇರಿ ೧೯೯೩) ಅಡವಿಚೆಂಚರು ಧಾರವಾಡ, ಬಿಜಾಪುರ, ರಾಯಚೂರು, ಗುಲಬರ್ಗಾ ಬೀದರ್ ಜಿಲ್ಲೆಗಳಲ್ಲಿ ಅತಿ ಹೇರಳವಾಗಿ ಕಂಡುಬಂದರೆ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಅತಿ ವಿರಳವಾಗಿದ್ದಾರೆ. ಚೆಂಚರಲ್ಲಿ

ನಾಲ್ಕುಗುಂಪುಗಳಿದ್ದು ೧. ತೆಲುಗು ಚೆಂಚರು, ೨. ಅಡವಿ ಚೆಂಚರು, ೩. ಕೃಷ್ಣಾ ಚೆಂಚರು, ೪.ಬೊಂಟಾ ಚೆಂಚರೆಂದು ನಾಲ್ಕು ಗುಂಪುಗಳಿದ್ದವೆಂದು ರಿಸ್ಲೆ ದಾಖಲಿಸಿರುತ್ತಾರೆ. ಚೆಂಚರು ಮಾತನಾಡುವ ಭಾಷೆಗೆ ಲಿಪಿ ಇಲ್ಲ. ಇವರು ಮಿಶ್ರ ಭಾಷೆಯನ್ನು ಹೊಂದಿದ್ದು, ಮನೆಗಳಲ್ಲಿ ಮರಾಠಿ ಮಿಶ್ರಿತ ಗುಜರಾತಿ ಭಾಷೆಯನ್ನಾಡುತ್ತಾರೆ. ಹೊರಗಡೆ ಕನ್ನಡ ಭಾಷೆಯನ್ನಾಡುತ್ತಾರೆ. ಜೊತೆಗೆ ಲಂಬಾಣಿ ಭಾಷೆಯ ಪ್ರಭಾವವು ಹೆಚ್ಚಾಗಿದೆಯೆಂದು ಅಧ್ಯಯನಕಾರರು ಹಾಗೂ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಡವಿ ಚೆಂಚರಲ್ಲಿ ಮುಖ್ಯವಾಗಿ ೬ ಬೆಡುಗುಗಳಿವೆ. ಅವುಗಳೆಂದರೆ, ೧. ವೆಂಪಳಜ್ಯಾ ಝೋಡಿಯಾರ, ಹರಕ್ಯಾ, ಕೊರಬ್ಯಾ, ಇಕೋತ್ಯಾ ಮತ್ತು ಸಾವುಂಡ್ಯಾ, ಇವುಗಳಲ್ಲಿ ಮೊದಲಿನ ಮೂರು ಬೆಡಗಿನವರು ಅಣ್ಣ ತಮ್ಮಂದಿರ ವಂಶಸ್ಥರಾಗಿದ್ದರಿಂದ, ಹೆಣ್ಣು ಗಂಡು ತರುವುದು, ಕೊಡುವುದು ನಡೆಯುವುದಿಲ್ಲ. ಬೇರೆ ಬೆಡಗುಗಳಾದ ಕೊರಬ್ಯಾ, ಇಕೋತ್ಯಾ ಸಾವುಂಡ್ಯಾವರವ ಜೊತೆಗೆ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ಇವರು ಮಹುವಾ ಎಂಬ ಹೂವಿನಿಂದ ಮಧ್ಯವನ್ನು ತಯಾರಿಸುತ್ತಿದ್ದರೆಂದು ಹಾಗೂ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರೆಂದು ಥರ್ಸ್ಟನ್ ೧೯೦೯ ರಲ್ಲಿ ಗುರುತಿಸಿದ್ದಾರೆ. ಚೆಂಚರು ಚೆಂಚುದೇವತೆಯನ್ನು ಪೂಜಿಸುತ್ತಿದ್ದು, ನರಸಿಂಹದೇವರು ಸುಂದರಿ ಚಂಚಿತಾಳನ್ನು ಅಪಹರಿಸಿಕೊಂಡು ಹೋಗಿ ಮದುವೆಯಾದರೆಂದು ನಂಬಿದ್ದಾರೆ. ಆ ಕಾರಣದಿಂದ ಚೆಂಚರು ನರಸಿಂಹದೇವರನ್ನು ಓಬಳೇಸುಡು ಎಂದು ಕರೆಯುತ್ತಾರೆ. ಈ ಬುಡಕಟ್ಟು ಸಮುದಾಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ತೀರ ಹಿಂದುಳಿದ ಸಮುದಾಯವೆಂದು ೧೯೮೭ರಲ್ಲಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ನಡೆಸಿದ ಸಮೀಕ್ಷಾ ವರದಿಯಿಂದ ತಿಳಿದು ಬಂದಿದೆ. ಆ ವರದಿಯಲ್ಲಿ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸುವುದರಿಂದ ಮಾತ್ರ ಇವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸಾಧ್ಯವೆಂದು ಶಿಫಾರಸ್ಸು ಮಾಡಲಾಗಿದ್ದ ಪ್ರಯುಕ್ತ ಈ ಬುಡಕಟ್ಟನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧನೆಯಾಗಿರುವುದಿಲ್ಲ.

೨೯. ರಾತ್ವಾ

ಇವರು ಗುಜರಾತಿನ ಗಿರಿ ಕಂದರಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯ. ಇವರು ಗುಜರಾತಿ ಭಾಷೆ ಮತ್ತು ಲಿಪಿಯನ್ನು ಬಳಸುವವರಾಗಿದ್ದಾರೆ. ಇವರು ಮಾಂಸಾಹಾರಿಗಳಾಗಿದ್ದು, ಗೋಧಿ, ಜೋಳ ಇವರ ಮುಖ್ಯ ಆಹಾರ. ಇವರು ದೀಪಾವಳಿ, ಹೋಳಿ, ದಸರಾ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಇವರ ಜಾತಿ ಪಂಚಾಯ್ತಿ ಮುಖ್ಯಸ್ಥನಿಗೆ ಪೋಲಿಸ್ ಪಟೇಲ್ ಎಂದು ಕರೆಯುವರು. ಇವರು ಸಣ್ಣಕೃಷಿಕರಾಗಿದ್ದು, ಭೂ ರಹಿತ ರಾಠವಗಳು ಕೃಷಿ ಕೂಲಿಗಳಾಗಿರುತ್ತಾರೆ. ಇವರು ಪೆರೋರಾ ಪೇಂಟಿಂಗ್ ಮಾಡುತ್ತಿದ್ದು ಇದು ಸಹ ಅವರ ಆರ್ಥಿಕ ಉತ್ಪನ್ನವಾಗಿದೆ.[೬೬]

೨೬.ವಿಟೊಲಿಯ

ಇವರನ್ನು ಕೋತ್ವಾಲಿಯ, ಬರೋಡಿಯಂ ಎಂದು ಸಹ ಕರೆಯಲಾಗುತ್ತಿದೆ. ಇವರು **ಗುಜರಾತ್**, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರಿಸಲಾಗಿದೆ. ಇವರನ್ನು **"ಬಾರುದ್"** ಎಂದು ಕರೆಯುತ್ತಾರೆ.[೩೮] ಇವರು ೨೦೦ ವರ್ಷಗಳ ಹಿಂದೆ ವಲಸೆ ಹೋಗಿ ಗುಜರಾತ್‌ನಲ್ಲಿ ನೆಲೆಸಿರುತ್ತಾರೆ. ಇವರು ಮರಾಠಿ ಭಾಷೆ ಮಾತನಾಡುತ್ತಾರೆ. ಜೊತೆಯಲ್ಲಿ ಗುಜರಾತಿ ಭಾಷೆಯ ಲಿಪಿಯನ್ನು ಬಳಸುವರು. ಇವರು ಮಾಂಸಹಾರಿಗಳು. ಆದರೆ ದನದ ಮಾಂಸವನ್ನು ಸೇವಿಸುವುದಿಲ್ಲ. ಇವರ ವೃತ್ತಿ ಬಿದಿರಿನ ವೃತ್ತಿಯಾಗಿದ್ದು ಇವರು ದಸರಾ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ.

೩೧. ಯರವ

ಯರವ ಎಂಬುದು ಕೊಡಗಿನ ಬುಡಕಟ್ಟು ಸಮುದಾಯವೊಂದರ ಹೆಸರು. ಕೊಡವ ಭಾಷೆಯಲ್ಲಿ "ಯರ" ಅಂದರೆ ಬೇಡು ಎಂದರ್ಥ. ಎರವ ಎಂದರೆ ಬೇಡುವವನು ಎಂಬ ಅರ್ಥ ಬರುತ್ತದೆ. ಆದ್ದರಿಂದಲೇ ಈ ಸಮುದಾಯಕ್ಕೆ ಎರವರು ಎಂದು ಕರೆದಿರಬೇಕು. ಕೊನ್ನೂರು (೧೮೮೦) ರವರ ಪ್ರಕಾರ ಎರವರು ಕೊಡಗಿನಲ್ಲಿ ಗುಲಾಮರಾಗಿದ್ದವರೆಂದು ಗುರುತಿಸಿದ್ದಾರೆ. ಕೆಲವು ದಾಖಲೆಗಳ ಪ್ರಕಾರ ಯರವರು ಕೇರಳದ ವೈನಾಡಿನಿಂದ ಕೊಡಗಿಗೆ ವಲಸೆ ಬಂದವರೆಂದು ದೃಢಪಟ್ಟಿದೆ. ಇತ್ತೀಚಿನ ಕೆಲವು ಸಂಶೋಧಕರು ಇವರನ್ನು ಕೊಡಗಿನ ಮೂಲ ನಿವಾಸಿಗಳೆಂದು ಗುರುತಿಸಿದ್ದಾರೆ. ಕೃಷ್ಣಯ್ಯ (೧೯೭೪) ಇವರು ಕ್ರಿಸ್ತ ಶಕೆಯ ಪೂರ್ವದಲ್ಲಿಯೇ ಎರವರು ವೈನಾಡಿನಿಂದ ಕೊಡಗಿಗೆ ಬಂದಿರಬಹುದೆಂದು ಊಹಿಸುತ್ತಾರೆ.

ಈ ಸಮುದಾಯದಲ್ಲಿ ಹಲವಾರು ಉಪ ಪಂಗಡಗಳಿವೆ. ಅವುಗಳಲ್ಲಿ ಪಣಿಯ, ಪಂಜರಿ, ಕಾಕ ಮುಂತಾದವುಗಳು, ಆದರೆ ಈಗ ಕೊಡಗಿನಲ್ಲಿ ಎರಡು ಗುಂಪಿನ ಎರವರು ಮಾತ್ರ ಇರುವರು ೧. ಪಣಿಯ ಎರವರು ೨. ಪಂಜರಿ ಎರವರು. ೧೯೦೧ರ ಜನಗಣತಿ ಪ್ರಕಾರ ಎರವರ ಭಾಷೆ ಬುಡಕಟ್ಟಿನದೆಂದು ಮಲೆಯಾಳಂನ ಉಪಭಾಷೆ ಎಂತಲೂ ಗುರುತಿಸಲಾಗಿದೆ. ಭಾರತದ ಭಾಷಾ ಪರಿವೀಕ್ಷಣೆ, ಎರವ ಭಾಷೆಯನ್ನು ಮಲಯಾಳಿಂನ ಉಪಭಾಷೆ ಎಂದು ಪರಿಗಣಿಸಿದೆ. ಎರವ ಭಾಷೆಯು ಕನ್ನಡ, ಕೊಡವ ಮತ್ತು ಮಲೆಯಾಳಂ ಭಾಷೆಯ ಸುತ್ತಮುತ್ತಲಿನಲ್ಲಿದೆ. ಇದು ತನ್ನದೆ ಆದಂತಹ ವಿಶಿಷ್ಟವಾದ ಭಾಷಾ ರಚನೆಯನ್ನು ಹೊಂದಿದೆ. ಇದು ನೇರವಾಗಿ ಕನ್ನಡ ಕೊಡವ, ಮಲೆಯಾಳಂ ಭಾಷೆಯವರಿಗೆ ಅರ್ಥವಾಗುವುದಿಲ್ಲ. ಇದು ದಕ್ಷಿಣ ದ್ರಾವಿಡ ಭಾಷಾ ಗುಂಪಿಗೆ ಸೇರಿದ ಒಂದು ಪ್ರತ್ಯೇಕವಾದಂತಹ ಭಾಷೆ.

ಪಣಿಯ ಎರವರಲ್ಲಿ ೨೧ ಬೆಡಗುಗಳನ್ನು ಪಂಜರಿ ಎರವರಲ್ಲಿ ೨೮ ಬೆಡಗುಗಳನ್ನು ಗುರುತಿಸಬಹುದು. ಒಂದೇ ಬೆಡಗಿನಲ್ಲಿ ವಿವಾಹ ಸಾಧ್ಯವಿಲ್ಲ. ಪಣಿಯ ಎರವರು ಮತ್ತು ಪಂಜರಿ ಎರವರ ನಡುವೆ ವೈವಾಹಿಕ ಸಂಬಂಧವಿರುವುದಿಲ್ಲ. ಎರವರು ತಮ್ಮದೇ ಆದ ಸಾಮಾಜಿಕ, ರಾಜಕೀಯ ಮತ್ತು ನ್ಯಾಯಿಕ ಆಡಳಿತವನ್ನು ಹೊಂದಿದ್ದಾರೆ. ಪಣಿಯ ಎರವ ಮತ್ತು ಪಂಜರಿ ಎರವ ಕುಟುಂಬ ವ್ಯವಸ್ಥೆ ಸಂಪೂರ್ಣವಾಗಿ ಭಿನ್ನವಾಗಿದೆ. ಪಣಿಯ ಎರವರದು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಾದರೆ ಪಂಜರಿ ಎರವರದು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ. ಇವರ ಮುಖ್ಯಸ್ಥ `ಕಜೌಲಾಡಿ' ಪಣಿಯ

ಎರವರ ಸಂಘಟನೆಯ ಇಬ್ಬರು ಮುಖ್ಯಸ್ಥರೆಂದರೆ 'ಮೂಫ' ಮತ್ತು 'ಚಿಮ್ಮ' ಈ ಮುಖ್ಯಸ್ಥರುಗಳು ಮತ್ತು ಹಿರಿಯರು ಸೇರಿದ ಸಮಿತಿಯು ಸಮುದಾಯದ ಬಗೆಗಿನ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ.[೯] ವೈಯಕ್ತಿಕ ಜಗಳ, ಕುಟುಂಬದ ಜಗಳ, ಈ ಸಮಿತಿಯ ಮುಂದೆ ಬರುತ್ತವೆ. ವಿಚಾರಣೆಯ ನಂತರ ದಂಡವನ್ನು ಅಗತ್ಯವಿದ್ದಲ್ಲಿ ವಿಧಿಸಬಹುದು.

ಈ ಮೇಲೆ ತಿಳಿಸಿರುವ ೩೧ ಬುಡಕಟ್ಟುಗಳ ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುತ್ತಿರುವುದು ಜನಗಣತಿಯಿಂದ ದೃಢಪಟ್ಟಿದ್ದು ಅವುಗಳ ಜನಸಂಖ್ಯೆಯ ವಿವರಗಳನ್ನು ಅನುಬಂಧ ೩.೧೩ ರಲ್ಲಿ ವಿವರಿಸಲಾಗಿದೆ. ಹಾಗೂ ರಾಜ್ಯದಲ್ಲಿರುವ ಬುಡಕಟ್ಟು ವಿದ್ಯಾವಂತ ನಿರುದ್ಯೋಗಿ ಯುವಕ ಯುವತಿಯರು ಉದ್ಯೋಗಕ್ಕಾಗಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೂರಾರು, ಸಾವಿರಾರು ಸಂಖ್ಯೆಯಲ್ಲಿ ದಾಖಲಿಸಿಕೊಂಡಿರುವುದು ದಾಖಲಾತಿಗಳಿಂದ ಧೃಡಪಟ್ಟಿದೆ. ಅವುಗಳ ವಿವರಗಳನ್ನು ಅನುಬಂಧ ೩.೧೪ರಲ್ಲಿ ತೋರಿಸಲಾಗಿದೆ.

ಆಧಾರಗಳು

೧. ***ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*** (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ,೧೯೭೯) ಪು.೯೮೫ ರಿಂದ ೯೯೧.

೨. **ಕರ್ನಾಟಕ ರಾಜ್ಯ ಪತ್ರ** (ಕೇಂದ್ರದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು : ಭಾಗ-೪, ಸೆಕ್ಷನ್ ಗುರುವಾರ, ಡಿಸೆಂಬರ್ ೧೯,೧೯೯೧) ೧-ಬಿ, ಪು. ೧೦೧, ೧೦೨.

೩. ಮೈತ್ರಿ ಕೆ.ಎಂ., **ಬುಡಕಟ್ಟು ಕುಲಕಸುಬುಗಳು** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨)ಪು. ೩೧.

೪. ***National Commission for Scheduled Castes and Scheduled Tribes***(Karnataka.: Third Repart 1994-95, 1995-96) Vol II

೫ ***ಕರ್ನಾಟಕ ಸರ್ಕಾರಗಳು*** (ಸರ್ಕಾರಿ ಮುದ್ರಣಾಲಯ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ೨೦೦೧.)ಪು.೫೪.

೬. ***ಕರ್ನಾಟಕ ಸರ್ಕಾರದ ನಡುವಳಿಕೆಗಳು*** (ಬೆಂಗಳೂರು ಸರ್ಕಾರಿ ಮುದ್ರಣಾಲಯ:ಸರ್ಕಾರಿ ಆದೇಶ ಸಂಖ್ಯೆ ಸಮಾಜ ಕಲ್ಯಾಣ ಇಲಾಖೆ ೧೭೭, ಎಸ್‌ಎಡಿ ೯೯, ದಿನಾಂಕ ೧೫.೦೬.೨೦೦೩

೭. ***Census of India 1991 Series II,*** Karnataka Primary Census Abustract Scs/ Sts Part II (B) (III) (Bangalore:Directorate of Census Operations) PP. 324-31

೮. Thurston.E. ***Castes and Tribes of Southern India*** (New Delhi :Cosmo Publication,1975) Vol I, P.4.

೯. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨)ಪು. ೪೧.

೧೦. Singh K.S., ***The Scheduled Tribes*** (Delhi : Oxfard University Press 1994) Vol III, PP- 90 to 94.

೧೧. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೪೭.

೧೨. Singh K.S., ***The Scheduled Tribes*** (Delhi : Oxford University Press 1994) Vol III, PP.214.

೧೩. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೫೫.

೧೪. ಪ್ರಶಾಂತ ಹೆಚ್.ಡಿ., ***ಜನಸಮುದಾಯ ಸಂಪುಟ*** (ಹಂಪಿ:ಕನ್ನಡ ವಿಶ್ವವಿದ್ಯಾಲಯ,೨೦೦೦) ಪು.೪೩.

೧೫. ಲೋಕೇಶ ಎಂ ಎಂ., (ಲೇ) ***ಗೌಡಾಲು*** , ಲಕ್ಕಪ್ಪಗೌಡ ಹೆಚ್.ಜೆ., (ಪ್ರ ಸಂ) ***ಕರ್ನಾಟಕ ಬುಡಕಟ್ಟುಗಳು*** (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮) ಪು.೨೬.

೧೬. ಪ್ರಶಾಂತ ಹೆಚ್.ಡಿ., ***ಜನಸಮುದಾಯ ಸಂಪುಟ*** (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೦) ಪು.೧೨೪.

೧೭. ***ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*** (ಮೈಸೂರು :ಕನ್ನಡ ಅಧ್ಯಯನ ಸಂಸ್ಥೆ,೧೯೭೯) ಪು. ೯೮೫.

೧೮. Luiz AA.D., ***Tribes of Mysore*** (Bangalore : Viswa and Co.1963) P.P 30-38.

೧೯. ಪ್ರಶಾಂತ ಹೆಚ್.ಡಿ., ***ಜನಸಮುದಾಯ ಸಂಪುಟ*** (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೦) ಪು. ೫೧.

೨೦. .... ಪು. ೧೬.

೨೧. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೧೧೩.

೨೨. .... ಪು. ೧೨೪.

೨೩. ಉಮಾಪತಿ ಬಿ.ಇ. (ಲೇ) ***ಪರಿಶಿಷ್ಟ ಬುಡಕಟ್ಟು, ಜಾತಿಗಳು,*** ನಾಯಕ ಹಾ. ಮಾ (ಪ್ರಾ ಸಂ) ***ಕರ್ನಾಟಕ ಕನ್ನಡ ವಿಷಯ ವಿಶ್ವಕೋಷ,*** (ಮೈಸೂರು :ಕನ್ನಡ ಅಧ್ಯಯನ ಸಂಸ್ಥೆ,೧೯೭೯) ಪು. ೮೮೮.

೨೪. ಕಮಲಾಕ್ಷ ಪಿ., ***ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ,*** (ಬೆಂಗಳೂರು : ಕನ್ನಡ ಪುಸ್ತಕ ಪ್ರಾಧಿಕಾರ ೧೯೯೪) ಪು.೩೦,೩೭.

೨೫. ನಾವಡ. ಎ.ವಿ. ***ಕೊರಗರು*** (ಸಂ) ಲಕ್ಕಪ್ಪಗೌಡ, (ಬೆಂಗಳೂರು : ಕರ್ನಾಟಕ ಬುಡಕಟ್ಟುಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೮) ಪು.೨೬೮, ೩೨೧.

೨೬. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೪೫.

೨೭. Thurston.E. ***Castes and Tribes of Southern India*** (New Delhi : Cosmo Publication,1975) Vol I, P.P. 155, 177.

೨೮. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲಕಸುಬುಗಳು*** (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨)ಪು.೧೬೦.

೨೯. Singh K.S., ***The Scheduled Tribes*** (Delhi : Oxfard University Press 1994) Vol III, PP.702. 704.

೩೦. ಪ್ರಶಾಂತ ಹೆಚ್.ಡಿ., *ಜನಸಮುದಾಯ ಸಂಪುಟ* (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೦) ಪು. ೨೦.

೩೧. ಮೈತ್ರಿ ಕೆ.ಎಂ., *ಬುಡಕಟ್ಟು ಕುಲಕಸುಬುಗಳು* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೧೭೧.

೩೨. .... ಪು. ೧೭೨.

೩೩. ಉಮಾಪತಿ ಬಿ.ಇ. (ಲೇ) *ಪರಿಶಿಷ್ಟ ಬುಡಕಟ್ಟು, ಜಾತಿಗಳು,* ನಾಯಕ ಹಾ. ಮಾ (ಪ್ರಾ ಸಂ) *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ* (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ,೧೯೭೯) ಪು. ೮೮.

೩೪. ಪ್ರಶಾಂತ ಹೆಚ್.ಡಿ., *ಜನಸಮುದಾಯ ಸಂಪುಟ* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೦)ಪು.೧೦೦.

೩೫. .... ಪು. ೭೪.

೩೬. .... ಪು. ೨.

೩೭. ಮೈತ್ರಿ ಕೆ.ಎಂ., *ಬುಡಕಟ್ಟು ಕುಲಕಸುಬುಗಳು* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨) ಪು.೨೧೩.

೩೮. ....ಪು. ೨೩೧.

೩೯. ಹರೀಶ್ ಪಿ.ಎನ್. (ಲೇ) *ಕೊಡಗಿನ ಬುಡಕಟ್ಟುಗಳು, ಜಾನಪದ ಗಂಗೋತ್ರಿ,* (ಬೆಂಗಳೂರು:ಕರ್ನಾಟಕ ಜಾನಪದ ಮತ್ತು ಯಕ್ಷಗಾರ ಅಕಾಡೆಮಿ, ೧೯೯೪) ಸಂಪುಟ ೭, ಸಂಖ್ಯೆ೨, ಪು.೩೪-೩೫.

ಅಧ್ಯಾಯ ೪

ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಬುಡಕಟ್ಟು ಜನರು ಮೂಲತಃ ವಿಶ್ವದ ಮೂಲನಿವಾಸಿಗಳು. ಆದರೆ ಅವರಲ್ಲಿರುವ ಮುಗ್ಧತೆ ಮತ್ತು ಬಡತನದಿಂದ ಅವರಿಗೆ ಹಕ್ಕು ಮತ್ತು ಸೌಲತ್ತುಗಳು ತಿಳಿದಿರುವುದಿಲ್ಲ.[೧] ಭಾರತ ಸ್ವಾತಂತ್ರ್ಯ ಪಡೆದ ನಂತರ ಉದ್ಭವವಾದ ಪ್ರಶ್ನೆಯೆಂದರೆ, ಭಾರತದಲ್ಲಿ ಹಲವಾರು ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದ ಅನೇಕ ಬುಡಕಟ್ಟುಗಳು ಆರ್ಥಿಕ, ಸಾಮಾಜಿಕವಾಗಿ ಇತರೆ ಸಮಾಜ ವರ್ಗಗಳ ಜೊತೆ ಸಮಾನ ಮನಸ್ಕವಾಗಿ ಬೆಳೆಯಲು ಅವಕಾಶವಿಲ್ಲದ್ದನ್ನು ಗುರುತಿಸಿ, ಬುಡಕಟ್ಟು ಜನರನ್ನು ಇತರೆ ವರ್ಗದ ಶೋಷಣೆಯಿಂದ ತಪ್ಪಿಸಿ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಮೂಲಭೂತವಾಗಿ ನೀಡಬೇಕಾದ ಸೌಲಭ್ಯ ಮತ್ತು ರಕ್ಷಣೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನೀಡಿ, ಸಮಾಜದ ಮುಖ್ಯ ವಾಹಿನಿಗೆ ತರಲು ಹಾಗೂ ಬುಡಕಟ್ಟು ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ತೆಗೆದುಕೊಳ್ಳಲು ಭಾರತ ಸಂವಿಧಾನದ ಅನುಚ್ಛೇದ ೩೪೧, ೩೪೨ ರಲ್ಲಿ ಅವಕಾಶ ಮಾಡಿಕೊಡಲಾಗಿದೆ.[೨] ಇದಲ್ಲದೆ ಭಾರತ ಸಂವಿಧಾನದ ೪೬ನೇ ಅನುಚ್ಛೇಧದಲ್ಲಿ ರಾಜ್ಯ ಸರ್ಕಾರದ ನಿರ್ದೇಶಕ ತತ್ವಗಳಲ್ಲಿ ಅವಕಾಶ ಮಾಡಲಾಗಿದ್ದು, ಇದರಲ್ಲಿ ಅಭಿವೃದ್ಧಿ ಮತ್ತು ನಿಯಂತ್ರಿತ ಧೋರಣೆಗಳು ಸೇರಿರುತ್ತವೆ. ಈ ಆನುಚ್ಛೇದದ ವಿವರಣೆ ಈ ರೀತಿ ಇರುತ್ತದೆ.

"ರಾಜ್ಯ ಸರ್ಕಾರವು ಹಿಂದುಳಿದ ವರ್ಗದ ಜನರ ಅದರಲ್ಲಿಯೂ ಪರಿಶಿಷ್ಠ ಜಾತಿ,ವರ್ಗದವರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಹೆಚ್ಚಿನ ಗಮನ ಹರಿಸಿ ಸಾಮಾಜಿಕ ನ್ಯಾಯ ಮತ್ತು ಇತರೆ ದೌರ್ಜನ್ಯಗಳಿಂದ ಪೂರ್ಣ ಮತ್ತು ನಿರ್ಧಿಷ್ಟ ರಕ್ಷಣೆ ನೀಡುವುದು ಎಂದು ವ್ಯಾಖ್ಯಾನಿಸಲಾಗಿದೆ". ಭಾರತ ಸಂವಿಧಾನ ಅನುಚ್ಛೇಧ ೩೩೯ರಲ್ಲಿ ಬುಡಕಟ್ಟು ಜನರ ಸ್ಥಿತಿಗತಿಗಳನ್ನು ಪರಿಶೀಲಿಸಲು ಹಾಗೂ ಅವರ ಅಭಿವೃದ್ಧಿಗಾಗಿ ಬೇಕಾಗುವ ಯೋಜನೆಗಳನ್ನು ಕೈಗೊಳ್ಳಲು ಹಲವಾರು ಆಯೋಗಗಳನ್ನು ರಚಿಸಲಾಗಿದ್ದು, ಅವುಗಳಲ್ಲಿ ಅತಿ ಮುಖ್ಯವಾಗಿ ೧೯೬೧ರಲ್ಲಿ ಶ್ರೀ ಬಿ.ಎನ್ ದೇಬಾರ್ ರವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆಯಾಗಿದ್ದು, ಇದು ಬುಡಕಟ್ಟು ಜನರ ಅಭಿವೃದ್ಧಿಗೆ ವ್ಯಾಪಕವಾಗಿ

ಶಿಫಾರಸ್ಸನ್ನು ಮಾಡಿದೆ. ಆ ಆಯೋಗದ ಪ್ರಕಾರ ಭಾರತದಲ್ಲಿರುವ ಬುಡಕಟ್ಟು ಪಂಗಡಗಳನ್ನು ೪ ದೊಡ್ಡ ಗುಂಪುಗಳಾಗಿ ವಿಭಾಗಿಸಿರುತ್ತಾರೆ.[೩]

೧. ಆದಿವಾಸಿಗಳ ಗುಂಪು. (Primitive Group)

೨. ಬದಲಾಯಿಸುವ ಕೃಷಿಕರ ಗುಂಪು (Shifting cultivators Group)

೩. ಅಲೆಮಾರಿಗಳ ಗುಂಪು (Nomadic or Transitional Group)

೪. ಸುಧಾರಿಸಿದ ಗುಂಪು. (Advance Group)

ಹಾಗೂ ಡಾ.ಎಲ್.ಪಿ. ವಿದ್ಯಾರ್ಥಿ ಪ್ರಕಾರ ಭಾರತದಲ್ಲಿರುವ ಬುಡಕಟ್ಟು ಪಂಗಡಗಳನ್ನು ೬ ಗುಂಪುಗಳಾಗಿ (ಸಾಂಸ್ಕೃತಿಕ ಆಧಾರದ ಮೇಲೆ) ವಿಭಜಿಸಿರುತ್ತಾರೆ.

೧. ಕಾಡುಗಳಲ್ಲಿ ಬೇಟೆಯಾಡುವ ಗುಂಪು. (Forest- Hunting Group)

೨. ಆದಿವಾಸಿ ಬೆಟ್ಟಗಳಲ್ಲಿ ವ್ಯವಸಾಯ ಮಾಡುವ ಗುಂಪು. (Hill Cultivators Group)

೩. ಸಮತಲ ಪ್ರದೇಶದ ವ್ಯವಸಾಯ ಗುಂಪು. (Plain Agricultural Group)

೪. ಸಾಮಾನ್ಯ ಕುಶಲಕರ್ಮಿ ಗುಂಪು (Simple Artisan Group)

೫. ಪಶುಸಂಗೋಪನಾ ಗುಂಪು (Cattle Harder Group)

೬. ಕೈಗಾರಿಕೆ ಹಾಗೂ ನಗರ ಪ್ರದೇಶದಲ್ಲಿ ಕೆಲಸ ಮಾಡುವ ಗುಂಪು. (Industrial-Urban Workers Group)

ಈ ಸಮಿತಿಗಳಿಂದ ಬಂದಂತಹ ವರದಿಯ ಆಧಾರದ ಮೇರೆಗೆ ಬುಡಕಟ್ಟು ಪಂಗಡದವರ ಅಭಿವೃದ್ಧಿಗಾಗಿ ಕೆಲವು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಭಾರತ ಸರ್ಕಾರ ಮುಂದಾಯಿತು. ಇವುಗಳನ್ನು ಕಾರ್ಯರೂಪಕ್ಕೆ ತರಲು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಯೋಜನೆಗಳನ್ನು ಕೈಗೊಂಡು ಅನುಷ್ಠಾನಗೊಳಿಸಲು ಪ್ರಾರಂಭಿಸಿದ್ದು ಇಂದಿನವರೆವಿಗೂ ಮುಂದುವರೆಯುತ್ತಿದೆ.[೪]

ಬುಡಕಟ್ಟು ಜನರ ಬಗ್ಗೆ ನೆಹರು ಅವರ ಚಿಂತನೆಗಳು

ಭಾರತದ ಮೊದಲ ಪ್ರಧಾನ ಮಂತ್ರಿ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ವೆರಿಯರ್ ಎಲ್ವಿನ್ ರ ಪ್ರಭಾವದಿಂದ ಆದಿವಾಸಿಗಳನ್ನು ಕುರಿತು ಗಂಭೀರವಾಗಿ ಚಿಂತಿಸಲು ತೊಡಗಿದ್ದರು. ನೆಹರು ರವರು ಎಲ್ವಿನ್‌ರ ಕುರಿತು He is the missionary of my Views of Tribal affairs ಎಂದು ವ್ಯಕ್ತಪಡಿಸಿರುತ್ತಾರೆ.

ಆದಿವಾಸಿಗಳ ಅಭಿವೃದ್ಧಿ ಕುರಿತು ನೆಹರು ಒಬ್ಬ ಮಾನವ ಶಾಸ್ತ್ರಜ್ಞನಂತೆಯೇ ಚಿಂತಿಸಿದ್ದಾರೆ. ಬುಡಕಟ್ಟು ಜನರನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಬಲವಂತವಾಗಿ ಅವರ ಮೇಲೆ ಏನನ್ನು ಹೇರಕೂಡದು, ಹಾಗಂತ ಮ್ಯೂಸಿಯಂನಲ್ಲಿರುವ ನಿರ್ಜೀವ ವಸ್ತುಗಳಂತೆ ಅವರನ್ನು ಹಾಗೆಯೇ ಬಿಟ್ಟು ಬಿಡಬಾರದು. ಬ್ರಿಟೀಷ್ ಆಡಳಿತದ ಸಂದರ್ಭದಲ್ಲಿ ಈ ಎಲ್ಲಾ ಬುಡಕಟ್ಟು ಹಾಗೂ ಬುಡಕಟ್ಟಲ್ಲದ ಇತರೆ ಜನಾಂಗಗಳು ಭಾರತದಿಂದ ಬಹುತೇಕ ಸಂಪರ್ಕ ಕಡಿದುಕೊಂಡಿದ್ದವು. ೧೯೫೫ರಲ್ಲಿ ಜಗದಾಳಪುರದಲ್ಲಿ ನಡೆದ ಅಖಿಲ ಭಾರತ ಆದಿವಾಸಿಗಳ ಸಮ್ಮೇಳನವನ್ನು ಉದ್ದೇಶಿಸಿ ನೆಹರೂರವರು ಆದಿವಾಸಿಗಳನ್ನು ಕುರಿತು ಈ ರೀತಿ ನುಡಿದಿರುತ್ತಾರೆ. wherever you live you should live in your

own way. This is what I want you to decide yourselves, how would you like to life, your old customs and habits are good. We want that you should be educated and do your part for the welfare of our country. "ನೀವು ಎಲ್ಲಿ ವಾಸಿಸುತ್ತಿದ್ದೀರಿ ಅಲ್ಲಿಯೇ ನಿಮ್ಮದೇ ಆದ ರೀತಿಯಲ್ಲಿ ಬದುಕಿರಿ. ನೀವು ಹೇಗೆ ಬದುಕಬೇಕೆಂಬುದನ್ನು ನಿಮ್ಮಷ್ಟಕ್ಕೆ ನೀವೇ ತೀರ್ಮಾನಿಸಿ ಕೊಳ್ಳಿರಿ. ನಿಮ್ಮ ಹಳೆಯ ರೂಢಿ ಸಂಪ್ರದಾಯಗಳು ಉತ್ತಮವಾಗಿವೆ. ಅವುಗಳು ಉಳಿಯಬೇಕೆನ್ನುವುದೇ ನಮ್ಮ ಆಶೆ. ನೀವೆಲ್ಲಾ ಶಿಕ್ಷಣವನ್ನು ಪಡೆದು ಈ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆನ್ನುವುದೇ ನಮ್ಮ ಆಶಯವಾಗಿದೆ."[೫]

ಮೊಟ್ಟ ಮೊದಲ ಬಾರಿಗೆ ನೆಹರೂರವರು ಬುಡಕಟ್ಟು ಜನರನ್ನು ಬಡತನ ರೇಖೆಯಿಂದ ಮೇಲೆತ್ತಲು ಹಾಗೂ ಅವರ ಅಭಿವೃದ್ಧಿಗಾಗಿ ಪಂಚಶೀಲ ಎಂಬ ತತ್ವಗಳನ್ನು ರೂಪಿಸಿದ್ದು. ಅದರಲ್ಲಿ ಆದಿವಾಸಿಗಳ ಸಂಸ್ಕೃತಿಯನ್ನು ಕಾಪಾಡಲು ಅವರ ಪಾರಂಪರಿಕ ಉತ್ಪಾದನಾ ಮೂಲಗಳನ್ನು ಗೌರವಿಸುವ, ಯಾವ ಆಧುನಿಕ ಆಯಾಮಗಳು ಅವರ ಮೇಲೆ ಅಡ್ಡಪರಿಣಾಮಗಳನ್ನು ಬೀರದಿರುವಂತೆ ಎಚ್ಚರವಹಿಸುವ ಒಂದು ಬಗೆಯ ರಕ್ಷಣಾತ್ಮಕ ಮನೋಭಾವ ಪಂಚಶೀಲ ತತ್ವಗಳಲ್ಲಿ ಅಡಗಿದೆ.

೧. ಆದಿವಾಸಿಗಳು ಅವರದೇ ಹಾದಿಯಲ್ಲಿ ಅವರ ಇಚ್ಛೆಗೆ ಅನುಗುಣವಾಗಿ ಅಭಿವೃದ್ಧಿ ಹೊಂದಬೇಕು. ಒತ್ತಾಯ ಪೂರ್ವಕವಾಗಿ ನಾವು ಹೊರಗಿನ ಸಂಗತಿಗಳನ್ನು ಅವರ ಮೇಲೆ ಹೇರಿದರೆ ಅವರು ಅದನ್ನು ಒಪ್ಪಿಕೊಳ್ಳಲಾರರು. ಅವರ ಸಾಂಪ್ರದಾಯಿಕ ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ನೀಡಬೇಕಾಗಿದೆ.

೨. ಬುಡಕಟ್ಟು ಜನರ ಭೂಮಿ ಮತ್ತು ಅರಣ್ಯದ ಮೇಲಿನ ಹಕ್ಕುಗಳನ್ನು ಗೌರವಿಸಬೇಕು.

೩. ಬುಡಕಟ್ಟು ಜನರ ಅಭಿವೃದ್ಧಿ ಮತ್ತು ಆಡಳಿತ ನಿರ್ವಹಣೆಯನ್ನು ನಿರ್ವಹಿಸಲು ತರಬೇತಿ ಹೊಂದಿದ ತಂಡವನ್ನು ರಚಿಸಬೇಕಾಗಿದೆ. ಅದಕ್ಕೆ ಪ್ರಾರಂಭದಲ್ಲಿ ಹೊರಗಿನಿಂದ ಪರಿಣಿತ ವ್ಯಕ್ತಿಗಳ ಅವಶ್ಯಕತೆ ಬೇಕಾಗಿದೆ. ಹಾಗೆಂದ ಮಾತ್ರಕ್ಕೆ ಬಹಳಷ್ಟು ಹೊರಗಿನವರು ಬುಡಕಟ್ಟು ಪ್ರದೇಶಕ್ಕೆ ಪ್ರವೇಶಿಸಲು ನಿಷೇಧಿಸಬೇಕಾಗಿದೆ.

೪. ಬುಡಕಟ್ಟು ಪ್ರದೇಶದಲ್ಲಿ ಹೆಚ್ಚಿನ ಆಡಳಿಗಾರರ ಅವಶ್ಯಕತೆ ಕಂಡುಬರುವುದಿಲ್ಲ. ಈ ಆಡಳಿತ ವ್ಯವಸ್ಥೆ ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಸ್ಪರ್ಧಿಯಾಗಿ ಪರಿಗಣಿಸಬಾರದು.

೫. ಬುಡಕಟ್ಟುಗಳ ಅಭಿವೃದ್ಧಿಯನ್ನು ಅಂಕಿಸಂಖ್ಯೆಗಳ ಮೂಲಕ ಅಥವಾ ಖರ್ಚು ಮಾಡಿರುವ ಹಣದಿಂದ ಅಳೆಯದೇ ಮಾನವೀಯ ಮೌಲ್ಯಗಳ ಮೂಲಕ ಅಳೆಯಬೇಕಾಗಿದೆ.[೬]

೧ ನೇ ಪಂಚವಾರ್ಷಿಕ ಯೋಜನೆ : ಭಾರತದ ಮೊದಲನೇ ಪಂಚವಾರ್ಷಿಕ ಯೋಜನೆಯು ಸಮಾಜವಾದಿ ಸಮಾಜಕ್ಕೆ ಅಡಿಗಲ್ಲನ್ನು ಹಾಕಿದೆ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶದಲ್ಲಿ ಸರ್ವತೋಮುಖ ಬದಲಾವಣೆಯನ್ನು, ಸಮೂಹ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಲು ಪ್ರಯತ್ನಿಸಿದೆ. ಮೊದಲನೇಯ ಪಂಚಾವಾರ್ಷಿಕ ಯೋಜನೆಯನ್ನು ೧.೪.೧೯೫೧ರಲ್ಲಿ ಪ್ರಾರಂಭಿಸಲಾಯಿತು.[೭] ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ರೂ. ೩೦ ಕೋಟಿಗಳನ್ನು ಒದಗಿಸಲಾಗಿತ್ತು. ರಾಜ್ಯಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶಿಕ್ಷಣ ಮತ್ತು ಸಂಸ್ಕೃತಿ (Education & Culture)

೨. ಬುಡಕಟ್ಟುಗಳ ಆರ್ಥಿಕತೆಯ ಅಭಿವೃದ್ಧಿ (Development of Tribal economy)

೩. ಸಾರಿಗೆ ಮತ್ತು ಸಂವಹನ (Transport & Communication)

೪. ಸಮಾಜ ಕಲ್ಯಾಣ (ಆರೋಗ್ಯ, ನೈರ್ಮಲ್ಯಿಕರಣ, ವಸತಿ) (Social Welfare Like Health, Sanitaion, Housing) ಇತ್ಯಾದಿ ವಿನೂತನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.[೮]

ಕೋಷ್ಟಕ ೪.೧

ಮೊದಲನೇಯ ಪಂಚವಾರ್ಷಿಕ ಯೋಜನೆಯಲ್ಲಿ ಇಲಾಖಾವಾರು ಖರ್ಚು ಮಾಡಿದ ಅನುದಾನದ ವಿವರ

ಕ್ರ.ಸಂ	ಯೋಜನವಾರು ಇಲಾಖಾವಾರು	ಖರ್ಚುಮಾಡಿರುವ ಅನುದಾನದ ವಿವರ
೧	ಶಿಕ್ಷಣ	೫,೧೦,೩೩,೫೧೮
೨	ಕೃಷಿ	೨,೬೫,೯೮,೮೫೨
೩	ಗೃಹ ಕೈಗಾರಿಕೆ	೪೭,೭೩,೧೮೩
೪	ಆರೋಗ್ಯ ಮತ್ತು ವೈದ್ಯಕೀಯ ಸೇವೆ	೧,೫೩,೫೨,೬೦೧
೫	ವಸತಿ	೪೮,೯೧,೦೨೪
೬	ಸಂಪರ್ಕ	೪,೦೭,೯೯,೫೫೧
೭	ಸಹಕಾರ	೪೯,೭೫,೫೬೪
೮	ಪುನರ್ ವಸತಿ	೪,೫೭,೦೨೧
೯	ಅರಣ್ಯ	೫೭,೮೯,೪೩೨
೧೦	ಪಶುಸಂಗೋಪನೆ	೧೧,೫೩,೪೫೧
೧೧	ಪ್ರಚಾರ	೬,೬೨,೧೫೭
೧೨	ಸಮುದಾಯ ಕೇಂದ್ರಗಳು	೭,೧೭,೭೪೮
೧೩	ಸ್ವಯಂ ಸೇವಾ ಸಂಘಗಳಿಗೆ ಸಹಾಯಧನ	೧೮,೬೨,೧೧೮
೧೪	ಆಡಳಿತ	೫೪,೫೭,೬೭೬
೧೫	ಇತರೆ	೯೧,೭೦,೬೮೮
	ಒಟ್ಟು ಮೊತ್ತ	೧೭,೩೬,೬೪,೫೮೪

(**ಕೃಪೆ :** Devendra Thakur & Thakur D.N., 1997, *Tribal Development and planing* P.102)

ಮೊದಲನೆಯ ಪಂಚವಾರ್ಷಿಕ ಯೋಜನೆಯ ಕೋಷ್ಟಕದಲ್ಲಿ ಸಹಜವಾಗಿಯೇ ಶಿಕ್ಷಣ, ಆರ್ಥಿಕ ಅಭಿವೃದ್ಧಿ, ಸಾರಿಗೆ ಮತ್ತು ಸಂವಹನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ರೂ. ೪೦೦ ರಿಂದ ೫೦೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ತದನಂತರ ಆರೋಗ್ಯ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಿ ನಂತರ ಆಡಳಿತಕ್ಕೆ ಹೆಚ್ಚಿನ ಗಮನ ನೀಡಿರುವುದು ವ್ಯಕ್ತವಾಗುತ್ತದೆ. ಸ್ವಾತಂತ್ರದ ಪೂರ್ವದ ದಿನಗಳಿಗೆ ಹೋಲಿಸಿದ್ದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಆರ್ಥಿಕ ಕ್ಷೇತ್ರ ಮತ್ತು ಇತರೆ ಕ್ಷೇತ್ರಗಳಿಗೆ ಖರ್ಚು ಮಾಡಿರುವ ಆಯವ್ಯಯ ತೃಪ್ತಿಕರವಾಗಿದೆ.

ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಸಾಧನೆಗಳ ವಿವರ

೧. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ೪೦೦೦ ಸಾವಿರ ಶಾಲೆಗಳನ್ನು ಸ್ಥಾಪಿಸಲಾದವು. ಇದರಲ್ಲಿ ಒಂದು ಸಾವಿರ ಆಶ್ರಮ ಶಾಲೆ ಮತ್ತು ಸೇವಾಶ್ರಮ ಶಾಲೆಗಳು ಸೇರಿರುತ್ತವೆ. ೪,೫೦,೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನೆಯನ್ನು ಪಡೆದುಕೊಂಡಿದ್ದಾರೆ. ೮೫೦೦ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿರುತ್ತಾರೆ.

೨. ಈ ಯೋಜನೆಯ ಅವಧಿಯಲ್ಲಿ ೨೪೦೦ ಮೈಲಿನ ಉದ್ದದ ರಸ್ತೆ ಮತ್ತು ಸೇತುವೆಗಳು ಹಾಗೂ ಬೆಟ್ಟಗಳಲ್ಲಿ ಕಾಲು ದಾರಿಗಳ್ನು ನಿರ್ಮಿಸಲಾಗಿದೆ.

೩. ಈ ಯೋಜನೆಯ ಅವಧಿಯಲ್ಲಿ ಹೊಸದಾದ ಬೇಸಾಯ ಪದ್ಧತಿಯನ್ನು ಅಳವಡಿಸಲು ೫೦ ಕೃಷಿ ಫಾರಂಗಳನ್ನು ಸ್ಥಾಪಿಸಲಾಯಿತು.

೪. ಈ ಯೋಜನೆಯ ಅವಧಿಯಲ್ಲಿ ೮೦೦೦ ಬುಡಕಟ್ಟು ಕುಟುಂಬಗಳು, ತಮ್ಮ ಅಲೆಮಾರಿ ಜೀವನವನ್ನು ತೊರೆದು ಶಾಶ್ವತವಾಗಿ ಕಾಲೋನಿಗಳಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾರೆ. ಇವರಿಗಾಗಿ ೩೫೦ ಆಹಾರ ಬ್ಯಾಂಕುಗಳನ್ನು ಸಂಘಟಿಸಲಾಗಿದೆ.

೫. ಈ ಯೋಜನೆಯ ಅವಧಿಯಲ್ಲಿ ೩೧೦ ವಿವಿದೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಯಿತು.

೬. ೮೦೦ ಬುಡಕಟ್ಟು ಜನರಿಗೆ ನೇಯ್ಗೆಯಲ್ಲಿ, ರೇಷ್ಮೆ ಬೆಳವಣಿಗೆಯಲ್ಲಿ, ಧಾನ್ಯ ಸಂರಕ್ಷಣೆಯ ಬಗ್ಗೆ ತರಬೇತಿಯನ್ನು ನೀಡಲಾಯಿತು.

೭. ೭೫೦ ಬುಡಕಟ್ಟು ಕುಟುಂಬಗಳು ತಮ್ಮ ಸಣ್ಣ ವ್ಯಾಪಾರವನ್ನು ವೃದ್ಧಿ ಪಡಿಸಿಕೊಳ್ಳವುದಕೊಸ್ಕರ ಸಹಾಯಧನವನ್ನು ನೀಡಲಾಯಿತು.

೮. ೧೧೦ ಗೃಹ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಯಿತು, ೩೨೦೦ ವೈದ್ಯಕೀಯ ಕೇಂದ್ರಗಳನ್ನು, ೨೫ ಮಲೇರಿಯಾ ನಿಯಂತ್ರಣಾ ಕೇಂದ್ರಗಳನ್ನು, ೨೬ ಹೆರಿಗೆ ಆಸ್ಪತ್ರೆ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಯಿತು.

೯. ಬುಡಕಟ್ಟು ಪ್ರದೇಶದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಲಾಯಿತು.

೧೦. ಈ ಯೋಜನೆಯ ಅವಧಿಯಲ್ಲಿ ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳಗಳಲ್ಲಿ ಬುಡಕಟ್ಟು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಒರಿಸ್ಸಾದಲ್ಲಿ ಬುಡಕಟ್ಟು ಬ್ಯೂರೋ ಪ್ರಾರಂಭಿಸಲಾಯಿತು.[೯]

೨ನೇ ಪಂಚವಾರ್ಷಿಕ ಯೋಜನೆ : ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಬೃಹತ್ ಪ್ರಮಾಣದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. ಬುಡಕಟ್ಟು ಪ್ರದೇಶಗಳಲ್ಲಿ ಸರಾಸರಿ ೨೫,೦೦೦ ಬುಡಕಟ್ಟು ಜನರನ್ನು ಹೊಂದಿರುವ ಪ್ರದೇಶಗಳಲ್ಲಿ ಎನ್.ಇ.ಎಸ್.ಬ್ಲಾಕ್‌ಗಳನ್ನು ಗುರ್ತಿಸಲಾಗಿದೆ. ಕೇಂದ್ರ ಸರ್ಕಾರವು ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶ ಅಭಿವೃದ್ಧಿಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದೆ. ಇವುಗಳಲ್ಲಿ ಅತಿ ಮುಖ್ಯವಾದದ್ದು ವಿಶೇಷ ವಿವಿದೋದ್ದೇಶ ಬುಡಕಟ್ಟುಗಳ ಗುಂಪು (Special Multipurpose Tribal Blocks.) ಈ ಗುಂಪುಗಳ ಉದ್ದೇಶ, ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮತ್ತಷ್ಟು ಹೆಚ್ಚಿನ

ಗಮನಹರಿಸುವುದಾಗಿದೆ. ಈ ವಿಶೇಷ ವಿವಿಧೋದ್ದೇಶ ಬುಡಕಟ್ಟು ಗುಂಪುಗಳ ಪ್ರಗತಿಯನ್ನು ಪರಿಶೀಲಿಸಲು ವೆರಿಯರ್ ಎಲ್ವಿನ್ ರವರ ನೇತೃತ್ವದಲ್ಲಿ ಅನೇಕ ಭಾಗಗಳುಳ್ಳ ತಂಡವನ್ನು (Composite team) ರಚಿಸಿದೆ. ಈ ತಂಡವು ಬುಡಕಟ್ಟು ಜನರ ಸಮಸ್ಯೆಗಳನ್ನು ಬಗೆಹರಿಸಲು ಬಹು ಹೆಚ್ಚು ಫಲಕಾರಿಯಾಗುವ (Flexible) ನಮನೀಯತೆಯ ಶಿಫಾರಸ್ಸುಗಳನ್ನು ಮಾಡಿದೆ. ಕಾಲಾನುಕ್ರಮ ಈ ಎಸ್.ಎಂ.ಪಿ.ಟಿ.ಬ್ಲಾಕ್‌ಗಳನ್ನು, ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳೆಂದು (Tribal Developement Blocks) ಕರೆಯಲಾಯಿತು. ಈ ಪ್ರತಿಯೊಂದು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳು ೨೫,೦೦೦ ಬುಡಕಟ್ಟುಗಳನ್ನು ಹೊಂದಿರುತ್ತದೆ.

ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭವೃದ್ಧಿಯನ್ನು ಎರಡು ಪ್ರತ್ಯೇಕ ಯೋಜನೆಯಲ್ಲಿ ಕೈಗೊಳ್ಳಲಾಗಿತ್ತು. ಅವುಗಳೆಂದರೆ ರಾಜ್ಯ ಯೋಜನೆ ಮತ್ತು ಕೇಂದ್ರ ಯೋಜನೆ. ರಾಜ್ಯ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ೫೦:೫೦ ಅನುಪಾತದಲ್ಲಿ ಭರಿಸಲಾಯಿತು. ಕೇಂದ್ರ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಪೂರ್ಣ ಅನುದಾನವನ್ನು ಭಾರತ ಸರ್ಕಾರ ಭರಿಸಿದೆ. ಈ ಯೋಜನೆಯ ಅವಧಿಯಲ್ಲಿ ಎರಡೂ ಯೋಜನೆಗಳಲ್ಲಿ ಒಟ್ಟು ರೂ. ೪೨.೯೨ ಕೋಟಿಗಳನ್ನು ಖರ್ಚು ಮಾಡಲಾಗಿದೆ.[೧೦] ಈ ಯೋಜನೆಯ ಅವಧಿಯಲ್ಲಿ

೧. ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಮುಖ್ಯತೆ ನೀಡಿ ರೂ. ೧೬.೮೬ ಕೋಟಿಗಳನ್ನು ಖರ್ಚು ಮಾಡಲಾಗಿದೆ.

೨. ೪೩ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳನ್ನು ತೆರೆಯಲಾಯಿತು.

೩. ಬುಡಕಟ್ಟು ಜನರಿಗೆ ಪುನರ್‌ವಸತಿಯನ್ನು ಕಲ್ಪಿಸಲು ರೂ. ೨೦ ಲಕ್ಷಗಳನ್ನು ಖರ್ಚು ಮಾಡಿ ೨೨೧೭ ಮನೆಗಳನ್ನು ನಿರ್ಮಿಸಲಾಯಿತು.

೪. ರಾಜ್ಯ ಯೋಜನೆಯ ಅಡಿಯಲ್ಲಿ, ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ೩೧೮೭ ಶಾಲೆಗಳು, ೩೯೮ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಹಾಗೂ ೩ ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲು ಪ್ರಸ್ತಾವನೆ ಕೈಗೊಳ್ಳಲಾಯಿತು.

೫. ರೂ. ೮೨೧.೫೧ ಲಕ್ಷಗಳನ್ನು ಖರ್ಚು ಮಾಡಲು ಯೋಜನೆಗಳನ್ನು ಕೈಗೊಳ್ಳಲಾಗಿತ್ತು.

೬. ಸಾರಿಗೆ ಸಂವಹನ ಕ್ಷೇತ್ರದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಖರ್ಚು ಮಾಡಿದ ಅನುದಾನಕ್ಕಿಂತ ಎರಡರಷ್ಟು ಖರ್ಚುಮಾಡಲಾಗಿದೆ.

೭. ಬುಡಕಟ್ಟು ಜನರ ವಸತಿ ಪರಿಸ್ಥಿತಿ ಸಂಪೂರ್ಣ ಅತೃಪ್ತಿದಾಯಕವಾಗಿದ್ದರಿಂದ ರೂ. ೬೦ ಲಕ್ಷಗಳನ್ನು ಖರ್ಚುಮಾಡಿ ೧೮ ಸಾವಿರ ಮನೆಗಳನ್ನು ನಿರ್ಮಿಸಲಾಯಿತು.

೩ನೇ ಪಂಚವಾರ್ಷಿಕ ಯೋಜನೆ : (೧೯೬೧-೬೬) ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತಂದಿದ್ದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಹಿಂದುಳಿದ ವರ್ಗಗಳ ಜನರ ಸಮಸ್ಯೆಗಳನ್ನು ಕಿಂಚಿತ್ತೂ ಬಗೆಹರಿಸದ ಕಾರಣ ಬುಡಕಟ್ಟು ಜನರ ಅತೃಪ್ತಿಗೆ ಕಾರಣವಾಯಿತು. ಇದರಿಂದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗದ

ಕಲ್ಯಾಣ ಅಧ್ಯಯನ ಸಮಿತಿಗಳು, ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇರುವ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಿ ಅಭಿವೃದ್ಧಿ ಪಡಿಸಲು ಕೆಲವು ಜಾಗರೂಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆಯನ್ನು ನೀಡಿರುತ್ತವೆ.

೩ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಚುರುಕುಗೊಳಿಸ ಬೇಕಾದ ಅವಶ್ಯಕತೆ ಕಂಡುಬಂದಿದ್ದರಿಂದ ಹಾಗೂ ೨ನೇ ಪಂಚವಾರ್ಷಿಕ ಯೋಜನೆಯಿಂದ ದೊರೆತ ಅನುಭವದ ಮೇಲೆ ತಿಳಿಸಿರುವ ಯೋಜನೆಗಳನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಗಣಿಸಬೇಕಾದ ಅವಶ್ಯಕತೆ ಕಂಡುಬಂದಿತು. ಈ ಯೋಜನೆಯ ಅವಧಿಯಲ್ಲಿ ಆಗಿಂದಾಗ್ಗೆ ಬದಲಾಯಿಸುವ ಕೃಷಿಗುಂಪಿಗೆ ಸೇರಿದ ಬುಡಕಟ್ಟು ಜನರಿಗೆ ಪುನರ್ ವಸತಿಯನ್ನು ಒದಗಿಸಿ, ಅವರ ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸುವುದು ಉದ್ದೇಶವಾಗಿತ್ತು.[೧೧]

ಬುಡಕಟ್ಟು ಕೃಷಿ ಕಾರ್ಮಿಕರ ಹಾಗೂ ಬುಡಕಟ್ಟು ಕುಶಲಕರ್ಮಿಗಳಿಗೆ ಬೇಕಾಗಿರುವ ಸಾಲ ಹಾಗೂ ಇನ್ನಿತರೆ ಅವಶ್ಯಕಗಳನ್ನು ಪೂರೈಸಿಕೊಳ್ಳಲು ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಶಿಫಾರಸು ಮಾಡಿದೆ. ಇದಲ್ಲದೆ ಈ ಯೋಜನೆಯ ಅವಧಿಯಲ್ಲಿ ಭೂ ಅಭಿವೃದ್ಧಿ, ಭೂಸಾರ ಸಂರಕ್ಷಣೆ, ಸಣ್ಣ ನೀರಾವರಿ ಇತ್ಯಾದಿಗಳಿಗೆ ಹೆಚ್ಚು ಒತ್ತುಕೊಡಲಾಗಿದೆ. ಶೈಕ್ಷಣಿಕ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿ ಪ್ರಾಥಮಿಕ ಶಾಲೆಗಳ ಸೌಲಭ್ಯಗಳನ್ನು ಒದಗಿಸಿದೆ. ಇದರ ಜೊತೆಗೆ ಫ್ರಿಶಿಪ್, ವಿದ್ಯಾರ್ಥಿವೇತನ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆ ವಿಧ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಜೊತೆಗೆ ತಾಂತ್ರಿಕ ತರಬೇತಿ ವಿಧ್ಯಾರ್ಥಿಗಳಿಗೆ ಫ್ರಿಶಿಪ್ ಹಾಗೂ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

೩ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅದೇ ರೀತಿ, ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ ಮತ್ತು ಸಂವಹನಕ್ಕೆ ಆದ್ಯತೆ ನೀಡಲಾಗಿದೆ. ೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣವನ್ನು ಲೆಕ್ಕಾಚಾರ ಮಾಡಿ ನೋಡಿದಾಗ, ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೨೧.೫೬ ರಷ್ಟು ಹೆಚ್ಚಾಗಿದ್ದು ದಾಖಲೆಗಳಿಂದ ಧೃಡಪಟ್ಟಿದೆ. ಈ ಯೋಜನೆಯ ಆವಧಿಯಲ್ಲಿ

೧. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತುಕೊಟ್ಟು ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿತ್ತು.
೨. ರೂ. ೮೫೭೭ ಕೋಟಿಗಳನ್ನು ಖರ್ಚು ಮಾಡಲಾಗಿದೆ. ರೂ. ೫೦.೫೩ ಕೋಟಿಗಳನ್ನು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚುಮಾಡಲಾಗಿದೆ.
೩. ಬುಡಕಟ್ಟು ಅಭಿವೃದ್ಧಿ ಬ್ಲಾಕ್ ಕಡೆಗೆ ಹೆಚ್ಚಿನ ಗಮನ ನೀಡಿ, ೨ ನೇ ಪಂಚವಾರ್ಷಿಕ ಯೋಜನೆಯಲ್ಲಿದ್ದ ೪೩ ಬ್ಲಾಕ್‌ಗಳನ್ನು ೪೫೮ ಬ್ಲಾಕ್‌ಗಳಿಗೆ ಹೆಚ್ಚಿಸಲಾಯಿತು.
೪. ೨ನೇ ಆದ್ಯತೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗಿದ್ದು ಇದರಿಂದ ಬುಡಕಟ್ಟು ಜನರ ಸಾಕ್ಷರತಾ ಪ್ರಮಾಣ ೯.೧೬ ಕ್ಕೆ ಏರಿತು.[೧೨]

೧೯೬೬-೬೯ರ ಅವಧಿಯಲ್ಲಿ ವಾರ್ಷಿಕ ಯೋಜನೆಗಳನ್ನು ತಯಾರಿಸಿ ಪಂಚವಾರ್ಷಿಕ ಯೋಜನೆಗಳಲ್ಲಿ ನೀಡಿದ ಪ್ರಾಮುಖ್ಯತೆಯನ್ನು ನೀಡಿ ಬುಡಕಟ್ಟು ಅಭಿವೃದ್ಧಿಗಾಗಿ ಅರ್ಥಿಕ ಚಟುವಟಿಕೆಗಳನ್ನು ಕೈಗೊಂಡು ರೂ.೩೪.೬೪ ಕೋಟಿಗಳನ್ನು ಖರ್ಚುಮಾಡಲಾಗಿದೆ.[೧೩]

೪ನೇ ಪಂಚವಾರ್ಷಿಕ ಯೋಜನೆ : ಕಳೆದ ಮೂರು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಬುಡಕಟ್ಟು ಜನರ ಅಭಿವೃದ್ಧಿಗಾಗಿ ಜಾರಿಗೆ ತಂದಿದ್ದ ಯೋಜನೆಗಳು ಕೇವಲ ತುಣುಕಾಗಿದ್ದು, ಯಾವುದೇ ಪೂರ್ಣ ಯೋಜನೆಗಳಾಗಿರಲಿಲ್ಲ. ಬುಡಕಟ್ಟು ಜನರ ಮತ್ತು ಪ್ರದೇಶದ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ನಡೆಯದ ಕಾರಣ ಈ ಯೋಜನೆಯ ಅವಧಿಯಲ್ಲಿ ಸಮುದಾಯ ಅಭಿವೃದ್ದಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸುವ ಒರಗಲ್ಲು ಬದಲಾಗಿದೆ. ೧೯೬೧ರಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಶೇ.೫೦ ರಷ್ಟು ಬುಡಕಟ್ಟು ಜನಾಂಗಗಳಿದ್ದಲ್ಲಿ ಅಂತಹ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಅರ್ಹತೆ ಹೊಂದಿದ್ದವು. ಬುಡಕಟ್ಟು ಅಭಿವೃದ್ದಿ ಬ್ಲಾಕ್‌ಗಳಲ್ಲಿ ಜಾರಿಗೆ ತಂದಿದ್ದ ಹಿಂದುಳಿದ ವರ್ಗದ ಕಲ್ಯಾಣ ಯೋಜನೆಗಳು ಮತ್ತು ತುಣುಕುಗಳು ಸಾಕಷ್ಟು ಪ್ರಮಾಣದಲ್ಲಿ ಫಲಕಾರಿಯಾಗಲಿಲ್ಲ. ಈ ಯೋಜನೆಯ ಅವಧಿಯಲ್ಲಿ

೧. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ೬ ಪೈಲೆಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಲಾಯಿತು. ಈ ಪೈಲೆಟ್ ಪ್ರಾಜೆಕ್ಟ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಏಜೆನ್ಸಿಗಳೆಂದು ಸಹ ಕರೆಯಲಾಗಿದೆ. ಪ್ರತಿಯೊಂದು ಪ್ರಾಜೆಕ್ಟ್ ಅಡಿಯಲ್ಲಿ ೪೦,೦೦೦ ಬುಡಕಟ್ಟು ಕುಟುಂಬಗಳನ್ನು ತಂದು ಈ ಪ್ರಾಜೆಕ್ಟ್‌ನಲ್ಲಿ ಕೃಷಿ, ಕೃಷಿಗೆ ಸಂಬಂಧಪಟ್ಟಂತೆ ಸುಧಾರಿತ ಕೃಷಿ ಉಪಕರಣಗಳನ್ನು ರಾಸಾಯನಿಕ ಗೊಬ್ಬರಗಳು ಬೀಜಗಳು, ನೀರಾವರಿ ಸೌಲಭ್ಯ ಇತ್ಯಾದಿ ನೀಡಲಾಗಿದೆ. ಇದಲ್ಲದೆ ಮೀನುಗಾರಿಕೆ ಮತ್ತು ಹೈನುಗಾರಿಕೆ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿದೆ.[೧೪]

೨. ರೂ. ೨೧.೪೧ ಕೋಟಿಗಳನ್ನು ಖರ್ಚು ಮಾಡಲಾಗಿದೆ. ಆರ್ಥಿಕ ಅಭಿವೃದ್ಧಿಯೋಜನೆ ಅಡಿಯಲ್ಲಿ ಕೃಷಿ, ಸಹಕಾರ, ನೀರಾವರಿ, ಸಣ್ಣ ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಯಿತು.

೩.ಬುಡಕಟ್ಟು ಜನರು ಸುಧಾರಿತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಯಿತು.

೪. ಗೃಹ ಕೈಗಾರಿಕೆ ಯೋಜನೆಯ ಅಡಿಯಲ್ಲಿ ಬುಡಕಟ್ಟು ಕುಶಲಕರ್ಮಿಗಳಿಗೆ ತಮ್ಮ ವೃತ್ತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಧನಸಹಾಯವನ್ನು ನೀಡಿ ಮಾರುಕಟ್ಟೆಯ ವ್ಯವಸ್ಥೆಯನ್ನು ಒದಗಿಸಲಾಯಿತು.

೫. ತರಬೇತಿ ಜೊತೆಗೆ ಉತ್ಪಾದನಾ ಕೇಂದ್ರಗಳನ್ನು (Training-cum-production) ಸ್ಥಾಪಿಸಲಾಯಿತು. ತರಬೇತಿಯ ಕಾಲದಲ್ಲಿ ಅಭ್ಯರ್ಥಿಗಳಿಗೆ ತರಬೇತಿ ಜೊತೆಗೆ ಸ್ಟೈಫಂಡ್‌ಗಳನ್ನು ನೀಡಲಾಯಿತು. ಈ ರೀತಿ ತರಬೇತಿ ಪಡೆದ ಬುಡಕಟ್ಟು ಜನರು ಬಡ್ಡಿ ರಹಿತ ಸಾಲಗಳನ್ನು ಪಡೆಯಲು ಅರ್ಹರಾಗಿದ್ದರು.

೬. ಆರೋಗ್ಯ ಮತ್ತು ವಸತಿ ಕ್ಷೇತ್ರದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ ವಸತಿಗಾಗಿ ಸಹಾಯಧನ ಹಾಗೂ ಅವರ ಗ್ರಾಮಗಳಿಗೆ ಅಥವಾ ಪ್ರದೇಶಗಳಿಗೆ ವಿದ್ಯುತೀಕರಣ, ಕುಡಿಯುವ ನೀರಿನ ಪೂರೈಕೆ, ಪೌಷ್ಠಿಕ ಆಹಾರ ಮತ್ತು ಕಾನೂನು ಸಲಹೆಗಳನ್ನು ಒದಗಿಸಲಾಗಿತ್ತು.

೭. ಪ್ರಾರಂಭವಾದ ಆರು ಪೈಲೆಟ್ ಪ್ರಾಜೆಕ್ಟ್‌ಗಳಿಗೆ ರೂ. ೧೨ ಕೋಟಿಗಳನ್ನು ನಿಗಧಿಪಡಿಸಲಾಗಿತ್ತು. ಈ ಪೈಲೆಟ್ ಪ್ರಾಜೆಕ್ಟ್‌ಗಳು ಆರ್ಥಿಕ ಅಭಿವೃದ್ಧಿ, ರಸ್ತೆಗಳ ನಿರ್ಮಾಣಗಳನ್ನು ಒಳಗೊಂಡಿದ್ದು ಈ ಯೋಜನೆಯ ಲವಧಿಯಲ್ಲಿ ರೂ. ೪೪೦ ಲಕ್ಷ ಅನುದಾನಿತ ಸಹಾಯ ಧನವನ್ನು ಬಿಡುಗಡೆ ಮಾಡಿದ್ದು, ಈ ಪೈಲೆಟ್ ಪ್ರಾಜೆಕ್ಟ್‌ಗಳು ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುಂದುವರೆದಿವೆ.

೫ನೇ ಪಂಚವಾರ್ಷಿಕ ಯೋಜನೆ : (೧೯೭೪-೭೯) ಈ ಯೋಜನೆ ಬುಡಕಟ್ಟು ಜನರ ಅಭಿವೃದ್ದಿ ದಿಸೆಯಲ್ಲಿ ಒಂದು ಮುಖ್ಯ ಮೈಲುಗಲ್ಲಾಗಿದೆ. ಈ ಯೋಜನೆಯ ಅವಧಿಯಲ್ಲಿ ಮೊಟ್ಟಮೊದಲ ಭಾರಿಗೆ ಬುಡಕಟ್ಟುಗಳ ಅಭಿವೃದ್ಧಿಗಾಗಿ ಅನುದಾನವನ್ನು ನಿಗಧಿಪಡಿಸುವ ವ್ಯವಸ್ಥೆ ಜಾರಿಗೆ ಬಂದಿತು. ಈ ಯೋಜನೆಯಲ್ಲಿ

೧. ರಾಜ್ಯದ ಆದಾಯವನ್ನು ದ್ವಿಗುಣಗೊಳಿಸಿ, ಜೀವನ ಮಟ್ಟವನ್ನು ಸುಧಾರಿಸಿ ಪ್ರಾಂತೀಯ ಅಸಮತೋಲನವನ್ನು ಹೋಗಲಾಡಿಸುವುದು ಇದರ ಉದ್ದೇಶವಾಗಿತ್ತು.

೨. ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ ಸಹ ಅತಿ ಮುಖ್ಯ ಉದ್ದೇಶವಾಗಿತ್ತು. ಕಳೆದ ೪ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡ ಯೋಜನೆಗಳಿಂದ ಬುಡಕಟ್ಟು ಜನರ ಜೀವನ ಮಟ್ಟ ಪರಿಣಾಮಕಾರಿಯಾಗಿ ಸುಧಾರಿಸಲಿಲ್ಲ ಹಾಗೂ ರಾಷ್ಟ್ರೀಯ ಆದಾಯ ಹಂಚಿಕೆ ಸರಿಯಾದ ಪ್ರಮಾಣದಲ್ಲಿ ಆಗದೇ ಇದ್ದ ಕಾರಣ ಈ ಯೋಜನೆಯಲ್ಲಿ ಮೇಲೆ ತಿಳಿಸಿರುವ ಕಾರ್ಯಕ್ರಮಗಳನ್ನು ರೂಪಿಸಿಗೊಂಡಿದೆ.

ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೇವಲ ರಾಜ್ಯ ಸರ್ಕಾರಗಳು ಆಯಾ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಸಾಕಾಗದ ಕಾರಣ ಇದಕ್ಕೆ ಹೆಚ್ಚು ಒತ್ತು ಕೊಡಲು ಕೇಂದ್ರ ಸರ್ಕಾರ "ವಿಶೇಷ ಘಟಕ ಯೋಜನೆ" ಎಂಬ ಹೊಸ ಹೆಸರಿನ, ಹೊಸ ಯೋಜನೆಯನ್ನು ರೂಪಿಸಿ, ಪರಿಶಿಷ್ಟ ಜಾತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿಯೂ ಸಹ ೧೯೭೪-೭೯ ನೇ ಸಾಲಿನಲ್ಲಿ "ಗಿರಿಜನ ಉಪ ಯೋಜನೆ" ಎಂಬ ಹೊಸ ಯೋಜನೆಯಡಿಯಲ್ಲಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ದಿಯ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಂಡಿವೆ. ಈ ಯೋಜನೆಯ ಅವಧಿಯಲ್ಲಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯಲ್ಲಿ ಅನಿರೀಕ್ಷಿತ ಪ್ರಗತಿಯಾಗಿರುವುದನ್ನು ನೋಡಿದ್ದೇವೆ. ಈ ಯೋಜನೆಯ ಪ್ರಗತಿಯನ್ನು ಮುಂದಿನ ಆಧ್ಯಾಯದಲ್ಲಿ ವಿವರವಾಗಿ ವಿವರಿಸಲಾಗಿದೆ.

ಕೋಷ್ಟಕ ೪.೨

೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಗಿರಿಜನ ಉಪ ಯೋಜನೆಯಡಿಯಲ್ಲಿ ಖರ್ಚು ಮಾಡಿರುವ ಇಲಾಖಾವಾರು ವೆಚ್ಚಗಳ ವಿವರ (೧೯೭೪-೭೮ ಮತ್ತು ೧೯೭೮-೭೯)

ಕ್ರ.ಸಂ	ಇಲಾಖೆ	೧೯೭೪-೭೮	ಶೇಕಡ	೧೯೭೮-೭೯	ಶೇಕಡ
೧	ಕೃಷಿ ಮತ್ತು ಕೃಷಿ ಸಂಬಂಧಪಟ್ಟ ಸೇವೆಗಳು	೧೬೦೩೭	೨೮.೫೦	೧೦೪೯೬	೨೯.೬೦
೨	ಸಹಕಾರ	೨೯೨೬	೫.೨೦	೧೮೪೪	೫.೨೦
೩	ನೀರಾವರಿ ಮತ್ತು ವಿದ್ಯುತ್ ಅಭಿವೃದ್ಧಿ	೧೫೪೭೪	೨೭.೫೦	೯೫೭೪	೨೭.೦೦
೪	ಕೈಗಾರಿಕೆ ಮತ್ತು ಖನಿಜ	೨೦೨೬	೩.೬೦	೧೩೮೩	೩.೯೦
೫	ಸಾರಿಗೆ ಮತ್ತು ಸಂಪರ್ಕ	೬೧೩೩	೧೦.೯೦	೩೫೧೦	೯.೧೦
೬	ಸಾಮಾಜಿಕ ಮತ್ತು ಸಮುದಾಯ ಸೇವೆಗಳು	೧೨೨೧೦	೨೧.೭೦	೭೭೩೦	೯.೧೦
೭	ಆರ್ಥಿಕ ಮತ್ತು ಇತರೆ ಸೇವೆಗಳು	೧೪೬೩	೨.೬೦	೯೨೧	೨.೬೦
	ಒಟ್ಟು	೫೬೨೯೯	೧೦೦.೦೦	೩೫೪೫೮	೦೦.೦೦

(Source : Report of the Working group on tribal development during sixth plan.)

೬ನೇ ಪಂಚವಾರ್ಷಿಕ ಯೋಜನೆ : ೪ನೇ ಪಂಚವಾರ್ಷಿಕ ಯೋಜನೆ ಹೊತ್ತಿಗೆ ಕೇವಲ ಶೇ.೪೦ ರಷ್ಟು ದೇಶದ ಬುಡಕಟ್ಟು ಜನರು ಮಾತ್ರ ಪ್ರಯೋಜನ ಪಡೆದಿದ್ದು, ಹಲವಾರು ವಿಶೇಷ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರಿಂದ, ೫ನೇ ಪಂಚವಾರ್ಷಿ ಯೋಜನೆ ಅವಧಿಯಲ್ಲಿ ಶೇ.೬೫ ರಷ್ಟು ಬುಡಕಟ್ಟಿನವರು ಪ್ರಯೋಜನ ಪಡೆದಿರುತ್ತಾರೆ. ದೇಶದ ಉಳಿದ ಶೇ.೩೫ ರಷ್ಟು ಹರಿದು ಹಂಚಿ ಹೋಗಿರುವ ಬುಡಕಟ್ಟು ಜನರ ಸಮಸ್ಯೆಗಳಿಗೆ ಯಾವುದೇ ವಿಶೇಷ ಆಸಕ್ತಿಯನ್ನು ನೀಡಿರುವುದಿಲ್ಲ.

ಬುಡಕಟ್ಟು ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಒಂದನೇ ಪಂಚವಾರ್ಷಿಕ ಯೋಜನೆಯಿಂದ ಆರನೇ ಪಂಚವಾರ್ಷಿಕ ಯೋಜನೆಯವರೆವಿಗೆ ಹೂಡಿರುವ ಬಂಡವಾಳದ ಬಗ್ಗೆ ವಿವರಗಳನ್ನು ಕೋಷ್ಠಕ ೪.೩ರಲ್ಲಿ ವಿವರಿಸಲಾಗಿದೆ.

ಕೋಷ್ಠಕ ೪.೩

೧ ರಿಂದ ೬ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗಾಗಿ ಹೂಡಿದ ಅನುದಾನದ ವಿವರ (ರೂ. ಕೋಟಿಗಳಲ್ಲಿ)

ಯೋಜನೆ	ಒಟ್ಟುಯೋಜನೆ	ಬುಡಕಟ್ಟು	ಶೇಕಡ
ಮೊದಲನೇ ಯೋಜನೆ ಖರ್ಚು	೧೯೬೦	೧೯.೯೩	೧.೦
ಎರಡನೇ ಯೋಜನೆ ಖರ್ಚು	೪೬೭೨	೪೨.೯೨	೦.೯
ಮೂರನೇ ಯೋಜನೆ ಖರ್ಚು	೮೫೭೭	೫೦.೫೩	೦.೬
ವಾರ್ಷಿಕ ಯೋಜನೆ ೧೯೬೬-೬೭*	೬೭೫೯	೩೨.೩೨	೦.೬
ನಾಲ್ಕನೇ ಯೋಜನೆ	೧೫೯೦೨	೭೫.೦೦	೦.೫
ಐದನೇ ಯೋಜನೆ ೧೯೭೪-೭೯	೩೯೩೨೨	೧೧೦೨.೦೦	೩.೦೧
ಆರನೇ ಯೋಜನೆ ೧೯೮೦-೮೪	೯೭೫೦೦**	೫೫೩೫.೦೦	೫.೦

* ಖರ್ಚು, ** ೬ ನೇ ಯೋಜನೆಯ ವಾಸ್ತವಿಕ ಅನುದಾನದಿಂದ ಹೆಚ್ಚಿಗೆ ಆಗಬಹುದು.

(ಕೃಪೆ : Devendra Thakur & Thakur D.N., 1997, *Tribal Development and planing* P.203)

೫ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೬ ರಾಜ್ಯಗಳು ಮತ್ತು ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಗಿರಿಜನ ಉಪ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು.

೧. ಸಿಕ್ಕಿಂ ರಾಜ್ಯವನ್ನು ೬ ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಯಿತು.

೨. ೬ ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೨೪೫ ಎಂ.ಎ.ಡಿ.ಎ. ಪಾಕೇಟ್‌ಗಳನ್ನು ಗುರುತಿಸಿದ್ದೊಂದು ಪ್ರಮುಖ ಸಾಧನೆಯಾಗಿತ್ತು.

೩. ಇದರ ಜೊತೆಗೆ ಇನ್ನೂ ೨೦ ಆದಿವಾಸಿ ಪಂಗಡಗಳನ್ನು ಗುರುತಿಸಲಾಗಿತ್ತು.

೪. ೬ನೇ ಪಂಚವಾರ್ಷಿಕ ಯೋಜನೆಯ ೪ನೇ ವರ್ಷದ ಕೊನೆಯಲ್ಲಿ ೧೮೧ ಐ.ಟಿ.ಡಿ.ಪಿ.ಗಳು ಹಾಗೂ ೨೪೫ ಎಮ್.ಎ.ಡಿ.ಎ. ಪಾಕೇಟ್‌ಗಳು ಮತ್ತು ೭೨ ಆದಿವಾಸಿ ಪಂಗಡಗಳ ಯೋಜನೆಗಳು ದೇಶಾದ್ಯಂತ ಕಾರ್ಯಾಚರಣೆಯಲ್ಲಿದ್ದವು. ಅವುಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

ಕೋಷ್ಟಕ ೪.೪

ದೇಶದಲ್ಲಿರುವ ಐ.ಟಿ.ಡಿ.ಪಿ, ಎಮ.ಎ.ಡಿ.ಎ ಮತ್ತು ಆದಿವಾಸಿ ಗುಂಪುಗಳ ವಿವರ

ಕ್ರ.ಸಂ.	ರಾಜ್ಯ/ ಕೇಂದ್ರಾಡಳಿತ ಪ್ರದೇಶ	ಐ.ಟಿ.ಡಿ.ಪಿ ಗಳು	ಎಂ.ಎ.ಡಿ.ಎ.ಗಳು	ಆದಿವಾಸಿ ಪಂಗಡಗಳು
೧	ಆಂಧ್ರ ಪ್ರದೇಶ	೮	೩೮	೧೨
೨	ಅಸ್ಸಾಂ	೧೯	--	--
೩	ಬಿಹಾರ್	೧೪	೪೧	೯
೪	ಗುಜರಾತ್	೯	೧೪	೫
೫	ಹಿಮಾಚಲ್ ಪ್ರದೇಶ	೫	೨	--
೬	ಕರ್ನಾಟಕ	೫	--	೨
೭	ಕೇರಳ	೫	--	೪
೮	ಮಧ್ಯ ಪ್ರದೇಶ	೪೨	೫೬	೬
೯	ಮಹಾರಾಷ್ಟ್ರ	೧೫	೧೮	೩
೧೦	ಮಣಿಪುರ	೫	--	೧
೧೧	ಓರಿಸ್ಸಾ	೨೧	೩೭	೧೨
೧೨	ರಾಜಸ್ಥಾನ	೫	೩೮	೧
೧೩	ಸಿಕ್ಕಿಮ್	೧	--	--
೧೪	ತಮಿಳುನಾಡು	೯	--	೬
೧೫	ತ್ರಿಪುರ	೩	--	೧
೧೬	ಉತ್ತರ ಪ್ರದೇಶ	೧	೧	೨
೧೭	ಪಶ್ಚಿಮ ಬಂಗಾಳ	೧೨	--	೩
೧೮	ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	೧	--	೫
೧೯	ಗೋವಾ ಡಮನ್ ಮತ್ತು ದಿವ್	೧	--	--
	ಒಟ್ಟು	೧೮೧	೨೪೫	೭೨

೭ನೇ ಪಂಚವಾರ್ಷಿಕ ಯೋಜನೆ (೧೯೮೫-೯೦)

೧ ರಿಂದ ೭ ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೭ ರಾಜ್ಯಗಳಿಂದ ೨ ಕೇಂದ್ರಾಡಳಿತ ಪ್ರದೇಶಗಳಿಂದ ಸುಮಾರು ಶೇ. ೭೫ ರಷ್ಟು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಳಿದ ಶೆ. ೨೫ ರಷ್ಟು ಬುಡಕಟ್ಟು ಜನರು ಈ ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿದ್ದು ಅವರ ಸ್ಥಿತಿಗತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಆ ಪ್ರಕಾರ ಉತ್ತರ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನರು ಈ ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿರುತ್ತಾರೆ. (ಶೇ.೮೭.೯೪) ಸಿಕ್ಕಿಂ (ಶೇ.೮೬.೯೨). ಕೇರಳ (ಶೇ.೮೨.೪೯) ಪಶ್ಚಿಮ ಬಂಗಾಳ ಶೇ. (೬೧.೧೯) ಇನ್ನುಳಿದ ರಾಜ್ಯಗಳಲ್ಲಿ ಶೇ. ೫೦ ರಷ್ಟಕ್ಕಿಂತ ಹೆಚ್ಚು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯಿಂದ ಪ್ರಯೋಜನ ಪಡೆಯದೆ ಹೊರಗೆ ಉಳಿದಿರುತ್ತಾರೆ. ಅವರ ಪೂರ್ಣ ವಿವರಗಳನ್ನು ಮುಂದಿನ ಅಧ್ಯಾಯದ ಕೋಷ್ಟಕದಲ್ಲಿ ವಿವರಿಸಲಾಗಿದೆ.

೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ರೂ. ೬೨೧೬.೭೬ ಕೋಟಿಗಳು ನಿಗಧಿಪಡಿಸಲಾಯಿತು. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ. ೭೦೭೪.೫೦ ಕೋಟಿ ವ್ಯಯವಾಗಿರುತ್ತದೆ. ಇದರ ಜೊತೆಗೆ ವಿಶೇಷ ಕೇಂದ್ರೀಯ ಸಹಾಯಧನ ರೂ. ೭೫೬.೦೦ ಕೋಟಿ ನಿಗದಿಪಡಿಸಲಾಯಿತು. ಈ ಬಾಬ್ತಿನಲ್ಲಿ ರೂ. ೮೪೭ ಕೋಟಿ ಖರ್ಚಆಗಿರುತ್ತದೆ. ಇದರ ಜೊತೆಗೆ ರೂ. ೧೦ ಕೋಟಿಯನ್ನು ಅನುಧಾನಿತ ಸಹಾಯಧನವನ್ನಾಗಿ ಟ್ರೈಫೆಡ್‌ಗೆ ಒದಗಿಸಲಾಗಿದೆ. ಈ ಕಾರಣದಿಂದಲೇ ಗಿರಿಜನ ಉಪಯೋಜನೆಯಡಿಯಲ್ಲಿ ಬುಡಕಟ್ಟು ಅಭಿವೃದ್ಧಿಯ ಪ್ರಗತಿ ಸಹಜವಾಗಿ ಏರಿದೆ.[೧೫]

೮ನೇ ಪಂಚವಾರ್ಷಿಕ ಯೋಜನೆ

ಈ ಅವಧಿಯಲ್ಲಿ ನಿರ್ಲಕ್ಷಿತ ಬುಡಕಟ್ಟು ಗುಂಪುಗಳನ್ನು ಅದರಲ್ಲೂ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆದಿವಾಸಿ ಪಂಗಡಗಳ ಅಭಿವೃದ್ಧಿಗಾಗಿ ರೂ. ೧.೩೨ ಕೋಟಿಗಳನ್ನು ನಿಗದಿಪಡಿಸಿದ್ದು ಅವರಲ್ಲಿ ರೂ. ೧.೨೪ ಕೋಟಿಯನ್ನು ಖರ್ಚು ಮಾಡಲಾಗಿದೆ. ಇದರ ಜೊತೆಗೆ ಈ ಕಾರ್ಯಕ್ರಮಕ್ಕಾಗಿ ೧೯೯೬-೯೭ರಲ್ಲಿ ವಿಶೇಷ ಕೇಂದ್ರೀಯ ಸಹಾಯಧನ ರೂ. ೫.೭ ಕೋಟಿ ನಿದಗಿಪಡಿಸಿದ್ದು ಅದರಲ್ಲಿ ರೂ. ೧.೯೧ ಕೋಟಿಯನ್ನು ಆದಿವಾಸಿ ಕಲ್ಯಾಣಕಾರ್ಯಕ್ಕಾಗಿ ಉಪಯೋಗಿಸಲಾಗಿದೆ.[೧೬]

೮ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಶಾಲೆಯನ್ನು ಬಿಡುವಂತಹ ಮಕ್ಕಳ ಸಂಖ್ಯೆ ೫೪.೫೮ ಇದ್ದ ಪ್ರಮಾಣ ೮ ನೇ ಯೋಜನೆ ಅವಧಿಯಲ್ಲಿ ಶೇ.೩೫ ಕ್ಕೆ ಇಳಿಸುವ ಗುರಿಯನ್ನು ಹೊಂದಿದ್ದು, ಆ ಪ್ರಕಾರ ೧೯೯೬-೯೭ನೇ ಸಾಲಿನಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ನಿಗಧಿತ ಗುರಿಗಿಂತ ಹೆಚ್ಚಾಗಿ ಶೇ. ೧೭.೬೧ ಇಳಿದಿರುವುದು. ಇದು ಶಿಕ್ಷಣ ಇಲಾಖೆಯ ವಾರ್ಷಿಕ ವರದಿಯಿಂದ ಧೃಡಪಟ್ಟಿದೆ. ಇದು ನಿಜವಾಗಲು ಉತ್ತಮ ಸಾಧನೆಯಾಗಿದೆ.

೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ, ವಸತಿ ಮತ್ತು ಸಣ್ಣ ನೀರಾವರಿ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡಲಾಗಿದೆ. ರೂ.೧.೪೬ ಕೋಟಿಗಳನ್ನು ರಾಜ್ಯ ಯೋಜನೆಯ ಅನುದಾನದಿಂದ, ರೂ.೧.೨೮ ಕೋಟಿಗಳನ್ನು ವಿಶೇಷ ಕೇಂದ್ರೀಯ ಸಹಾಯಧನದಿಂದ ಸಣ್ಣ ನೀರಾವರಿ ಕ್ಷೇತ್ರಕ್ಕೆ ವಿನಿಯೋಗಿಸಲಾಗಿದೆ. ರೂ.೨೦.೨೪ ಕೋಟಿಗಳನ್ನು ಪ್ರಾಥಮಿಕ, ಪ್ರೌಢ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಉಪಯೋಗಿಸಲಾಗಿದೆ. ರೂ. ೭.೧೯ ಕೋಟಿಗಳನ್ನು ವಸತಿ ಯೋಜನೆಗೆ ಉಪಯೋಗಿಸಲಾಗಿದೆ. ಇದರ ಜೊತೆಗೆ ಕರಕುಶಲ ಕರ್ಮಿಗಳಿಗೆ 'ವಿಶ್ವ' ಕಾಯಕ್ರಮದ ಅಡಿಯಲ್ಲಿ ತರಬೇತಿಗಾಗಿ ರೂ. ೮.೫೩ ಕೋಟಿಗಳನ್ನು ಮಂಜೂರು ಮಾಡಿದ್ದು ಅದರಲ್ಲಿ ರೂ.೨.೬೯ ಕೋಟಿಗಳನ್ನು ಖರ್ಚುಮಾಡಲಾಗಿದೆ. ಇದರ ಜೊತೆಗೆ ರೂ. ೫.೭ ಕೋಟಿಗಳನ್ನು ವಿಶೇಷ ಕೇಂದ್ರೀಯ ಸಹಾಯಧನದಲ್ಲಿ ಈ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಗಿದೆ.

ಬುಡಕಟ್ಟು ಸಂಶೋಧನ ಕೇಂದ್ರಗಳು

ದೇಶದಾದ್ಯಂತ ೧೫ ಬುಡಕಟ್ಟು ಸಂಶೋಧನಾ ಕೇಂದ್ರಗಳಿವೆ. ಅವು ಆಂಧ್ರಪ್ರದೇಶ, ಅಸ್ಸಾಂ, ಬಿಹಾರ್, ಗುಜರಾತ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ರಾಜಸ್ಥಾನ, ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮಣಿಪುರ, ತ್ರಿಪುರ, ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಸ್ಥಾಪಿಸಲಾಗಿದೆ. ಈ ಸಂಶೋಧನಾ ಕೇಂದ್ರಗಳು

ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಬೇಕಾಗುವ ಯೋಜನೆಗಳನ್ನು ರಾಜ್ಯ ಸರ್ಕಾರಗಳಿಗೆ ಒದಗಿಸುತ್ತವೆ. ಇದರ ಜೊತೆಗೆ ಬುಡಕಟ್ಟು ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ಹಾಗೂ ಅನುಷ್ಠಾನಗೊಳಿಸಿರುವ ಯೋಜನೆಗಳ ಮೌಲ್ಯಮಾಪನ ಮತ್ತು ಅಂಕಿ ಸಂಖ್ಯೆಗಳ ಸಂಗ್ರಹಣೆಯ ಕಾರ್ಯವನ್ನು ನಿರ್ವಹಿಸುತ್ತವೆ. ಇದರ ಜೊತೆಗೆ ತರಬೇತಿ, ಕಾರ್ಯಗಾರ, ಕಮ್ಮಟಗಳನ್ನು ನಡೆಸುತ್ತಿವೆ. ಈ ಕಾರಣಕ್ಕಾಗಿ ೨೦೦೨-೦೩ನೇ ಸಾಲಿನಲ್ಲಿ ರೂ. ೨೨ ಲಕ್ಷಗಳನ್ನು ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬಿಡುಗಡೆ ಮಾಡಲಾಗಿದೆ. ಈ ರೀತಿ ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರತ್ಯೇಕ ಯೋಜನೆಗಳನ್ನು ರೂಪಿಸಿ ಅವರನ್ನು ಬಡತನ ರೇಖೆಯಿಂದ ಮೇಲಕ್ಕೆ ತಂದು, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಸಮಾಜದ ಹೊರಗೆ ವಾಸಿಸುತ್ತಿದ್ದ ಬುಡಕಟ್ಟು ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳು ಪ್ರಯತ್ನಿಸುತ್ತಿರುವುದು ನಿದರ್ಶನವಾಗಿದೆ.

ಅಧಾರಗಳು

೧. Devendra Thäkur & Tharkur D.N. (Ed)***Tribal Development and Planing*** (New Delhi : Deep & Deep Publication, 1997) P.7.

೨. Chaturbhuj Sahu, ***Indian Tribal life*** (New Delhi : Sarup & Sons 2001) P.25,26.

೩. Manis Kumar Raha, ***Tribal India, Problem development, prospect*** (New Delhi : Gian Publishing House) P.2-4.

೪. Manis Kumar Raha, ***Tribal India Problem development, prospect*** (New Delhi : Gian Publishing House) P.8.

೫. Tripathy S.N., ***Tribals in India: The Changing Scenario*** (New Delhi : Discovery Publishing house,1998) P.7.

೬. Tripathy S.N., ***Tribals in India: The Changing Scenario*** (New Delhi : Discovery Publishing house,1998) P.13.

೭. Awadhesh Kumar Singh., ***Dynamics of Tribal Economy*** (New Delhi : Serials Publications , 2003) P.27.

೮. Tripathy S.N., ***Tribals in India: The Changing Scenario*** (New Delhi : Discovery Publishing house,1998) P.26.

೯ Devendra Thakur & Tharkur D.N. (Ed)***Tribal Development and Planing*** (New Delhi : Deep & Deep Publication, 1997) P.103.

೧೦. Devendra Thakur & Tharkur D.N. (Ed) ***Tribal Development and Planing*** (New Delhi : Deep & Deep Publication, 1997) P.104.

೧೧. Tripathy S.N., ***Tribals in India: The Changing Scenario*** (New Delhi : Discovery Publishing house,1998) P.31.

೧೨. Devendra Thakur & Tharkur D.N. (Ed)***Tribal Development and Planing*** (New Delhi : Deep Deep Publication, 1997) P.110.

೧೩. Devendra Thakur & Tharkur D.N. (Ed)., (New Delhi : Deep Deep Publication, 1997) P.122.

೧೩. Awadhesh Kumar Singh., ***Dynamics of Tribal Economy*** (New Delhi : Serials Publications , 2003) P.30.

೧೪. Awadhesh Kumar Singh., ***Dynamics of Tribal Economy*** (New Delhi : Serials Publications , 2003) P.30.

೧೫. Awadhesh Kumar Singh., ***Dynamics of Tribal Economy*** (New Delhi : Serials Publications , 2003) P.31.

೧೬. Awadhesh Kumar Singh., ***Dynamics of Tribal Economy*** (New Delhi : Serials Publications , 2003) P.32.

ಅಧ್ಯಾಯ ೫

ಗಿರಿಜನ ಉಪಯೋಜನೆ

ಗಿರಿಜನ ಉಪಯೋಜನೆ

ಐದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರ ಬುಡಕಟ್ಟುಗಳ ಸಮಸ್ಯೆಗಳನ್ನು ಹೋಗಲಾಡಿಸಲು ಒಂದು ಹೊಸ ಯೋಜನೆಯ ಉಗಮಕ್ಕೆ ದಾರಿ ಮಾಡಿಕೊಟ್ಟಿದೆ. ಅದನ್ನೇ "ಉಪ-ಯೋಜನೆ" ಎನ್ನುವರು. ಈ ಯೋಜನೆಯು ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದೆ. ಹಾಗೆಯೇ ಈ ಉಪ ಯೋಜನೆಯು ಪ್ರದೇಶ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದೆ. ಗಿರಿಜನ ಉಪಯೋಜನೆಯ ಪರಿಕಲ್ಪನೆ ಅಂದರೆ ಲಭ್ಯವಿರುವ ಎಲ್ಲಾ ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಒಂದೆಡೆ ಕಲೆಹಾಕಿ ಅದನ್ನು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವುದಾಗಿತ್ತು.[೧]

ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೇವಲ ರಾಜ್ಯ ಸರ್ಕಾರಗಳು ಆಯಾ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಸಾಕಾಗದ ಕಾರಣ ಇದಕ್ಕೆ ಹೆಚ್ಚು ಒತ್ತು ಕೊಡಲು ಕೇಂದ್ರ ಸರ್ಕಾರ "ವಿಶೇಷ ಘಟಕ ಯೋಜನೆ" ಎಂಬ ಹೊಸ ಹೆಸರಿನ, ಹೊಸ ಯೋಜನೆಯನ್ನು ರೂಪಿಸಿ, ಪರಿಶಿಷ್ಟ ಜಾತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿಯೂ ಸಹ ೧೯೭೪-೭೯ನೇ ಸಾಲಿನಲ್ಲಿ "ಗಿರಿಜನ ಉಪ ಯೋಜನೆ" ಎಂಬ ಹೊಸ ಯೋಜನೆಯಡಿಯಲ್ಲಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಂಡಿದೆ. ಈ ಯೋಜನೆಯ ಅವಧಿಯಲ್ಲಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯಲ್ಲಿ ಅನಿರೀಕ್ಷಿತ ಪ್ರಗತಿಯಾಗಿರುವುದನ್ನು ನೋಡಿದ್ದೇವೆ.

ಬಹಳಷ್ಟು ಬುಡಕಟ್ಟು ಜನರ ಮುಖ್ಯ ವೃತ್ತಿ ವ್ಯವಸಾಯವಾಗಿದ್ದು, ಅದು ಅವರ ಆದಾಯದ ಮೂಲವಾಗಿದೆ. ಬುಡಕಟ್ಟು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ವ್ಯವಸಾಯದ ಅಭಿವೃದ್ಧಿಯಲ್ಲಿ ಬುಡಕಟ್ಟು

ಪ್ರದೇಶದಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ಬಂಡವಾಳವನ್ನು ಹೂಡಲಾಗಿತ್ತು. ಕಾರಣ ಬುಡಕಟ್ಟು ಪ್ರದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಬರುತ್ತಿದ್ದ ಆದಾಯ ಈ ಕೆಳಕಂಡ ಕಾರಣಗಳಿಂದ ಬಹಳ ಕಡಿಮೆಯಾಗಿತ್ತು.

೧. ಭೂಮಿಯ ಫಲವತ್ತತೆ ಕಡಿಮೆ,ತುಂಡು ಭೂಮಿ, ಹಾಗೂ ಬೆಟ್ಟ ಗುಡ್ಡಗಳಿಂದ ಕೂಡಿದ ಭೂಮಿ.

೨. ವ್ಯವಸಾಯದಲ್ಲಿ ಅತ್ಯಂತ ಪ್ರಾಚೀನವಾದ ಪದ್ಧತಿಯನ್ನು ಅನುಸರಿಸುತ್ತಿದ್ದರು.

೩. ವ್ಯವಸಾಯವು ಪೂರ್ಣ ಪ್ರಮಾಣದಲ್ಲಿ ಮಳೆಯ ಮೇಲೆ ಆಧಾರವಾಗಿತ್ತು, ಹಾಗೂ ನೀರಾವರಿ ಸೌಕರ್ಯಗಳು ಕೊರತೆಯಿಂದ ಕೂಡಿತ್ತು.

ಈ ಕಾರಣಗಳಿಂದ ೫ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಪ್ರದೇಶದಲ್ಲಿ ವ್ಯವಸಾಯ ಅಭಿವೃದ್ಧಿಗೋಸ್ಕರ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವ್ಯವಸಾಯದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಯಿತು. ನೀರಾವರಿ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಅತ್ಯಂತ ಹೆಚ್ಚಿನ ಬಂಡವಾಳವನ್ನು ಹೂಡಲಾಯಿತು. ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಹಳೆಯ ಉಪಕರಣಗಳನ್ನು ಬದಲಾಯಿಸಿ, ಹೊಸ ವೈಜ್ಞಾನಿಕ ಉಪಕರಣಗಳ ಬಳಕೆಗೆ ಪ್ರೋತ್ಸಾಹಿಸಲಾಯಿತು. ವ್ಯವಸಾಯ ಕ್ಷೇತ್ರದಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಿದ್ದರು.

ಭೂಮಿಯನ್ನು ಅಭಿವೃದ್ಧಿಪಡಿಸುವುದು ಮತ್ತು ಅದರ ಉಪಯೋಗ

ತೋಟಗಾರಿಕೆ : ಬುಡಕಟ್ಟು ಪ್ರದೇಶದಲ್ಲಿರುವ ಬಹು ಪ್ರದೇಶ ತೋಟಗಾರಿಕೆಗೆ ಸೂಕ್ತವಾಗಿದ್ದರಿಂದ ಅದನ್ನು ಅಭಿವೃದ್ಧಿ ಪಡಿಸಲಾಯಿತು. ಬಹಳಷ್ಟು ಬುಡಕಟ್ಟಿನವರು ಹಣ್ಣು ಬಿಡುವ ಮರಗಳ ಬಗ್ಗೆ ತಮ್ಮದೇ ಆದ ಗೌರವವನ್ನು ಹೊಂದಿದ್ದರು. ಆ ಕಾರಣದಿಂದ ಬುಡಕಟ್ಟು ಪ್ರದೇಶದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು ಬಹಳ ಉಪಯುಕ್ತವಾಗಿದೆ.

ಭೂಸಾರ ಸಂರಕ್ಷಣೆ : ಬಹಳಷ್ಟು ಬುಡಕಟ್ಟು ಪ್ರದೇಶದಲ್ಲಿ ಭೂಸಾರ ಸಂರಕ್ಷಣೆ ಒಂದು ದೊಡ್ಡ ಸಮಸ್ಯೆಯಾಗಿದೆ. ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಇಂತಹ ಪ್ರದೇಶದಲ್ಲಿ ಭೂಸಾರ ಸಂರಕ್ಷಣೆಯನ್ನು ಭಾರಿ ಪ್ರಮಾಣದಲ್ಲಿ ಕೈಗೊಳ್ಳಬಹುದಾಗಿದೆ.

ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ : ಬುಡಕಟ್ಟು ಜನರ ವ್ಯವಸಾಯ ಪ್ರಾಥಮಿಕವಾಗಿ ಪ್ರಾಣಿಬಲದ ಮೇಲೆ ನಿಂತಿದೆ. ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅಳೆಯುವಾಗ ಅವರಲ್ಲಿರುವ ದನಕರಗಳ ಸಂಖ್ಯೆಗಳನ್ನು ಬಹಳ ಮುಖ್ಯವಾಗಿ ಪರಿಗಣಿಸಲಾಗಿದೆ.

ಅರಣ್ಯ : ಅರಣ್ಯಗಳು ಬುಡಕಟ್ಟು ಜನರಿಗೆ ಪ್ರಮುಖ ಆದಾಯದ ಮೂಲಗಳಾಗಿವೆ. ಬಹಳಷ್ಟು ಬುಡಕಟ್ಟು ಪ್ರದೇಶದಲ್ಲಿ, ಅವರ ಆರ್ಥಿಕತೆ ಅರಣ್ಯದ ಮೇಲೆ ಅವಲಂಬಿತವಾಗಿರುತ್ತದೆ. ಇದನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರ ಅರಣ್ಯಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಇದರಿಂದ ಬಹುಸಂಖ್ಯಾತ ಬುಡಕಟ್ಟು ಜನರು ಪ್ರಯೋಜನ ಪಡೆದುಕೊಂಡಿರುತ್ತಾರೆ. ಈ ಗಿರಿಜನ ಉಪ ಯೋಜನೆಯನ್ನು ರಾಜ್ಯ ಯೋಜನೆ, ವಿಶೇಷ ಕೇಂದ್ರೀಯ ಸಹಾಯಧನ (ಎಸ್.ಸಿ.ಎ.) (Special Central

Assistence) ಇತರೆ ಹಣಕಾಸಿನ ಸಂಸ್ಥೆ (ನಬಾರ್ಡ್) ಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಗಿರಿಜನ ಉಪಯೋಜನೆ ೫ನೇ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ ಜಾರಿಗೊಳಿಸಿದ ಉದ್ದೇಶ ಗಿರಿಜನ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ರಾಜ್ಯ ಮತ್ತು ಕೇಂದ್ರ ಯೋಜನೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಅನುದಾನವನ್ನು ನಿಗಧಿಪಡಿಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಗಿರಿಜನ ಉಪ ಯೋಜನೆಯ ಉದ್ದೇಶಗಳು

೧. ಬುಡಕಟ್ಟು ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು.

೨. ಬುಡಕಟ್ಟು ಮತ್ತು ಬುಡಕಟ್ಟು ಅಲ್ಲದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು.

೩. ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಕ್ಯತೆಯನ್ನು ಪುನಃಶ್ಚೇತನಗೊಳಿಸುವುದು.

೪. ನಿರಂತರ ಆದಾಯ ತರುವ ಯೋಜನೆಗಳನ್ನು ಜಾರಿಗೊಳಿಸುವುದು.

೫. ಮೂಲಭೂತ ಸೌಕರ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ನೀಡುವುದು.

೬. ಬುಡಕಟ್ಟು ಜನರ ಶೋಷಣೆಯನ್ನು ತಪ್ಪಿಸುವುದು.

೭. ಉದ್ಯೋಗಾವಕಾಶವನ್ನು ಸೃಷ್ಟಿಸುವುದು.

೮. ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.[೨]

೧೯೭೯-೮೦ ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ದೇಶದಾದ್ಯಂತ ರಾಜ್ಯವಲಯ ಮತ್ತು ವಿಶೇಷ ಕೇಂದ್ರೀಯ ಸಹಾಯಧನದ ಅಡಿಯಲ್ಲಿ ಖರ್ಚು ಮಾಡಿರುವ ಮೊತ್ತದ ವಿವರ

ಕೋಷ್ಟಕ ೫.೧

೧೯೭೯-೮೦ ನೇ ಸಾಲಿನಲ್ಲಿ ಗಿರಿಜನ ಉಪ ಯೋಜನೆಯಡಿಯಲ್ಲಿ ಖರ್ಚು ಮಾಡಿರುವ ಮೊತ್ತದ ವಿವರ

ಕ್ರ.ಸಂ.		ಅನುದಾನ			ಖರ್ಚು ರೂ ಲಕ್ಷಗಳಲ್ಲಿ		
	ರಾಜ್ಯ/ಕೇಂದ್ರಾಡಳಿತ ಪ್ರದೇಶ	ರಾಜ್ಯ ಯೋಜನೆ	ವಿ.ಕೇ.ಸ	ಒಟ್ಟು	ರಾಜ್ಯ ಯೋಜನೆ	ವಿ.ಕೇ.ಸ	ಒಟ್ಟು
೧	೨	೩	೪	೫	೬	೭	೮
೧	ಆಂಧ್ರ ಪ್ರದೇಶ	೧೫೩೭.೦೦	೩೧೪.೦೦	೧೮೫೧.೦೦	೧೫೭೭.೫೧	೨೬೪	೧೮೪೧.೫೧
೨	ಅಸ್ಸಾಂ	೯೩೧.೦೦	೩೦೬.೦೦	೧೨೩೭.೦೦	೭೮೯.೬೮	೩೨೩.೫೦	೧೧೧೩.೧೮
೩	ಬಿಹಾರ್	೬೫೨೫.೦೦	೮೨೯.೦೦	೭೩೫೪.೦೦	೬೫೨೫.೦೦	೮೨೯.೦೦	೭೩೫೯.೦೦
೪	ಗುಜರಾತ್	೩೯೨೦.೦೦	೪೮೬.೦೦	೪೪೦೬.೦೦	೪೧೬೯.೭೯	೪೮೬.೦೦	೪೬೬೫.೭೯
೫	ಹಿಮಾಚಲ ಪ್ರದೇಶ	೭೮೨.೩೦	೧೨೫.೦೦	೯೦೭.೦೦	೬೩೭.೯೨	೧೧೬.೧೯	೭೫೪.೧೧
೬	ಕರ್ನಾಟಕ	೩೧೫.೦೦	೪೪.೦೦	೩೫೯.೦೦	೩೧೫.೦೦	೪೪.೦೦	೩೫೯.೦೦
೭	ಕೇರಳ	೧೫೮.೭೫	೩೫.೦೦	೧೯೩.೭೫	೧೫೮.೭೫	೩೫.೦೦	೧೯೩.೭೫
೮	ಮಧ್ಯಪ್ರದೇಶ	೭.೫೩.೦೦	೧೬೧೧.೦೦	೮೬೬೪.೦೦	೬೧೧೦.೦೦	೧೬೧೧.೦೦	೭೭೨೧.೦೦
೯	ಮಹರಾಷ್ಟ್ರ	೪೫೮೩.೦೦	೩೩೩.೦೦	೪೯೧೬.೦೦	೪೩೪೭.೯೧	೩೩೩.೦೦	೪೬೮೦.೯೧

೧೦	ಮಣಿಪುರ	೧೨೬೦.೦೦	೧೭೬.೦೦	೧೩೮೬.೦೦	೧೨೬೦.೦೦	೧೨೬.೦೦	೧೩೬೮.೦೦
೧೧	ಒರಿಸ್ಸಾ	೫೮೮೧.೦೦	೮೮೦.೦೦	೬೭೩೧.೦೦	೬೪೭೫.೧೦	೮೩೦.೦೦	೭೩೦೫.೧೦
೧೨	ರಾಜಸ್ಥಾನ	೩೩೩೪.೦೦	೩೨೭.೦೦	೩೬೬೧.೦೦	೩೧೫೪.೮೩	೨೯೩.೮೨	೩೪೪೮.೬೫
೧೩	ತಮಿಳುನಾಡು	೪೩೦.೭೨	೧೫೨.೫೧	೫೩೮.೨೨	೩೭೬.೩೮	೧೫೦.೦೦	೫೨೬.೩೮
೧೪	ತ್ರಿಪುರ	೧೬೧೪.೧೩	೩೨೬.೪೦	೧೯೪೦.೫೩	೧೫೫೬.೯೨	೨೮೯.೨೭	೧೮೪೬.೧೯
೧೫	ಉತ್ತರ ಪ್ರದೇಶ	೯೫.೬೪	೪೬.೨೫	೧೪೧.೮೯	೬೭.೧೨	೨೬.೮೫	೯೩.೯೭
೧೬	ಪಶ್ಚಿಮ ಬಂಗಾಳ	೪೩೧೩.೦೦	೭೩೪.೦೦	೫೦೪೭.೦೦	೩೮೭೬.೦೦	೭೦೪.೦೦	೪೫೮೦.೦೦
೧೭	ಅಂಡಮಾನ್,	೧೩೫.೮೭	೮೫.೧೪	೨೨೧.೦೦	೧೧೧.೪೦	೪೮.೯೫	೧೬೦.೩೫
	ನಿಕೋಬಾರ್	೯೪.೦೭	೪೧.೦೦	೧೩೫.೦೭	೭೫.೩೫	೩೨.೫೮	೧೦೭.೯೫
೧೮	ಗೋವಾ ಡಮನ್..	೯೪.೦೭	೪೧.೦೦	೧೩೫.೦೭	೭೫.೩೫	೩೨.೫೮	೧೦೭.೯೫
	ಒಟ್ಟು	೮೫೬೦೭.೯೯	೧೮೬೭೫.೪೧	೧೦೪೨೮೩.೭೩	೭೫೯೪೪.೪೪	೧೫೭೮೨.೨೭	೯೧೭೨೬.೭೧

ವಿ.ಕೇ.ಸ. : ವಿಶೇಷ ಕೇಂದ್ರೀಯ ಸಹಾಯಧನ.

(ಕೃಪೆ : Devendra Thakur & Thakur D.N., 1997, *Tribal Development and planing* P.127.)

ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇರುವ ಯೋಜನೆ ಹಾಗೂ ಅನುಷ್ಠಾನ ಪ್ರಕ್ರಿಯೆಗಳಲ್ಲಿ ಐ.ಟಿ.ಡಿ.ಪಿ.ಗಳು ಪ್ರಮುಖ ಕೇಂದ್ರ ಬಿಂದುಗಳಾಗಿದ್ದವು. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಗಿರಿಜನ ಉಪ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ೧೮೦ ಐ.ಟಿ.ಡಿ.ಪಿ.ಗಳಾಗಿ ವಿಭಜಿಸಲಾಯಿತು. ಅದರಲ್ಲಿ ಕರ್ನಾಟಕದ ರಾಜ್ಯದ ಬುಡಕಟ್ಟು ಜನರು ಹೆಚ್ಚಿಗೆ ವಾಸಿಸುತ್ತಿದ್ದ ಪ್ರದೇಶಗಳಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಡಗು ಜಿಲ್ಲೆಯ ಪೊನ್ನಂಪೇಟೆ, ಮೈಸೂರು ಜಿಲ್ಲೆಯ ಹೆಗ್ಗಡೆದೇವನ ಕೋಟೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಮತ್ತು ಹಿಂದೆ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಉಡುಪಿಯನ್ನು ೫ ಐ.ಟಿ.ಡಿ.ಪಿ.ಗಳನ್ನಾಗಿ ಪರಿಗಣಿಸಲಾಯಿತು.

ಈ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಮೇಲೆ ಆಗುತ್ತಿದ್ದ ಎಲ್ಲಾ ರೀತಿಯ ಶೋಷಣೆಯನ್ನು ನಿಲ್ಲಿಸುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಇದರ ಜೊತೆಯಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸಣ್ಣ ನೀರಾವರಿ, ಸಹಕಾರ, ಮಾರುಕಟ್ಟೆ ಮತ್ತು ಇತರೆ ಸಾಮಾಜಿಕ ಸೇವೆಗಳಿಗೂ ಆದ್ಯತೆ ನೀಡಲಾಯಿತು.

ಬುಡಕಟ್ಟು ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಲು ಮೂರು ವರ್ಗಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ.

೧. ಬುಡಕಟ್ಟು ಪ್ರದೇಶಗಳ ಬಗ್ಗೆ ಆಸಕ್ತಿ (Areas of Tribal Concentration)

೨. ಬುಡಕಟ್ಟು ಪ್ರದೇಶವಲ್ಲದೆ ಇತರೆ ಪ್ರದೇಶಗಳಲ್ಲಿ ಹಂಚಿಹೋಗಿರುವ ಬುಡಕಟ್ಟು ಜನರು (Dispersed Tribals in other areas)

೩. ಆದಿವಾಸಿ ಬುಡಕಟ್ಟುಗಳ ಸಮುದಾಯ (Primitive Tribal Groups)

ಗಿರಿಜನ ಉಪ ಯೋಜನೆ ಮತ್ತು ರಾಜ್ಯ ಯೋಜನೆ ನಡುವೆ ಇರುವ ಸಂಬಂಧದ ಪ್ರಾಮುಖ್ಯತೆಯ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ. ಬುಡಕಟ್ಟು ಪ್ರದೇಶದ ಅಭಿವೃದ್ಧಿಯ ಬಗ್ಗೆ ಕೈಗೊಂಡ ಪ್ರಯತ್ನವಾದರೂ ಇದು

ರಾಜ್ಯದ ಸಂಪೂರ್ಣ ಅಭಿವೃದ್ಧಿಯ ಪ್ರಯತ್ನದ ಒಂದು ಭಾಗವಾಗಿದೆ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಸಿದ್ಧಪಡಿಸಿ ಮುಂದೆ ಬರುವ ಕಾರ್ಯಕ್ರಮಗಳ ವಿವರ ಈ ಕೆಳಗಿನಂತಿದೆ.

೧. ಶಿಕ್ಷಣ (Education)

೨. ಆರೋಗ್ಯ ಸೇವೆಗಳು (Health Services)

೩. ಪೂರ್ಣ ಉದ್ಯೋಗದ ಆರ್ಥಿಕತೆ (Full Employment Economy)

೪. ಸ್ಥಳಾಂತರ ಬೇಸಾಯ (Shifting Cultivation)

೫. ಸಾಲ ಮತ್ತು ಮಾರುಕಟ್ಟೆ (Credit and Marketing)

೬. ತೋಟಗಾರಿಕೆ (Horticulture)

೭. ನೀರಾವರಿ (Irrigation)

೮. ಅರಣ್ಯ ಆಧಾರಿತ ಆರ್ಥಿಕತೆ (Forestry based Economy)

೯. ಭೂ ರಹಿತ ಕೂಲಿಗಳು (Landless Labouers)

೧೦.ಕುಡಿಯುವ ನೀರಿನ ವ್ಯವಸ್ಥೆ (Drinking Water)

೧೧. ಪೌಷ್ಟಿಕಾಂಶ (Nutrition)

೧೨. ರಸ್ತೆಗಳು (Roads)

ಇದರ ಜೊತೆಗೆ ಕೃಷಿ ಸಂಶೋಧನೆ, ಕೃಷಿ ಫಾರಂಗಳು, ಪಶುಸಂಗೋಪನೆ, ರೇಷ್ಮೆ, ಜೇನು ಸಾಕಾಣಿಕೆ, ಕೈಮಗ್ಗಗಳ ನೇಯ್ಗೆತನ, ಸಾಂಪ್ರದಾಯಿಕ ಕರಕುಶಲ ಕಸುಬು ಇತ್ಯಾದಿಗಳು.

ಈ ಯೋಜನೆಯಡಿಯಲ್ಲಿ ದೇಶದ ಶೇ. ೬೫ ರಷ್ಟು ಬುಡಕಟ್ಟು ಜನರು ಉಪಯೋಗ ಪಡೆದುಕೊಂಡಿದ್ದಾರೆ. ಉಳಿದ ಶೇ. ೩೫ ರಷ್ಟು ಬುಡಕಟ್ಟು ಜನರು ಬುಡಕಟ್ಟು ಪ್ರದೇಶವಲ್ಲದ ಇತರೆ ಪ್ರದೇಶಗಳಲ್ಲಿ ಹಂಚಿಹೋಗಿರುತ್ತಾರೆ. ಆ ಕಾರಣದಿಂದ ಇತರೆ ಪ್ರದೇಶದಲ್ಲಿ ಹಂಚಿಹೋಗಿರುವ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲಾಗಿದೆ. ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸುಮಾರು ೫೦ ಆದಿವಾಸಿ ಪಂಗಡಗಳನ್ನು ಗುರುತಿಸಲಾಗಿದೆ. ಇವರ ಸ್ಥಿತಿಗತಿ ತುಂಬಾ ಹೀನಾಯ ಸ್ಥಿತಿಯಲ್ಲಿದ್ದಿದ್ದರಿಂದ ಇವರ ಅಭಿವೃದ್ಧಿಗಾಗಿ ೬ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಯೋಜನೆಗಳನ್ನು ರೂಪಿಸಲಾಗಿದೆ. ೧೯೭೪-೭೯ ರಲ್ಲಿ ಮೊದಲನೇ ಗಿರಿಜನ ಉಪ ಯೋಜನೆ ಪ್ರಾರಂಭವಾಗುವ ಮೊದಲೇ ಬುಡಕಟ್ಟು ಜನರ ಸ್ಥಿತಿ ಬಹಳ ಕೆಳಮಟ್ಟದಲ್ಲಿತ್ತು. ಬುಡಕಟ್ಟು ಜನರ ಸಮಸ್ಯೆಯನ್ನು ಬಗೆಹರಿಸುವ ಮೊದಲು ಬುಡಕಟ್ಟು ಜನರ ಪ್ರದೇಶ ಮತ್ತು ಜನಸಂಖ್ಯೆಯ ಬಗ್ಗೆ ಗಮನಹರಿಸಬೇಕಾಗಿದ್ದು ಅವಶ್ಯಕವಾಗಿತ್ತು. ದೇಶದಲ್ಲಿರುವ ಬುಡಕಟ್ಟು ಪ್ರದೇಶಗಳನ್ನು ಮೂರು ವರ್ಗಗಳಾಗಿ ವರ್ಗೀಕರಿಸಲಾಗಿದೆ.

೧. ರಾಜ್ಯ ಮತ್ತು ಕೇಂದ್ರಾಡಳಿತದ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನಸಂಖ್ಯೆ

೨. ರಾಜ್ಯ ಮತ್ತು ಕೇಂದ್ರಾಡಾಳಿತ ಪ್ರದೇಶದಲ್ಲಿರುವ ಕಡಿಮೆ ಬುಡಕಟ್ಟು ಜನಸಂಖ್ಯೆ ಆದರೆ ಬ್ಲಾಕ್ ಮತ್ತು ತಾಲ್ಲೂಕುಗಳಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನಸಂಖ್ಯೆ.

೩. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಹಂಚಿಹೋಗಿರುವ ಬುಡಕಟ್ಟು ಜನಸಂಖ್ಯೆ.

ಶೇಕಡ ೫೦ ಕ್ಕಿಂತ ಹೆಚ್ಚಿಗೆ ಬುಡಕಟ್ಟು ಜನರನ್ನು ಹೊಂದಿರುವ ಪ್ರದೇಶಗಳನ್ನು ಗುರುತಿಸಿ, ಅವುಗಳ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆ ಎಂಬ ಹೊಸ ಯೋಜನೆಯನ್ನು ತಯಾರಿಸಲಾಯಿತು. ಈ ಹೊಸ ಯೋಜನೆಯಿಂದ ದೇಶದ ೨/೩ ಭಾಗದ ಬುಡಕಟ್ಟು ಜನರು ಮಾತ್ರ ಅಭಿವೃದ್ಧಿ ಹೊಂದಲು, ಉಳಿದ ೧/೩ ಭಾಗದ ಬುಡಕಟ್ಟಿನವರು ಈ ಯೋಜನೆಯ ಹೊರಗೆ ಉಳಿದಿರುವುದು ದಾಖಲಾತಿಗಳಿಂದ ದೃಢಪಟ್ಟಿದೆ. ಭಾರತ ಸ್ವಾತಂತ್ರವನ್ನು ಹೊಂದಿ ಅರ್ಧ ಶತಮಾನ ಕಳೆದರೂ ಬುಡಕಟ್ಟುಗಳ ಅಭಿವೃದ್ಧಿ ಕಾರ್ಯ, ಕುಂಟುತ್ತಾ ಸಾಗಿರುವುದನ್ನು ಮನಗಂಡು ಭಾರತ ಸರ್ಕಾರ ಬುಡಕಟ್ಟುಗಳ ಅಭಿವೃದ್ಧಿಗೆಂದೇ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯ (Ministry of Tribal Affairs) ವೊಂದನ್ನು ೧೯೯೯ನೇ ಅಕ್ಟೋಬರ್ ತಿಂಗಳಲ್ಲಿ ಹೊಸದಾಗಿ ರಚಿಸಿದೆ. ಈ ಹಿಂದೆ ಈ ಖಾತೆಯನ್ನು ಸಾಮಾಜಿಕ ನ್ಯಾಯ ಮತ್ತು ಸ್ವಾಧಿಕಾರ ಸಚಿವಾಲಯ (Ministry of Social justice and Empowerment) ನೋಡಿಕೊಳ್ಳುತ್ತಿತ್ತು. ಈ ಬುಡಕಟ್ಟು ಜನರ ಸರ್ವತೊಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಚಿವಾಲಯ ಮತ್ತು ನಿರ್ದೇಶನಾಲಯಗಳಿದ್ದು, ಇವುಗಳು ಇತ್ತೀಚಿನ ದಿನದಲ್ಲಿ ಬುಡಕಟ್ಟುಗಳ ಸಮಸ್ಯೆಗಳನ್ನು ಬಗೆಹರಿಸಿ, ಅವರ ಜೀವನಮಟ್ಟವನ್ನು ಸುಧಾರಿಸಲು ಹಲವಾರು ವಿನೂತನ ಯೋಜನೆಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಈ ತರಹದ ಪ್ರತ್ಯೇಕ ಬುಡಕಟ್ಟುಗಳ ವ್ಯವಹಾರಗಳ ಖಾತೆಯನ್ನು ನೋಡಿಕೊಳ್ಳಲು ರಾಜ್ಯಗಳಲ್ಲಿ ಸಚಿವಾಲಯ ರಚಿಸುವುದು ಅವಶ್ಯಕ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಮೊದಲನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಭಾರತದಾದ್ಯಂತ ಕೇವಲ ರೂ.೧೯.೦೩ ಕೋಟಿಗಳನ್ನು ಖರ್ಚುಮಾಡಿದ್ದು, ತದನಂತರ ೫ನೇ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ರೂ.೩೦೫ ಕೋಟಿಗಳಿಗೆ ಏರಿಸಲಾಯಿತು. ಇದರಿಂದ ಅವರ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿ ಸಾಧಿಸದೇ ಇರುವುದು ದಾಖಲೆಗಳಿಂದ ದೃಢಪಟ್ಟಿರುವುದರಿಂದ ಮತ್ತಷ್ಟು ಬುಡಕಟ್ಟು ಜನರ ಆಭಿವೃದ್ಧಿಗಾಗಿ ಹೆಚ್ಚು ಒತ್ತು ಕೊಡಲು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಯೋಗವನ್ನು ಬೇರ್ಪಡಿಸಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರಿಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ.

೧ ರಿಂದ ೭ ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೭ ರಾಜ್ಯಗಳಿಂದ ೨ ಕೇಂದ್ರಾಡಳಿತ ಪ್ರದೇಶಗಳಿಂದ ಸುಮಾರು ಶೇ. ೭೫ ರಷ್ಟು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಳಿದ ಶೆ. ೨೫ ರಷ್ಟು ಬುಡಕಟ್ಟು ಜನರು ಈ ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿದ್ದು ಅವರ ಸ್ಥಿತಿಗತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ. ಆ ಪ್ರಕಾರ ಉತ್ತರ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯಿಂದ ಹೊರಗೆ ಉಳಿದಿರುತ್ತಾರೆ. (ಶೇ. ೮೭.೯೪) ಸಿಕ್ಕಿಂ (ಶೇ. ೮೬.೯೨). ಕೇರಳ (ಶೇ.೮೨.೪೯) ಪಶ್ಚಿಮ ಬಂಗಾಳ ಶೇ. (೬೧.೧೯) ಇನ್ನುಳಿದ ರಾಜ್ಯಗಳಲ್ಲಿ ಶೇ. ೫೦ ರಷ್ಟಕ್ಕಿಂತ ಹೆಚ್ಚು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯಿಂದ ಪ್ರಯೋಜನ ಪಡೆಯದೆ ಹೊರಗೆ ಉಳಿದಿರುತ್ತಾರೆ. ಅವರ ಪೂರ್ಣ ವಿವರಗಳನ್ನು ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೨

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ಪ್ರಯೋಜನ ಪಡೆದಿರುವ ಬುಡಕಟ್ಟುಗಳ ಶೇಕಡಾವಾರು ವಿವರ

ಕ್ರ.ಸಂ	ರಾಜ್ಯ/ಕೇಂದ್ರಾಡಳಿತ ಪ್ರದೇಶ	ಪಡೆದವು	ಪಡೆಯಲಾರದವು
೧	ಅಂಡಮಾನ್ ಮತ್ತು ನಿಕೋಬಾರ್	೧೦೦.೦೦	--
೨	ಗೋವಾ ದಮನ್ ಮತ್ತು ದಿವ್	೧೦೦.೦೦	--
೩	ಮಣಿಪುರ	೯೩.೭೧	೬.೨೯
೪	ಮಧ್ಯಪ್ರದೇಶ	೮೭.೮೫	೧೨.೧೫
೫	ಬಿಹಾರ್	೮೩.೩೫	೧೬.೬೫
೬	ಗುಜರಾತ್	೮೦.೦೫	೧೯.೯೫
೭	ತ್ರಿಪುರ	೭೬.೨೭	೨೩.೭೩
೮	ಓರಿಸ್ಸಾ	೭೪.೫೩	೨೫.೭೪
೯	ಆಂಧ್ರ ಪ್ರದೇಶ	೭೨.೪೩	೨೭.೫೭
೧೦	ಹಿಮಾಚಲ ಪ್ರದೇಶ	೭೧.೧೨	೨೮.೮೮
೧೧	ಮಹರಾಷ್ಟ್ರ	೬೮.೩೧	೩೧.೬೯
೧೨	ರಾಜಸ್ಥಾನ	೬೪.೮೭	೩೧.೬೯
೧೩	ಅಸ್ಸಾಂ	೨೯.೯೩	೪೦.೦೭
೧೪	ಕರ್ನಾಟಕ	೫೧.೦೮	೪೮.೯೨
೧೫	ತಮಿಳುನಾಡು	೫೦.೯೬	೪೯.೦೪
೧೬	ಪಶ್ಚಿಮ ಬಂಗಾಳ	೩೮.೮೧	೬೧.೧೯
೧೭	ಕೇರಳ	೨೭.೫೧	೮೨.೪೯
೧೮	ಸಿಕ್ಕಿಮ್	೨೩.೦೮	೮೬.೯೨
೧೯	ಉತ್ತರ ಪ್ರದೇಶ	೧೨.೦೬	೮೭.೯೪

(ಕೃಪೆ : Devendra Thakur & Thakur D.N.,1997, *Tribal Development and planing* P 227.)

ಅನುಚ್ಛೇದ ೨೭೫(೧) ರ ಅಡಿಯಲ್ಲಿ ಅನುದಾನ

ಭಾರತ ಸಂವಿಧಾನದ ಅನುಚ್ಚೇಧ ೨೭೫ (೧) ರ ಪ್ರಕಾರ ದೇಶದ ೨೧ ರಾಜ್ಯಗಳಲ್ಲಿ ಹಾಗೂ ೪ ಕೇಂದ್ರಾಡಳಿತ ಪ್ರದೇಶದಲ್ಲಿರುವ ಗಿರಿಜನ ಉಪ ಯೋಜನೆಯ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ಅನುದಾನವನ್ನು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉಪಯೋಗಿಸಲಾಗುತ್ತಿದೆ. ಈ ಅನುದಾನದಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಸೇತುವೆ, ಸೌರಶಕ್ತಿ ವಿದ್ಯೂತೀಕರಣ, ಶಾಲೆಗಳ ನಿರ್ಮಾಣ, ವಸತಿ ನಿಲಯಗಳ ನಿರ್ಮಾಣ, ನೀರಾವರಿ ಸೌಲಭ್ಯ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಬಹುದಾಗಿದೆ. ಈ ಉದ್ದೇಶಕ್ಕಾಗಿ ೨೦೦೨-೦೩ ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರೂ. ೨೮೦ಕೋಟಿಗಳನ್ನು ಬಿಡುಗಡೆ ಮಾಡಿದೆ.

ಬುಡಕಟ್ಟು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಿಲು ಅನುದಾನವನ್ನು ಬಿಡುಗಡೆಮಾಡುತ್ತಿದೆ. ಈ ರೀತಿಯ ವಸತಿ ಶಾಲೆಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭವಾಗಿರುವುದಿಲ್ಲ. ಇದು ಬುಡಕಟ್ಟು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನುನೀಡಲು ನೆರವಾಗುವಂತಹ ಯೋಜನೆಯಾಗಿರುವುದರಿಂದ, ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯೂ ಅತ್ಯಂತ ಹೆಚ್ಚಿನ ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದ್ದು ಇಂತಹ ಜಿಲ್ಲೆಗೆ ಮೇಲೆ ತಿಳಿಸಿರುವ ಮಾದರಿ ವಸತಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

ಭಾರತ ಸಂವಿಧಾನ ಅನುಚ್ಛೇದ ೨೭೫ (೧) ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವಿನಡಿ ಕೇಂದ್ರ ಸರ್ಕಾರವು ಕೆಳಕಂಡ ನಿರ್ದಿಷ್ಟ ಯೋಜನೆಗಳಿಗೆ ಅನುದಾನವನ್ನು ಮಂಜೂರು ಮಾಡುತ್ತಿದೆ.

೧. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಹ್ಯಾಂಡ್‌ಪಂಪ್, ಕೊಳವೆ ಬಾವಿ ಮತ್ತು ಕಿರು ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರು ಪೂರೈಕೆ.

೨. ಪರಿಶಿಷ್ಟ ವರ್ಗದವರ ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರಕ್ಕೆ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ.

೩. ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಚರಂಡಿ ಮತ್ತು ನೈರ್ಮಲೀಕರಣ ಕಾಮಗಾರಿಗಳ ಅನುಷ್ಠಾನ.

೪. ಪರಿಶಿಷ್ಟ ವರ್ಗದವರ ಕಾಲೋನಿಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ.

೫. ಲ್ಯಾಂಪ್ ಸಹಕಾರ ಸಂಘಗಳ ಮೂಲಕ ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕ ಸ್ಥಾಪನೆ.

೬. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸೋಲಾರ್ ಬೀದಿ ದೀಪ ಸೌಲಭ್ಯ ಒದಗಿಸುವುದು.

೭. ಪರಿಶಿಷ್ಟ ವರ್ಗದವರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕಾಲೋನಿಗಳಲ್ಲಿ ಸಮುದಾಯ ಭವನ ನಿರ್ಮಾಣ.

೮. ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಏತ ನೀರಾವರಿ, ತುಂತುರ ನೀರಾವರಿ ಮತ್ತು ಹನಿ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೯. ಪರಿಶಿಷ್ಟ ವರ್ಗದ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯುಕ್ತಿಕ ಕೊಳವೆ ಬಾವಿ ಮತ್ತು ಸಮೂಹಿಕ ನೀರಾವರಿ ಬಾವಿಗಳ ನಿರ್ಮಾಣಕ್ಕೆ ಸಹಾಯಧನ.

೧೦. ಪರಿಶಿಷ್ಟ ವರ್ಗದವರ ಜಮೀನಿನಲ್ಲಿ ಕೃಷಿ ಇಲಾಖೆಯ ವತಿಯಿಂದ ಜಲಾನಯನ ಕಾಮಗಾರಿಗಳ ಅನುಷ್ಠಾನ.

೧೧. ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳನ್ನು ೫ನೆ ತರಗತಿಯಿಂದ ೭ ನೇ ತರಗತಿಗೆ ಮೇಲ್ದರ್ಜೆಗೇರಿಸುವುದು.

ಆದಿವಾಸಿ ಪಂಗಡಗಳಿಗೆ ವಿಶೇಷ ಯೋಜನೆ

ಬುಡಕಟ್ಟು ಪಂಗಡಗಳಲ್ಲಿ ಕೆಲವು ಇತರೆ ಬುಡಕಟ್ಟುಗಳಿಗಿಂತ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ತೀರಾ ಹಿಂದುಳಿದವರನ್ನು ಮನಗಂಡು ಸರ್ಕಾರ ಅಂತಹ ಬುಡಕಟ್ಟುಗಳನ್ನು ಆದಿವಾಸಿ ಬುಡಕಟ್ಟುಗಳೆಂದು ಗುರುತಿಸಿದೆ. ೧೯೬೧ರಲ್ಲಿ ನೇಮಕವಾದ ದೇಬರ್ ಆಯೋಗ ದೇಶದಲ್ಲಿ ೭೨ ಆದಿವಾಸಿ ಪಂಗಡಗಳನ್ನು ಈ ಕೆಳಕಂಡ ಮಾನದಂಡದಿಂದ ಗುರುತಿಸಿದೆ.

೧. ಪ್ರಾಚೀನ ಕಾಲದ ಹಳೆಯ ವ್ಯವಸಾಯ ಪದ್ಧತಿ.

೨. ಅತಿ ಕಡಿಮೆ ಸಾಕ್ಷರತೆ.

೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಗೃಹವ್ಯವಹಾರಗಳ ಸಚಿವಾಲಯ ೫೨ ಆದಿವಾಸಿ ಪಂಗಡಗಳನ್ನು ಗುರುತಿಸಿದೆ. ಅವುಗಳ ಒಟ್ಟು ಜನಸಂಖ್ಯೆ ಸುಮಾರು ೧೦ ಲಕ್ಷ ಇರಬಹುದೆಂದು ವಿವರಿಸಿದೆ. ೬ ನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಮತ್ತೇ ೨೦ ಆದಿವಾಸಿ ಪಂಗಡಗಳನ್ನು ಗುರುತಿಸಿ ಅವುಗಳ ಸಂಖ್ಯೆ ೭೨ ಕ್ಕೆ ಏರಿದೆ. ಇವುಗಳ ಜನಸಂಖ್ಯೆ ೧೪ ಲಕ್ಷಕ್ಕೆ ಏರಿದೆ. ಇತ್ತೀಚೆಗೆ ದೇಶದಲ್ಲಿ ೭೫ ಆದಿವಾಸಿ ಪಂಗಡಗಳೆಂದು ಗುರುತಿಸಲ್ಪಟ್ಟಿದೆ. ಆ ಪಟ್ಟಿಯಲ್ಲಿ ಕರ್ನಾಟಕದ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳನ್ನು ಆದಿವಾಸಿ ಪಂಗಡಗಳೆಂದು ಗುರುತಿಸಲಾಗಿದೆ.

ಮೂಲನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಜೇನುಕುರುಬ ಮತ್ತು ಕೊರಗ ಜಾತಿಗಳನ್ನು ಮೂಲ ನಿವಾಸಿ ಬುಡಕಟ್ಟು ಗುಂಪುಗಳೆಂದು ಗುರುತಿಸಲಾಗಿದೆ. ಈ ಜನಾಂಗದವರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಟಾನ ಮಾಡುತ್ತಿವೆ. ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ.

೧. ೧ ರಿಂದ ೪ ನೇ ತರಗತಿ, ೫ ರಿಂದ ೭ ನೇ ತರಗತಿ, ೮ ರಿಂದ ೧೦ ನೇ ತರಗತಿ ಮತ್ತು ಕಾಲೇಜು ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಆನುಕ್ರಮವಾಗಿ ವಾರ್ಷಿಕ ರೂ.೧೦೦.೦೦, ರೂ.೧೫೦.೦೦, ರೂ.೨೦೦.೦೦ ಮತ್ತು ರೂ.೨೫೦.೦೦ಗಳ ವಿಶೇಷ ಪ್ರೊತ್ಸಾಹ ಧನದ ಮಂಜೂರಾತಿ.

೨. ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ವಾರ್ಷಿಕ ರೂ. ೨೦೦.೦೦ಗಳ ವಿಶೇಷ ಪ್ರೋತ್ಸಾಹ ಧನ ಮಂಜೂರಾತಿ.

೩. ೧ ರಿಂದ ೧೦ ನೇ ತರಗತಿಗಳಲ್ಲಿ ವ್ಯಸಾಸಂಗ ಮಾಡುತ್ತಿರುವ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಲೇಖನ ಸಾಮಗ್ರಿ ಮಂಜೂರಾತಿ.

೪. ೧ ರಿಂದ ೭ನೇ ತರಗತಿಯವರೆಗೆ ಆಶ್ರಮ ಶಾಲೆಗಳನ್ನು ನಡೆಸುವುದು. ಮಂಗಳೂರು ತಾಲ್ಲೂಕು ಮಧ್ಯಗ್ರಾಮದಲ್ಲಿ ವಿಶೇಷವಾಗಿ ಜೇನುಕುರುಬ ಮತ್ತು ಕೊರಗ ಮಕ್ಕಳಿಗೆ ಕೆಂದ್ರ ಮಾದರಿ ವಸತಿ ಶಾಲೆ ನಡೆಸಲಾಗುತ್ತಿದೆ.

೫. ೫ ರಿಂದ ೧೦ನೇ ತರಗತಿವರೆಗಿನ ಕೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಿ ಉಚಿತ ವಸತಿ, ಊಟ, ಸಮವಸ್ತ್ರ, ಪಠ್ಯಪುಸ್ತಕ ಮತ್ತು ಇತರೆ ವೆಚ್ಚಗಳನ್ನು ನೀಡಲಾಗುತ್ತಿದೆ.

ರಾಜ್ಯ ಸರ್ಕಾರಗಳು ಆ ರಾಜ್ಯದಲ್ಲಿರುವ ಆದಿವಾಸಿ ಪಂಗಡಗಳ ಅಭಿವೃದ್ಧಿಗಾಗಿ ರೂಪಿಸಿಕೊಂಡಿರುವ ಯೋಜನೆಗಳಿಗೆ ಭಾರತ ಸರ್ಕಾರವು ೧೯೭೫-೭೬ ರಿಂದ ಶೆ.೧೦೦ ರಷ್ಟು ಹಣಕಾಸಿನ ನೆರವನ್ನು ನೀಡಲು ಮುಂದೆ ಬಂದಿದ್ದು ಅದೇ ರೀತಿ ೧೯೭೫-೭೬ ರಿಂದ ೧೯೮೪-೮೫ ರವರೆಗೆ ಈ ಯೋಜನೆಯನ್ನು ಅನುಷ್ಟಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ರೂ. ೨೨.೯೩ ಕೋಟಿಗಳನ್ನು ನೀಡಿರುವುದು ವರದಿಯಿಂದ ಧೃಡಪಟ್ಟಿದೆ.

ಆ ಪ್ರಕಾರ ಕರ್ನಾಟಕಕ್ಕೆ

ಕ್ರ.ಸಂ	ವರ್ಷ	ಅನುದಾನ
೧.	೧೯೭೭-೭೮	೫ ಲಕ್ಷ
೨.	೧೯೭೮-೭೯	೪ ಲಕ್ಷ
೩.	೧೯೭೯-೮೦	೪ ಲಕ್ಷ
೪.	೧೯೮೦-೮೧	೪ ಲಕ್ಷ
೫.	೧೯೮೧-೮೨	೪ ಲಕ್ಷ
೬.	೧೯೮೨-೮೩	೪ ಲಕ್ಷ
೭.	೧೯೮೩-೮೪	೩.೮೪ ಲಕ್ಷ
೮.	೧೯೮೪-೮೫	೩.೮೪ ಲಕ್ಷ ರೂ ಗಳನ್ನು ನೀಡಿದೆ.

ಇದರ ಜೊತೆಗೆ ಆದಿವಾಸಿ ಪಂಗಡಗಳ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಬೇಕಾಗಿರುವ ಸಿಬ್ಬಂದಿಗಳ ಮಂಜೂರಾತಿಯನ್ನು ನೀಡಿ ಹುದ್ದೆಗಳನ್ನು ಸೃಷ್ಟಿಸಿದೆ. ಈ ವಿಶೇಷ ಯೋಜನೆಗಳನ್ನು ಐ.ಟಿ.ಡಿ.ಪಿ., ಬುಡಕಟ್ಟು ಸಂಶೋಧನಾ ಕೇಂದ್ರ, ಸರ್ಕಾರೇತರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ೨೦೦೨-೦೩ ರಲ್ಲಿ ಈ ಯೋಜನೆಗಾಗಿ ರೂ. ೧೩.೭೫ ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಕರ್ನಾಟಕದಲ್ಲಿ ೨ ಆದಿವಾಸಿ ಪಂಗಡಗಳಿವೆ. ಅವುಗಳೆಂದರೆ ಕೊರಗ ಮತ್ತು ಜೇನುಕುರುಬ. ಕಾಡುಗಳಲ್ಲಿ ಜೇನು ಸಂಗ್ರಹಿಸುವುದು ಜೇನುಕುರುಬರ ಮುಖ್ಯ ವೃತ್ತಿಯಾಗಿತ್ತು. ಇದಕ್ಕೆ ವಿರುದ್ಧವಾಗಿ ಕಾಡು ಕುರುಬರು ಬುಟ್ಟಿಗಳನ್ನು ಹೆಣೆಯುತ್ತಿದ್ದರು. ಈ ಬುಡಕಟ್ಟಿನವರು ಮೈಸೂರು ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಕೊರಗರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುತ್ತಾರೆ. ಇವರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುತ್ತಾರೆ. ೧೯೯೧ರ ಜನಗಣತಿ ಪ್ರಕಾರ ಇವರ ಜನಸಂಖ್ಯೆ ೧೫,೦೦೦ ಇರುವುದು ಧೃಡಪಟ್ಟಿದೆ. ಇವರನ್ನು ಜಿಲ್ಲೆಯಲ್ಲಿ ಕಸಗುಡಿಸಲು, ಎಂಜಿಲು ಆಹಾರ ಪದಾರ್ಥಗಳನ್ನು ಸಂಗ್ರಹಿಸಲು ಮತ್ತು ಸತ್ತ ಪ್ರಾಣಿಗಳನ್ನು ತೆಗೆದು ಹಾಕಲು ಬಳಸುತ್ತಿದ್ದರು. ಇವರಲ್ಲಿ ಕೆಲವೇ ಕೆಲವು ಜನರು ಕೃಷಿ ಕಾರ್ಮಿಕರಾಗಿದ್ದರು. ಬುಟ್ಟಿ ಹೆಣೆಯವುದು ಇವರ ಮುಖ್ಯ ವೃತ್ತಿಯಾಗಿತ್ತು. ಕೊರಗರು ತಮ್ಮದೇ ಭಾಷೆಯನ್ನು ಹೊಂದಿದ್ದವರು. ಅವರ ಭಾಷೆಗೆ ಕೊರಗ ಭಾಷೆಯೆಂತಲೂ, ಅದೇ ರೀತಿ ಜೇನು ಕುರುಬರು ಜೇನು ನುಡಿಯನ್ನು ಮಾತನಾಡುತ್ತಾರೆ.

ಕೊರಗರಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಲೋನಿಗಳನ್ನು ಸ್ಥಾಪಿಸಲಾಗಿದೆ. ಆಶ್ರಯ, ಇಂದಿರಾ ಆವಾಜ್ ಯೋಜನೆ ಮತ್ತು ಆದಿವಾಸಿ ಪಂಗಡಗಳ ಅನುದಾನದಿಂದ ಮನೆಗಳನ್ನು ನಿರ್ಮಿಸಲಾಗಿದೆ. ಹಾಗೆಯೇ ಜೇನುಕುರುಬರ ಪರಿಸ್ಥಿತಿಯನ್ನು ಸುಧಾರಿಸಲು ಕ್ರಮಕೈಗೊಳ್ಳಬೇಕಾಗಿದೆ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯ ವಿವೇಕಾನಂದ ಯುವಕರ ಚಳುವಳಿ ಎಂಬ ಸಂಸ್ಥೆಯ ಮೂಲಕ

ಬುಡಕಟ್ಟು ಜನರ ಅವರಲ್ಲೂ ಜೇನುಕುರುಬರ ಮಕ್ಕಳ ಶಿಕ್ಷಣಕ್ಕಾಗಿ ಶಾಲೆಯನ್ನು ನಡೆಸುತ್ತಿದ್ದು, ಈ ಸಂಸ್ಥೆಗೆ ಕೇಂದ್ರ ಸರ್ಕಾರದ ಸಹಾಯಧನ ನೀಡುತ್ತಿದ್ದು ಇದರಲ್ಲಿ ಶೇ. ೯೫ ರಷ್ಟು ಬುಡಕಟ್ಟು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ.

ಇದರ ಜೊತೆಗೆ ಹಕ್ಕಿಪಿಕ್ಕಿ, ಸೋಲಿಗ, ಯರವ ಮತ್ತು ಇರುಳ ಬುಡಕಟ್ಟುಗಳನ್ನು ಆದಿವಾಸಿ ಪಂಗಡಗಳ ಪಟ್ಟಿಗೆ ಸೇರಿಸಲು ಕರ್ನಾಟಕ ಸರ್ಕಾರ ತನ್ನ ಶಿಫಾರಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಬುಡಕಟ್ಟು ಜನರಿಗೆ ಆದಾಯದ ಮೂಲಗಳಲ್ಲಿ ಕೃಷಿ ಅತಿ ಮುಖ್ಯವಾಗಿದ್ದರಿಂದ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಸರ್ಕಾರದ ಅಭಿವೃದ್ಧಿ ಇಲಾಖೆಗಳ ಮೂಲಕ ಈ ಕೆಳಕಂಡ ಕ್ಷೇತ್ರದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

೧.ಕೃಷಿ, ೨. ತೋಟಗಾರಿಕೆ, ೩. ನೀರಾವರಿ, ೪. ಮೀನುಗಾರಿಕೆ, ೫. ಭೂ ಮತ್ತು ಜಲ ಸಂರಕ್ಷಣೆ.

ದೇಶದ ಅನೇಕ ಭಾಗಗಳಲ್ಲಿರುವ ಬುಡಕಟ್ಟು ಜನರು ಅತ್ಯಂತ ಉತ್ತಮ ಕುಶಲ ಕರ್ಮಿಗಳು. ಕೆಲವು ಗೃಹ ಮತ್ತು ಸಣ್ಣ ಕೈಗಾರಿಕೆಗಳು ಸಾಮಾನ್ಯವಾಗಿ ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳಿಗೆ ಪ್ರೋತ್ಸಾಹದ ಅವಶ್ಯಕತೆ ಇದೆ.

೧. ಅರಣ್ಯ ಆಧಾರಿತ ಸಣ್ಣ ಕೈಗಾರಿಕೆಗಳು

೧. ಜೇನುನೊಣ ಸಾಕಾಣಿಕೆ ಮತ್ತು ಜೇನು ಸಂಗ್ರಹಣೆ.

೨. ಎಲೆಗಳ ಸಂಗ್ರಹಣೆ ಮತ್ತು ಅವುಗಳಿಂದ ಲೋಟ ಮತ್ತು ತಟ್ಟೆಗಳು ತಯಾರಿಸುವುದು.

೩. ಎಲೆಗಳ ಸಂಗ್ರಹಣೆ, ಬೀಡಿಗಳನ್ನು ಕಟ್ಟುವುದು ಮತ್ತು ಮಾರಾಟ ಮಾಡುವುದು.

೪. ಹುಲ್ಲು, ಬಿದಿರು, ಬೊಂಬು, ಬೆತ್ತ ಇವುಗಳಿಂದ ಕರಕುಶಲ, ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು.

೫. ಮರಗೆಲಸ ಮತ್ತು ಕೆತ್ತನೆ.

೬. ವಿವಿಧ ಮೂಲಗಳಿಂದ ನಾರುಗಳನ್ನು ಸಂಗ್ರಹಿಸಿ ಹಗ್ಗಗಳನ್ನು ಮಾಡುವುದು.

೭. ರಟ್ಟು ಮತ್ತು ಕಾಗದಗಳನ್ನು ಸ್ವತಃ ಕೈಗಳಿಂದ ತಯಾರಿಸುವುದು.

೮. ರೇಷ್ಮೆ ಸಾಕಾಣಿಕೆ, ರೇಷ್ಮೆ ಗೂಡುಗಳ ಸಂಗ್ರಹಣೆ, ಅವುಗಳಿಂದ ರೇಷ್ಮೆ ಬಟ್ಟೆಗಳನ್ನು ನೇಯಿವುದು.

೯. ಅರಗುಗಳ ಸಂಗ್ರಹಣೆ.

೧೦. ಅರಣ್ಯದಲ್ಲಿ ದೊರೆಯುವ ಹಲವಾರು ಸಣ್ಣ ಅರಣ್ಯ ಉತ್ಪನ್ನಗಳನ್ನು ಸಂಗ್ರಹಣೆ ಮಾಡುವುದು ಹಾಗೂ ಅವುಗಳ ಪರಿಷ್ಕರಣೆ ಮಾಡುವುದು.

೨. ಖನಿಜ ಆಧಾರಿತ ಗೃಹ ಮತ್ತು ಗ್ರಾಮ ಉದ್ಯಮಗಳು

೧. ವಜ್ರಗಳನ್ನು ಕತ್ತರಿಸುವುದು ಮತ್ತು ಪಾಲಿಷ್ ಮಾಡುವುದು.

೨. ಸುಣ್ಣದ ಕಲ್ಲುಗಳನ್ನು ಸುಟ್ಟು, ಸುಣ್ಣ ತಯಾರಿಸುವುದು.

೩. ಕುಂಬಾರಿಕೆ ಮಾಡಿ ಮಡಿಕೆಗಳನ್ನು ತಯಾರಿಸುವುದು.

೪. ಕಮ್ಮಾರಿಕೆ.

೫. ಕಲ್ಲುಗಳನ್ನು ಪಾಲಿಷ್ ಮಾಡುವುದು, ಕಲ್ಲುಗಳಿಂದ ಪಾತ್ರೆ ಮತ್ತು ವಿಗ್ರಹಗಳನ್ನು ತಯಾರಿಸುವುದು.

೩. ರೇಷ್ಮೆ ತಯಾರಿಕೆ

೧. ಕೈ ಮಗ್ಗಗಳ ಸಹಾಯದಿಂದ ರೇಷ್ಮೆ ನೂಲನ್ನು ತಯಾರಿಸಿ ಅದರಿಂದ ಉತ್ತಮವಾದ ರೇಷ್ಮೆ ಬಟ್ಟೆಗಳನ್ನು ತಯಾರಿಸುವುದು.

೨. ಉಣ್ಣೆಯ ನೂಲನ್ನು ತಯಾರಿಸಿ, ಉಣ್ಣೆ ಬಟ್ಟೆಯ ಜೊತೆಗೆ ಕಂಬಳಿ ಮತ್ತು ಹೂದಿಕೆಗಳನ್ನು ತಯಾರಿಸುವುದು. ಪಾಲಿಷ್ಟರ್ ಬಟ್ಟೆಗಳನ್ನು ತಯಾರಿಸುವುದು.

೪. ಶಿಕ್ಷಣ ಮತ್ತು ಸಂಸ್ಕೃತಿ

೧. ಶಿಕ್ಷಣ ಅಭಿವೃದ್ಧಿಗೆ ಅತ್ಯವಶ್ಯಕವಾಗಿದ್ದು, ಯೋಜನೆಯ ಶಕ ಪ್ರಾರಂಭವಾದ ದಿನದಿಂದ ಬುಡಕಟ್ಟು ಮತ್ತು ಬುಡಕಟ್ಟಲ್ಲದ ಜನರ ನಡುವೆ ಇರುವ ಶೈಕ್ಷಣಿಕ ತಾರತಮ್ಯಗಳನ್ನು ಹೋಗಲಾಡಿಸಲು, ಸರ್ಕಾರದ ಪ್ರಯತ್ನಗಳು ನಡೆದಿವೆ. ಬುಡಕಟ್ಟುಗಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಎರಡು ಸಾಮಾಜಿಕ ಚಳುವಳಿಗಳ ಪರಿಣಾಮವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

೨. ರಾಷ್ಟ್ರೀಯ ಚಳುವಳಿಯನ್ನು ಪ್ರಾರಂಭಿಸಿದ ಮಹಾತ್ಮಾಗಾಂಧೀಜಿ ಮತ್ತು ಅವರ ಅನುಯಾಯಿಗಳು, ಗುಜರಾತ್ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಿದ್ದರು. ಈ ಆಶ್ರಮ ಶಾಲೆಗಳು ಬುಡಕಟ್ಟು ಜನರಿಗೆ ಶಿಕ್ಷಣ ನೀಡುವುದಕ್ಕೆ ಬಹಳಷ್ಟುಶ್ರಮಿಸಿವೆ.

೩. ಗೋದಾವರಿ ಪರುಲೇಕರ್‌ರವರಿಂದ ೧೯೪೦ರಲ್ಲಿ ಪ್ರಾರಂಭವಾದ ಸಾಮಾಜಿಕ ಚಳುವಳಿಗಳು ಸಹ ಬುಡಕಟ್ಟು ಜನರಿಗೆ ಶಿಕ್ಷಣವನ್ನು ನೀಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷ ಅವಕಾಶಗಳನ್ನು ನೀಡಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಬುಡಕಟ್ಟು ಜನರ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡಲು ವಿದ್ಯಾರ್ಥಿನಿಲಯಗಳ ಸೌಲಭ್ಯ, ಪಠ್ಯ ಪುಸ್ತಕಗಳು, ಸಮವಸ್ತ್ರಗಳು ಇತ್ಯಾದಿಗಳನ್ನು ನೀಡಲಾಗುತ್ತಿದೆ. ಇದರಿಂದ ಬುಡಕಟ್ಟು ವಿದ್ಯಾರ್ಥಿಗಳು ಶಾಲೆಗಳಿಗೆ ದಾಖಲಾಗುವ ಸಂಖ್ಯೆ ವಿವಿಧ ಹಂತಗಳಲ್ಲಿ ಹೆಚ್ಚಾಗುತ್ತಿರುವುದರ ಜೊತೆಗೆ ಬುಡಕಟ್ಟು ಜನರಲ್ಲಿ ಸಾಕ್ಷರತೆಯ ಮಟ್ಟವು ಸಹ ಏರುತ್ತಿದೆ.

ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಶಿಕ್ಷಣಕ್ಕೆ ಅತಿ ಹೆಚ್ಚಿನ ಆದ್ಯತೆಯನ್ನು ನೀಡಲಾಗಿತ್ತು. ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ೧ ರಿಂದ ೭ ರವರಗಿನ ತರಗತಿಗಳಿಗೆ ಪ.ಜಾತಿ ಮತ್ತು ಬುಡಕಟ್ಟು ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಈ ಮುಂದಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೩

೮ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ೧ ರಿಂದ ೭ರವರೆಗಿನ ತರಗತಿಗಳಿಗೆ ಪರಿಶಿಷ್ಟಜಾತಿ ಮತ್ತು ಬುಡಕಟ್ಟು ವಿದ್ಯಾರ್ಥಿಗಳು ದಾಖಲಾಗಿರುವ ವಿವರ

ಕ್ರ.ಸಂ	ವರ್ಷ	೧ ರಿಂದ ೪				೫ ರಿಂದ ೭	ಲಕ್ಷಗಳಲ್ಲಿ	
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಒಟ್ಟು
೧	೧೯೯೧-೯೨	೨೫.೭೫	೨೨.೨೦	೪೭.೯೫	೧೨.೪೦	೦೯.೩೪	೨೧.೭೪	೬೯.೬೯
೨	೧೯೯೨-೯೩	೨೬.೪೯	೨೪.೯೦	೫೧.೩೯	೧೨.೩೫	೧೧.೧೬	೨೩.೫೧	೭೪.೯೦
೩	೧೯೯೩-೯೪	೨೭.೭೬	೨೪.೯೦	೫೨.೬೬	೧೩.೬೫	೧೧.೦೨	೨೪.೬೭	೭೭.೩೩
೪	೧೯೯೪-೯೫	೨೭.೮೬	೨೫.೭೧	೫೩.೫೭	೧೩.೩೪	೧೧.೬೦	೨೪.೯೪	೭೮.೫೧
೫	೧೯೯೫-೯೬	-----	-----	೫೩.೫೪	-----	-----	೨೬.೧೩	೭೯.೬೭
೬	೧೯೯೬-೯೭	೨೮.೪೨	೨೭.೦೧	೫೫.೪೩	೧೪.೨೭	೧೨.೪೩	೨೬.೭೦	೮೨.೧೩

(ಕೃಪೆ : ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗದ ನಾಲ್ಕನೆಯ ವರದಿ, ೧೯೯೬-೯೭, ೧೯೯೭-೯೮, ಸಂ.೨. ಕರ್ನಾಟಕ.)

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ ೧೯೯೧-೯೨ ರಲ್ಲಿ ೧ ರಿಂದ ೪ನೇ ತರಗತಿಯಲ್ಲಿದ್ದ ೪೭.೯೫ ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ೧೯೯೬-೯೭ ರಲ್ಲಿ ೫೫.೪೩ ಲಕ್ಷಕ್ಕೆ ಏರಿರುವುದು ಕಂಡುಬಂದಿದೆ. ಇದರಿಂದ ೭ ಲಕ್ಷ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿರುತ್ತಾರೆ. ಅದೇ ರೀತಿ ೧೯೯೧-೯೨ ರಲ್ಲಿ ೫ ರಿಂದ ೭ನೇ ತರಗತಿಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೨೧.೭೪ ಲಕ್ಷದಿಂದ ೧೯೯೬-೯೭ನೇ ಸಾಲಿನಲ್ಲಿ ೨೬.೭೦ ಲಕ್ಷಕ್ಕೆ ಏರಿದ್ದು, ಇದರಿಂದ ಈ ಕ್ಷೇತ್ರದಲ್ಲಿ ೧.೭೫ ಲಕ್ಷ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿರುವುದು ಮೇಲಿನ ಕೋಷ್ಟಕದಿಂದ ತಿಳಿದು ಬಂದಿದೆ.

ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ೧೯೯೬-೯೭ ಸಾಲಿನಲ್ಲಿ ಖರ್ಚುಮಾಡಿದ ಅನುದಾನದ ವಿವರವನ್ನು ವರ್ಗವಾರು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೪

ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ೧೯೯೬-೯೭ ಸಾಲಿನಲ್ಲಿ ಖರ್ಚುಮಾಡಿದ ಅನುದಾನದ ವಿವರ ರೂ.ಲಕ್ಷಗಳಲ್ಲಿ

ಕ್ರ.ಸಂ	ವರ್ಗ	ಯೋಜನೆ	ಯೋಜನೇತರ	ಒಟ್ಟು	ಶೇಕಡ
೧	ಪ್ರಾಥಮಿಕ ಶಿಕ್ಷಣ	೨೨೨೫೭.೫೬	೭೭೧೯೬.೪೯	೯೯೪೫೪.೦೫	೫೩.೩೪
೨	ಪ್ರೌಢ ಶಿಕ್ಷಣ	೧೦೬೫೯.೫೪	೪೭೪೨೪.೬೧	೫೮೦೮೪.೧೫	೩೧.೧೫
೩	ವಿಶ್ವವಿದ್ಯಾಲಯ ಮತ್ತು ಇತರೆ	೨೫೯೫.೦೦	೨೧೯೪೫.೯೯	೨೪೫೪೦.೯೯	೧೩.೧೬
೪	ಕಾಲೇಜ್ ಶಿಕ್ಷಣ	೬೫೯.೩೫	೮೬.೬೪	೭೪೫.೯೯	೦.೪೬
೫	ವಯಸ್ಕರ ಶಿಕ್ಷಣ	೧೯೯.೫೧	೫೭೦.೬೭	೭೭೦.೧೮	೦.೪೧
೬	ಭಾಷಾ ಇಲಾಖೆ	೨೬೭೫.೬೦	೧೯೩.೧೦	೨೮೬೮.೭೦	೧.೫೪
೭	ಇತರೆ	೩೯೦೪೬.೫೬	೧೪೭೪೧೭.೫೦	೧೮೬೪೬೪.೦೬	೧೦೦.೦೦

(ಕೃಪೆ : ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗದ ನಾಲ್ಕನೆಯ ವರದಿ, ೧೯೯೬-೯೭, ೧೯೯೭-೯೮, ಸಂ.೨.ಕರ್ನಾಟಕ.)

ಈ ಮೇಲಿನ ಕೋಷ್ಟಕವನ್ನು ನೋಡಿದಾಗ ಶೇ. ೮೪.೪೯ ರಷ್ಟು ಅನುದಾನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ವಿನಿಯೋಗಿಸಿರುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ಶಿಕ್ಷಣ ಕ್ಷೇತ್ರದ ಪ್ರಗತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೫

ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಕ್ಕಳ ಶಾಲಾ ದಾಖಲಾತಿ ವಿವರ

ವರ್ಗ	ಪರಿಶಿಷ್ಟ ವರ್ಗ															
	ದಾಖಲಾತಿ								ಹಾಜರಾತಿ							
	ಗಂಡು				ಹೆಣ್ಣು				ಗಂಡು				ಹೆಣ್ಣು			
	ಸ	ಅ	ಅ.ರ	ಒಟ್ಟು	ಸ	ಅ	ಅ.ರ	ಒಟ್ಟು	ಸ	ಅ	ಅ.ರ	ಒಟ್ಟು	ಸ	ಅ	ಅ.ರ	ಒಟ್ಟು
೧	೯೫೧೫	೫೩೨	೪೩೮	೧೦೪೮೫	೪೫.೭೫	೨೫೮	೧೬೪	೪೯೯೭	೮೫೦೦	೪೬೩	೩೬೯	೯೩೩೨	೧೨೯	೨೪೪	೧೪೩	೪೫೧೬
೨	೧೦೭೦೧	೫೦೨	೪೬೪	೧೧೬೬೭	೫೦೪೪	೨೨೮	೧೭೧	೫೪೪೩	೯೬೯೬	೪೨೭	೪೦೩	೧೦೫೨೬	೪೬೨೬	೨೦೦	೧೫೬	೪೯೮೨
೩	೯೯೫೪	೪೯೮	೩೮೨	೧೦೮೩೪	೪೭೬೩	೨೦೦	೧೬೨	೫೧೫೫	೮೮೬೭	೪೨೨	೩೩೬	೯೬೨೫	೪೨೮೮	೧೯೬	೧೪೮	೪೬೩೨
೪	೯೩೫೬	೫೨೦	೩೫೧	೧೦೨೨೭	೪೨೩೯	೨೪೪	೧೪೨	೪೬೨೫	೮೨೬೧	೪೫೪	೨೯೨	೯೦೦೭	೩೦೮೧	೨೧೦	೧೨೨	೩೪೧೩
೫	೮೮೩೨	೧೬೪	೨೧೫	೯೫೮೯	೩೯೭೧	೨೨೫	೧೪೭	೪೩೪೩	೭೯೮೪	೪೦೮	೨೬೨	೮೬೬೪	೩೬೩೭	೧೮೭	೧೩೦	೩೯೫೪
ಒಟ್ಟು	೪೮೩೫೮	೨೫೧೬	೧೯೨೮	೫೨೮೦೨	೨೨೫೯೨	೧೧೮೫	೭೮೬	೨೪೫೬೩	೪೩೩೧೮	೨೧೭೪	೧೬೬೨	೪೭೧೫೪	೧೯೭೬	೧೧೦೩೭	೬೯೯	೨೧೪೯೭
೬	೬೧೫೭	೪೩೬	೨೭೭	೬೮೭೦	೨೬೧೩	೧೯೮	೧೦೬	೨೯೧೭	೫೪೩೫	೩೫೮	೨೫೫	೬೦೪೮	೨೩೧೯	೧೭೪	೧೦೦	೨೫೯೩
೭	೪೨೮೮	೩೫೪	೨೨೫	೪೮೬೭	೧೮೩೧	೧೪೬	೧೦೨	೨೦೭೯	೩೯೪೨	೨೯೯	೨೦೮	೪೪೪೯	೧೬೬೪	೧೧೦	೯೭	೧೮೭೧
ಒಟ್ಟು	೧೦೪೪೫	೭೯೦	೫೦೨	೧೧೭೩೭	೪೪೪೪	೩೪೪	೨೦೮	೪೯೯೬	೯೩೭೭	೬೫೭	೪೬೩	೧೦೪೯೭	೩೯೮೩	೮೮೪	೧೯೭	೪೪೬೪
ಒಟ್ಟು	೫೮೮೦೩	೩೦೦೬	೨೪೩೦	೬೪೫೩೯	೨೭೦೩೬	೧೫೨೯	೯೯೪	೨೯೫೫೯	೫೨೬೯೫	೨೮೩೧	೨೧೨೫	೫೭೬೫೧	೨೩೭೪	೪೧೩೨೧	೮೯೬	೨೫೯೬೧
೮	೧೬೫೧	೧೨೮೬	೩೦೧	೩೨೩೮	೪೯೭	೪೧೮	೧೧೦	೧೦೨೫	೧೪೬೮	೧೨೧೪	೨೭೭	೨೯೫೯	೪೧೩	೩೮೯	೧೧೮	೯೨೦
೯	೧೫೦೫	೧೦೮೭	೨೬೯	೨೮೬೧	೫೩೧	೩೯೩	೧೭೮	೧೧೦೨	೧೩೯೮	೧೦೦೧	೨೫೪	೨೬೫೩	೪೫೦	೩೫೭	೧೦೬	೯೧೩
೧೦	೧೧೫೬	೮೪೬	೨೭೧	೨೨೭೩	೩೮೮	೨೭೭	೧೨೫	೭೯೦	೧೦೯೧	೮೧೨	೨೪೨	೨೧೪೫	೩೪೪	೨೫೦	೧೧೪	೬೯೮
ಒಟ್ಟು	೪೩೧೨	೩೨೧೯	೪೮೧	೮೩೭೨	೧೪೧೬	೧೦೮೮	೪೧೩	೨೯೧೭	೩೯೫೭	೩೦೨೭	೭೭೩	೭೭೫೭	೧೨೦೭	೯೯೬	೩೨೮	೨೫೩೧

ಕರ್ನಾಟಕದಲ್ಲಿ ಹಿಂದುಳಿದ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು ೧೯೪೦ ರಿಂದಲೇ ನಡೆದುಕೊಂಡು ಬಂದಿದೆಯಾದರೂ, ಈ ಕಾರ್ಯಕ್ರಮಗಳಿಗೆ ಬಹಳ ಪ್ರಾಮುಖ್ಯತೆ ಸಿಕ್ಕಿದ್ದು ಸ್ವಾತಂತ್ರ್ಯದ ನಂತರವೇ. ಈ ಕಾರ್ಯಕ್ರಮಗಳನ್ನು ೧೯೫೨-೫೩ ರಿಂದ ಪ್ರಾರಂಭವಾದರೂ ೧೯೫೬ರವರವಿಗೆ ಅದಕ್ಕೆ ಒಂದು ಸರಿಯಾದ ರೂಪ ರೇಷೆ ಇರಲಿಲ್ಲ. ಕರ್ನಾಟಕ ಉದಯವಾದ ನಂತರ ಈ ಬುಡಕಟ್ಟು ಜನಾಂಗದ ಕಲ್ಯಾಣ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸಲಾಗಿತ್ತು. ಈ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ರೂಪಿಸಿದ ಕಾರ್ಯಕ್ರಮಗಳು ಭಾರತದ ಸಂವಿಧಾನದಲ್ಲಿ ಹೇಳಿರುವ ಧೋರಣೆಗೆ ಅನಗುಣವಾಗಿವೆ ಮತ್ತು ಈ ಜನಾಂಗದ ಸರ್ವತೊಮುಖ ಅಭಿವೃದ್ಧಿಯನ್ನು ಒಳಗೊಂಡಿವೆ.

ಕರ್ನಾಟಕ ಸರ್ಕಾರವು ಗಿರಿಜನ ಉಪಯೋಜನೆಯಡಿಯಲ್ಲಿ ಬುಡಕಟ್ಟು ಜನರನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿ, ಮೊದಲಬಾರಿಗೆ ೧೯೭೮-೮೩ ರಲ್ಲಿ (೫ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ) ಗಿರಿಜನರು ಹೆಚ್ಚಿಗೆ ಇರುವ ನಾಲ್ಕು ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗು, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರದೇಶಗಳಿಗೆ ಸೀಮಿತವಾದಂತೆ "ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ" (ಐ.ಟಿ.ಡಿ.ಪಿ.) ಯನ್ನು ಜಾರಿಗೊಳಿಸಿತು. ಆದರೆ ಈ ಮೇಲೆ ತಿಳಿಸಿರುವ ಜಿಲ್ಲೆಗಳಲ್ಲಿ ರಾಜ್ಯದ ಒಟ್ಟು ಗಿರಿಜನರ ಜನಸಂಖ್ಯೆಯಲ್ಲಿ ಶೇ.೧೪ ರಷ್ಟು ಬುಡಕಟ್ಟು ಜನರು ಮಾತ್ರ ಇದ್ದು, ಉಳಿದ ಶೇ.೮೬ ರಷ್ಟು ಬುಡಕಟ್ಟು ಜನರು ಮೇಲೆ ತಿಳಿಸಿರುವ ನಾಲ್ಕು ಜಿಲ್ಲೆಗಳ ವ್ಯಾಪ್ತಿಯ ಹೊರಗೆ ಇದ್ದುದರಿಂದ ಈ ಯೋಜನೆಯ ಉಪಯೋಗವನ್ನು ಎಲ್ಲಾ ಬುಡಕಟ್ಟು ಜನರಿಗೆ ದೊರೆಯುವಂತೆ ಮಾಡಲು ಸದರಿ ಯೋಜನೆಯನ್ನು ೧೯೯೪-೯೫ ರಿಂದ ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ.[೩]

ಕೇಂದ್ರ ಸರ್ಕಾರವು ಪ್ರತಿವರ್ಷ ರಾಜ್ಯದಲ್ಲಿರುವ ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿ ಒಟ್ಟಾರೆ ಅನುದಾನವನ್ನು ನೀಡುತ್ತಿದೆ. ೮ನೇ ಮತ್ತು ೯ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆ ಕಾರ್ಯಕ್ರಮಗಳಿಗಾಗಿ ಮಂಜೂರು ಮಾಡಿರುವ ಅನುದಾನದ ವಿವರಗಳನ್ನು ಈ ಕೆಳಗಿನ ಕೋಷ್ಠಕದಲ್ಲಿ ವಿವರಿಸಲಾಗಿದೆ.

ಕೋಷ್ಠಕ ೫.೬

೮ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕರ್ನಾಟಕದಲ್ಲಿ ಗಿರಿಜನ ಉಪಯೋಜನೆಗಾಗಿ ಖರ್ಚು ಮಾಡಿರುವ ಅನುದಾನದ ವಿವರ (ಕೋಟಿಗಳಲ್ಲಿ)

ವರ್ಷ	ರಾಜ್ಯ	ಗಿ.ಉ.ಯೋ.	ಗಿ.ಉ.ಯೋ ಅನುದಾನ	ಖರ್ಚು ಅನುದಾನ
೧೯೯೨-೯೩	೧೮೦೦	೧೮.೦೦	೧.೦೦	೧೩೪೯.೨೧
೧೯೯೩-೯೪	೩೦೨೫	೩೯.೯೪	೧.೩೨	೩೧೯೭.೩೨
೧೯೯೪-೯೫	೩೨೭೫	೪೭.೮೫	೧.೪೬	೪೫೭೬.೨೧
೧೯೯೫-೯೬	೩೫೭೫	೯೭.೬೮	೧.೮೯	೫೬೪೨.೪೫
೧೯೯೬-೯೭	೩೭೦೦	೭೯.೮೧	೨.೧೬	೧೦೮೨.೮೮
ಒಟ್ಟು	೧೫೩೭೫	೫೦.೬೬	೧.೫೬	

(ಕೃಪೆ : ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಾಲ್ಕನೇ ವರದಿ ೧೯೯೬-೯೭, ೧೯೯೭-೯೮. ಕರ್ನಾಟಕ)

ಈ ಮೇಲಿನ ಕೋಷ್ಠಕವನ್ನು ಅವಲೋಕಿಸಿದಾಗ ರಾಜ್ಯ ಯೋಜನೆಯ ಅನುದಾನದಿಂದ ಶೇ.೨ ಕ್ಕಿಂತ ಕಡಿಮೆ ಅನುದಾನವನ್ನು ಗಿರಿಜನ ಉಪ ಯೋಜನೆಗೆ ಉಪಯೊಗಿಸಿರುವುದು ಕಂಡು ಬಂದಿದೆ. ಇದನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ ಗಂಭೀರವಾಗಿ ಪರಿಗಣಿಸಿದೆ.

ಈ ರೀತಿಯಾಗಿ ಗಿರಿಜನ ಉಪ ಯೋಜನೆ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದ ಅನುದಾನವನ್ನು ರಾಜ್ಯ ಸರ್ಕಾರ ಜಿಲ್ಲೆಗಳಲ್ಲಿರುವ ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿ, ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿ ಬಿಡುಗಡೆ ಮಾಡುತ್ತದೆ.

ಆ ಪ್ರಕಾರ ಪ್ರತಿಯೊಂದು ಜಿಲ್ಲೆಗೆ ಬಿಡುಗಡೆಯಾಗಿರುವಂತಹ ಕೇಂದ್ರದ ಅನುದಾನವನ್ನು ಪ್ರತಿಯೊಂದು ತಾಲ್ಲೂಕಿನಲ್ಲಿರುವ ಬುಡಕಟ್ಟು ಜನಸಂಖ್ಯೆಯ ಆಧಾರದ ಮೇಲೆ ಮರು ಹಂಚಿಕೆಯಾಗುತ್ತದೆ.

ಈ ರೀತಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಪ್ರತಿ ತಾಲ್ಲೂಕಿನಲ್ಲಿರುವ ಬುಡಕಟ್ಟು ಜನರಿಗೆ ಉಪಯುಕ್ತವಾಗುವ, ಅವರ ಅಭಿವೃದ್ಧಿಗೆ ನೆರವಾಗುವ ಹಾಗೂ ನಿರಂತರ ಆದಾಯ ತರುವಂತಹ ಯೊಜನೆಗಳನ್ನು ರೂಪಿಸಿಕೊಂಡು, ಅನುಷ್ಠಾನಗೊಳಿಸಲು, ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್‌ಗಳಿಗೆ ನಿರ್ದೇಶನ ನೀಡುತ್ತದೆ. ಇದು ಒಂದು ಹಂತದ ಪ್ರಕ್ರಿಯೆಯಾಗಿರುತ್ತದೆ.

ಗಿರಿಜನ ಉಪ ಯೋಜನೆಯಲ್ಲಿ ಪ್ರತಿಯೊಂದು ತಾಲ್ಲೂಕಿಗೆ ನಿಗದಿಪಡಿಸಿರುವ ಆರ್ಥಿಕ ಗುರಿ ಅಥವಾ ಅನುದಾನಕ್ಕೆ ಅನುಗುಣವಾಗಿ ಬುಡಕಟ್ಟು ಜನರಿಗೆ ಉಪಯೋಗವಾಗುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಆಯಾ ತಾಲೂಕು ಪಂಚಾಯತ್ ಕಾರ್ಯಕ್ರಮವನ್ನು ರೂಪಿಸಿ, ಅದಕ್ಕೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆಯನ್ನು ತಯಾರಿಸುತ್ತದೆ. ಸದರಿ ಕ್ರಿಯಾಯೋಜನೆಯನ್ನು ತಾಲ್ಲೂಕು ಪಂಚಾಯತ್‌ನ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡು, ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುವುದು ಎರಡನೇ ಪ್ರಕ್ರಿಯೆಯಾಗಿದೆ.

ಪ್ರತಿಯೊಂದು ತಾಲ್ಲುಕಿನಲ್ಲಿ ಗಿರಿಜನ ಉಪ ಯೋಜನೆಯನ್ನು ಅನುಷ್ಠಾನಗೋಳಿಸಲು ಶೇ. ೫೦ ಕಿಂತ ಹೆಚ್ಚು ಬುಡಕಟ್ಟಿನವರು ಹೊಂದಿರುವ ೭ ರಿಂದ ೧೦ ಗ್ರಾಮಗಳನ್ನು ತಾಲ್ಲೂಕು ಪಂಚಾಯ್ತಿ ಆಯ್ಕೆ ಮಾಡುತ್ತದೆ. ಕೆಲವು ಸಾರಿ ೧೨ ಗ್ರಾಮಗಳನ್ನು ಆಯ್ಕೆ ಮಾಡಿರುವುದುಂಟು. ಈ ರೀತಿ ಆಯ್ಕೆಯಾದ ಗ್ರಾಮಗಳಿಗೆ ಗೊಂಚಲು (Cluster of Villages) ಗ್ರಾಮ ಅಥವಾ ಗುಂಪು ಗ್ರಾಮಗಳೆಂದು ಕರೆಯುತ್ತಾರೆ.

ಈ ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಿ, ಸದರಿ ಗ್ರಾಮ ಸಭೆಯಲ್ಲಿ ಎಲ್ಲಾ ಇಲಾಖೆಯ ಅನುಷ್ಠಾನ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು ಜನ ಪ್ರತಿನಿಧಿಗಳು, ಜನ ಸಾಮಾನ್ಯರು ಸಭೆ ಸೇರಿರುತ್ತಾರೆ. ಈ ಸಭೆಯಲ್ಲಿ ಅನುಷ್ಠಾನ ಅಧಿಕಾರಿಗಳು ಅವರವರ ಇಲಾಖೆಯ ಕಾರ್ಯಕ್ರಮಗಳನ್ನು ಜನರಿಗೆ ಪರಿಚಯಿಸಿ, ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ವಿವರಿಸಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ. ಹೀಗೆ ಆಯ್ಕೆಯಾಗುವ ಫಲಾನುಭವಿಯು ಬುಡಕಟ್ಟು ಸಮೂಹಕ್ಕೆ ಸೇರಿದವರಾಗಿರಬೇಕು. ಬಡತನ ರೇಖೆಯ ಕೆಳಗೆ ಇರಬೇಕು. ಸರ್ಕಾರದ ಯಾವುದೇ ಯೋಜನೆಗಳನ್ನು ತೆಗೆದುಕೊಳ್ಳದೇ ಹಾಗೂ ಸುಸ್ತಿದಾರರಾಗಿರಬಾರದು. ಈ ಮೇಲಿನ ಅರ್ಹತೆಗಳನ್ನು ಹೊಂದಿರಬೇಕು. ಈ ರೀತಿ ಅನುಷ್ಠಾನ ಅಧಿಕಾರಿಗಳು ಅವರ ಗುರಿಗೆ ತಕ್ಕಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಆಯ್ಕೆಯಾದ ಫಲಾನುಭವಿಗಳಿಂದ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳು ಅರ್ಜಿಪಡೆದು ಅವರಿಗೆ ಘಟಕದ ಶೇ. ೭೫ ರಷ್ಟು ಸಹಾಯಧನ ಅಥವಾ ಗರಿಷ್ಠ ರೂ. ೧೦,೦೦೦.೦೦ ಹಾಗೂ ಶೇ. ೨೫ ರಷ್ಟು ಬ್ಯಾಂಕ್ ಅಥವಾ

ಇತರೆ ಹಣಕಾಸಿನ ಸಂಸ್ಥೆಗಳ ಮೂಲಕ ಸಾಲಪಡೆದು ಸ್ವತ್ತುಗಳನ್ನು ನೀಡಿ ನಿರಂತರ ಆದಾಯ ಬರುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅನುವು ಮಾಡಿಕೊಡಲಾಗುತ್ತದೆ. ಇದು ಅನುಷ್ಠಾನಾಧಿಕಾರಿಯ ಆದ್ಯ ಕರ್ತವ್ಯವಾಗಿದೆ.

ನಂತರ ಈ ಯೋಜನೆಯ ನೋಡಲ್ ಅಧಿಕಾರಿಗಳಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಗಿರಿಜನ ಕಲ್ಯಾಣ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತ್ ಮತ್ತು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಕಾಲ ಕಾಲಕ್ಕೆ ಆ ಗ್ರಾಮಕ್ಕೆ ಭೇಟಿಕೊಟ್ಟು ಪಡೆದಿರುವ ಸ್ವತ್ತಿನ ಕಾರ್ಯದ ಬಗ್ಗೆ ಪರಿಶೀಲಿಸಿ, ಮೌಲ್ಯ ಮಾಪನ ಮಾಡಲು ಪ್ರಯತ್ನಿಸುತ್ತಾರೆ. ಈ ರೀತಿಯಲ್ಲಿ ಗಿರಿಜನ ಉಪ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು, ಇದರ ಮೇಲಿನ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ದಿನಾಂಕ : ೦೭.೦೧.೧೯೭೭ ರಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಸಹ ಪ್ರಾರಂಭಿಸಲಾಗಿದೆ. ಈ ಸಂಬಂಧ ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆಯನ್ನು ೧೯೮೬-೮೭ರಲ್ಲಿ ಪ್ರಾರಂಭಿಸಲಾಯಿತು. ರಾಜ್ಯದ ಕೆಲವೊಂದು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಪಂಗಡಗಳ ಸಂಘ ಸಂಸ್ಥೆಗಳ ಒತ್ತಾಯ ಮತ್ತು ಬೇಡಿಕೆಯನ್ನು ಪರಿಗಣಿಸಿ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯದಲ್ಲಿರುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವರ್ಗದ ಜನಸಂಖ್ಯೆಯ ಸಮಗ್ರ ಅಭಿವೃದ್ಧಿ ಮತ್ತು ಹಿತರಕ್ಷಣೆಗೆ ಕೆಲಸ ಮಾಡಲು, ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗದ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರವು ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳು ಆಯೋಗವನ್ನು ರಚಿಸಲಾಗಿದೆ. ಇದನ್ನು ಸರ್ಕಾರಿ ಆದೇಶ ಸಂಖ್ಯೆ : ಎಸ್.ಡಬ್ಲ್ಯೂ.ಡಿ.: ೫೮ : ಎಸ್‌ಎಸ್‌ಎನ್ ೨೦೦೧, ದಿನಾಂಕ ೧೦.೧೦.೨೦೦೨ ರ ಅಡಿಯಲ್ಲಿ ರಚಿಸಲಾಗಿದೆ. ಈ ಆಯೋಗವು ಅಧಿಕೃತವಾಗಿ ದಿನಾಂಕ ೧೦.೪.೨೦೦೩ ರಿಂದ ನಂ.೧೪ : ೩ ಸಿ.ಎಫ್.ಸಿ ಕಟ್ಟಡ, ೨ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಆಯೋಗದ ಪ್ರಕಾರ್ಯಗಳು

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಾಯ್ದೆ ೨೦೦೨ರ ಪ್ರಕಾರ ಆಯೋಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

ಎ. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಮತ್ತು ಇತರೆ ಸಂರಕ್ಷಣೆಗಾಗಿ ಭಾರತ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಸರ್ಕಾರದ ಯಾವುದೇ ಆದೇಶದ ಅಡಿಯಲ್ಲಿ ಉಪಬಂಧಿಸಲಾದ ವಿವಿಧ ರಕ್ಷಾಕ್ರಮಗಳ ಕಾರ್ಯ ಕ್ಷಮತೆಯನ್ನು ಪರಿಶೋಧಿಸುವುದು ಮತ್ತು ಪರೀಕ್ಷಿಸುವುದು.

ಬಿ. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿರುವವರನ್ನು ಅವರ ಹಕ್ಕುಗಳಿಂದ ಮತ್ತು ಸಂರಕ್ಷಣೆಯಿಂದ ವಂಚಿತಗೊಳಿಸಿರುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು ಮತ್ತು ಅಂತಹ ವಿಷಯದ ಬಗ್ಗೆ ಸೂಕ್ತ ಪ್ರಾಧಿಕಾರಗಳನ್ನು ಸಂಪರ್ಕಿಸುವುದು.

ಸಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಸಲಹೆಗಳನ್ನು ನೀಡುವುದು. ರಾಜ್ಯದಲ್ಲಿ ಅವರ ಅಭಿವೃದ್ಧಿಯಲ್ಲಾದ ಪ್ರಗತಿಯ ಮೌಲ್ಯ ನಿರ್ಣಯ ಮಾಡುವುದು.

ಡಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ರಕ್ಷಾ ಕ್ರಮಗಳನ್ನು ಮತ್ತು ಇತರೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಬಹುದು ಮತ್ತು ವಾರ್ಷಿಕವಾಗಿ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಇತರೆ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಇ. ನಿಯಮಿಸಬಹುದಾದಂತ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಅಭಿವೃದ್ಧಿ ಮತ್ತು ಪ್ರಗತಿಗೆ ಸಂಬಂಧಪಟ್ಟಂತೆ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.[೪] ಈ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ವಿಷಯದ ಬಗ್ಗೆ ಭಾರತ ಸಂವಿಧಾನದ ೩೩೮ನೇ ಅನುಚ್ಛೇದದ ಅಡಿಯಲ್ಲಿ ಸ್ಥಾಪಿಸಲಾದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗವು ವ್ಯವಹರಿಸುತ್ತಿದ್ದರೆ, ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ರಾಜ್ಯ ಆಯೋಗವು ಅಂತಹ ವಿಷಯದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

ಆಯೋಗದಿಂದ ಪಡೆಯಬಹುದಾದ ನೆರವು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಯಾವುದೇ ರೀತಿಯಲ್ಲಿ ತೊಂದರೆಗೆ ಒಳಗಾದಲ್ಲಿ ಅಂದರ ಭೂ ವಿವಾದ, ಒತ್ತುವರಿ, ಸರ್ಕಾರಿ ಅಥವಾ ನಿಗಮ, ಮಂಡಳಿಗಳಲ್ಲಿ, ನಗರಪಾಲಿಕೆ, ಮತ್ತು ಪುರಸಭೆಗಳಲ್ಲಿ ನೇಮಕಾತಿ ಹಾಗೂ ಬಡ್ತಿಯಲ್ಲಿ ಮಿಸಲಾತಿ ಉಲ್ಲಂಘನೆ, ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ಪ್ರಕೃತಿ ವಿಕೋಪಕ್ಕೆ ತೊಂದರೆಗೊಳಗಾದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ಮಾಡಿ ಅಥವಾ ಲಿಖಿತ ಮೂಲಕ ಮನವಿ ಸಲ್ಲಿಸಬಹುದಾಗಿದೆ. ಇಂತಹ ಪ್ರಕರಣಗಳ ಬಗ್ಗೆ ಆಯೋಗವು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುವುದು. ಇದಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ನೀಡುವ ಸೌಲಭ್ಯದಲ್ಲಿ ಯಾವುದೇ ರೀತಿಯ ದುರ್ಬಳಕೆ ಅಥವಾ ನಿಗದಿತ ಶೇ.೧೮ ರ ಮೀಸಲಾತಿ ಹಣವನ್ನು ಖರ್ಚು ಮಾಡದಿದ್ದಲ್ಲಿ ಆಯೋಗದ ಗಮನಕ್ಕೆ ತರಬಹುದಾಗಿದೆ.

ಗ್ರಾಮೀಣ ಭಾಗದಲ್ಲಿ ಬಡತನ ನಿವಾರಣೆ ಆಗಬೇಕಾದರೆ ಜನರಿಗೆ ನಿರಂತರ ಆದಾಯ ತರುವಂತಹ ಉದ್ಯೋಗ ದೊರಕಬೇಕು. ಉದ್ಯೋಗ ದೊರಕಬೇಕಾದರೆ, ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಈ ದೆಸೆಯಲ್ಲಿ ಗ್ರಾಮೀಣ ಮತ್ತು ಸಣ್ಣ ಉದ್ಯಮ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಮೂಲಕ ಹಲವಾರು ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಗಿರಿಜನ ಉಪಯೋಜನೆಯಡಿ ಗ್ರಾಮೀಣ ಭಾಗದ ಬುಡಕಟ್ಟು ಸ್ತ್ರೀ-ಪುರುಷರಿಗೆ ಸ್ವಯಂ ಉದ್ಯೋಗಾವಕಾಶ ಕಲ್ಪಿಸಿಕೊಡುವುದು. ಅಂದರೆ ಉದ್ಯೋಗ ಕೈಗೊಳ್ಳಲು ಮುಂದೆ ಬರುವವರಿಗೆ ಅವರು ಸ್ಥಾಪಿಸುವ ಚಿಕ್ಕ ಕೈಗಾರಿಕಾ ಘಟಕಗಳಿಗೆ ಯೋಜನಾ

ವೆಚ್ಚದ ಶೇ.೭೫ ರಷ್ಟು ಸಹಾಯಧನ ನೀಡುವುದು.

ಗೃಹ ಕೈಗಾರಿಕೆಗಳೆಂದರೆ, ಬಡಗಿತನ, ಕಮ್ಮಾರಿಕೆ, ಚರ್ಮಗಾರಿಕೆ, ಹಗ್ಗ ಹೆಣೆಯುವುದು ಮುಂತಾದ ಉತ್ಪಾದನಾ ಚಟುವಟಿಕೆಗಳಲ್ಲದೆ, ಹಿಟ್ಟಿನ ಗಿರಿಣಿ, ಖಾರ ಕುಟ್ಟುವುದು, ಸೈಕಲ್ ರಿಪೇರಿ, ಆಟೋಮೊಬೈಲ್, ಕಿರಾಣಿ ಅಂಗಡಿ, ಹೋಟಲ್, ವ್ಯಾಪಾರ ಮುಂತಾದ ಸೇವಾ ಘಟಕಗಳು, ಈ ಎಲ್ಲಾ ವೃತ್ತಿ ಸ್ಥಾಪಿಸಲು ಅನುವು ಮಾಡಿ ಕೊಡಲಾಗಿದೆ. ಈ ಯೋಜನೆಯಡಿಯಲ್ಲಿ ಆಯ್ಕೆಯಾಗುವ ಫಲಾನುಭವಿಗಳಿಗೆ ಬ್ಯಾಂಕ್, ಹಣಕಾಸು ಸಂಸ್ಥೆಯಿಂದ ಸಾಲ ಪಡೆದಲ್ಲಿ ಘಟಕದ ವೆಚ್ಚದ ಮೇಲೆ ಶೇ.೭೫ ಸಹಾಯಧನ, ಈ ಸಹಾಯಧನದ ಗರಿಷ್ಠ ಮೊತ್ತ. ರೂ.೧೦,೦೦೦ ಆಗಿರುತ್ತದೆ. ಈ ಯೋಜನೆಯ ಅಡಿ ಸಹಾಯಧನವನ್ನು ಫಲಾನುಭವಿಯು ಸಾಲ ಪಡೆದ ಬ್ಯಾಂಕ್ ಅಥವ ಹಣಕಾಸು ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡಿ ಪ್ರೋತ್ಸಾಹಿಸಲಾಗುವುದು. ಹೀಗೆ ಸಹಾಯಧನ ನೀಡುವುದರಿಂದ ಬುಡಕಟ್ಟು ಜನರಿಗೆ ಸಾಲ ಪಡೆಯಲು ಅನುಕೂಲವಾಗುವುದಲ್ಲದೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯವರು ಸಾಲ ನೀಡಲು ಮುಂದೆ ಬಂದು ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳ ಸ್ಥಾಪನೆಗೆ ನೆರವಾಗುವುದು.

ಗಿರಿಜನ ಉಪ ಯೋಜನೆ ಅಡಿಯಲ್ಲಿ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯಿಂದ ಸಾಲ ಪಡೆದು, ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಅಭಿವೃದ್ಧಿ ಇಲಾಖೆ ಮೂಲಕ ಸಹಾಯಧನ ಪಡೆದು, ಸ್ವಯಂ ಉದ್ಯೋಗ ಹೊಂದಿದ ಬುಡಕಟ್ಟು ಫಲಾನುಭವಿಗಳು ತಮ್ಮ ಜೀವನವನ್ನು ಆರ್ಥಿಕವಾಗಿ ಸಬಲಗೊಳಿಸಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಬುಡಕಟ್ಟುಗಳನ್ನು ಗುರ್ತಿಸಿ ಅವರನ್ನು ಮೇಲಕ್ಕೆ ತರಲು ಗಿರಿಜನ ಉಪ ಯೋಜನೆಯಡಿಯಲ್ಲಿ ಹಲವಾರು ಆರ್ಥಿಕ ಚಟುವಟಿಕೆಗಳನ್ನು ಜಾರಿಗೆ ತರಲಾಗಿದೆ.ಇದರ ಜೊತೆಯಲ್ಲಿ ಶೈಕ್ಷಣಿಕ, ಸಾಮಾಜಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕುಡಿಯುವ ನೀರಿನ ಪೂರೈಕೆ, ವಸತಿ, ಸಂಪರ್ಕ ರಸ್ತೆ ಇತ್ಯಾದಿ ಮೂಲಭೂತ ಸೌಕರ್ಯಗಳಿಗೆ ಈ ಯೋಜನೆಯಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ಗಿರಿಜನ ಉಪಯೋಜನೆ ಅಡಿಯಲ್ಲಿ ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗಾಗಿ, ಈ ಆರ್ಥಿಕ ಚಟುವಟಿಕೆಗಳನ್ನು ಅಭಿವೃದ್ಧಿ ಇಲಾಖೆಗಳಾದ ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯ, ಗ್ರಾಮೀಣ ಅಭಿವೃದ್ಧಿ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇತ್ಯಾದಿ ಇಲಾಖೆಗಳ ಮೂಲಕ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಫಲಾನುಭವಿಗಳಿಗೆ ಆದಾಯ ತರುವಂತಹ ಆರ್ಥಿಕ ಚಟುವಟಿಕೆಗಳನ್ನು ನಡೆಸಲು, ಸಹಾಯಧನ ನೀಡುವುದರ ಜೊತೆಗೆ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆಗಳ ಮೂಲಕ ಸಾಲಗಳನ್ನು ಕೊಡಿಸಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಯತ್ನಿಸಲಾಗಿದೆ. ಹಾಗೂ ಮೇಲೆ ತಿಳಿಸಿರುವ ವಿವಿಧ ಅಭಿವೃದ್ಧಿ ಇಲಾಖೆಗಳು ಗಿರಿಜನ ಉಪ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಒದಗಿಸಿರುವ ಸೌಲಭ್ಯಗಳ ವಿವರ ಹೀಗಿದೆ.

೦೧. ಕೃಷಿ ಇಲಾಖೆ

ಬುಡಕಟ್ಟು ರೈತರಿಗೆ ಅವರ ಭೂಮಿಯಲ್ಲಿ ಕೃಷಿ ಅಭಿವೃದ್ಧಿಗಾಗಿ, ಕೃಷಿ ಇಲಾಖೆಯಿಂದ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

೧. ಕೃಷಿ ಪರಿಕರಗಳು (ಶೇ. ೧೦೦ ರ ಸಹಾಯಧನದಲ್ಲಿ ರೂ.೨೮೦೦ ಪ್ರತಿ ಹೆಕ್ಟೇರಗೆ)

೨. ಧಾನ್ಯ ಸಂಗ್ರಹಣ ಕಣಜಗಳು (ಶೇ. ೭೫ರ ಸಹಾಯಧನ, ರೂ.೧೦೦೦ ಗರಿಷ್ಠ ಮಿತಿಯಲ್ಲಿ)

೩. ಆಧುನಿಕ ಕೃಷಿ ಉಪಕರಣಗಳು (ಶೇ. ೭೫ರ ಸಹಾಯಧನ ರೂ. ೫೦,೦೦೦ ಮಿತಿಯಲ್ಲಿ)

೪. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು (ಶೇ. ೭೫ರ ಸಹಾಯಧನ ರೂ. ೧,೦೦೦ ಮಿತಿಯಲ್ಲಿ)

೫. ಡಿಸೆಲ್ ಅಥವಾ ಸೀಮೆಎಣ್ಣೆ, ಪಂಪ್‌ಸೆಟ್‌ಗಳು (ಶೇ. ೭೫ರ ಸಹಾಯಧನ ರೂ. ೧೦,೦೦೦ ಮಿತಿಯಲ್ಲಿ)

೬. ಪವರ್ ಟಿಲ್ಲರ್‌ಗಳು (ಶೇ. ೭೫ರ ಸಹಾಯಧನ ರೂ. ೫೦,೦೦೦ ಮಿತಿಯಲ್ಲಿ)

೭. ಜಲಂತಗಾರ್ಮಿ ಪಂಪಸೆಟ್‌ಗಳು (ಶೇ. ೭೫ರ ಸಹಾಯಧನ ರೂ. ೨೫,೦೦೦ ಮಿತಿಯಲ್ಲಿ)

೮. ಎತ್ತಿನ ಗಾಡಿಗಾಗಿ (ಶೇ. ೭೫ರ ಸಹಾಯಧನ ರೂ. ೧೧,೭೫೦ ಮಿತಿಯಲ್ಲಿ)

ಇವುಗಳಲ್ಲದೆ ನೀರಾವರಿ ಸೌಲಭ್ಯಕ್ಕಾಗಿ ತುಂತುರು ನೀರಾವರಿ ಘಟಕಗಳು ಹನಿ ನೀರಾವರಿ ಘಟಕಗಳನ್ನು ಒದಗಿಸಲಾಗುತ್ತಿದೆ.

೧೯೯೯-೨೦೦೦, ೨೦೦೦-೦೧ರ ಈ ಎರಡು ವರ್ಷಗಳ ಮಾಹಿತಿಯನ್ನು ಸಂಗ್ರಹಿಸಿ ನೋಡಲಾಗಿ ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಭೂಮಿ ಹೊಂದಿರುವ ಗಿರಿಜನರಿಗೆ ಕೃಷಿ ಇಲಾಖೆಯ ಮೂಲಕ ೧೫೭ (೯೯+೫೮) ಫಲಾನುಭವಿಗಳಿಗೆ ಕೈ ಚಾಲಿತ ಸಿಂಪರಣಾ ಯಂತ್ರ, ದ್ವಿದಳ ಧಾನ್ಯಗಳನ್ನು ಸಂಗ್ರಹಣೆ ಮಾಡಲು ಕಣಜ ನಿರ್ಮಾಣ, ನೀಲವಾರ್ ರಾಶಿ ಯಂತ್ರಗಳು, ಕಾಳು ಒಕ್ಕುವ ಯಂತ್ರಗಳು, ಪವರ್ ಟಿಲ್ಲರ್ ಇತ್ಯಾದಿ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಡಿ.ಎ.ಪಿ. ಯೂರಿಯ ಮುಂತಾದ ಗೊಬ್ಬರಗಳನ್ನು ಹಾಗೂ ಕೀಟನಾಶಕಗಳನ್ನು ಪೂರೈಸಲಾಗಿದೆ. ಇದರ ಜೊತೆಗೆ ಸೂರ್ಯಕಾಂತಿ ಬೀಜಗಳನ್ನು ವಿತರಣೆ ಮಾಡಲಾಗಿದೆ.

ವ್ಯವಸಾಯ ಜಮೀನನ್ನು ಹೊಂದಿದ್ದು ಎತ್ತುಗಳು ಇಲ್ಲದ ಬುಡಕಟ್ಟು ಸಮುದಾಯದವರಿಗೆ ಕೃಷಿ ಬೇಸಾಯ ಮಾಡಲು ಎತ್ತುಗಳನ್ನು ನೀಡುವ ಯೋಜನೆ ಇರುತ್ತದೆ. ಈ ಯೋಜನೆಯಲ್ಲಿ ಶೇ.೭೫ ಭಾಗ ಸಹಾಯಧನ ಮತ್ತು ಶೇ.೨೫ ಭಾಗ ಸಾಲ ನೀಡಲಾಗುತ್ತಿದೆ. ಈ ಯೋಜನೆಯನ್ನು ನಬಾರ್ಡ್ ನಿಗದಿ ಪಡಿಸಿರುವ ಘಟಕದ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆಯಾದ ಗೊಂಚಲು ಗ್ರಾಮಗಳಲ್ಲಿ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡುತ್ತಾರೆ.

೦೨. ಪಶುಸಂಗೋಪನೆ ಇಲಾಖೆ

ಹೈನುಗಾರಿಕೆಯಲ್ಲಿ ಆಸಕ್ತಿಹೊಂದಿರುವ ಬುಡಕಟ್ಟು ಸಮುದಾಯದ ಫಲಾನುಭವಿಗಳಿಗೆ ಪಶುಸಂಗೋಪನಾ ಇಲಾಖಾ ವತಿಯಿಂದ, ಹಾಲು ಕರಿಯುವ ಹಸು, ಎಮ್ಮೆ ಘಟಕ, ಕುರಿ ಘಟಕ, ಹಂದಿ ಘಟಕಗಳನ್ನು ಶೇ. ೭೫ ರ ಸಹಾಯ ಧನ ಮತ್ತು ಶೇ. ೨೫ ರ ಸಾಲದ ನೆರವಿನಿಂದ ವಿತರಿಸಲಾಗುತ್ತಿದೆ.

೧. ಹಸು ಘಟಕದ ವೆಚ್ಚ ರೂ. ೧೭,೨೦೦ ರೂ. ಸಹಾಯಧನ ರೂ. ೧೨,೯೦೦

೨. ಎಮ್ಮೆ ಘಟಕದ ವೆಚ್ಚ ರೂ. ೧೨,೨೦೦.೦೦ ರೂ. ಸಹಾಯಧನ ರೂ. ೯,೧೫೦.೦೦

೩. ಕುರಿ ಘಟಕದ ವೆಚ್ಚ ರೂ. ೧೧,೨೦೦.೦೦ ರೂ. ಸಹಾಯಧನ ರೂ. ೮,೪೦೦.೦೦

೪. ಹಂದಿ ಘಟಕದ ವೆಚ್ಚ ರೂ. ೭,೩೪೫.೦೦ ಸಹಾಯಧನ ರೂ. ೫,೫೦೮.೦೦

ಈ ಘಟಕದ ವೆಚ್ಚಗಳು ಕಾಲ ಕಾಲಕ್ಕೆ ಬದಲಾಗುತ್ತಿದ್ದು ನಬಾರ್ಡ ದರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟಾರೆ ಯಾವುದೇ ಒಬ್ಬ ಫಲಾನುಭವಿಗೆ ರೂ.೧೦,೦೦೦ ಕ್ಕಿಂತ ಹೆಚ್ಚಿನ ಸಹಾಯಧನ ದೊರೆಯುವುದಿಲ್ಲ.* ಘಟಕದ ವೆಚ್ಚದಲ್ಲಿ ಹೆಚ್ಚಾಗಿ ಸಹಾಯಧನ ರೂ. ೧೦,೦೦೦ಗಳನ್ನು ಮೀರಿದ್ದಲ್ಲಿ ಅದನ್ನು ಫಲಾನುಭವಿಯು ಭರಿಸಬೇಕಾಗುತ್ತದೆ.

೧೯೯೯-೨೦೦೦ನೇ ಸಾಲಿನಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಪಶುಸಂಗೋಪನೆಯಲ್ಲಿ ಆಸಕ್ತಿ ಇರುವ ಗಿರಿಜನ ಫಲಾನುಭವಿಗಳಿಗೆ ಪಶುಸಂಗೋಪನೆ ಇಲಾಖೆಯ ಮೂಲಕ ೪೦ ಫಲಾನುಭವಿಗಳಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಒದಗಿಸಲಾಗಿದೆ. ೧೨ ಜನಕ್ಕೆ ಕುರಿಗಳನ್ನು ಒದಗಿಸಿದ್ದು, ಉಳಿದ ೨೮ ಎಮ್ಮೆಗಳನ್ನು ಒದಗಿಸಲಾಗಿದ್ದು, ಒಟ್ಟು ೪೦ ಫಲಾನುಭವಿಗಳಿಗೆ ಸೌಲತ್ತುಗಳನ್ನು ಒದಗಿಸಿಕೊಡಲಾಗಿದೆ.

೨೦೦೦-೦೧ ನೇ ಸಾಲಿನಲ್ಲಿ ೪ ಜನ ಫಲಾನುಭವಿಗಳಿಗೆ ಕುರಿ ಸೌಲಭ್ಯವನ್ನು ಒದಗಿಸಿದ್ದು, ೧೯ ಜನ ಫಲಾನುಭವಿಗಳಿಗೆ ಎಮ್ಮೆಗಳನ್ನು ಒದಗಿಸಿದ್ದು, ಒಟ್ಟು ೨೩ ಜನರಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಇದಲ್ಲದೆ ಹಸು ಮತ್ತು ಹಂದಿಗಳನ್ನು ಸಾಕಾಣಿಕೆ ಮಾಡಲು ಸಹಾಯಧನವನ್ನು ವಿತರಿಸಲಾಗುತ್ತಿದೆ.

೦೩. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಇರುವ ಬುಡಕಟ್ಟು ನಿರುದ್ಯೋಗಿ ಯುವಕ-ಯುವತಿಯರಿಗೆ ಈ ಇಲಾಖಾವತಿಯಿಂದ ಜೇನು ಕೃಷಿ, ಬಡಗಿತನ, ಬಿದಿರು, ಬೆತ್ತದ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ತರಬೇತಿಯ ನಂತರ ತರಬೇತಿಯ ಕಾಲದಲ್ಲಿ ಶಿಷ್ಯವೇತವನ್ನು ನೀಡುವುದರ ಜೊತೆಗೆ ರೂ.೨೮೦೦ ಬೆಲೆ ಬಾಳುವ ವಿದ್ಯುತ್ ರಿಪೇರಿ ಮಾಡುವ ಸಾಧನ ಸಲಕರಣೆಗಳು, ಕಲ್ಲು ಒಡೆಯುವ ಉಪಕರಣಗಳು, ಸೈಕಲ್ ರಿಪೇರಿ, ಹೊಲಿಗೆ ಯಂತ್ರ, ಗಾರೆ ಕೆಲಸದ ಉಪಕರಣಗಳು, ಕಮ್ಮಾರಿಕೆ ಇನ್ನಿತರೆ ಉಪಕರಣಗಳನ್ನು ಉಚಿತವಾಗಿ ನೀಡಿ ಸ್ವತಂತ್ರವಾಗಿ ವೃತ್ತಿ ಕೈಗೊಳ್ಳಲು ನೆರವು ನೀಡಲಾಗುತ್ತಿದೆ. ಗಿರಿಜನರಿಗೆ ಗುಡಿಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್-ಕಮ್-ವರ್ಕ್ ಶೆಡ್‌ಗಳನ್ನು ನಿರ್ಮಿಸಲು ಇಲಾಖಾವತಿಯಿಂದ ರೂ.೨೫,೦೦೦ ಗಳ ಸಹಾಯಧನ ನೀಡಲಾಗುತ್ತಿದೆ. ೨೦೦೦-೦೧ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ೨೩೧ ಫಲಾನುಭವಿಗಳಿಗೆ ಉಪಕರಣಗಳನ್ನು ನೀಡಲಾಗಿದೆ.

೦೪. ರೇಷ್ಮೆ ಇಲಾಖೆ

ರೇಷ್ಮೆ ಕೃಷಿಯು ಲಾಭದಾಯಕ ಆರ್ಥಿಕ ಚಟುವಟಿಕೆಯಾಗಿರುವುದರಿಂದ ಈ ವೃತ್ತಿಯನ್ನು ಅವಲಂಬಿಸಿರುವ ಗಿರಿಜನ ಫಲಾನುಭವಿಗಳಿಗೆ ವಿವಿಧ ಸೌಲತ್ತುಗಳನ್ನು ನೀಡಲಾಗುತ್ತಿದೆ.

೧. ಹಿಪ್ಪುನೇರಳೆ ಬೇಸಾಯಕ್ಕೆ ೨೦೦೦.೦೦ಗಳ ವರೆಗೂ ಸಹಾಯಧನ.

೨. ನೀರಾವರಿ ಬಾವಿಗಳ ನಿರ್ಮಾಣಕ್ಕೆ ಆರ್ಥಿಕ ಸಹಾಯ.

೩. ರೇರಿಂಗ್ ಹೌಸ್‌ಗಳ ನಿರ್ಮಾಣ ಮಾಡುವುದಕ್ಕೆ ಸಹಾಯಧನ.

೪. ಚಂದ್ರಿಕೆ ಮತ್ತು ಐ.ಪಿ. ಸೆಟ್ಟುಗಳ ಸರಬರಾಜು ಇತ್ಯಾದಿಗಳನ್ನು ವಿತರಿಸುವುದು. ಈ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ೧೯೯೯-೦೦ ಸಾಲಿನಲ್ಲಿ ೩೦ ಗಿರಿಜನ ಫಲಾನುಭವಿಗಳಿಗೆ ಹಾಗೂ ೨೦೦೦-೦೧ ನೇ ಸಾಲಿನಲ್ಲಿ

೪೧ ಫಲಾನುಭವಿಗಳಿಗೆ ಮೇಲ್ಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

೦೫. ಸಮಾಜ ಕಲ್ಯಾಣ ಇಲಾಖೆ (ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ)

ಈ ಇಲಾಖೆ ಮೂಲಕ ಅರ್ಹ ಬುಡಕಟ್ಟು ಫಲಾನುಭವಿಗಳಿಗೆ ನಿರಂತರ ಆದಾಯ ತರುವಂತಹ ವೃತ್ತಿಗಳಾದ ಕಿರಾಣಿ ವ್ಯಾಪಾರ, ಬಟ್ಟೆ ವ್ಯಾಪಾರ, ತರಕಾರಿ ಅಂಗಡಿ, ಕೋಳಿ ಅಂಗಡಿ, ಹೋಟಲ್, ಖಾರಕುಟ್ಟುವ ಯಂತ್ರ, ಇಟ್ಟಿಗೆ ಭಟ್ಟಿ, ಬಡಗಿತನ, ಸೈಕಲ್ ಶಾಪ್, ಸೆಂಟ್ರಿಂಗ್ ವರ್ಕ್ಸ್, ಧಾನ್ಯ ಒಕ್ಕುವ ಯಂತ್ರ, ಹೈನುಗಾರಿಕೆ, ಮೈಕ್‌ಸೆಟ್, ಎಸ್.ಟಿ.ಡಿ. ಬೂತ್, ಹೊಲಿಗೆಯಂತ್ರ, ಹಿಟ್ಟಿನ ಗಿರಣಿ ಇತ್ಯಾದಿಗಳನ್ನು ಸಹಾಯ ಧನ ಮತ್ತು ಸಾಲದ ವತಿಯಿಂದ ಸ್ವತ್ತುಗಳನ್ನು ನೀಡಲಾಗಿದೆ. ಈ ಇಲಾಖಾ ವತಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ ೧೯೯೯-೦೦ ನೇ ಸಾಲಿನಲ್ಲಿ ೬೬ ಫಲಾನುಭವಿಗಳಿಗೆ ೨೦೦೦-೦೧ ನೇ ಸಾಲಿನಲ್ಲಿ ೨೩ ಬುಡಕಟ್ಟು ಫಲಾನುಭವಿಗಳಿಗೆ ಸ್ವತ್ತುಗಳನ್ನು ಒದಗಿಸಿ ನಿರಂತರ ಆದಾಯಕ್ಕೆ ಅನುವು ಮಾಡಿಕೊಡಲಾಗಿದೆ.

೦೬. ಮೀನುಗಾರಿಕೆ ಇಲಾಖೆ

ಗಿರಿಜನ ಮೀನುಗಾರರಿಗೆ ಸ್ವಾವಲಂಬನ ಜೀವನವನ್ನು ಸಾಗಿಸಲು ಸಹಾಯವಾಗುವಂತೆ ಮೀನುಗಾರಿಕೆಯಲ್ಲಿ ತರಬೇತಿಯನ್ನು ನೀಡುವುದರ ಜೊತೆಗೆ ರೂ ೩೦೦೦ಗಳ ವೆಚ್ಚದಲ್ಲಿ ಮೀನುಗಾರಿಕೆಗೆ ಬೇಕಾಗುವ ಬಲೆ, ಹರಿಗೋಲು ಮತ್ತಿತರ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಇದಲ್ಲದೆ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಬೇಕಾಗುವ ಸಹಾಯಧನ, ಕೊಳದಲ್ಲಿ ಮೀನುಮರಿ ಸಾಕಾಣಿಕೆಗೆ ಸಹಾಯಧನ, ಮೀನುಗಾರ ಮಹಿಳೆಯರಿಗೆ ಆರ್ಥಿಕ ನೆರವು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಈ ಯೋಜನೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿರುವುದಿಲ್ಲ. ಕಾರಣ ಅಧಿಕಾರಿಗಳ ನಿರ್ಲಕ್ಷತೆಯಿಂದ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ.

೦೭. ಅರಣ್ಯ ಇಲಾಖೆ

ಅರಣ್ಯ ಇಲಾಖೆಯಿಂದ ಗಿರಿಜನ ಫಲಾನುಭವಿಗಳಿಗೆ ಭದ್ರತಾ ನೆಡುತೋಪು ನಿರ್ವಹಣೆಗಾಗಿ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಅರ್ಧ ಹೆಕ್ಟೇರ್ ನೆಡುತೋಪು ನಿರ್ವಹಣೆಗೆ ರೂ.೨೫೦೦.೦೦ ಗಳನ್ನು ನೆರವು ನೀಡಲಾಗುತ್ತಿದೆ. ಗಿರಿಜನ ಕರಕುಶಲ ಕಸುಬುದಾರರಿಗೆ ಬುಟ್ಟಿ ಹೆಣೆಯಲು ಮತ್ತು ಇತರೆ ಬಿದಿರಿನ ಕೆಲಸ ಮಾಡಲು ಬೇಕಾಗುವ ಬೆತ್ತ ಮತ್ತು ಬಿದಿರುಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಪ್ರತಿ ಫಲಾನುಭವಿಗಳಿಗೆ ೫೦೦ ಬಿದಿರು, ೫೦೦ ಬೆತ್ತಗಳನ್ನು ನೀಡಲಾಗುತ್ತಿದೆ. ಮನೆಗಳ ನಿರ್ಮಾಣಕ್ಕೆ ಬೇಕಾಗುವ ತೊಲೆ, ಕಿಟಕಿ ಬಾಗಿಲುಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಅವುಗಳ ಗರಿಷ್ಠ ಸಹಾಯಧನ ರೂ. ೧೦,೦೦೦.೦೦ ಒಳಪಟ್ಟಿರುತ್ತದೆ. ಜೇನುಕೃಷಿ ಕೈಗೊಳ್ಳುವಂತಹ ಬುಡಕಟ್ಟು ಫಲಾನುಭವಿಗಳಿಗೆ ರೂ.೩೫೦ರ ದರದಲ್ಲಿ ೫ ಜೇನು ಪೆಟ್ಟಿಗೆಗಳನ್ನು ಉಚಿತವಾಗಿ ನೀಡಿ ಜೇನು ಕೃಷಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಇದರ ಜೊತೆಗೆ ಸುಧಾರಿತ ಒಲೆಗಳನ್ನು (Chullas) ಮತ್ತು ಮನೆಗಳ ನಿರ್ಮಾಣಕ್ಕಾಗಿ ಮರಗಳ ವಿತರಣೆ ಯೋಜನೆಯು ಇನ್ನೂ ಮುಂದುವರೆಯುತ್ತಿದೆ.[೬]

ಕರ್ನಾಟಕ ರಾಜ್ಯದಲ್ಲಿ ೫ ರಾಷ್ಟ್ರೀಯ ಉದ್ಯಾನ ವನಗಳು ಮತ್ತು ೨೧ ಅಭಯ ಅರಣ್ಯಗಳು (Wild life Sanctuaries) ಇರುತ್ತದೆ. ಈ ಯೋಜನೆಗಳಿಂದ ಬಹುಸಂಖ್ಯಾತ ಬುಡಕಟ್ಟು ಜನರನ್ನು ಸ್ಥಳಾಂತರಗೊಳಿಸಲಾಗಿದೆ. ಇವರಿಗಾಗಿ ವಸತಿಗಳನ್ನು ನಿರ್ಮಿಸಿ, ಕಾಲೋನಿಗಳಲ್ಲಿ ವಾಸಿಸಲು ಪ್ರಯತ್ನಗಳು ನಡೆಯುತ್ತಿದೆ. ಅಲ್ಲಿಯ ಬುಡಕಟ್ಟು

ಜನರಲ್ಲಿ ಬಹುಸಂಖ್ಯಾತರು ತಮ್ಮ ಸಾಂಪ್ರದಾಯಿಕ ಕಸಬಾದ ಬುಟ್ಟಿ ಹೆಣೆಯುವುದನ್ನು ಮುಂದುವರೆಸಿದ್ದಾರೆ. ಇವರಲ್ಲಿ ಕೆಲವರಿಗೆ ಸರ್ಕಾರ ಭೂಮಿಯನ್ನು ಹಂಚಿದೆ. ಅವರಿಗೆ ಕೃಷಿ ಮತ್ತು ತೋಟಗಾರಿಕೆಯಲ್ಲಿ ತರಬೇತಿ ಅತ್ಯಾವಶ್ಯಕವಾಗಿ ಬೇಕಾಗಿದೆ. ಇದರ ಜೊತೆಗೆ ಇತರೆ ಕರಕುಶಲಗಳಲ್ಲಿಯೂ ತರಬೇತಿ ನೀಡಬೇಕಾಗಿದೆ.

ಈ ಮೇಲಿನ ಯೋಜನೆಗಳಿಂದ ಸ್ಥಳಾಂತರಗೊಂಡ ಬುಡಕಟ್ಟು ಜನರಿಗೆ ಕರ್ನಾಟಕ ಸರ್ಕಾರ, ಪುನರ್‌ವಸತಿ ನೀತಿಯನ್ನು ಅತ್ಯವಶ್ಯಕವಾಗಿ ಜಾರಿಗೆ ತರಬೇಕಾಗಿದೆ. ಈ ವಿಷಯವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ೧೬೦೦ ಬುಡಕಟ್ಟು ಕೃಷಿ ಕಾಲೋನಿಗಳಿದ್ದರಿಂದ ರೇಷ್ಮೆಬೆಳೆ ಲಾಭದಾಯಕವಾಗಿದ್ದರಿಂದ ಈ ಕಾಲೋನಿಗಳಲ್ಲಿ ರೇಷ್ಮೇ ಬೆಳೆಯಲು, ಹಿಪ್ಪನೇರಳೆ ಬೇಸಾಯ, ಹುಳಸಾಕಾಣಿಕೆ ಕೇಂದ್ರ, ನೀರಾವರಿ ಸೌಲಭ್ಯಗಳನ್ನು ಒದಗಿಸಲಾಯಿತು. ಇದರ ಜೊತೆಗೆ ಕೂಡು ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ ಕೇಂದ್ರಗಳು ಇತ್ಯಾದಿಗಳನ್ನು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಯಿತು.

೦೮. ಗ್ರಾಮೀಣ ಆರೋಗ್ಯ

ಗ್ರಾಮೀಣ ಪ್ರದೇಶದ ಮತ್ತು ಕಾಡಿನ ಮಧ್ಯದಲ್ಲಿ ವಾಸಿಸುವ ಬುಡಕಟ್ಟಿನವರಿಗೆ ಆರೋಗ್ಯ ಕಾರ್ಯಕ್ರಮಗಳನ್ನು, ಈ ಯೋಜನೆಯ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಬುಡಕಟ್ಟಿನವರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ನೀಡುವುದರ ಜೊತೆಗೆ ಆರೋಗ್ಯದ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ಬುಡಕಟ್ಟಿನ ಜನರು ವಾಸವಾಗಿರುವ ಪ್ರದೇಶಗಳಿಗೆ ಹೋಗಿ ಚಿಕಿತ್ಸೆ ನೀಡಲು ಸಂಚಾರಿ ಆರೋಗ್ಯ ಘಟಕಗಳನ್ನು ತೆರೆಯಲಾಗಿದೆ. ಈ ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳು ಸಹ ಕೇಂದ್ರ ಸರ್ಕಾರದ ಅನುದಾನದ ಸಹಾಯದಿಂದ ಸಂಚಾರಿ ಆರೋಗ್ಯ ಘಟಕಗಳನ್ನು ತೆರೆದು ಬುಡಕಟ್ಟು ಜನರಿಗೆ ಸೇವೆಯನ್ನು ಸಲ್ಲಿಸುತ್ತಿವೆ. ಈ ರೀತಿಯ ಘಟಕ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇದೇ ಉದ್ದೇಶಕ್ಕಾಗಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನಲ್ಲೂ ಸರ್ಕಾರದ ಅನುದಾನದಿಂದ ಸಂಚಾರಿ ಆರೋಗ್ಯ ಘಟಕವನ್ನು ತೆರೆಯಲಾಗಿದೆ.

೦೯. ಗ್ರಾಮೀಣ ನೀರು ಸರಬರಾಜು

ಈ ಯೋಜನೆ ಅಡಿಯಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿಗೆ ಇರುವ ಸ್ಥಳಗಳಲ್ಲಿ ನೂರ ಐವತ್ತು ಜನಸಂಖ್ಯೆಗೆ ಒಂದು ಕೊಳವೆ ಭಾವಿಯನ್ನು ಕೊರೆಯಿಸಿ ನೀರಿನ ಸೌಕರ್ಯವನ್ನು ಒದಗಿಸುವ ಯೋಜನೆಯಿದ್ದು ಇದರಿಂದ ಬುಡಕಟ್ಟು ಜನರಿಗೆ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

೧೦. ತೋಟಗಾರಿಕೆ ಇಲಾಖೆ

ಗ್ರಾಮೀಣ ಪ್ರದೇಶದ ಬುಡಕಟ್ಟು ಕುಟುಂಬದ ಆದಾಯವನ್ನು ಹೆಚ್ಚಿಸುವ ಸಲುವಾಗಿ ಅರ್ಧ ಎಕರೆ ತೆಂಗಿನ ತೋಟ, ಒಂದು ಎಕರೆ ಹಣ್ಣಿನ ತೋಟ, ಅರ್ಧ ಎಕರೆ ವಾಣಿಜ್ಯ ಬೆಳೆಯ ತೋಟ ಅಥವಾ ಕಾಲು ಎಕರೆ ಗುಲಾಬಿ ತೋಟವನ್ನು ನಿರ್ಮಾಣ ಮಾಡಿಕೊಡಲಾಗುತ್ತಿದೆ. ಪ್ರತಿ ವರ್ಷಕ್ಕೆ ರೂ.೨೧೬೫ ರಿಂದ ೨೭೦೦ ರವರೆಗೆ ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಹಳೆಯ ತೋಟಗಳನ್ನು ಎರಡು ವರ್ಷಗಳವರೆಗೆ ತೋಟಗಾರಿಕೆ ಇಲಾಖೆಯು ಪಾಲನೆಮಾಡಬೇಕಾಗಿದೆ. ತೋಟದ ಪಾಲನೆಗೆ ಮೊದಲನೇ ವರ್ಷದಲ್ಲಿ ರೂ. ೬೫೦.೦೦ ಮತ್ತು ಎರಡನೇ ವರ್ಷದಲ್ಲಿ

ರೂ.೩೫೦.೦೦ ಗಳನ್ನು ನೀಡಲಾಗುತ್ತಿದೆ. ತೋಟಗಾರಿಕೆಯಲ್ಲಿ ಐದು ದಿನಗಳ ತರಬೇತಿಗಾಗಿ ಒಬ್ಬರಿಗೆ ರೂ.೨೫೦.೦೦ ರಂತೆ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಪ್ರತಿ ಬುಡಕಟ್ಟು ಮನೆಗೆ ಎರಡು ತೆಂಗಿನ ಸಸಿಗಳನ್ನು ಉಚಿತವಾಗಿ ಪೂರೈಸಲಾಗುವುದು. ತುಂತುರು ನೀರಾವರಿ ಸೌಲಭ್ಯಕ್ಕಾಗಿ ಶೇ. ೯೦ ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ೧೯೯೯-೨೦೦೦, ೨೦೦೦-೦೧ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಕ್ರಮವಾಗಿ ೧೨೦+೯೬ ಒಟ್ಟು ೨೧೬ ಫಲಾನುಭವಿಗಳಿಗೆ ಸೌಲತ್ತುಗಳನ್ನು ನೀಡಲಾಗಿದೆ.

೧೦. ಪೌಷ್ಟಿಕಾಂಶಗಳ ನೀಡಿಕೆ

ಗ್ರಾಮಾಂತರ ಪ್ರದೇಶದಲ್ಲಿರುವ, ಬುಡಕಟ್ಟು ಸಮುದಾಯಗಳು ವಾಸಿಸುವ ಹತ್ತಿರದಲ್ಲಿಯೇ ಅಂಗನವಾಡಿ ಕೇಂದ್ರಗಳನ್ನು ತೆರೆದು, ಬುಡಕಟ್ಟು ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಈ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಅಕ್ಷರ ಅಭ್ಯಾಸದ ಜೊತೆಗೆ ಅವರ ದೈಹಿಕ ಬೆಳವಣಿಗೆಗಾಗಿ ಬೇಕಾಗುವ ವಿಶೇಷ ಪೌಷ್ಟಿಕ ಆಹಾರವನ್ನು (ಎಸ್.ಎನ್.ಎಫ್.) ನೀಡಲಾಗುತ್ತಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಐ.ಟಿ.ಡಿ.ಪಿ.ಪ್ರದೇಶಗಳಲ್ಲಿ ಗಿರಿಜನ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

೧೧. ಭೂ ಸಾರ ಮತ್ತು ಜಲ ಸಂರಕ್ಷಣೆ

ಬುಡಕಟ್ಟು ಸಮುದಾಯದ ಹೊಲಗಳಲ್ಲಿ ನೀರು ಸಂಗ್ರಹಣೆಯನ್ನು ಮಾಡಲು ನೀರು ತಡೆಯ ವಿನ್ಯಾಸಗಳನ್ನು ರಚಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವಂತೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

೧೨. ಉದ್ಯೋಗ ಮತ್ತು ತರಬೇತಿ ಇಲಾಖೆ

ಈ ಇಲಾಖಾವತಿಯಿಂದ ಬುಡಕಟ್ಟಿನವರಿಗೆ ಬಡಗಿತನ, ಟೈಲರಿಂಗ್, ಇತರೆ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.೫೦೦.೦೦ ರಂತೆ ಒಂದು ವರ್ಷಗಳ ಕಾಲ ಶಿಷ್ಯವೇತನವನ್ನು ನೀಡುವುದರ ಜೊತೆಗೆ ರೂ. ೧೦೦.೦೦ ರಂತೆ ಪ್ರೋತ್ಸಾಹ ಹಣವನ್ನು ಪ್ರತಿ ಅಭ್ಯರ್ಥಿಯ ಪೋಷಕರಿಗೆ ನೀಡಲಾಗುತ್ತಿದೆ. ತರಬೇತಿಯಲ್ಲಿ ಯಶಸ್ವಿಯಾದ ಅಭ್ಯರ್ಥಿಗೆ ಟೂಲ್ ಕಿಟ್, ಹೊಲಿಗೆ ಯಂತ್ರ ಮತ್ತು ಕಚ್ಚಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

೧೩. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಈ ಇಲಾಖಾ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೧. ಗ್ರಾಮೀಣ ಪ್ರದೇಶದ ಬುಡಕಟ್ಟು ಪಂಗಡದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿವೇತನ.

೨. ಕಷ್ಟದಲ್ಲಿರುವ ಬುಡಕಟ್ಟು ಮಹಿಳೆಯರಿಗೆ ಸಹಾಯಧನ ನೀಡುವುದು.

೩. ಬಾಲಕಾರ್ಮಿಕರ ಪುನರ್‌ವಸತಿಗೆ ಸಹಾಯಧನ.

೪. ವಿಧವೆಯರಿಗೆ ಆರ್ಥಿಕ ಸೌಲಭ್ಯನೀಡಲು 'ನವಜೀವನ' ಕಾರ್ಯಕ್ರಮದಡಿಯಲ್ಲಿ ಸಹಾಯಧನ.

೫. ಜಾಗೃತಿ ಕಾರ್ಯಕ್ರಮದಡಿಯಲ್ಲಿ ಬುಡಕಟ್ಟು ವರ್ಗದ ಬಾಲಕಿಯರಿಗೆ ಸಹಾಯಧನವನ್ನು ಒದಗಿಸುವುದು.

೧೪. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ

ಈ ನಿಗಮದ ವತಿಯಿಂದ ಬುಡಕಟ್ಟು ವರ್ಗದ ಕಾಲೋನಿಗಳಿಗೆ ವಿದ್ಯುದೀಕರಣಗೊಳಿಸಲು ಕಾಲೋನಿಯೊಂದಕ್ಕೆ ಸುಮಾರು ರೂ.೪೦,೦೦೦ ವೆಚ್ಚದಲ್ಲಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಬುಡಕಟ್ಟು ಪಂಗಡದವರ ನೀರಾವರಿ ಪಂಪಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು. ಭಾಗ್ಯಜ್ಯೋತಿ ಯೋಜನೆ ಅಡಿ ಬುಡಕಟ್ಟು ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

೧೫. ವಸತಿ ಇಲಾಖೆ

ವಸತಿ ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಬುಡಕಟ್ಟು ಪಂಗಡದವರಿಗೆ ಗುರಿಯನ್ನು ನಿಗದಿಪಡಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಅಡಿಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಬುಡಕಟ್ಟು ಪಂಗಡದವರಿಗೆ ಆಶ್ರಯ ನಿವೇಶನ ವಿತರಣೆ. ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆಗಳನ್ನು ವಿತರಿಸಲಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಆಶ್ರಯ ವಸತಿ ಯೋಜನೆಯಡಿ ನಿರ್ಮಾಣವಾಗುವ ಮನೆಗಳಿಗೆ ಸಹಾಯಧನ ನೀಡುವುದು. ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ತಲಾ ರೂ. ೫೦೦೦.೦೦ ವೆಚ್ಚದಲ್ಲಿ ಹುಲ್ಲಿನ ಚಾವಣಿಯನ್ನು ಬದಲಾಯಿಸಿ ಹಂಚಿನ ಚಾವಣಿಯನ್ನು ಒದಗಿಸಲಾಗುತ್ತಿದೆ. ಆಶ್ರಯ ವಸತಿ ಯೋಜನೆಯ ಅಡಿಯಲ್ಲಿ ೯೪೯ ಮತ್ತು ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ೬೫೯೧ ಮನೆಗಳನ್ನು ಕಳೆದ ೧೦ ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಬುಡಕಟ್ಟಿನವರಿಗೆ ಒದಗಿಸಲಾಗಿದೆ.

೧೬. ಡಾ.ಅಂಬೇಡ್ಕರ್ ವಸತಿ ಯೋಜನೆ

ಈ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪಂಗಡದವರಿಗೆ ಘಟಕದ ವೆಚ್ಚ ರೂ. ೨೦,೦೦೦ ಗಳಂತೆ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದರಲ್ಲಿ ರೂ. ೧೯,೦೦೦ ಗಳನ್ನು ಗಿರಿಜನ ಕಲ್ಯಾಣ ಇಲಾಖೆಯು ಸಹಾಯಧನವನ್ನಾಗಿ ನೀಡುತ್ತಿದೆ. ಉಳಿದ ರೂ.೧೦೦೦ ಗಳನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಯು ನೀಡುತ್ತಿದೆ. ಈ ಯೋಜನೆಯು ೧೯೯೭-೯೮ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಈ ಯೋಜನೆಯ ಅಡಿಯಲ್ಲಿ ಕಳೆದ ೧೦ ವರ್ಷಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ೧೫೮೭ ಮನೆಗಳನ್ನು ಬುಡಕಟ್ಟಿನವರಿಗೆ ಒದಗಿಸಲಾಗಿದೆ. ಅವುಗಳ ಪೂರ್ಣ ವಿವರವನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ ೫.೭

ಬಳ್ಳಾರಿ ಜಿಲ್ಲೆಯಲ್ಲಿ ವಸತಿ ಯೋಜನೆಯಡಿ ೧೯೯೩-೯೪ ರಿಂದ ೨೦೦೩-೦೪ ರವರೆಗೆ ಬುಡಕಟ್ಟು ಜನರಿಗೆ ನೀಡಿರುವ ವಸತಿಗಳ ವಿವರ

ಕ್ರ.ಸಂ	ವರ್ಷ	ಯೋಜನೆ	ಗುರಿ	ಸಾಧನೆ
೧.	೧೯೯೩-೯೪	ಇಂ. ಆ.ಯೋ	೧೪೦	೧೪೦
೨.	೧೯೯೪-೯೫	ಇಂ. ಆ.ಯೋ	೧೫೨	೧೫೨
೩.	೧೯೯೫-೯೬	ಆಶ್ರಯ	೧೨೭	೧೨೭
		ಇಂ. ಆ.ಯೋ	೨೪೪	೨೪೪
೪.	೧೯೯೬-೯೭	ಆಶ್ರಯ	೮೨	೮೨
		ಇಂ. ಆ.ಯೋ	೫೫೨	೫೫೨
೫.	೧೯೯೭-೯೮	ಆಶ್ರಯ	೮೪	೮೪
		ಅಂಬೇಡ್ಕರ್	೨೩೦	೨೩೦
		ಇಂ. ಆ.ಯೋ	೧೭೬	೧೭೬
೬.	೧೯೯೮-೯೯	ಆಶ್ರಯ	೩೫	೩೫
		ಇಂ. ಆ.ಯೋ	೨೧೭	೨೧೭
		ಆಶ್ರಯ (ಅಧಿಕ)	೫೬	೫೬
೭.	೧೯೯೯-೦೦	ಅಂಬೇಡ್ಕರ್	೩೩೩	೩೩೩
		ಇಂ. ಆ. ಯೋ	೪೬೦	೪೬೦
೮.	೨೦೦೦-೦೧	ಆಶ್ರಯ	೧೪೬ .	೧೪೬
		ಅಂಬೇಡ್ಕರ್	೩೨೨	೩೨೨
		ಇಂ. ಆ.ಯೋ	೫೩೭	೫೩೭
೯.	೨೦೦೧-೦೨	ಆಶ್ರಯ	೧೦೫	೧೦೫
		ಅಂಬೇಡ್ಕರ್	೩೫೧	೩೩೨
		ಇಂ. ಆ. ಯೋ	೬೫೫	೬೫೫
೧೦.	೨೦೦೨-೦೩	ಆಶ್ರಯ	೩೪೪	೩೪೪
		ಅಂಬೇಡ್ಕರ್	೩೫೧	೩೫೧
೧೧	೨೦೦೩-೦೪	ಇಂ. ಆ.ಯೋ	೨೫೮	೨೫೮

ಕೃಪೆ : ಬಳ್ಳಾರಿ ಜಿಲ್ಲಾ ಪಂಚಾಯತ್ ವರದಿ ೨೦೦೪.

೧೭. ಬುಡಕಟ್ಟು ಅಥವಾ ಗಿರಿಜನರಿಗೆ ಗುಂಪು ಮನೆಗಳ ನಿರ್ಮಾಣ (ಐ.ಟಿ.ಡಿ.ಪಿ.)

೧೯೯೭-೯೮ನೇ ಸಾಲಿನಿಂದ ಈ ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಈ ಮನೆಗಳ ನಿರ್ಮಾಣ ಕಾರ್ಯವನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಉಸ್ತುವಾರಿಯಲ್ಲಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯನ್ನು ಬುಡಕಟ್ಟು ಪಂಗಡದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಹಾಗು ವಸತಿ ಇಲ್ಲದ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಅಡಿಯಲ್ಲಿ ಇದುವರೆವಿಗೂ ಬಳ್ಳಾರಿ ಜಿಲ್ಲೆಯಲ್ಲಿ ೧೯೯೯-೦೦ ರಲ್ಲಿ ೭೫ ಮನೆಗಳನ್ನು ೨೦೦೦-೦೧ರಲ್ಲಿ ೨೦

ಮನೆಗಳನ್ನು ೯೫ ಮನೆಗಳು ನಿರ್ಮಿಸಿರುವುದು ತುಂಬಾ ಕಡಿಮೆಯಾಗಿದ್ದು, ಇದರ ಬಗ್ಗೆ ಹೆಚ್ಚಿನ ಒತ್ತು ಕೊಟ್ಟು ವಸತಿ ಹೀನರಿಗೆ ವಸತಿ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಹಾಗೂ ಬಳ್ಳಾರಿ ಜಿಲ್ಲೆಯ ವಸತಿ ರಹಿತ ಮತ್ತು ನಿವೇಶನ ರಹಿತ ಬುಡಕಟ್ಟುಗಳ ವಿವರಗಳನ್ನು ಅನುಬಂಧ ೫.೧ ವಿವರಸಲಾಗಿದೆ.

೧೮. ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬುಡಕಟ್ಟು ಪಂಗಡದ ಅಭಿವೃದ್ಧಿಗೆ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

೧. ಬುಡಕಟ್ಟಿನವರ ಜಾನಪದ ಕಲೆಗಳನ್ನು ಪ್ರೋತ್ಸಾಹಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

೨. ಬುಡಕಟ್ಟಿನವರ ಸಂಸ್ಥೆಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಸಹಾಯಧನವನ್ನು ನೀಡಲಾಗುತ್ತಿದೆ.

೩. ಸಂಗೀತ ಪರಿಕರಗಳು, ರಂಗ ಪರಿಕರಗಳನ್ನು ಖರೀದಿಸಲು ಸಹಾಯಧನವನ್ನು ನೀಡಲಾಗುತ್ತಿದೆ.

೪. ಕಲಾಮೇಳಗಳನ್ನು ಏರ್ಪಡಿಸಲು ಬುಡಕಟ್ಟು ವರ್ಗದ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

೫. ಬುಡಕಟ್ಟು ಜನಾಂಗದ ಸಾಹಿತಿಗಳು ಬರೆದಿರುವ ಪುಸ್ತಕ ಮತ್ತು ಮಹಾಪ್ರಬಂಧಗಳ ಗಳ ಪ್ರಕಟಣೆಗೆ ಸಹಾಯಧನ ನೀಡಲಾಗುತ್ತಿದೆ.

೧೯. ಸಾರ್ವಜನಿಕ ಶಿಕ್ಷಣ ಇಲಾಖೆ

ಈ ಇಲಾಖೆಯ ವತಿಯಿಂದ ಬುಡಕಟ್ಟು ಪಂಗಡದ ವಿದ್ಯಾರ್ಥಿಗಳಿಗೆ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಅವರ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

೧. ವಿದ್ಯಾವಿಕಾಸ ಕಾರ್ಯಕ್ರಮದಡಿ ೧ ರಿಂದ ೭ ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು ಒದಗಿಸಲಾಗುತ್ತಿದೆ.

೨. ೧ ರಿಂದ ೭ ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿನಿಯರಿಗೆ ಉಚಿತವಾಗಿ ಶಾಲಾ ಬ್ಯಾಗ್ (ಚೀಲ) ಗಳನ್ನು ವಿತರಿಸಲಾಗುತ್ತಿದೆ.

೩. ಹೆಚ್ಚುವರಿ ಶಾಲಾ ಕೊಠಡಿಗಳನ್ನು ನಿರ್ಮಿಸುವ ಕಾರ್ಯಕ್ರಮಗಳನ್ನು ಸಹ ರೂಪಿಸಿಕೊಂಡು, ಈ ಯೋಜನೆಯ ಅಡಿಯಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

೨೦. ಕಾಲೇಜು ಶಿಕ್ಷಣ ಇಲಾಖೆ

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಹಾಗೂ ಮತ್ತಿತರ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ. ಗಿರಿಜನ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.

ಸಲಹೆ : ಈ ಕಾರ್ಯಕ್ರಮಕ್ಕೆ ಸರಿಯಾದ ರೀತಿಯ ಪ್ರಚಾರವಿಲ್ಲದೆ ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಿಲ್ಲ. ಈ ಯೋಜನೆಯನ್ನು ಏಕ ರೂಪದಲ್ಲಿ ಎಲ್ಲಾ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಿ ಪ್ರಗತಿಯನ್ನು ಸಾಧಿಸಲು ಕ್ರಮ ಕೈಗೊಳ್ಳಬೇಕಾಗಿದೆ.

೨೧. ತಾಂತ್ರಿಕ ಶಿಕ್ಷಣ ಇಲಾಖೆ

ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಬುಡಕಟ್ಟು ಪಂಗಡಗಳ ವಿದ್ಯಾರ್ಥಿಗಳ ಅಭಿವೃದ್ಧಿಗೆ ಸಹಾಯವಾಗುವಂತೆ ಡ್ರಾಯಿಂಗ್ ಉಪಕರಣಗಳನ್ನು ಪ್ರತಿ ವಿದ್ಯಾರ್ಥಿಗೆ ರೂ. ೧೨೦೦.೦೦ ಗಳಿಗೆ ಮೀರದಂತೆ ಉಚಿತವಾಗಿ ವಿತರಿಸಲಾಗುತ್ತಿದೆ. ಬುಕ್‌ಬ್ಯಾಂಕ್ ಯೋಜನೆಯಡಿಯಲ್ಲಿ ರೂ. ೫೦೦.೦೦ ಗಳಿಗೆ ಮಿತಿಗೊಳಿಸಿ ಬೆಲೆ ಬಾಳುವ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ರೂ. ೫೦೦.೦೦ ಗಳಿಗೆ ಮಿತಿಗೊಳಿಸಿ ಸಮವಸ್ತ್ರಗಳನ್ನು ನೀಡಲಾಗುತ್ತಿದೆ.

೨೨. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಈ ಇಲಾಖೆಯ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಆರ್ಥಿಕ ಸಹಾಯ, ಉದ್ಯೋಗ ಮತ್ತು ಜೀವನ ಮಟ್ಟವನ್ನು ಸುಧಾರಿಸಲು ಈ ಕೆಳಕಂಡ ಕಾರ್ಯಕ್ರಮಗಳ ಅಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

೧. ಸ್ವರ್ಣ ಜಯಂತಿ ಶಹರಿ ರೋಜಾಗಾರ್ ಯೋಜನೆ.

೨. ಇಂದಿರಾ ಆವಾಜ್ ಯೋಜನೆ.

೩. ಉದ್ಯೋಗ ಭರವಸೆ ಯೋಜನೆ.

೪. ಎಸ್.ಜಿ.ಎಸ್.ವೈ.

೫. ಗ್ರಾಮ ಪಂಚಾಯತ್‌ಗಳಿಗೆ ಗ್ರಾಂಟ್ಸ್.

೬. ಅಭಿವೃದ್ಧಿ ಕಾಮಗಾರಿಗಳಿಗೆ ಗ್ರಾಂಟ್ಸ್.

೭. ಸಣ್ಣ ನೀರಾವರಿ.

೮. ರಸ್ತೆ ಮತ್ತು ಸೇತುವೆಗಳು

೯. ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ.

೧೦. ನಾನ್ ಕನ್‌ವೆಶನಲ್ ಸೋರ್ಸ್ ಆಫ್ ಎನರ್‌ಜಿ.

ಈ ಯೋಜನೆಗಳಲ್ಲಿ ಬುಡಕಟ್ಟಿನವರಿಗೆ ಉದ್ಯೋಗಗಳನ್ನು ಒದಗಿಸಿ ಅವರ ಜೀವನಕ್ಕೆ ನಿರಂತರ ಆದಾಯವನ್ನು ದೊರೆಯುವಂತೆ ಮಾಡಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿ ಕಾರ್ಮಿಕರು ಈ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ.[೬]

೨೩. ಕ್ರೀಡೆ ಮತ್ತು ಯುವಜನ ಸೇವಾ ಇಲಾಖೆ

ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆಯ ವತಿಯಿಂದ ಬುಡಕಟ್ಟು ಪಂಗಡದವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೧. ಬುಡಕಟ್ಟು ಯುವಕ-ಯುವತಿಯರಿಗೆ ಕ್ರೀಡಾ ಶಾಲೆಗಳು ಮತ್ತು ವಸತಿ ನಿಲಯಗಳ ನಿರ್ವಹಣೆ.

೨. ಕ್ರೀಡೆಗೆ ಪ್ರೋತ್ಸಾಹ ನೀಡುವುದು.

೨೪. ಸಹಕಾರ ಇಲಾಖೆ (ಲ್ಯಾಂಪ್ ಸಹಕಾರ ಸಂಘಗಳ ಸ್ಥಾಪನೆ)

ಬುಡಕಟ್ಟು ಜನರ ಮೇಲೆ ಬಂಡವಾಳ ಶಾಹಿಗಳು, ಲೇವಾದೇವಿದಾರರು ಮಧ್ಯವರ್ತಿಗಳಿಂದ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸಲು ಈ ಸಹಕಾರ ಸಂಘಗಳ ಬೆಳವಣಿಗೆ ಸಹಕಾರಿಯಾಗಿದೆ. ಬುಡಕಟ್ಟು ಪ್ರದೇಶದಲ್ಲಿ ಸುಮಾರು ೨೫೦೦ ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರ ಸಂಘಗಳು (LAMPS) ಸ್ಥಾಪನೆಯಾಗಿದ್ದು ಇವು ಮೂರು ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತವೆ.

೧. ಉತ್ಪಾದನೆ ಮತ್ತು ಅನುಭೋಗಕ್ಕೆ ಸಾಲವನ್ನು ಒದಗಿಸುವುದು.

೨. ಬುಡಕಟ್ಟಿನವರು ಸಂಗ್ರಹಿಸಿದ ಅಥವಾ ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು.

೩. ಬುಡಕಟ್ಟು ಜನರ ನಿತ್ಯ ಜೀವನಕ್ಕೆ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಹಾಗೂ ಕೃಷಿಗೆ ಬೇಕಾದ ಬೀಜ, ಗೊಬ್ಬರ, ಇತರೆ ಪರಿಕರಗಳನ್ನು ಒದಗಿಸುವುದು ಮುಖ್ಯ ಕಾರ್ಯಗಳಾಗಿತ್ತು. ಕೇರಳ ರಾಜ್ಯದಲ್ಲಿ ಈ ಸಂಘಗಳಿಗೆ ಬದಲಾಗಿ ಗಿರಿಜನ ಸೇವಾ ಸಹಕಾರಿ ಸಂಘಗಳು ಸ್ಥಾಪನೆಯಾಗಿವೆ. ರಾಜ್ಯಗಳಲ್ಲಿರುವ ಲ್ಯಾಂಪ್ಸ್‌ಗಳ ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿದಾಗ ಬುಡಕಟ್ಟು ಅಭಿವೃದ್ಧಿ ಸಹಕಾರ ನಿಗಮಗಳ ಸಮನ್ವಯದ ಕೊರತೆ ಎದ್ದು ಕಾಣುತ್ತಿರುವುದು ವರದಿಯಾಗಿದೆ.

ಈ ಯೋಜನೆಯಡಿಯಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜನಗರ ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ "ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳನ್ನು" **(LAMPS)** ಸ್ಥಾಪಿಸಲಾಗಿದೆ. ಈ ಸಂಘಗಳು ಗಿರಿಜನರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಸೌಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಅರಣ್ಯ ಉತ್ಪನ್ನಗಳನ್ನು ಅವರಿಂದ ಪಡೆದು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಅದರ ಲಾಭವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಇದರಿಂದ ಸ್ಥಳೀಯ ಲೇವಾದೇವಿದಾರರ ಶೋಷಣೆಯಿಂದ ತಪ್ಪಿಸಿದಂತಾಗುತ್ತದೆ.

ಲ್ಯಾಂಪ್ ಸಹಕಾರ ಸಂಘಗಳಿಗೆ ಆರ್ಥಿಕ ಚೈತನ್ಯವನ್ನುತುಂಬಲು ಭಾರತ ಸರ್ಕಾರ ೧೯೮೭ರಲ್ಲಿ ಟ್ರೈಫೆಡ್ (Tribal co-operative marketing developement federation of India) ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಬುಡಕಟ್ಟು ಜನರು ಉತ್ಪಾದಿಸುವ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆಗಳನ್ನು ನೀಡುವುದರ ಜೊತೆಗೆ ಮಾರುಕಟ್ಟೆಯನ್ನು ಒದಗಿಸಿಕೊಡುವುದಾಗಿದೆ. ಬುಡಕಟ್ಟು ಸಮುದಾಯಗಳಿಗೆ ಬೇಕಾಗುವ ಅವಶ್ಯಕ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ಪೂರೈಸುವುದು. ಬುಡಕಟ್ಟು ಜನರನ್ನು ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸುವುದು. ಈ ಸಂಸ್ಥೆಯು ರಾಷ್ಟ್ರ ಮಟ್ಟದ ಸಹಕಾರ ಸಂಘದ ಅಪೆಕ್ಸ್ ಸಂಸ್ಥೆಯಾಗಿದೆ. ಈ ಸಂಸ್ಥೆಯು ಬುಡಕಟ್ಟು ಜನರು ಸ್ಥಾಪಿಸಿಕೊಳ್ಳುವ ಸಹಕಾರ ಸಂಘಗಳಿಗೆ ಸ್ವತ್ತಿನ ನಿಧಿಯನ್ನು ಒದಗಿಸುತ್ತಿದೆ. ಇಂತಹ ಯಾವುದೇ ಲ್ಯಾಂಫ್ಸ್ ಸಹಕಾರ ಸಂಘಗಳು ಬಳ್ಳಾರಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿಲ್ಲ. ಇದಲ್ಲದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದಲೂ ಸಣ್ಣ ಮತ್ತು ದೀರ್ಘಾವಧಿ ಸಾಲಗಳನ್ನು ಕಡಿಮೆ ಬಡ್ಡಿ ದರದಲ್ಲಿ ನೀಡಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.

ಈ ರೀತಿಯ ಸಹಕಾರ ಸಂಘಗಳು ಕರ್ನಾಟಕ ರಾಜ್ಯದಲ್ಲಿ ೧೯ ಸ್ಥಳಗಳಲ್ಲಿದ್ದು ೬೨,೩೩೯ ಬುಡಕಟ್ಟಿನವರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಅವರಿಗೆ ವಿವಿಧ ರೀತಿಯ ಸೌಲತ್ತುಗಳನ್ನು ಒದಗಿಸಲಾಗುತ್ತಿದೆ. ರಾಜ್ಯದಲ್ಲಿರುವ ೧೯ ಲ್ಯಾಂಪ್ಸ್ ಸಹಕಾರ ಸಂಘಗಳ ವಿವರವನ್ನು ಅನುಬಂದ ೫.೨ ರಲ್ಲಿ ನೀಡಲಾಗಿದೆ.

ಸಲಹೆ : ಬಳ್ಳಾರಿ ಜಿಲ್ಲೆಯು ಇಡೀ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಬುಡಕಟ್ಟು ಜನರನ್ನು ಹೊಂದಿರುವ ಜಿಲ್ಲೆಯಾಗಿದ್ದು, ಇಂತಹ ಜಿಲ್ಲೆಯಲ್ಲಿ ಲ್ಯಾಂಪ್ಸ್ ಸಹಕಾರ ಸಂಘಗಳು ಇಲ್ಲದೇ ಇರುವುದು ಆಶ್ಚರ್ಯ ಹಾಗೂ ದುರಾದೃಷ್ಟಕರ. ಈ ದೃಷ್ಟಿಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಗಮನಹರಿಸಿ ಸಹಕಾರ ಸಂಘವನ್ನು ಸ್ಥಾಪನೆ ಮಾಡಲು ಕ್ರಮ ಕೈಗೊಂಡು ಬುಡಕಟ್ಟು ಜನರ ಆರ್ಥಿಕ ಚಟುವಟಿಕೆಗೆ ಸಹಾಯವಾಗಲು ಪ್ರಯತ್ನಿಸಬೇಕಾಗಿದೆ.

೨೫. ರಸ್ತೆ ಮತ್ತು ಸೇತುವೆ

ಬುಡಕಟ್ಟು ಜನರ ಕಾಲೋನಿಗಳಿಗೆ ಈ ಯೋಜನೆಯಡಿ ಸಂಪರ್ಕ ರಸ್ತೆಯನ್ನು ಕಲ್ಪಿಸುವುದು, ಕೂಡು ರಸ್ತೆ, ಹೊಸ ರಸ್ತೆ, ಡಾಂಬರೀಕರಣ ಮಾಡುವುದು ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಪ್ರಗತಿಯು ಮಂದಗತಿಯಲ್ಲಿದ್ದು ಬಹಳಷ್ಟು ಯೋಜನೆಗಳು ಅರ್ಧದಲ್ಲಿಯೇ ಉಳಿದು, ಮುಂದಿನ ವರ್ಷದ ಮುಂದುವರಿದ ಕಾಮಗಾರಿಯಾಗಿ ಪರಿವರ್ತಿಸಿ ಅನುಷ್ಠಾನದಲ್ಲಿ ಬಹಳ ವಿಳಂಬವನ್ನು ಅನುಸರಿಸುತ್ತಿದ್ದಾರೆ. ಈ ಸೌಲಭ್ಯ ಬುಡಕಟ್ಟು ಕಾಲೋನಿಗೆ ನೇರವಾಗಿ ಶೀಘ್ರವಾಗಿ ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ.

೨೬. ಸೀರೆ ಮತ್ತು ದೋತಿ ಯೋಜನೆ (ಹಸಿರು ಕಾರ್ಡ್ ಯೋಜನೆ)

ಗಿರಿಜನ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿದ್ದು, ಈ ರೀತಿಯ ಕಾರ್ಡ್‌ಗಳನ್ನು ಹೊಂದಿರುವ ಬುಡಕಟ್ಟು ಜನರಿಗೆ ಕಡಿಮೆ ದರದಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಸೀರೆ, ಧೋತಿ, ಇತ್ಯಾದಿ ವಸ್ತುಗಳನ್ನು ವಿತರಿಸಲಾಗುತ್ತದೆ.

೨೭. ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯ (Special Central Assistence to tribal sub-plan)

ಈ ಕಾರ್ಯಕ್ರಮದ ಹಿನ್ನೆಲೆ ಮತ್ತು ಉದ್ದೇಶ ಗ್ರಾಮೀಣ ಪ್ರದೇಶದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ವಿಶೇಷ ಕೇಂದ್ರೀಯ ಸಹಾಯವನ್ನು ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ನೀರಾವರಿ ಪಂಪಸೆಟ್, ಸಹಕಾರ, ಸ್ವಯಂ ಉದ್ಯೋಗ ಮತ್ತು ಗ್ರಾಮೀಣ ಮತ್ತು ಸಣ್ಣ ಉದ್ಯಮ ಇಲಾಖೆಯ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ವಿಶೇಷ ಸಹಾಯಧನವನ್ನು ಕೇಂದ್ರ ಸರ್ಕಾರವು ನೀಡಿರುತ್ತದೆ.

ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗೆ ಗಿರಿಜನ ಉಪಯೋಜನೆಗೆ ಹೆಚ್ಚುವರಿಯಾಗಿ ಕೇಂದ್ರ ಸರ್ಕಾರವು ವಿಶೇಷ ಕೇಂದ್ರೀಯ ಸಹಾಯವನ್ನು ಮಂಜೂರು ಮಾಡುತ್ತಿದ್ದು ಈ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

೧. ಪರಿಶಿಷ್ಟ ವರ್ಗದವರ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆಧಾಯ ತರುವಂತಹ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಗ್ರಾಮೀಣ ಸಣ್ಣ ಕೈಗಾರಿಕೆ ಮತ್ತು ಮೀನುಗಾರಿಕೆ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರಾತಿ.

೨. ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವ ಮೂಲಭೂತ ಸೌಲಭ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಧನಸಹಾಯ.

೩. ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ ಯುವತಿಯರಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ಮಾಹಿತಿ ತಂತ್ರ ಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮಗಳ ಅನುಷ್ಠಾನಗೋಳಿಸಲಾಗುತ್ತಿದೆ.

ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು, ಬಡತನ ರೇಖೆಯ ಕೆಳಗೆ ಇರುವ ಕುಟುಂಬಗಳ ಪಟ್ಟಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಸ್ವತ್ತುಗಳನ್ನು ವಿತರಿಸಿ, ಅವುಗಳ ಸಹಾಯದಿಂದ ನಿರಂತರ ಆದಾಯ ಬರುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡು ಬಡತನ ರೇಖೆಯಿಂದ ಮೇಲಕ್ಕೆತ್ತುವುದೇ ಈ ಯೋಜನೆಯ ಉದ್ದೇಶವಾಗಿದೆ.

ಸಲಹೆ : ಈ ಯೋಜನೆಯಲ್ಲಿ ಕಾಲ ಕಾಲಕ್ಕೆ ಸ್ವತ್ತುಗಳ ತಪಾಸಣೆಯ ಜೊತೆಗೆ ಮೌಲ್ಯಮಾಪನವನ್ನು ಮಾಡಿ, ಫಲಾನುಭವಿಗಳಿಗೆ ಬೇಕಾಗುವ ಇತರೆ ಪೂರಕ ಸವಲತ್ತುಗಳನ್ನು ನೀಡುವ ಯೋಜನೆಯನ್ನು ರೂಪಿಸಿಕೊಂಡಾಗ ಮಾತ್ರ ಈ ಯೋಜನೆಯು ತುಂಬಾ ಫಲಪ್ರದವಾಗುತ್ತದೆ.

ಈ ಯೋಜನೆಗಳಲ್ಲದೆ ಬುಡಕಟ್ಟು ಪಂಗಡಗಳ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ೧೯೭೫ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ. ಇದರ ವತಿಯಿಂದಲೂ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ೧೯೯೨-೯೩ ರಿಂದ ೧೯೯೬-೯೭ರವರೆಗೆ ಕರ್ನಾಟಕ ರಾಜ್ಯದಲ್ಲಿ ಗಿರಿಜನ ಉಪ ಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ ಬಿಡುಗಡೆಯಾಗಿರುವ ವಿವರ

ಕೋಷ್ಟಕ ೫.೮

೧೯೯೨-೯೩ ರಿಂದ ೧೯೯೬-೯೭ರವರೆಗೆ ಕರ್ನಾಟಕ ರಾಜ್ಯದಲ್ಲಿ ಗಿರಿಜನ ಉಪ ಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ ಬಿಡುಗಡೆಯಾಗಿರುವ ವಿವರ

ವರ್ಷ	ಬಿಡುಗಡೆ	ಖರ್ಚು
೧೯೯೨-೯೩	೩೨೭.೪೨	೩೨೭.೪೨
೧೯೯೩-೯೪	೪೩೯.೭೬	೪೩೯.೭೬
೧೯೯೪-೯೫	೪೦೯.೦೩	೩೮೧.೪೫
೧೯೯೫-೯೬	೬೫೯.೪೯	೪೧೧.೪೭
೧೯೯೬-೯೭	೫೬೯.೫೦	೩೯೧.೧೮
ಒಟ್ಟು	೨೪೦೫.೭೬	೧೯೫೨.೦೮

ಈ ಕೋಷ್ಟಕದಿಂದ ವ್ಯಕ್ತವಾಗುವುದೇನೆಂದರೆ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಗಿರಿಜನ ಉಪ ಯೋಜನೆ ವಿಶೇಷ ಕೇಂದ್ರಿಯ ಸಹಾಯಧನ ರೂ. ೨೪೦೫.೭೬ ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ ರೂ. ೧೯೫೨.೦೮ ಲಕ್ಷ ಮಾತ್ರ ವಿನಿಯೋಗಿಸಿ ಉಳಿದ ರೂ. ೪೫೩.೬೮ ಲಕ್ಷ ಖರ್ಚಾಗದೇ ಉಳಿದಿದೆ.

ಆನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ, ಶಿಕ್ಷಣ, ವಸತಿ, ಸಣ್ಣ ನೀರಾವರಿ ಕ್ಷೇತ್ರಗಳಿಗೆ ಆದ್ಯತೆ ನೀಡಲು, ಸರ್ಕಾರ ಅನುದಾನವನ್ನು ಇತರೆ ಇಲಾಖೆಗಳಿಂದ ಹಿಂದಕ್ಕೆ ಪಡೆದು ಕ್ರೋಢೀಕರಿಸಿ, ಮೇಲೆ ತಿಳಿಸಿರುವ ಕ್ಷೇತ್ರಗಳಿಗೆ ಖರ್ಚು ಮಾಡುವುದರ ಜೊತೆಗೆ ಬುಡಕಟ್ಟಿನವರಿಗೆ ಪುನರ್ವಸತಿ ಒದಗಿಸಲು ಖರ್ಚು ಮಾಡಲಾಗಿದೆ. ೧೯೯೬-೯೭ ರಲ್ಲಿ ರೂ ೧೭೦೮ ಲಕ್ಷಗಳನ್ನು ಕ್ರೋಢೀಕರಿಸಲಾಗಿತ್ತು.

೨೮. ಪರಿಶಿಷ್ಟ ಜಾತಿ : ಪರಿಶಿಷ್ಠ ವರ್ಗದ ಅಭಿವೃದ್ಧಿ ನಿಗಮದ ವತಿಯಿಂದ ಜಾರಿಯಾಗುತ್ತಿರುವ ಕಾರ್ಯಕ್ರಮಗಳು[೮]

೦೧. ಭೂ ಒಡೆತನ ಯೋಜನೆ

ಬುಡಕಟ್ಟು ಪಂಗಡದವರು ಬಹುಪಾಲು ಕೃಷಿ ಕೂಲಿಗಳಾಗಿದ್ದಾರೆ. ವ್ಯವಸಾಯ ಮಾಡುವ ಆಶೆ ಹಾಗೂ ಅನುಭವ ಇರುವುದರಿಂದ, ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದವರಿಂದ ಭೂಮಿಯನ್ನು ಖರೀದಿಸಿ ಅರ್ಹ ಫಲಾನುಭವಿಗಳಿಗೆ ಹಂಚುವ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನನ್ನು ಒದಗಿಸಲಾಗುತ್ತದೆ. ಇದರ ಘಟಕದ ವೆಚ್ಚ ರೂ. ೬೦,೦೦೦ ಗಳು. ಇದರಲ್ಲಿ ಶೇ. ೫೦ ರಷ್ಟು ಸಹಾಯಧನ, ಉಳಿದ ಶೇ. ೫೦ ರಷ್ಟು ಸಾಲವನ್ನಾಗಿ ನೀಡುತ್ತಿದೆ. ಸಾಲವನ್ನು ೧೦ ವಾರ್ಷಿಕ ಸಮ ಕಂತುಗಳಲ್ಲಿ ಶೇ. ೬ರ ವಾರ್ಷಿಕ ಬಡ್ಡಿಯ ಜೊತೆಗೆ ಮರುಪಾವತಿ ಮಾಡಬೇಕಾಗಿರುತ್ತದೆ. ಈ ಯೋಜನೆಯನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾರಣ ಉತ್ತರ ಕರ್ನಾಟಕದಲ್ಲಿ ಭೂಮಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿದ್ದು, ಭೂ ಮಾಲಿಕರು ಮಾರಲು ಮುಂದೆ ಬರುತ್ತಿದ್ದಾರೆ. ಈ ಯೋಜನೆಯಲ್ಲಿ ಆಯ್ಕೆಯಾಗುವ ಫಲಾನುಭವಿಯು ಬುಡಕಟ್ಟು ಪಂಗಡಕ್ಕೆ ಸೇರಿ ಭೂ ರಹಿತ ಕೃಷಿ ಕೂಲಿಯಾಗಿ ಮಹಿಳಾ ಅಭ್ಯರ್ಥಿಯಾಗಿರಬೇಕು. ಫಲಾನುಭವಿಯು ಸುಸ್ತಿದಾರನಾಗಿರಬಾರದು. ಈ ಯೋಜನೆಗೆ ಒಂದು ಆಯ್ಕೆ ಸಮಿತಿಯಿರುತ್ತದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಈ ಯೋಜನೆ ದುರುಪಯೋಗವಾಗುವುದನ್ನು ತಡೆಗಟ್ಟುವುದಕ್ಕೋಸ್ಕರ ಮಹಿಳಾ ಫಲಾನುಭವಿಯನ್ನು ಆಯ್ಕೆ ಮಾಡುತ್ತಾರೆ.[೯]

ಬಾಧಕಗಳು ಮತ್ತು ಸಲಹೆಗಳು : ಈ ಯೋಜನೆಯಲ್ಲಿ ಭೂಮಿಯನ್ನು ಖರೀದಿಸಿ ಹಂಚುವ ಪ್ರಕ್ರಿಯೆಯನ್ನು ನಡೆಸುತ್ತಿದ್ದಾರೆ. ಇದರಿಂದ ಬೇಸಾಯಕ್ಕೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಅದರ ಬದಲು ಜಮೀನು ಖರೀದಿಸಿ ವಿತರಿಸಿದ ನಂತರ ಇತರೆ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆ, ಇತ್ಯಾದಿ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ಈ ಫಲಾನುಭವಿಗಳಿಗೆ ಒದಗಿಸಿ ಹೆಚ್ಚಿನ ಉತ್ಪನ್ನವನ್ನು ಪಡೆಯಲು ಅನುಕೂಲ ಮಾಡಿಕೊಡಬೇಕು. ಹಾಗೂ ಅಂತಹ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕು.

೦೨. ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಈ ಯೋಜನೆಯನ್ನು ೧೯೮೫ರಲ್ಲಿ ಕರ್ನಾಟಕ ಸರ್ಕಾರ ಕೇವಲ ಕೋಲಾರ, ವಿಜಾಪುರ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿತು. ನಂತರ ೧೯೮೬-೮೭ ಮತ್ತು ೧೯೯೦-೯೧ ರಲ್ಲಿ ಇತರೆ ೮ ಜಿಲ್ಲೆಗಳಿಗೆ

ವಿಸ್ತರಿಸಲಾಯಿತು. ೧೯೯೧-೯೨ರಿಂದ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದೆ.

ಈ ಯೋಜನೆಯಲ್ಲಿ ನಿಗಮವು ಶೇ.೭೫ ಭಾಗ, ಗರಿಷ್ಠ ೩೦ ಸಾವಿರ ರೂಪಾಯಿಗಳನ್ನು ಸಹಾಯಧನವನ್ನಾಗಿ ನೀಡಲಾಗುತ್ತಿದೆ. ಉಳಿದ ಮೊತ್ತವನ್ನು ಬ್ಯಾಂಕುಗಳ ಮೂಲಕ ಸಾಲವನ್ನಾಗಿ ಪಡೆದುಕೊಳ್ಳಬೇಕಾಗಿತ್ತು. ಆದರೆ ದಿನಾಂಕ ೧೨.೨.೧೯೯೯ ರಲ್ಲಿ ಕರ್ನಾಟಕ ಸರ್ಕಾರ ಈ ಯೋಜನೆಗೆ ಶೇ. ೧೦೦ ರಷ್ಟು ಸಹಾಯಧನವನ್ನು ಒದಗಿಸಲು ಆದೇಶ ನೀಡಿದೆ. ಈ ಯೋಜನೆಯನ್ನು ಪಡೆಯಲು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

೧. ಬಾವಿ ಕೊರೆಯುವ ಸ್ಥಳದಲ್ಲಿ ಕನಿಷ್ಠ ೨ ಎಕರೆ ಜಮೀನು ಇರಬೇಕು.

೨. ಬಾವಿ ಕೊರೆಯುವ ಬಿಂದುವಿನಿಂದ ೮೨೫ ಅಡಿಗಳ ಅಂತರದಲ್ಲಿ ಯಾವುದೇ ನೀರಾವರಿ ಬಾವಿ ಇರಬಾರದು

೩. ಅರ್ಜಿದಾರರು ಸ್ವಂತ ಖಾತೆದಾರರಾಗಿರಬೇಕು.

೪. ಅರ್ಜಿದಾರರು ಬುಡಕಟ್ಟು ಪಂಗಡಕ್ಕೆ ಸೇರಿದವರಾಗಿರಬೇಕು.

೫. ಅರ್ಜಿದಾರರು ಸುಸ್ತಿದಾರರಾಗಿರಬಾರದು.

೦೩. ಸ್ವಯಂ ಉದ್ಯೋಗ ಯೋಜನೆ

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಬಹಳಷ್ಟು ಬುಡಕಟ್ಟು ಯುವಕರು ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿ ಬದುಕನ್ನು ಸಾಗಿಸಲು ಕಷ್ಟ ಪಡುತ್ತಿದ್ದಾರೆ. ಅಂತಹ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವುದು ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್ ಅಥವಾ ಗ್ರಾಮೀಣ ಬ್ಯಾಂಕುಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ನಿರುದ್ಯೋಗಿ ಬುಡಕಟ್ಟು ಯುವಕರಿಗೆ ಆಟೋರಿಕ್ಷಾ, ಹೈನುಗಾರಿಕೆ, ಸೈಕಲ್ ಶಾಪ್,ಇಟ್ಟಿಗೆ ಗೂಡು, ಸುಣ್ಣದ ಗೂಡು, ಕೈಗಾಡಿ ವ್ಯಾಪಾರ ಮುಂತಾದ ಉದ್ದೇಶಗಳಿಗೆ ಸಾಲ ನೀಡುವುದರ ಮೂಲಕ ನಿರುದ್ಯೋಗಿಗಳನ್ನು ಉದ್ಯೋಗದಲ್ಲಿ ತೊಡಗಿಸುವಂತೆ ಮಾಡಲಾಗುತ್ತಿದೆ. ಈ ಯೋಜನೆಯಲ್ಲಿ ವ್ಯಾಪಾರ ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡದೆ ಸ್ಥಿರ ಸ್ವತ್ತುಗಳನ್ನು ಸೃಷ್ಟಿಸುವ ಉದ್ದೇಶಗಳಿಗೆ ಮಾತ್ರ ಸಹಾಯ ಒದಗಿಸಲಾಗುತ್ತಿದೆ.

ಯೋಜನಾ ವೆಚ್ಚ ರೂ. ೫೦,೦೦೦ ಒಳಗೆ ಇರುವ ಘಟಕಗಳಿಗೆ ಮಾತ್ರ ಸಹಾಯಧನವನ್ನು ಪಡೆಯಲು ಅರ್ಹತೆ ಇರುತ್ತದೆ. ಯೋಜನಾ ವೆಚ್ಚದ ಶೇ. ೫೦ ರಷ್ಟು ಗರಿಷ್ಠ ರೂ. ೧೦,೦೦೦ ಸಹಾಯಧನ ಮಂಜೂರು ಮಾಡಲಾಗುತ್ತಿದೆ. ಈ ಯೋಜನಾ ವೆಚ್ಚ ಕನಿಷ್ಠ ರೂ. ೧೫,೦೦೦ ಗಳನ್ನು ನಿಗಧಿ ಪಡಿಸಲಾಗಿದ್ದು, ಈ ವೆಚ್ಚ ರೂ. ೧೫,೦೦೦ ಕ್ಕಿಂತ ಕಡಿಮೆ ಇರುವ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ವತಿಯಿಂದ ತರಬೇತಿ ಪಡೆದ ಮಹಿಳೆಯರಿಗೆ ಆದ್ಯತೆಯ ಮೇರೆಗೆ ಸೌಲಭ್ಯವನ್ನು ಕಲ್ಪಿಸಲಾಗುವುದು.

೪. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ.)

ಈ ಯೋಜನೆಯಡಿ ಯಾವುದೇ ಸಣ್ಣ ಕೈಗಾರಿಕೆ, ಸರಕು, ಸಾಗಾಣಿಕೆ, ಪ್ರಯಾಣಕ್ಕೆ ವಾಹನ, ಟ್ರಾಕ್ಟರ್, ಇತ್ಯಾದಿಗಳನ್ನು ಪ್ರಾರಂಭಿಸಲು / ಖರೀದಿಸಲು ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಯೋಜನಾ ವೆಚ್ಚ ರೂ.

೫೦,೦೦೦ ದಿಂದ ೧೦,೦೦೦,೦೦ ಲಕ್ಷದವರೆಗೆ ಇದ್ದು, ಇದರಲ್ಲಿ ಶೇ.೫ ಭಾಗವನ್ನು ಫಲಾನುಭವಿಯು, ಶೇ. ೨೦ ಭಾಗ ನಿಗಮದಿಂದ ಅಂಚಿನ ಹಣ (Margin money) ಸಾಲವೆಂದು (ಗರಿಷ್ಟ ೧ ಲಕ್ಷ) ಹಾಗೂ ಉಳಿದ ಶೇ. ೭೫ ಭಾಗ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ಭರಿಸಲಾಗುತ್ತಿದೆ. ರೂ. ೫೦,೦೦೦ ದಿಂದ ೧ ಲಕ್ಷ ಒಳಗೆ ಬರುವ ಯೋಜನಾ ವೆಚ್ಚಕ್ಕೆ ಸಹಾಯಧನ ಗರಿಷ್ಠ ೧೦,೦೦೦ ದ ಜೊತೆಗೆ ಶೇ. ೨೦ ಅಂಚಿನ ಹಣ ಪಡೆಯಲು ಅರ್ಹರಿರುತ್ತಾರೆ. ಫಲಾನುಭವಿಯು ಬುಡಕಟ್ಟು ಪಂಗಡಕ್ಕೆ ಸೇರಿದವರಾಗಿರಬೇಕು. ಫಲಾನುಭವಿಯ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ. ೪೦,೦೦೦ ಮತ್ತು ನಗರ ಪ್ರದೇಶದಲ್ಲಿ ರೂ. ೫೫,೦೦೦ಗಳನ್ನು ಮೀರಿರಬಾರದು. **ಸಲಹೆ** : ಈ ಯೋಜನೆಯಡಿಯಲ್ಲಿ ಹೆಚ್ಚಿನ ಪ್ರಸ್ತಾವನೆಗಳು ವಾಹನಗಳನ್ನು ಖರೀದಿಸಲು ಮಾತ್ರ ಬರುತ್ತಿದ್ದು ಇತರೆ ಯೋಜನೆಗಳಿಗೆ ಅಂದರೆ ಡೈರಿ, ವಿದ್ಯುತ್ ಚಾಲಿತ ಮಗ್ಗ, ಚಪ್ಪಲಿ ತಯಾರಿಕೆ, ರೇಷ್ಮೆನೂಲು ಬಿಚ್ಚುವುದು, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ನಾರು ಉತ್ಪನ್ನಗಳು, ದ್ರಾಕ್ಷಿ ಬೆಳೆಯುವುದು, ಫ್ಲೋರಿಕಲ್ಚರ್ ಹಾಗೂ ಸ್ಥಳೀಯವಾಗಿ ಸಿಗುವ ಕಚ್ಚಾ ಮಾಲುಗಳ ಆಧಾರಿತ ವಸ್ತುಗಳನ್ನು ತಯಾರಿಸುವ ಘಟಕಗಳು ಹೆಚ್ಚು ಲಾಭದಾಯಕ ಚಟುವಟಿಕೆಗಳಾಗಿರುವುದರಿಂದ ಇಂತವುಗಳನ್ನು ಗುರುತಿಸಿ ಸಾಲ ಮಂಜೂರು ಮಾಡಬೇಕಾಗಿದೆ.

೦೫. ಗಂಗಾ ಕಲ್ಯಾಣ ಯೋಜನೆ

ಶ್ರೀ ಮುರಾರ್ಜಿ ದೇಸಾಯಿರವರ ಶತಮಾನೋತ್ಸವದ ಅಂಗವಾಗಿ ಪರಿಶಿಷ್ಟ ಜಾತಿ, ಬುಡಕಟ್ಟು ವರ್ಗದ ಮತ್ತು ಹಿಂದುಳಿದ ವರ್ಗದ ಇತರೆ ಜನರ ತುಂಡು ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಈ ಯೋಜನೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲಾಗುತ್ತಿದೆ.

ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಗಿಂತ ಇದು ಭಿನ್ನವಾಗಿದೆ. ಬುಡಕಟ್ಟು ಪಂಗಡದ ಸಣ್ಣ, ಅತಿ ಸಣ್ಣ ಗುಂಪಿಗೆ ಸೇರಿದ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ಬುಡಕಟ್ಟು ವರ್ಗದವರಿಗೆ ಸೇರಿದ ೮ ರಿಂದ ೧೫ ಎಕರೆವರೆಗಿನ ಗುಂಪು ಜಮೀನುಗಳಿಗೆ ಒಂದು ಘಟಕವನ್ನಾಗಿ ಪರಿಗಣಿಸಿ ೨-೩ ಯಶಸ್ವಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು. ಈ ಯೋಜನೆಯಡಿಯಲ್ಲಿ ನೀಡಲಾಗುವ ಘಟಕ ಎಕರೆಗೆ ವೆಚ್ಚ ೨.೫೩ ಲಕ್ಷಗಳೆಂದು ನಿರ್ಧರಿಸಲಾಗಿದೆ. ಇಂತಹ ಘಟಕದಲ್ಲಿ ೨ ಯಶಸ್ವಿ ಕೊಳವೆ ಭಾವಿ ಕೊರೆಯಲು, ಪಂಪಸೆಟ್ ಜೋಡಣೆ ವಿದ್ಯುತ್ತೀಕರಣ, ಪಂಪಹೌಸ್, ಪೈಪ್‌ಲೈನ್ ಇತ್ಯಾದಿ ಎಲ್ಲಾ ಸೌಲಭ್ಯದ ಖರ್ಚುಗಳು ಸೇರಿದೆ. ಈ ಯೋಜನೆಯಡಿ ನೀಡುವ ಸೌಲಭ್ಯ ಪೂರ್ತಿ ಉಚಿತವಾಗಿದ್ದು, ಫಲಾನುಭವಿಯು ಯಾವುದೇ ಖರ್ಚನ್ನು ಭರಿಸಬೇಕಾಗಿಲ್ಲ. ಇದರ ಉಸ್ತುವಾರಿ ನಿರ್ವಹಣೆಯನ್ನು ೩ ವರ್ಷಗಳವರೆಗೆ ನಿಗಮವೇ ನೋಡಿಕೊಳ್ಳುವುದು.

ಈ ಯೋಜನೆಯಡಿ ಒಳಗೊಳ್ಳುವ ಫಲಾನುಭವಿಗಳಿಗೆ ವೈಜ್ಞಾನಿಕವಾಗಿ ವ್ಯವಸಾಯ ಮಾಡುವ ಬಗ್ಗೆ ಹಾಗೂ ಇತರೆ ಬೆಳೆ ತೆಗೆಯುವ ಕ್ರಮದ ಬಗ್ಗೆ ಹೆಚ್ಚಿನ ಜ್ಞಾನಕ್ಕಾಗಿ ಸೂಕ್ತ ತರಬೇತಿ ನೀಡಲಾಗುತ್ತಿದೆ.

೦೬. ಪಂಪಸೆಟ್ ಯೋಜನೆ

ಗಿರಿಜನರಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಕೊಳವೆ ಬಾವಿಗಳನ್ನು

ಕೊರೆಸಿಕೊಂಡಿದ್ದು, ಅಂತಹ ಬಾವಿಗೆ ಪಂಪಸೆಟ್ ಹಾಕಿಸಿಕೊಳ್ಳಲು ಅಸಮರ್ಥರಾಗಿದ್ದಾಗ, ನಿಗಮವು ಉಚಿತ ಪಂಪಸೆಟ್‌ಗಳನ್ನು ನೀಡವ ಕಾರ್ಯಕ್ರಮಗಳನ್ನು ರೂಪಿಸಿದೆ. ಈ ರೀತಿ ನೀಡಲಾಗಿರುವ ಪಂಪಸೆಟ್‌ಗಳನ್ನು ಫಲಾನುಭವಿಗಳು ಯಾವುದೇ ಸಂದರ್ಭದಲ್ಲಿ ಪರಭಾರೆ ಮಾಡಲು ಬರುವುದಿಲ್ಲ.

೦೭. ಆರೋಗ್ಯ ಯೋಜನೆ

ಈ ಯೋಜನೆಯಡಿಯಲ್ಲಿ ಗಿರಿಜನ ಕುಟುಂಬಗಳಿಗೆ ಉಚಿತ ಆರೋಗ್ಯ ಸೌಲಭ್ಯ ಒದಗಿಸಲು ಹಳದಿ ಕಾರ್ಡ್ ಯೋಜನೆ ಜಾರಿಗೆ ತರಲಾಗಿದೆ. ಈ ಯೋಜನೆಯಿಂದ ಗಿರಿಜನರ ಆರೋಗ್ಯ ತಪಾಸಣೆಯನ್ನು ವರ್ಷದಲ್ಲಿ ಎರಡು ಬಾರಿ ನಡೆಸಿ ಸೂಕ್ತ ಚಿಕಿತ್ಸೆಯನ್ನು ಒದಗಿಸುವುದು.

೦೯. ರಾಷ್ಟ್ರೀಯ ಪರಿಶಿಷ್ಟ ಪಂಗಡದ ಹಣಕಾಸು ಅಭಿವೃದ್ಧಿ ನಿಗಮ

ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಣಕಾಸು ಅಭಿವೃದ್ಧಿ ನಿಗಮವನ್ನು ಬೇರ್ಪಡಿಸಿ ಈ ನಿಗಮವನ್ನು ಭಾರತ ಸರ್ಕಾರ ಏಪ್ರಿಲ್ ೨೦೦೧ ರಲ್ಲಿ ಸ್ಥಾಪಿಸಿತು. ೨೦೦೨-೦೩ ನೇ ಸಾಲಿನಲ್ಲಿ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗಾಗಿ 'ಆದಿವಾಸಿ ಮಹಿಳಾ ಸ್ವಶಕ್ತೀಕರಣ ಯೋಜನೆಯನ್ನು' ಜಾರಿಗೊಳಿಸಲಾಯಿತು. ಈ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಬುಡಕಟ್ಟು ಮಹಿಳೆಯರ ಆರ್ಥಿಕ ಚಟುವಟಿಕೆಗಳಿಗಾಗಿ ರೂ. ೫೦೦೦.೦೦ ಸಾಲವನ್ನು ವಾರ್ಷಿಕ ಶೇ. ೪.೦ ರಷ್ಟು ಬಡ್ಡಿ ದರದಲ್ಲಿ ನೀಡಲಾಗುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡಲು ೧೯೯೯-೦೦, ೨೦೦೦-೦೧ ನೇ ಸಾಲಿನಲ್ಲಿ ಕೃಷಿ, ರೇಷ್ಮೆ, ತೋಟಗಾರಿಕೆ, ಪಶುಸಂಗೋಪನೆ ಸಣ್ಣ ಕೈಗಾರಿಕೆ, ಮತ್ತು ಸಮಾಜ ಕಲ್ಯಾಣ ಇಲಾಖೆಯ ಮೂಲಕ ನೀಡಿದ ಸ್ವತ್ತುಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಅವುಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೯

ಗಿರಿಜನ ಉಪ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಂದ ಬುಡಕಟ್ಟಿನವರಿಗೆ ನೀಡಿರುವ ಸ್ವತ್ತುಗಳ ವಿವರ

ಕ್ರ.ಸಂ	ಇಲಾಖೆಯ ಹೆಸರು	೧೯೯೯-೦೦	೨೦೦೦-೦೧	ಒಟ್ಟು
೧	ಕೃಷಿ	೯೯	೫೮	೧೫೭
೨	ರೇಷ್ಮೆ	೩೦	೪೧	೭೧
೩	ತೋಟಗಾರಿಕೆ	೧೨೧	೯೬	೨೧೭
೪	ಪಶುಸಂಗೋಪನೆ	೪೦	೨೩	೬೩
೫	ಸಣ್ಣ ಕೈಗಾರಿಕೆ	೦೦	೨೩೧	೨೩೧
೬	ಸಮಾಜ ಕಲ್ಯಾಣ	೬೬	೨೩	೮೯
	ಒಟ್ಟು	೩೫೫	೪೭೨	೮೨೭

ಕೃಪೆ : ಬಳ್ಳಾರಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವರದಿ.

ಈ ಮೇಲಿನ ಕೋಷ್ಟಕವನ್ನು ನೋಡಿದಾಗ ಎರಡು ವರ್ಷಗಳಲ್ಲಿ ೮೨೭ ಬುಡಕಟ್ಟು ಫಲಾನುಭವಿಗಳಿಗೆ ವಿವಿಧ ಇಲಾಖೆಗಳಿಂದ ಸ್ವತ್ತುಗಳು ನೀಡಿರುವುದು ಧೃಡಪಟ್ಟಿದೆ. ಈ ಸ್ವತ್ತುಗಳನ್ನು ಬಳ್ಳಾರಿ ಜಿಲ್ಲೆಯ ೭ತಾಲ್ಲೂಕುಗಳಲ್ಲಿ ೧೪೭ ಗ್ರಾಮಗಳಲ್ಲಿ ಹಂಚಲಾಗಿದೆ. ಇವುಗಳನ್ನು ಮೌಲ್ಯಮಾಪನ ಮಾಡಲು ೧೪೭ ಗ್ರಾಮಗಳ

ಪೈಕಿ, ೯೯ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ೫೩೪ ಸ್ವತ್ತುಗಳ ಮೌಲ್ಯಮಾಪನವನ್ನು ನಡೆಸಲಾಯಿತು. ಅವುಗಳಲ್ಲಿ ಸ್ವತ್ತುಗಳಿಂದ ಉಪಯೋಗ ಮತ್ತು ದುರುಪಯೋಗವಾಗಿರುವುದನ್ನು ತಾಲ್ಲೂಕುವಾರು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.


ಕೋಷ್ಟಕ ೫.೧೦

ಬಳ್ಳಾರಿ ಜಿಲ್ಲೆಯ ತಾಲೂಕುಗಳಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ನೀಡಿರುವ ಸ್ವತ್ತುಗಳ ಉಪಯೋಗ ಮತ್ತು ದುರುಪಯೋಗಳ ವಿವರ

ಕ್ರ.ಸಂ.	ತಾಲ್ಲೂಕು	ನೀಡಿರುವಸ್ವತ್ತುಗಳ ಸಂಖ್ಯೆ	ಉಪಯೋಗ	ದುಪಯೋಗ	ದುರುಪಯೋಗದ ಶೇ.ವಾರು
೧.	ಬಳ್ಳಾರಿ	೮೩	೬೨	೨೧	೨೫.೦
೨	ಹಗರಿಬೊಮ್ಮನಹಳ್ಳಿ	೪೩	೩೪	೦೯	೨೧.೦
೩	ಹಡಗಲಿ	೮೪	೬೨	೨೨	೨೬.೦
೪	ಹೊಸಪೇಟೆ	೮೭	೬೦	೨೭	೩೧.೦
೫	ಕೂಡ್ಲಗಿ	೭೨	೪೮	೨೪	೩೩.೦
೬	ಸಂಡೂರು	೭೫	೫೦	೨೫	೩೩.೦
೭	ಸಿರುಗುಪ್ಪ	೯೦	೫೭	೩೩	೩೬.೦
	ಒಟ್ಟು	೫೩೪	೩೭೩	೧೬೧	೩೦.೦

ಕೃಪೆ ಸಂಶೋಧನಾ ಕಾಲದಲ್ಲಿ ಮೌಲ್ಯಮಾಪನ ಮಾಡಿದಾಗ ಮಾಹಿತಿದಾರರಿಂದ ದೊರೆತಿರುವ ಮಾಹಿತಿ.

ಈ ಮೇಲಿನ ಕೋಷ್ಟಕವನ್ನು ಪರಿಶೀಲಿಸಿದಾಗ ಶೇ. ೭೦ ರಷ್ಟು ಸ್ವತ್ತುಗಳು ಉಪಯೋಗವಾಗಿದ್ದು, ಶೆ. ೩೦ ರಷ್ಟು ಸ್ವತ್ತುಗಳು ದುರುಪಯೋಗವಾಗಿರುವುದು ಮತ್ತು ನಿರುಪಯುಕ್ತವಾಗಿರುವುದು, ಸಂಶೋಧನೆಯ ಕಾಲದಲ್ಲಿ ಕೈಗೊಂಡ ಮೌಲ್ಯಮಾಪನದ ಸಮೀಕ್ಷೆಯಿಂದ ಧೃಡಪಟ್ಟಿದೆ. ಅವುಗಳ ವಿವರವನ್ನು ರೇಖಾ ಚಿತ್ರದಲ್ಲಿ ತೋರಿಸಲಾಗಿದೆ.




1. ಉಪಯೋಗವಾಗಿರುವುದು
2. ದುರುಪಯೋಗವಾರುವುದು

ಸಿರುಗುಪ್ಪ ತಾಲ್ಲೂಕಿನಲ್ಲಿ ಶೆ. ೩೬ ರಷ್ಟು ಸ್ವತ್ತುಗಳು ದುರುಪಯೋಗವಾಗಿದೆ. ಹಗರಿಬೊಮ್ಮನಮಹಳ್ಳಿ ಶೇ. ೨೧ ರಷ್ಟು ದುರುಪಯೋಗವಾಗಿ ಅತಿ ಕಡಿಮೆ ಸಂಖ್ಯೆಯ ಸ್ವತ್ತುಗಳು ದುರುಪಯೋಗವಾಗಿರುವ ತಾಲ್ಲೂಕಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ತೋಟಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಇಲಾಖೆಗಳಿಂದ ನೀಡಿರುವ ಸ್ವತ್ತುಗಳು ಹೆಚ್ಚು ದುರುಪಯೋಗವಾಗಿದೆ. ಪಶುಸಂಗೋಪನೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆಗಳಿಂದ ನೀಡಿದ ಸ್ವತ್ತುಗಳು ಬುಡಕಟ್ಟಿನವರಿಗೆ ನಿರಂತರ ಆದಾಯ ತರುವಲ್ಲಿ ಅನುಕೂಲ ಮಾಡಿಕೊಟ್ಟಿವೆ.

ಈ ೫೩೪ ಫಲಾನುಭವಿಗಳನ್ನು ಸಂದರ್ಶಿಸಿದಾಗ ಸರ್ಕಾರ ಈಗಾಗಲೇ ಗಿರಿಜನ ಉಪಯೋಜನೆಯಡಿಯಲ್ಲಿ ನೀಡುರುವ ಸ್ವತ್ತುಗಳ ಜೊತೆಗೆ ಇನ್ನೂ ಅಭಿವೃದ್ಧಿಗೆ ಪೂರಕವಾಗಿ ಬೇಕಾಗಿರುವ ವ್ಯವಸಾಯಕ್ಕೆ ಭೂಮಿ, ನೀರಾವರಿ

ಸೌಲಭ್ಯಗಳು, ಎತ್ತುಗಳು, ಎತ್ತಿನ ಗಾಡಿ, ಹಾಲು ಕರೆಯುವ ಹಸುಗಳು, ಎಮ್ಮೆಗಳು, ಕುರಿ ಮೇಕೆಗಳು, ಕೋಳಿಗಳು, ಟ್ರಾಕ್ಟರ್‌ಗಳು, ಟಿಲ್ಲರ್ ಮತ್ತು ವ್ಯಾಪಾರಕ್ಕೆ ಸಾಹಯಧನ ಇತ್ಯಾದಿಯಾಗಿ ಪ್ರತಿಯೊಬ್ಬ ಫಲಾನುಭವಿಯು ಎರಡಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಕೋರಿರುತ್ತಾರೆ. ಅವುಗಳ ವಿವರವನ್ನು ರೇಖಾ ಚಿತ್ರ (ಗ್ರಾಫ್) ನಲ್ಲಿ




1. ಭೂಮಿ 2.ನೀರಾವರಿ ಸೌಲಭ್ಯ 3.ಎತ್ತು 4.ಎತ್ತಿನಗಾಡಿ 5. ಹಾಲು ಕರೆಯುವ ಹಸು, 6. ಕುರಿ, ಮೇಕೆ
7. ಕೋಳಿ 8. ಎಮ್ಮೆ 9. ಟ್ರಾಕ್ಟರ್ 10. ಟಿಲ್ಲರ್ 11. ವ್ಯಾಪಾರ 12. ಇತ್ಯಾದಿ

ಈ ಸಮೀಕ್ಷೆ ಕಾಲದಲ್ಲಿ ದೊರೆತ ಮಾಹಿತಿಯ ಪ್ರಕಾರ ೫೩೪ ಫಲಾನುಭವಿಗಳ ಪೈಕಿ ೫೧೪ ಫಲಾಸುಭವಿಗಳು ಭದ್ರವಾದ ಪಕ್ಕಾ ಮನೆಗಳಲ್ಲಿ ವಾಸಸುತ್ತಿದ್ದು, ಅದರಲ್ಲಿ ೨೨೮ ಫಲಾನುಭವಿಗಳು ವಾಸಿಸುತ್ತಿರುವ ಮನೆಗಳನ್ನು ಸರ್ಕಾರ ವಸತಿ ಯೋಜನೆಗಳಾದ ಅಂಬೇಡ್ಕರ್, ಆಶ್ರಯ, ಇಂದಿರಾ ಆವಾಜ್, ಐ.ಟಿ.ಡಿ.ಪಿ. ಗುಂಪು ಮನೆಗಳ ಮೂಲಕ ನೀಡಲಾಗಿದೆ. ಹಾಗೂ ಉಳಿದ ೨೦ ಫಲಾನುಭವಿಗಳು ಕಚ್ಚಾ ಮನೆಗಳನ್ನು ಹೊಂದಿರುತ್ತಾರೆ. ಅವರಿಗೂ ಶಾಶ್ವತವಾದ ಮನೆಗಳನ್ನು ಒದಗಿಸಲು ಜಿಲ್ಲಾ ಪಂಚಾಯತ್ ಕ್ರಮ ಕೈಗೊಂದಿರುವುದು ಸ್ವಾಗತಾರ್ಹ. ಮೇಲೆ ತಿಳಿಸಿರುವ ೫೩೪ ಫಲಾನುಭವಿಗಳಲ್ಲಿ ೨೯೪ ಜನರು ತುಂಡು ಭೂಮಿಗಳನ್ನು ಹೊಂದಿ ವ್ಯವಸಾಯ ಮಾಡುವದರ ಜೊತೆಗೆ ಕೃಷಿ ಕೂಲಿಗಳಾಗಿ ಜೀವಿಸುತ್ತಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮವು ೧೦೩ ಬುಡಕಟ್ಟು ಜನರಿಗೆ ಭೂ ಒಡೆತನ ಯೋಜನೆಯಲ್ಲಿ ಭೂಮಿಯನ್ನು ಹಂಚಿರುತ್ತದೆ. ಈ ತುಂಡು ಭೂಮಿಯನ್ನು ಹೊಂದಿರುವ ೨೯೪ ಜನರಲ್ಲಿ ೨೮೮ ಜನರು ಕೃಷಿ ಮಾಡುವುದರ ಜೊತೆ ಕೃಷಿ ಕೂಲಿ ಕೆಲಸ ಮಾಡುತ್ತಿದ್ದರೆ. ಇತರೆ ೪೩ ಜನರು ಕೃಷಿ ಕೂಲಿಗಳಾಗಿದ್ದಾರೆ. ೩೩ಜನರು ಬಡಿಗೆತನದ ವೃತ್ತಿಯನ್ನು ಅವಲಂಭಿಸಿದ್ದಾರೆ. ೬ ಜನರು ಕಮ್ಮಾರಿಕೆಯಲ್ಲಿ, ೩೦ ಜನರು ಗಾರೆ ಕೆಲಸದಲ್ಲಿ, ಇಬ್ಬರು ವಿದ್ಯುತ್ ರಿಪೇರಿ ಕೆಲಸದಲ್ಲಿ ಇತರೆ ೧೩೨ ಜನರು ವಿವಿಧ ವೃತ್ತಿಗಳಾದ ಟೈಲರಿಂಗ್, ಸೈಕಲ್ ರಿಪೇರಿ, ಕಿರಾಣಿ ಅಂಗಡಿ, ಸಣ್ಣ ವ್ಯಾಪಾರ, ಇಟ್ಟಿಗೆ ಬಟ್ಟಿ, ಸುಣ್ಣದ ಗೂಡು, ಇತ್ಯಾದಿ ಕೆಲಸಗಳಲ್ಲಿ ತೊಡಗಿರುವುದು ಈ ಸಮೀಕ್ಷೆಯಿಂದ ಧೃಡಪಟ್ಟಿದೆ. ಇದನ್ನು ಈ ಕೆಳಗಿನ ರೇಖಾ ಚಿತ್ರದಲ್ಲಿ ವಿವರಿಸಲಾಗಿದೆ. ಹಾಗೂ ಇವುಗಳ ಪೂರ್ಣ ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ವೃತ್ತ ಚಿತ್ರ ಗಿರಿಜನ ಉಪಯೋಜನೆಯ ಅಡಿಯಲ್ಲಿಯ ಫಲಾನುಭವಿಗಳ ಅವಲಂಬಿತ ಕಸುಬುಗಳ ವಿವರ



1.ಕೃಷಿ 2. ಕೃಷಿ ಕೂಲಿ 3. ಬಡಿಗಿ 4. ಕಮ್ಮಾರಿಕೆ 5. ಗಾರೆ ಕೆಲಸ 6. ವಿದ್ಯತ್ ರಿಪೇರಿ 7. ವ್ಯಾಪಾರ ೮.ಇತರೆ

ಸಣ್ಣ ಮತ್ತು ಗುಡಿ ಕೈಗಾರಿಕೆಗಳಲ್ಲಿ ಅಧುನಿಕ ತರಬೇತಿಯನ್ನು ಪಡೆಯುವ ಬಗ್ಗೆ, ಹೈನುಗಾರಿಕೆಯಲ್ಲಿ ಮಿಶ್ರತಳಿಹಸು ಮತ್ತು ಎಮ್ಮೆಗಳನ್ನು ಪಾಲನೆ ಮತ್ತು ಪೋಷಣೆ ಮಾಡುವ ಬಗ್ಗೆ, ತೋಟಗಾರಿಕೆ ಕ್ಷೇತ್ರದಲ್ಲಿ ತರಕಾರಿ ಹಣ್ಣುಗಳನ್ನು ಬೆಳೆಯಲು ಆಧುನಿಕ ತಾಂತ್ರಿಕತೆಯನ್ನು ಬಳಸುವ ಬಗ್ಗೆ ಸುಧಾರಿತ ಬೇಸಾಯವನ್ನು ಮಾಡಲು ತರಬೇತಿಯು ಅವಶ್ಯಕತೆಯಾಗಿದೆ ಎಂದು ಫಲಾನುಭಾವಿಗಳು ಇಚ್ಛಿಸಿರುತ್ತಾರೆ. ಸರ್ಕಾರ ಭೂ ಒಡೆತನ ಯೋಜನೆಯಡಿಯಲ್ಲಿ ಭೂಮಿಯನ್ನು ನೀಡಿದ್ದು ಅವುಗಳಿಗೆ ಹಾಗೂ ಬುಡಕಟ್ಟು ಜನರ ಬಳಿಯಿರುವ ತುಂಡು ಭೂಮಿಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳ ಬೇಕಾಗಿದೆ. ಫಲಾನುಭವಿಗಳೂ ಇಚ್ಛಿಸಿರುವ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನವನ್ನು ಹೊಂದಲು ತರಬೇತಿಯನ್ನು ನೀಡುವ ವ್ಯವಸ್ಥೆ ಮಾಡಬೇಕಾಗಿದೆ.

ಮತ್ತೊಂದು ಅಭಿವೃದ್ಧಿಯ ಸಂಕೇತವೇನೆಂದರೆ ಈ ಸಮೀಕ್ಷೆಗಾಗಿ ಆಯ್ಕೆಗೊಂಡ ೯೯ ಗ್ರಾಮಗಳಲ್ಲಿಯೂ ವಿದ್ಯುತ್ ಸಂಪರ್ಕವಿದೆ. ಹಾಗೂ ಎಲ್ಲಾ ಗ್ರಾಮಗಳಲ್ಲಿ ಕೂಡು ರಸ್ತೆ ಇದ್ದು ಸಂಚಾರಕ್ಕೆ ಅನುಕೂಲವಾಗಿದೆ.

ಇದರ ಜೊತೆಗೆ ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ ವಿಭಾಗದ ಮೂಲಕ ಬುಡಕಟ್ಟು ಜನರು ಹೆಚ್ಚಿಗೆ ವಾಸಿಸುವ ಕಾಲೋನಿಗಳಿಗೆ ಅಥವಾ ಹಾಡಿಗಳಿಗೆ ಕೂಡು ರಸ್ತೆ ಮತ್ತು ಸೇತುವೆ, ಕಿರು ನೀರು ಸರಬರಾಜು, ಸಮುದಾಯ ಭವನದ ನಿರ್ಮಾಣ ಕಾರ್ಯಗಳನ್ನು ಸಹ ಕೈಗೊಳ್ಳಲಾಗಿದೆ. ೧೯೯೬-೯೭ ರಿಂದ ೨೦೦೦-೦೧ರ ವರವಿಗೆ ಮೇಲೆ ತಿಳಿಸಿರುವ ಕಾರ್ಯಕ್ರಮಗಳಿಗೆ ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪ ಯೋಜನೆ ಅಡಿಯಲ್ಲಿ ಖರ್ಚು ಮಾಡಿರುವ ಅನುದಾನದ ವಿವರಗಳನ್ನು ವರ್ಷವಾರು ಮುಂದಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೧೧

ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆ ಅಡಿಯಲ್ಲಿಯ ವೆಚ್ಚದ ವಿವರ (೧೯೯೬-೯೭)

ಕ್ರ.ಸಂ.	ಇಲಾಖೆ	ನಿಗದಿಪಡಿಸಿದ	ಬಿಡುಗಡೆ	ಖರ್ಚು	ಉಳಿಕೆ
೧.	ಕೃಷಿ	೫.೦೦	೩.೦೦	೧.೫೮	----
೨.	ತೋಟಗಾರಿಕೆ	೬.೦೦	೩.೦೦	೨.೯೮	----
೩.	ಪಶು ಸಂಗೋಪನೆ	೬.೦೦	೪.೦೦	೩.೯೪	----
೪.	ಸಣ್ಣ ಮತ್ತು ಗುಡಿ ಕೈಗಾರಿಕೆ	೬.೦೦	೩.೦೦	೩.೦೦	----
೫.	ರೇಷ್ಮೇ	೫.೦೦	೩.೦೦	೨.೫೮	----
೬.	ಭೂಸಾರ ಸಂರಕ್ಷಣೆ	೨.೦೦	-----	-----	----
೭.	ಸಹಕಾರ	೨.೦೦	-----	-----	----
೮.	ಸಮಾಜ ಕಲ್ಯಾಣ	೧೦.೦೦	೭.೦೦	೬.೯೧	೦.೦೯
೯.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್	೩.೦೦	-----	೧.೭೮	-----
೧೦.	ಪೌಷ್ಟಿಕ ಅಹಾರ	-----	-----	-----	-----
	ಒಟ್ಟು	೪೫.೦೦	೨೩.೦೦	೨೩.೦೨	೦.೦೯

ಕೋಷ್ಟಕ ೫.೧೨

ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆ ಅಡಿಯಲ್ಲಿಯ ವೆಚ್ಚದ ವಿವರ (೧೯೯೭-೯೮)

ಕ್ರ.ಸಂ.	ಇಲಾಖೆ	ನಿಗದಿಪಡಿಸಿದ	ಬಿಡುಗಡೆ	ಖರ್ಚು	ಉಳಿಕೆ
೧.	ಕೃಷಿ	೫.೦೦	೫.೦೦	೪.೯೩	೦.೦೭
೨.	ತೋಟಗಾರಿಕೆ	೬.೦೦	೬.೦೦	೬.೦೦	-----
೩.	ಪಶು ಸಂಗೋಪನೆ	೬.೦೦	೬.೦೦	೬.೦೦	-----
೪.	ಸಣ್ಣ ಮತ್ತು ಗುಡಿ ಕೈಗಾರಿಕೆ	೧೩.೦೦	೧೩.೦೦	೧೨.೯೮	೦.೦೨
೫.	ರೇಷ್ಮೇ	೫.೦೦	೫.೦೦	೪.೭೭	೦.೨೩
೬.	ಭೂಸಾರ ಸಂರಕ್ಷಣೆ	೨.೦೦	೨.೦೦	೧.೯೮	೦.೦೨
೭.	ಸಹಕಾರ	೨.೦೦	೨.೦೦	೨.೦೦	-----
೮.	ಸಮಾಜ ಕಲ್ಯಾಣ	೫.೦೦	೫.೦೦	೫.೦೦	-----
೯.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್	೪.೦೦	೪.೦೦	೪.೦೦	-----
	ಒಟ್ಟು	೪೮.೦೦	೪೮.೦೦	೪೭.೬೬	೦.೩೪

ಕೋಷ್ಠಕ ೫.೧೩

ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆ ಅಡಿಯಲ್ಲಿಯ ವೆಚ್ಚದ ವಿವರ (೧೯೯೮-೯೯)

ಕ್ರ.ಸಂ.	ಇಲಾಖೆ	ನಿಗದಿಪಡಿಸಿದ	ಬಿಡುಗಡೆ	ಖರ್ಚು	ಉಳಿಕೆ
೧.	ಕೃಷಿ	೨.೦೦	೧.೭೫	೧.೭೫	-----
೨.	ತೋಟಗಾರಿಕೆ	೪.೫೦	೪.೫೦	೪.೫೦	-----
೩.	ಪಶು ಸಂಗೋಪನೆ	೪.೦೦	೪.೦೦	೩.೯೫	೦.೦೫
೪.	ಸಣ್ಣ ಮತ್ತು ಗುಡಿ ಕೈಗಾರಿಕೆ	೫.೦೦	೫.೦೦	೫.೦೦	-----
೫.	ರೇಷ್ಮೇ	೪.೫೦	೨.೫೦	೨.೩೧	೦.೧೯
೬.	ಸಹಕಾರ	೨.೦೦	-----	-----	-----
೭.	ಸಮಾಜ ಕಲ್ಯಾಣ	೯.೦೦	೨.೦೦	೧.೯೭	೦.೦೩
೮.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್	೮.೦೦	೬.೮೯	೬.೮೯	------
೯.	ಪೌಷ್ಠಿಕ ಅಹಾರ	೩.೦೦	೨.೭೬	೨.೭೪	೦.೦೨
	ಒಟ್ಟು	೪೨.೦೦	೨೯.೪೦	೨೯.೧೧	೦.೨೯

ಕೋಷ್ಠಕ ೫.೧೪

ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆ ಅಡಿಯಲ್ಲಿಯ ವೆಚ್ಚದ ವಿವರ (೧೯೯೯-೨೦೦೦)

ಕ್ರ.ಸಂ.	ಇಲಾಖೆ	ನಿಗದಿಪಡಿಸಿದ	ಬಿಡುಗಡೆ	ಖರ್ಚು	ಉಳಿಕೆ
೧.	ಕೃಷಿ	೨.೫೦	೨.೦೦	೧.೬೮	೦.೩೨
೨.	ತೋಟಗಾರಿಕೆ	೨.೫೦	೧.೮೩	೧.೭೯	೦.೦೪
೩.	ಪಶು ಸಂಗೋಪನೆ	೪.೦೦	೨.೦೦	೧.೭೦	೦.೩೦
೪.	ಸಣ್ಣ ಮತ್ತು ಗುಡಿ ಕೈಗಾರಿಕೆ	೭.೫೦	೧.೩೧	೧.೩೧	
೫.	ರೇಷ್ಮೇ	೩.೦೦			
೬.	ಸಮಾಜ ಕಲ್ಯಾಣ	೮.೦೦	೫.೦೦	೫.೦೦	
೭.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್	೧೨.೫೦	೯.೧೩	೯.೧೩	
೮.	ಪೌಷ್ಠಿಕ ಅಹಾರ	೫.೦೦	೩.೯೦	೩.೯೦	
	ಒಟ್ಟು	೪೫.೦೦	೨೫.೧೭	೨೪.೫೧	೦.೬೬

ಮತ್ತೊಂದು ಸಂತೋಷದಾಯಕ ವಿಷಯವೇನೆಂದರೆ, ಈ ವಸ್ತು ವಿಷಯದ ಅಧ್ಯಯನದ ಕಾಲದಲ್ಲಿ ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಂಡ ೯ ಗ್ರಾಮಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದು, ಆ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಕೂಡು ರಸ್ತೆ, ಬೀದಿ ದೀಪ, ಮನೆಗಳಿಗೆ ವಿದ್ಯುತ್ ಸಂಪರ್ಕ, ಪ್ರಾಥಮಿಕ ಶಾಲೆ ಮತ್ತು ಹತ್ತಿರದಲ್ಲಿ ಆಸ್ಪತ್ರೆಗಳನ್ನು ಹೊಂದಿರುವುದು ಸಮೀಕ್ಷೆಯ ಕಾಲದಲ್ಲಿ ಕಂಡು ಬಂದಿದೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಹಾಗೂ ಸ್ವತ್ತುಗಳ ಪರೀಕ್ಷೆ, ಮೌಲ್ಯಮಾಪನದಿಂದ ದೊರೆತ ಮಾಹಿತಿ, ಫಲಾನುಭವಿಗಳ ಜೀವನ ಮಟ್ಟ ಇವೆಲ್ಲವನ್ನು ಗಮನಿಸಿದಾಗ ಗಿರಿಜನ ಉಪಯೋಜನೆ ನಿಜವಾಗಲೂ ಬುಡಕಟ್ಟು ಜನರ ನಿರಂತರ ಅದಾಯಕ್ಕೆ ಅನುಮಾಡಿಕೊಟ್ಟಿದೆ. ಇದಲ್ಲದೆ ಬಡತನ ರೇಖೆಯಿಂದ ಮೇಲಕ್ಕೆ ಬರಲು ಹಾಗೂ ಸಮಾಜದ ದಿಂದ

ಬಹುದೂರ ಇದ್ದ ಸಮೂಹಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಈ ಯೋಜನೆಯು ತುಂಬಾ ಫಲಪ್ರದವಾಗಿದೆ. ಹಾಗೂ ಬಳ್ಳಾರಿ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲಾ ೭ ತಾಲ್ಲೂಕುಗಳ ತಾಲ್ಲೂಕುವಾರು ಗಿರಿಜನ ಉಪಯೋಜನೆಯಡಿಯಲ್ಲಿನ ಫಲಾನುಭವಿಗಳ ಕಾರ್ಯಕ್ಷೇತ್ರದ ವರದಿಯನ್ನು ಅನುಬಂಧ ೫.೩ ರಿಂದ ೫.೧೦ರಲ್ಲಿ ವಿವರಿಸಲಾಗಿದೆ.

ಆಧಾರಗಳು

೧. Devendra Thakur & Tharkur D.N.(Ed) ***Tribal Development and Planing*** (New Delhi : Deep and Deep Publication, 1977) P.122.

೨. ***National Commission for Scheduled Castes and Scheduled Tribes fourth report*** 1996-97 & 1997-98.

೩. ***National Commission for Scheduled Castes and Scheduled Tribes Third report*** 1994-95 & 1995-96.

೪. ***The Karnataka State Commission for Scheduled Caste and Scheduled Tribes*** (Bangalore : Annual Report 2003-04)

೫. ***Social Welfare Annual report*** 2001-02.

೬. ***National Commission for Scheduled Castes and Scheduled Tribes fourth report*** 1996-97 & 1997-98.

೭. ***Social Welfare Annual report*** 2001-02.

೮. ***Karnataka SC/ST. Development Corporation Ltd. Achion Plan :*** 2003-04.

೯. ***Social Welfare Annual report*** 2003-04.

ಅಧ್ಯಾಯ - ೬

ಗಿರಿಜನ ಉಪ ಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ಬಾಧಕಗಳು ಹಾಗೂ ಪರಿಹಾರೋಪಾಯಗಳು

ಗಿರಿಜನ ಉಪ ಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ಬಾಧಕಗಳು ಹಾಗೂ ಪರಿಹಾರೋಪಾಯಗಳು

ಬಳ್ಳಾರಿ ಜಿಲ್ಲೆಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯನ್ನು ೧೯೭೬ ರಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ. ಇದುವರೆವಿಗೂ ಅನುಷ್ಠಾನಗೊಳಿಸಿರುವ ಈ ಯೋಜನೆಯಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ. ಎಂಬುದರ ಬಗ್ಗೆ ಮೌಲ್ಯಮಾಪನ ಮಾಡಲು ೧೯೯೯-೨೦೦೦, ೨೦೦೦-೦೧ ನೇ ಸಾಲಿನಲ್ಲಿ ಅನುಷ್ಠಾನ ಮಾಡಿರುವ ಎಲ್ಲಾ ಕಾರ್ಯಕ್ರಮಗಳ ಸಮೀಕ್ಷೆಯನ್ನು ನಡೆಸಿ ಪರಿಶೀಲಿಸಿದಾಗ ಶೇ. ೭೦ ರಷ್ಟು ಭೌತಿಕವಾಗಿ ಫಲಪ್ರದವಾಗಿರುವುದು ಭೌತಿಕ ಸ್ವತ್ತುಗಳ ಮೂಲಕ ಧೃಡಪಟ್ಟಿದೆ. ಉಳಿದ ಶೇ. ೩೦ ರಷ್ಟು ಫಲಪ್ರದವಾಗದೇ ಇರುವ ಭಾದಕಗಳೆಂದರೆ,

೧. ಸರ್ಕಾರ ತನ್ನ ಯೋಜನೆಗಳನ್ನು ಬುಡಕಟ್ಟು ಜನರ (ಫಲಾನುಭವಿಗಳ) ಮನೆಯ ಬಾಗಿಲಿಗೆ ಸರಳವಾಗಿ, ಸುಲಭವಾಗಿ ಶೀಘ್ರವಾಗಿ, ನಿಗದಿತ ಸಮಯದಲ್ಲಿ ತಲುಪಿಸುವ ಉದ್ದೇಶದಿಂದ ಹಿಂದೆ ಆಗುತ್ತಿದ್ದ ಅನಾವಶ್ಯಕ ವಿಳಂಬವನ್ನು ತಪ್ಪಿಸಿ ಪಾರದರ್ಶಕತೆಯನ್ನು ಪ್ರದರ್ಶಿಸಿ, ಅರ್ಹ ಬುಡಕಟ್ಟು ಫಲಾನುಭವಿಗಳನ್ನು ಗುರುತಿಸಿ ಆಯ್ಕೆಮಾಡಿ ಯೋಜನೆಯ ಪ್ರಯೋಜನವನ್ನು ಒದಗಿಸಲು ಅಧಿಕಾರ ಕೇಂದ್ರಿಕೃತ ವ್ಯವಸ್ಥೆಯಿಂದ ಅಧಿಕಾರ ವಿಕೇಂದ್ರಿಕರಣಕ್ಕೆ ಹೆಚ್ಚಿನ ಒತ್ತುಕೊಟ್ಟು ಆಡಳಿತಾಂಗವನ್ನು ೧. ಗ್ರಾಮ ಪಂಚಾಯತಿ, ೨. ತಾಲ್ಲೂಕು ಪಂಚಾಯತಿ, ೩. ಜಿಲ್ಲಾ ಪಂಚಾಯತಿಗಳೆಂದು ವಿಭಜಿಸಿ ಆಡಳಿತ ವ್ಯವಸ್ಥೆಯ ವಿಕೇಂದ್ರಿಕರಣವನ್ನು ಜಾರಿಗೆ ತಂದಿದೆ.

ಇಂತಹ ವ್ಯವಸ್ಥೆಯಲ್ಲಿ ಈ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆಡಳಿತಾಂಗದ ಪ್ರಾರಂಭದ ಹಂತವಾದ ಗ್ರಾಮ ಪಂಚಾಯತಿ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ, ಹಾಗೂ ಬುಡಕಟ್ಟು ಸಮುದಾಯಕ್ಕೆ ಸೇರುವ ಪಂಗಡಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ,

ಕೇವಲ ಬಲಿಷ್ಟವಾದ ಅಥವಾ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಒಂದು ಅಥವಾ ಎರಡು ಪಂಗಡಗಳ ಫಲಾನುಭವಿಗಳನ್ನು ಆಯ್ಕೆ ಮಾಡಿ ಇತರೆ ಪಂಗಡಗಳನ್ನು ಪರಿಗಣಿಸದೆ, ಆ ಬುಡಕಟ್ಟು ಪಂಗಡಗಳ ನಿರ್ಲಕ್ಷ್ಯತೆಗೆ ಕಾರಣವಾಗಿವೆ.

ಸಲಹೆಗಳು : ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಮ ಮಟ್ಟದಲ್ಲಿರುವ ಆಯ್ಕೆ ಸಮಿತಿಯ ಸದಸ್ಯರುಗಳು ಆ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬುಡಕಟ್ಟು ಪಂಗಡಗಳ ಮಾಹಿತಿಯನ್ನು ಪಡೆದುಕೊಂಡು, ಪ್ರತಿಯೊಂದು ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರ ನಿಗಧಿಪಡಿಸಿರುವ ಗುರಿಯನ್ನು ಹಂಚಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದಾಗ ಮಾತ್ರ ಗಿರಿಜನ ಉಪಯೋಜನೆ ಮೂಲಕ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಿ ಸಮತೋಲನವನ್ನು ಕಾಪಾಡಲು ಸಾಧ್ಯವಾಗುತ್ತದೆ.

೨. ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಸರ್ಕಾರಿ ಅಭಿವೃದ್ಧಿ ಇಲಾಖೆಗಳು ಸಹ ಕೇವಲ ಸರ್ಕಾರ ನೀಡಿರುವ ಗುರಿಯನ್ನು ಸಾಧಿಸುವ ಮನೋಭಾವವನ್ನು ಹೊಂದಿರುವುದು. ಈ ದೃಷ್ಟಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡದೆ, ಪ್ರಭಾವಗಳ ಒತ್ತಡಕ್ಕೆ ಮಣಿದು ಫಲಾನುಭವಿಗಳನ್ನು ಆಯ್ಕೆ ಮಾಡಿ, ನೀಡುವ ಸ್ವತ್ತುಗಳನ್ನು ಬಳಸುವ ಜ್ಞಾನ ಅಥವಾ ತರಬೇತಿ ಹೊಂದಿದ್ದಾನೆಯೇ ಹಾಗೂ ಇದರಿಂದ ಫಲಾನುಭವಿಗೆ ನಿರಂತರ ಆದಾಯ ಬರುವಂತಹ ಸಾಧ್ಯತೆಗಳಿವೆಯೇ ? ನೀಡುವಂತಹ ಸ್ವತ್ತು ಪ್ರಯೋಜನವಾಗುವುದೇ ಎಂಬುವುದನ್ನು ಪರಿಶೀಲಿಸದೇ ಈ ಯೋಜನೆಯನ್ನು ಕಾಟಾಚಾರಕ್ಕೆ ಅನುಷ್ಠಾನಗೊಳಿಸುತ್ತಿರುವುದರಿಂದ ಪೂರ್ಣ ಪ್ರಮಾಣದ ಫಲಕಾರಿಯಾಗಿರುವುದಿಲ್ಲ.

ಸಲಹೆ : ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆತನು ಕೈಗೊಳ್ಳುವ ಘಟಕದ ಬಗ್ಗೆ ಅಥವಾ ಕಾರ್ಯಕ್ಷೇತ್ರದ ಬಗ್ಗೆ ಹೊಂದಿರುವ ಜ್ಞಾನದಮಟ್ಟ, ನೀಡಿರುವ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಲು ಆತನಲ್ಲಿರುವ ಉತ್ಸಾಹ ಹಾಗೂ ಅವನ ಯೋಜನೆಗಳಿಗೆ ಸ್ಥಳೀಯವಾಗಿ ದೊರಕುವ ಬೇಡಿಕೆ, ಆ ಬೇಡಿಕೆಗೆ ಸ್ಪಂದಿಸಿದಾಗ ಆತನಿಗೆ ದೊರೆಯುವ ನಿರಂತರ ಆದಾಯ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದಾಗ ಮಾತ್ರ ಈ ಯೋಜನೆಯಲ್ಲಿ ನಿರೀಕ್ಷಿಸಿದ ಮಟ್ಟಕ್ಕೆ ಪ್ರಗತಿಯನ್ನು ಸಾಧಿಸಲು ಸಾಧ್ಯ.

೩. ಈ ಯೋಜನೆಯಡಿಯಲ್ಲಿ ನೀಡಿದ ಸ್ವತ್ತುಗಳನ್ನು ಬುಡಕಟ್ಟು ಜನರು ತಮ್ಮ ಒಂದಲ್ಲಾ ಒಂದು ಜೀವನೋಪಾಯಕ್ಕಾಗಿ ಅಥವಾ ಸಮಸ್ಯೆಗಳ ಪರಿಹಾರಕ್ಕಾಗಿ ಬಳಸಿಕೊಂಡಿರುವುದರಿಂದ ಈ ಯೋಜನೆಯ ಗುರಿ ಮತ್ತು ಉದ್ದೇಶ ವಿಫಲವಾಗಿದೆ.

ಸಲಹೆ : ಗಿರಿಜನಉಪಯೋಜನೆ ಅಡಿಯಲ್ಲಿ ನೀಡಿದ ಸ್ವತ್ತುಗಳನ್ನು ಮಾರುವುದಾಗಲಿ ಅಥವಾ ಕೊಳ್ಳುವುದಾಗಲಿ ನಿಷೇಧವಾಗುವವರೆವಿಗೂ ಈ ಸ್ವತ್ತುಗಳ ದುರುಪಯೋಗವನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಸರ್ಕಾರ ಕಟ್ಟು ನಿಟ್ಟಾದ ಕಾಯ್ದೆ ಮತ್ತು ಕಾನೂನುಗಳನ್ನು ತಂದು ಅಪರಾಧವೆಂದು ಘೋಷಿಸಿದಾಗ ಮಾತ್ರ ಮಾರುವವರು ಮತ್ತು ಕೊಳ್ಳುವವರು ಮುಂದೆ ಬರಲು ಹಿಂಜರಿಯುತ್ತಾರೆ.

೪. ಗಿರಿಜನ ಉಪಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೀಡುವ ಸ್ವತ್ತುಗಳನ್ನು ಸಹಾಯಧನ (ಸಬ್‌ಸಿಡಿ) ಮತ್ತು ಸಾಲದ ಸಂಮಿಶ್ರದಿಂದ ನೀಡಲಾಗುತ್ತಿದೆ. ಇದರಲ್ಲಿ ಫಲಾನುಭವಿಯು ತನಗೆ ಬರುವ ನಿರಂತರ ಆದಾಯದಲ್ಲಿ ಕಾಲ ಕಾಲಕ್ಕೆ ಸಾಲದ ಪ್ರಮಾಣವನ್ನು ತೀರಿಸಿಕೊಳ್ಳಬೇಕಾಗಿದೆ. ಆದರೆ ಫಲಾನುಭವಿಗಳು ಯಾರೂ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ನೀಡಿರುವ ಸಾಲವನ್ನು ತೀರಿಸಲು ಮುಂದೆ ಬರುತ್ತಿಲ್ಲ. ಹಾಗೂ ಪ್ರಜ್ಞಾವಂತ ಜನರು ಸಹ ಈ ಬುಡಕಟ್ಟು ಜನರಿಗೆ ಸರ್ಕಾರ ನೀಡಿರುವ ಸಾಲವನ್ನು ತೀರಿಸದಿದ್ದರೆ, ಸರ್ಕಾರ ನಿಮ್ಮನ್ನು ಏನು ಮಾಡುವುದಿಲ್ಲವೆಂದು ಪ್ರಚೋದಿಸಿ ತಪ್ಪುದಾರಿಗೆ ಎಳೆಯುತ್ತಿರುವುದರಿಂದ ಸರ್ಕಾರ ಸಾಲವಸೂಲಾತಿಯಲ್ಲಿ ಬಹಳ ಹಿಂದೆ ಬಿದ್ದಿದ್ದು ಪ್ರಗತಿ ಅತೃಪ್ತಿಕರವಾಗಿದೆ. ಇದರಿಂದ ಇತರೆ ಫಲಾನುಭವಿಗಳಿಗೆ ಪೂರಕ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಉತ್ಸಾಹದಿಂದ ಪ್ರಾರಂಭಿಸಿ ಮೇಲೆ ತಿಳಿಸಿರುವ ಕಾರಣಗಳಿಂದ ಮುಚ್ಚಲ್ಪಡುತ್ತವೆ.

ಸಲಹೆ : ಫಲಾನುಭವಿಗಳಿಗೆ ಸ್ವತ್ತುಗಳನ್ನು ನೀಡಿದ ತಕ್ಷಣ ಅವರ ಮೇಲೆ ನಿಗಾಯಿಟ್ಟು, ಕಾಲ ಕಾಲಕ್ಕೆ ಬರುವ ಆದಾಯದಲ್ಲಿ ಸಾಲದ ಕಂತನ್ನು ವಸೂಲಿ ಮಾಡಲು ವಸೂಲಿ ಅಧಿಕಾರಿಗಳು ಹಾಗೂ ಸಿಬ್ಬಂಧಿಯವರನ್ನು ನೇಮಿಸಿ ಅದಕ್ಕೆ ಬೇಕಾದ ಮುಲಭೂತ ಸೌಕರ್ಯಗಳಾದ ಕಛೇರಿ, ಸಿಬ್ಬಂಧಿ ವರ್ಗ, ವಾಹನ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿದಾಗ ನಿರೀಕ್ಷಿಸಿದ ಪ್ರಮಾಣದಲ್ಲಿ ಸಾಲವನ್ನು ವಸೂಲಿ ಮಾಡಿ ಇತರೆ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಸ್ವತ್ತುಗಳನ್ನು ಕಾಲ ಕಾಲಕ್ಕೆ ಪರೀಕ್ಷಿಸುವುದರಿಂದ ದುರುಪಯೋಗವನ್ನು ತಡೆಗಟ್ಟಿದಂತಾಗುತ್ತದೆ.

೫. ಗಿರಿಜನ ಉಪಯೋಜನೆಯಡಿಯಲ್ಲಿ ಆಯ್ಕೆಯಾಗುವ ಬಹುಪಾಲು ಫಲಾನುಭವಿಗಳೆಲ್ಲರೂ ಬಡತನ ರೇಖೆಯ ಕೆಳಗೆ ಜೀವನ ಸಾಗಿಸುತ್ತಿರುತ್ತಾರೆ. ಅಂತಹ ಫಲಾಭವಿಗಳಿಗೆ ನೀಡುವ ಸ್ವತ್ತುಗಳನ್ನು ನಿರ್ವಹಿಸಲು ಇರುವ ಸಾಮರ್ಥ್ಯ ಹಾಗೂ ಅನುಕೂಲಗಳ ಬಗ್ಗೆ ಪರೀಕ್ಷಸದೆ ಸ್ವತ್ತುಗಳನ್ನು ನೀಡಿ ದುರುಪಯೋಗಕ್ಕೆ ದಾರಿ ಮಾಡಿಕೊಡುವುದಲ್ಲದೆ ಹಣದ ನಷ್ಟಕ್ಕೆ ಕಾರಣರಾಗಿರುತ್ತಾರೆ. ಉದಾ : ಫಲಾನುಭವಿಗಳು ಸಾಮಾನ್ಯವಾಗಿ ಸರ್ಕಾರ ನೀಡುವ ೨೦x೩೦ ರ ಜನತಾ ಮನೆಗಳಲ್ಲಿ ವಾಸವಾಗಿದ್ದವರಿಗೆ ಕುರಿ, ಎಮ್ಮೆ, ಹಸುಗಳನ್ನು ನೀಡುವುದು. ಈ ಪರಿಸ್ಥಿತಿಯಲ್ಲಿ ಅವುಗಳ ಪಾಲನೆಗೆ ಸ್ಥಳಾವಕಾಶವಿಲ್ಲದೆ, ಅವುಗಳನ್ನು ಮಾರಿ ಸ್ವತ್ತುಗಳ ದುರುಪಯೋಗಕ್ಕೆ ಕಾರಣರಾಗುತ್ತಾರೆ.

ಸಲಹೆ : ಆ ಕಾರಣದಿಂದ ಸ್ವತ್ತುಗಳನ್ನು ನೀಡುವಾಗ ಅಧಿಕಾರಿಗಳು ಆ ಸ್ವತ್ತುಗಳ ನಿರ್ವಹಣೆಗೆ ಸರಿಯಾದ ಸ್ಥಳಾವಕಾಶವಿದೆಯೇ ಹಾಗೂ ಅದರಿಂದ ಅವರ ಜೀವನೋಪಾಯಕ್ಕೆ ನಿರಂತರ ಆದಾಯ ಬರುವ ಸಾಧ್ಯತೆ ಇದೆಯೇ ಎಂಬ ಎಲ್ಲಾ ಅಂಶಗಳನ್ನು ಗಮನಿಸಿ ಸ್ವತ್ತುಗಳನ್ನು ನೀಡಿದಾಗ ಈ ಫಲಾನುಭವಿಗಳನ್ನು ಸಮಗ್ರ ಅಭಿವೃದ್ಧಿ ಪಡಿಸಿ ಬಡತನ ರೇಖೆಯಿಂದ ಮೇಲಕ್ಕೆ ತರಲು ಸಾಧ್ಯವಾಗುತ್ತದೆ.

೬. ಈ ಯೋಜನೆಯಡಿಯಲ್ಲಿ ಸ್ವತ್ತುಗಳನ್ನು ನೀಡುವಾಗ ಒಂದೇ ಗ್ರಾಮದ ಎಲ್ಲಾ ಫಲಾನುಭವಿಗಳಿಗೆ ಒಂದೇ ರೀತಿಯ ತರಬೇತಿ ನೀಡಿ, ಈ ತರಬೇತಿಯ ಸಹಾಯದಿಂದ ನಿರಂತರ ಆದಾಯ ಪಡೆಯಲು ಸಾಧನ ಸಲಕರಣೆಗಳನ್ನು ನೀಡುವುದು ಮತ್ತೊಂದು ವಿಪರ್ಯಾಸ. ಒಂದು ಗ್ರಾಮದಲ್ಲಿ ಆಯ್ಕೆಯಾಗುವ ಎಲ್ಲಾ ಫಲಾನುಭವಿಗಳಿಗೆ ಹೊಲಿಗೆ, ಬಡಿಗಿತನ, ಕಮ್ಮಾರಿಕೆ, ಇತ್ಯಾದಿ ವೃತ್ತಿಗಳಲ್ಲಿ ತರಬೇತಿ ನೀಡಿ, ನಂತರ ಅವರು ಸ್ವಯಂ ಉದ್ಯೋಗವನ್ನು ನಡೆಸಲು ಅವರು ಪಡೆದ ತರಬೇತಿಗೆ ಸಂಬಂಧಪಟ್ಟಂತೆ ಸಾಧನ ಸಲಕರಣೆಗಳನ್ನು ನೀಡಿದ್ದು, ಇದರಿಂದ ಸಹಜವಾಗಿ ಬೇಡಿಕಗಿಂತ

ಹೆಚ್ಚು ಕುಶಲಕರ್ಮಿಗಳಿದ್ದಾಗ ಇದ್ದಂತಹ ಒಬ್ಬ ಇಬ್ಬರಿಗೆ ಸಿಗುತ್ತಿದ್ದ ಬೇಡಿಕೆಯು ಸಿಗದೇ ಎಲ್ಲಾ ತರಬೇತಿ ದಾರರು ತಮ್ಮ ತರಬೇತಿಯನ್ನು ಮರೆತು, ನೀಡಿದ ಸಾಧನ ಸಲಕರಣೆಗಳನ್ನು ಮೂಲೆಗೆ ಎಸೆದು ಅಥವಾ ಬಂದಷ್ಟು ದುಡ್ಡಿಗೆ ಮಾರಿ ಯಥಾ ಸ್ಥಿತಿಯಲ್ಲಿ ಕೂಲಿಯಾಗಿ ಕೃಷಿ ಕೂಲಿಗಾರರಾಗಿ ಜೀವನ ನಡೆಸುವರು. ಇದರಿಂದ ಈ ಯೋಜನೆ ಕೇವಲ ಗುರಿಯನ್ನು ಸಾಧಿಸಲು ಇರುವ ಯೋಜನೆಯಾಗುವುದೇ ಹೊರತು ಮೂಲತಃ ಬುಡಕಟ್ಟು ಅಭಿವೃದ್ಧಿಯಾಗಿರುವುದಿಲ್ಲ.

ಸಲಹೆ : ಅನುಷ್ಠಾನಧಿಕಾರಿಗಳು ಈ ಸನ್ನಿವೇಶದಲ್ಲಿ ಸ್ವಲ್ಪ ವೈಜ್ಞಾನಿಕವಾಗಿ ಚಿಂತನೆ ನಡೆಸಿ ಯಾವುದೇ ಸ್ವತ್ತು ಅಥವಾ ತರಬೇತಿಯನ್ನು ನೀಡುವಾಗ ಫಲಾನುಭವಿ ವಾಸಿಸುತ್ತಿರುವ ಸುತ್ತಮುತ್ತಲಿನ ಪ್ರದೇಶದಲ್ಲಿ ಆ ವೃತ್ತಿಗೆ ಎಷ್ಟರಮಟ್ಟಿಗೆ ಬೇಡಿಕೆ ಇದೆ. ಈಗಾಗಲೇ ಈ ರೀತಿಯ ತರಬೇತಿಯನ್ನು ಎಷ್ಟು ಜನರಿಗೆ ನೀಡಿದೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡಿ ಮನವರಿಕೆಯಾದ ನಂತರ ಸ್ವತ್ತುಗಳನ್ನು ವಿತರಿಸಲು ಪ್ರಾರಂಭಿಸಿದರೆ ಇದರಿಂದ ಫಲಾನುಭವಿಗೆ ನಿರಂತರ ಆದಾಯ ಬರುವ ಸಾಧ್ಯತೆಯ ಜೊತೆಗೆ ಬಡತನ ರೇಖೆಯಿಂದ ಮೇಲೆ ಬರಲು ಸಾಧ್ಯವಾಗುತ್ತದೆ.

೭. ಈ ಯೋಜನೆಯಡಿಯಲ್ಲಿ ಫಲಾನುಬವಿಗಳಿಗೆ ಸ್ವತ್ತುಗಳನ್ನು ನೀಡಿದ್ದು, ಅವುಗಳಿಗೆ ಪೂರಕ ಸೌಲಭ್ಯ ನೀಡದೆ, ನೀಡಿರುವ ಸ್ವತ್ತುಗಳು ಸಹ ಪ್ರಯೋಜನಕ್ಕೆ ಬರದೆ ನಿಷಪ್ರಯೋಜನವಾಗಿವೆ. ಉದಾ : ಭೂ ಒಡೆತನ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ ಭೂಮಿ ನೀಡಿರುವುದು ಸರಿಯಷ್ಟೆ. ಆದರೆ ಅದರ ಅಭಿವೃದ್ಧಿಗೆ ಬೇಕಾಗಿರುವ ನೀರಾವರಿ ವ್ಯವಸ್ಥೆ, ಗೊಬ್ಬರ, ಬೀಜ, ಇತ್ಯಾದಿಗಳನ್ನು ನೀಡದೆ ಕೇವಲ ಯೋಜನೆಯನ್ನು ಅನಷ್ಠಾನಗೊಳಿಸಬೇಕೆಂಬ ಒಂದೇ ಕಾರಣದಿಂದ ಭೂಮಿ ಹಂಚಿರುತ್ತಾರೆ. ಈ ರೀತಿ ಹಂಚಿರುವ ಭೂಮಿಯನ್ನು ಫಲಾನುಭವಿಗಳು ಬೇಸಾಯ ಮಾಡದೆ ಹಾಗೇಯೇ ಬಿಟ್ಟು ಬಂಜರಾಗಿರುತ್ತೆ.

ಸಲಹೆ : ಇಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಪೂರಕವಾದ ಇತರೆ ಯೋಜನೆಗಳನ್ನು ಸಹ ರೂಪಿಸಿ ತಕ್ಷಣ ಅನುಷ್ಠಾನಗೋಳಿಸಲು ಸಾಧ್ಯವಾಗದಿದ್ದಲ್ಲಿ ಮುಂದುವರಿದ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸಲು ಪ್ರಾರಂಭದಲ್ಲಿಯೇ ಕ್ರಿಯಾ ಯೋಜನೆಯನ್ನು ತಯಾರಿಸಿದರೆ ಅದು ಯಾವುದೇ ಕಾರಣಕ್ಕು ಬದಲಾವಣೆಯಾಗಲು ಸಾಧ್ಯವಿಲ್ಲದೇ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುತ್ತದೆ.

೮. ಈ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಬ್ಯಾಂಕುಗಳಲ್ಲಿ ಸಾಲ ಪಡೆಯಲು ಜಮಾ ಮಾಡಿದಾಗ ಬ್ಯಾಂಕ್ ಅಧಿಕಾರಿಗಳು ಸಹ ಫಲಾನುಭವಿಯ ಹಿಂದಿನ ಬಾಕಿ ಸಾಲವನ್ನು ತೀರಿಸಲು ಸಹಾಯ ಧನವನ್ನು ಹಳೇ ಸಾಲಗಳಿಗೆ ಪರಿವರ್ತಿಸಿಕೊಂಡು ಕಾಗದ ಪತ್ರಗಳಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸದಂತೆ ತೋರಿಸಿಕೊಳ್ಳುತ್ತವೆ. ಇದರಿಂದ ಸಹಜವಾಗಿ ಬುಡಕಟ್ಟು ಫಲಾನುಭವಿಗಳಿಗೆ ಇಂತಹ ಎಷ್ಟೇ ಯೋಜನೆಗಳನ್ನು ನೀಡಿದರು ಬಡತನ ರೇಖೆಗಿಂತ ಮೇಲಕ್ಕೆ ತರಲು ಸಾಧ್ಯವಿಲ್ಲ.

ಸಲಹೆ : ಈ ವಿಷಯದಲ್ಲಿ ಅನುಷ್ಠಾನಾಧಿಕಾರಿಗಳು ಬಹಳ ಎಚ್ಚರಿಕೆಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ, ಸ್ವತ್ತುಗಳು ಆತನ ಕೈ ಸೇರಿ ನಿರಂತರ ಆದಾಯ ಬರುವವರೆವಿಗೂ ಎಚ್ಚರಿಕೆಯಿಂದ ನಿಗಾ ಇಟ್ಟಿರಬೇಕು.

೯. ಬಡಕಟ್ಟು ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ಒಂದೇ ಬುಡಕಟ್ಟಿನ ಜನರನ್ನು ಆಯ್ಕೆ ಮಾಡಿರುವುದು ಆಶ್ಚರ್ಯಕರ ಹಾಗೂ ದುರದೃಷ್ಟಕರ.

ಇದರಿಂದ ಇತರೆ ಬುಡಕಟ್ಟುಗಳು ನಿರ್ಲಕ್ಷಿತರಾಗಿ ಅಭಿವೃದ್ಧಿಹೊಂದಲು ಸಾಧ್ಯವಾಗಿರುವುದಿಲ್ಲ.

ಸಲಹೆ : ಅನುಷ್ಠಾನಾಧಿಕಾರಿಗಳು ಫಲಾನುಭವಿಗಳ ಆಯ್ಕೆ ಸಂದರ್ಭ ಬಂದಾಗ ಕ್ಷೇತ್ರದಲ್ಲಿ ಲಭ್ಯವಿರುವ ಎಲ್ಲಾ ಬುಡಕಟ್ಟು ಪಂಗಡಗಳ ಮಾಹಿತಿಯನ್ನು ಪಡೆದುಕೊಂಡು ಜನಸಂಖ್ಯೆಗೆ ಅನುಗುಣವಾಗಿ ಗುರಿಗಳನ್ನು ನಿಗದಿಪಡಿಸಿ, ಆಯ್ಕೆ ಮಾಡಿದಲ್ಲಿ ಇತರೆ ಬುಡಕಟ್ಟುಗಳು ಅಭಿವೃದ್ಧಿ ಹೊಂದಲು ಅವಕಾಶ ದೊರೆಯುತ್ತದೆ.

೧೦. ಗಿರಿಜನ ಉಪಯೋಜನೆ ಸಾಕಷ್ಟು ಪ್ರಗತಿಯನ್ನು ಸಾಧಿಸದೇ ಇರುವುದಕ್ಕೆ ಮತ್ತೊಂದು ಅತಿ ಮುಖ್ಯ ಕಾರಣವೇನೆಂದರೆ ಬುಡಕಟ್ಟು ಜನರಲ್ಲಿ ಅವರ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳ ಬಗ್ಗೆ ಅರಿವಿಲ್ಲದೇ ಇರುವುದು. ಇದ್ದರೂ ಪೂರ್ಣ ಮಾಹಿತಿ ಇಲ್ಲದೇ ಇರುವುದು. ಅವುಗಳನ್ನು ಪಡೆಯಲು ಪ್ರಯತ್ನಿಸದೇ ಇರುವುದರಿಂದ ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಈ ದಿಶೆಯಲ್ಲಿ ಅನುಷ್ಠಾನಾಧಿಕಾರಿ, ನೋಡಲ್ ಅಧಿಕಾರಿಗಳು ವ್ಯಾಪಕ ಪ್ರಚಾರವನ್ನು ನೀಡಿ ಪೂರ್ಣ ಪ್ರಮಾಣದಲ್ಲಿ ಎಲ್ಲಾ ಬುಡಕಟ್ಟು ಜನಾಂಗದವರಿಗೆ ಸೌಲತ್ತುಗಳನ್ನು ದೊರಕುವಂತೆ ಮಾಡಬೇಕಾಗಿದೆ.

೧೧. ಗಿರಿಜನ ಉಪ ಯೋಜನೆಯನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಲ್ಲಿರುವ 'ನೈಪುಣ್ಯತೆಯ ಕೊರತೆ' ನೈಪುಣ್ಯತೆ ಎಂದರೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಹೊಂದಿರುವ ಜ್ಞಾನ. ಅಂದರೆ ತಿಳಿದಿರುವುದನ್ನು ಹೇಗೆ ಬಳಸಿಕೊಳ್ಳಬೇಕು, ಉದ್ದೇಶಿತ ಗುರಿಯನ್ನು ಹೇಗೆ ಸಾಧಿಸಬೇಕು ಎಂಬುದರ ಬಗೆಗಿನ ಪರಿಣತಿ. ನೈಪುಣ್ಯಗಳಲ್ಲಿ ಮೂರು ವಿಧಾನಗಳಿವೆ.

೧. ತಾಂತ್ರಿಕ ನೈಪುಣ್ಯತೆ

೨. ವ್ಯಕ್ತಿ ನೈಪುಣ್ಯತೆ

೩. ಸ್ಪಂದಾನಾಶೀಲ ನೈಪುಣ್ಯತೆ

ಸಲಹೆ : ಅಧಿಕಾರಿಗಳು ತಮ್ಮ ಕೆಲಸ ಕಾರ್ಯಗಳ, ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳುವುದರತ್ತ ಹೆಚ್ಚಿನ ಗಮನ ನೀಡಿ, ತಮ್ಮ ನೈಪುಣ್ಯತೆಗಳನ್ನು ಹೆಚ್ಚಿಸಿಕೊಳ್ಳುವುದು ಅತ್ಯಗತ್ಯ. ಅಂದರೆ ಮಾನವ ಸಂಬಂಧಗಳು, ಸಮಸ್ಯೆಗಳನ್ನು, ವಿಷಯಗಳನ್ನು ಉದಾರ ದೃಷ್ಟಿಯಿಂಗ ನೋಡುವುದು, ತಂಡದಲ್ಲಿ ಬೆರೆತು ಕೆಲಸ ಮಾಡುವುದು, ಜೊತೆಗೂಡಿ ಕೆಲಸ ಮಾಡುವಂತೆ ಪ್ರೇರೇಪಣೆ ನೀಡುವುದು ಮತ್ತು ಜೊತೆಗೂಡಿ ಕೆಲಸ ಮಾಡುವುದು.

೧೨. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅಧಿಕಾರಿಗಳಲ್ಲಿರುವ 'ಮನೋಭಾವ' ಒಂದು ಭಾದಕವಾಗಿದೆ. ಮನೋಭಾವವೆಂದರೆ ಈ ಕೆಲಸವನ್ನು ಏಕೆ ಮಾಡಬೇಕು ಎಂಬ ಮನೋಭಾವನೆ ಅವರಲ್ಲಿ ತಾಂಡವಾಡುತ್ತಿರುವುದರಿಂದ ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿಲ್ಲ.

ಸಲಹೆ : ಅಧಿಕಾರಿಗಳು ನಮಗೆ ಸರ್ಕಾರ ಸಂಬಳ ಕೊಡುತ್ತಿದೆ, ಅದಕ್ಕೋಸ್ಕರ ಕೆಲಸ ಮಾಡಬೇಕಾಗಿದೆ. ನಾನು ಯಾರಿಗೋಸ್ಕರ ಕೆಲಸ ಮಾಡುತ್ತಿದ್ದೇನೆಯೋ ಅವರ ಜೀವನದಲ್ಲಿ ಸುಧಾರಣೆಯಾಗುತ್ತಿದೆ ಎಂದು ಒಬ್ಬ ಅಧಿಕಾರಿ ಭಾವಿಸುವುದೇ ಮನೋಭಾವ, ಸಕಾರಾತ್ಮಕ ಮನೋಭಾವನೆಯು ಕೂಡ ಮನೋಭಾವನೆಯಾಗಿದೆ. ಉತ್ತಮ

ಮನೋಭಾವನೆಯು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕು.

೧. ಸೃಜನಶೀಲತೆ

೨. ತಾನು ಮತ್ತು ಬೇರೆಯವರು ಒಳ್ಳೆಯದನ್ನೇ ಮಾಡುವುದಕ್ಕೆ ಶ್ರಮಿಸುವುದು.

೩. ವಿಶೇಷವಾದುದನ್ನು ಸಾಧಿಸುವುದು.

೪. ಪಂಚಸೂತ್ರ : ಅ. ಶಿಸ್ತು ಆ. ಶ್ರದ್ಧೆ ಇ. ಸಂಕಲ್ಪ ಈ. ಅರ್ಪಣಾ ಮನೋಭಾವ ಉ. ಮಾರ್ಗದರ್ಶನದ ಅರಿವು. (ದೂರದೃಷ್ಟಿ, ಧ್ಯೇಯ, ಉದ್ದೇಶಗಳು)

೫. ಸರ್ಕಾರ ನೀಡಿರುವ ಕೆಲಸವನ್ನು ಇಷ್ಟಪಟ್ಟು ಮಾಡುವುದು.

೬. ಬದ್ಧರಾಗಿರುವುದಕ್ಕೆ ಬದ್ಧರಾಗಿರುವುದು.

ಈ ಎಲ್ಲಾ ಮೂರು ಗುಣ ವಿಶೇಷಗಳು ಮಹತ್ವವಾದರೂ ಒಬ್ಬ ವ್ಯಕ್ತಿಯನ್ನು ಬಹಳ ಸಮರ್ಥನಾಗಿ ಮತ್ತು ಇತರರಿಗೆ ಹಾಗೂ ಸಂಸ್ಥೆಗೆ ಉಪಯುಕ್ತನನ್ನಾಗಿ ರೂಪಿಸುವಲ್ಲಿ ಮನೋಭಾವದ ಪಾತ್ರ ಬಹಳ ಮಹತ್ವ ಪೂರ್ಣವಾದುದು. ಈ ಮೂರು ಗುಣ ವಿಶೇಷಗಳನ್ನು ಅಂದರೆ ಮನೋಭಾವ, (Attitude) ನೈಪುಣ್ಯತೆ (Skill) ಮತ್ತು ಜ್ಞಾನ (Knowledge) ಇವುಗಳನ್ನು (ASK) ಎಂಬ ಸಂಕೇತಾಕ್ಷರದಿಂದ ನೆನಪಿಟ್ಟುಕೊಳ್ಳಬೇಕಾಗಿದೆ. ಇದನ್ನು ಕನ್ನಡದಲ್ಲಿಯೂ ಕೂಡ 'ಮನೈಜ್ಞಾ' (ಮನೋಭಾವ, ನೈಪುಣ್ಯತೆ, ಜ್ಞಾನ) ಎಂಬ ಸಂಕೇತಾಕ್ಷರದಿಂದ ನೆನಪಿಟ್ಟುಕೊಳ್ಳಬೇಕಾಗಿದೆ.

೧೩. 'ದಿನವೆಲ್ಲಾ, ವಾರವೆಲ್ಲಾ, ತಿಂಗಳೆಲ್ಲಾ, ವರ್ಷವೆಲ್ಲಾ, ಮಾಡಿದನ್ನೇ ಮಾಡಿದ ರೀತಿಯಲ್ಲಿಯೇ ಮಾಡಿ ಬೇರೆ ಬೇರೆ ಫಲದ ನಿರೀಕ್ಷೆಯಲ್ಲಿರುವುದು ಅವಿವೇಕತನ' ಈ ವಾಕ್ಯಗಳು ಅನುಷ್ಠಾನ ಅಧಿಕಾರಿಗಳ ಕಾರ್ಯವೈಖರಿಗೆ ತಕ್ಕದ್ದಾಗಿದೆ. ಅಧಿಕಾರಿಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸಿದ ರೀತಿಯಲ್ಲಿಯೇ ಅನುಷ್ಠಾನಗೊಳಿಸಿ ಬೇರೆ ಬೇರೆ ಫಲಗಳನ್ನು ಪಡೆಯಲು ಸಾಧ್ಯವಿಲ್ಲ.

ಸಲಹೆ : ಅಧಿಕಾರಿಗಳು ಬೇರೆ ಬೇರೆ ಫಲಿತಾಂಶಗಳನ್ನು ನಿರೀಕ್ಷಿಸಬೇಕಾದರೆ ಅವರ ಕ್ರಿಯೆಯು ಸಹ ಬೇರೆ ಬೇರೆ ರೀತಿ ಇರಬೇಕು. ಅಧಿಕಾರಿಗಳು ಕ್ರಿಯೆ, ಬೇರೆ ಬೇರೆ ರೀತಿ ಇರಬೇಕಾದರೆ ಬೇರೆ ಬೇರೆ ಪ್ರಯತ್ನಗಳನ್ನು ಮಾಡಬೇಕು. ಆಗ ಅಧಿಕಾರಿಗಳ ಮನೋಭಾವ ರೀತಿ ನೀತಿಗಳು ಸಹ ಬೇರೆ ಬೇರೆ ಆಗಿರಬೇಕು. ಬೇರೆ ಬೇರೆ ಮನೋಭಾವ ಮತ್ತು ರೀತಿ ನೀತಿಯನ್ನು ರೂಪಿಸಿಕೊಳ್ಳಬೇಕಾದರೆ, ಅವರು ಯೋಚಿಸುವ ರೀತಿ ಹಾಗು ಭಾವಿಸುವ ರೀತಿ, ನೋಡುವ ರೀತಿಯು ವಿಭಿನ್ನವಾಗಿರಬೇಕು. ಅಂದರೆ ಅವರ ಅರಿವು ಮತ್ತು ಗ್ರಹಿಕೆಗಳು ವಿಧಿವತ್ತಾಗಿರಬೇಕು.

೧೪. ಅಧಿಕಾರಿಗಳು ಮತ್ತು ನೌಕರರು ತಮ್ಮ ವೃತ್ತಿ ಜೀವನದಲ್ಲಿ ಬದಲಾವಣೆಯನ್ನು ಕಾಣಬೇಕಾಗಿದೆ. ಬದಲಾವಣೆಯೆಂದರೆ ಗ್ರಹಿಕೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದು ಅರ್ಥ.

ಸಲಹೆ : ಅಧಿಕಾರಿಗಳು ತಮ್ಮ ವೃತ್ತಿ ಜೀವನವನ್ನು ಒಂದು ಕೆಲಸ ಅಥವಾ ದುಡಿಮೆಯೆಂದು ಭಾವಿಸುವ ಮೊದಲು ತಾವು ಮಾಡುವ ಕೆಲಸ ''ವಂಚಿತ ಹಾಗೂ ಶೋಷಿತ ಜನರ ಸೇವೆ ಮಾಡಲು ದೊರಕಿರುವ ಅವಕಾಶ, ತುಳಿತಕ್ಕೆ ಒಳಗಾಗಿ ಸಮಾಜದ ಕಟ್ಟಕಡೆಯಲ್ಲಿರುವ ವರ್ಗಗಳ ಆರ್ಥಿಕ ಪ್ರಗತಿಗಾಗಿ ಸೇವೆಸಲ್ಲಿಸುವ ಅವಕಾಶ.

ಫಲಾನುಭವಿಗಳ ಬದುಕನ್ನು ಹಸನಗೊಳಿಸಲು ಸೇವೆ ಸಲ್ಲಿಸುವ ಅವಕಾಶ'' ಎಂಬುದನ್ನು ಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಈ ಯೋಜನೆಯು ನಿರೀಕ್ಷಿತ ಫಲವನ್ನು ನೀಡಲು ಸಾಧ್ಯವಾಗುತ್ತದೆ.

೧೫. ಈ ಯೋಜನೆಯ ಅಡಿಯಲ್ಲಿ ನೀಡಿರುವ ಸ್ವತ್ತುಗಳ ಮೇಲಿನ ಸಾಲದ ವಸೂಲಾತಿ ತುಂಬಾ ಕಡಿಮೆ ಪ್ರಮಾಣದಲ್ಲಿ ಆಗಿರುತ್ತಿರುವುದು ಒಂದು ಬಾಧಕವಾಗಿದೆ. ಇದರಿಂದ ಪೂರಕ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ.

ಸಲಹೆ : ಸಾಲ ವಸೂಲಾತಿಗಾಗಿ ಯೋಜಿತ, ವ್ಯವಸ್ಥಿತ ಮತ್ತು ಪ್ರಾಮಾಣಿಕ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಈ ರೀತಿಯ ವಸೂಲಾತಿ ಇತರೆ ಯೋಜನೆಯ ಜೀವಾಳವಾಗಿದೆ. ವಸೂಲಾತಿ ಉತ್ತಮವಾದರೆ ಈ ಯೋಜನೆಯ ಅಡಿಯಲ್ಲಿ ಸರ್ಕಾರವು ಇನ್ನು ಹೆಚ್ಚು ಹೆಚ್ಚು ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ನೀಡಲು ಮತ್ತು ಹೊಸ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗದೇ ಇರುವುದಕ್ಕೆ ಇರುವ ಇತರೆ ಅಡೆತಡೆಗಳು ಮತ್ತು ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ಪಟ್ಟಿ ರೂಪದಲ್ಲಿ ವಿವರಿಸಲಾಗಿದೆ.

೧. ಫಲಾನುಭವಿಗಳ ಆಯ್ಕೆ ವಿಧಾನ

೨. ಗುರಿ ನಿಗದಿ ಇಲ್ಲದ ಯೋಜನೆಗಳು

೩. ಮಧ್ಯವರ್ತಿಗಳ ಹಾವಳಿ

೪. ಸಮಾಜ ಕಾರ್ಯಕರ್ತರ ಹಸ್ತಕ್ಷೇಪ

೫. ರಾಜಕೀಯ ಪ್ರಭಾವ

೬. ಅಸಮರ್ಥ ಯೋಜನೆಗಳಿಗೆ ಹಣಕಾಸಿನ ನೆರವು

೭. ಸುಸ್ತಿದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳದೇ ಇರುವುದು

೮. ಫಲಾನುಭವಿಗಳಿಂದ ಆಸ್ತಿ ಪಾಸ್ತಿಗಳ ದುರುಪಯೋಗ

೯. ಯೋಜನೆಗೆ ತಕ್ಕಂತೆ ಅನುದಾನದ ಕೊರತೆ

೧೦. ಫಲಾನುಭವಿಗಳಲ್ಲಿ ಪ್ರೇರಣೆಯ ಕೊರತೆ

೧೧. ಯೋಜನೆಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದು

೧೨. ಫಲಾನುಭವಿಗಳಲ್ಲಿ ಪ್ರಾಮಾಣಿಕತೆ ಇಲ್ಲದೇ ಇರುವುದು

೧೩. ಉದ್ದೇಶ ಪೂರ್ವಕವಾಗಿ ಸಾಲ ತೀರಿಸದೇ ಇರುವುದು

೧೪. ಈ ಯೋಜನೆಯಲ್ಲಿ ಹಳೆಯ ಕಾರ್ಯಕ್ರಮಗಳನ್ನು ಮುಂದುವರಿಸಿರುವುದು

೧೫. ಬರ ಪರಿಸ್ಥಿತಿಗಳು

೧೬. ಮಾರುಕಟ್ಟೆಗಳ ಸಮಸ್ಯೆ

೧೭. ಭ್ರಷ್ಟಾಚಾರ

೧೮. ಯೋಜನೆಯ ಘಟಕದ ವೆಚ್ಚವನ್ನು ಸರಿಯಾಗಿ ನಿಗದಿ ಮಾಡದೇ ಇರುವುದು

೧೯. ಬುಡಕಟ್ಟುಗಳ ಪಟ್ಟಿಯಲ್ಲಿ ಬೇಕಾದಷ್ಟು ಜಾತಿಗಳನ್ನು ಸೇರಿಸಿರುವುದು

೨೦. ಸಕಾಲದಲ್ಲಿ ಅನುದಾನಗಳನ್ನು ಬಿಡುಗಡೆ ಮಾಡದೇ ಇರುವುದು.

೨೧. ಇತರೆ ಇಲಾಖೆಗಳೊಂದಿಗೆ ಸಮನ್ವಯ ಇಲ್ಲದೇ ಇರುವುದು

೨೨. ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳು

೨೩. ವಸೂಲಿ ಅಧಿಕಾರ ಕೊಡುವ ಕಾಯ್ದೆ ಇಲ್ಲದಿರುವುದು

೨೪. ವಿಶ್ವ ಬ್ಯಾಂಕ್‌ನ ನೆರವನ್ನು ಉಪಯೋಗಿಸಿಕೊಳ್ಳದೇ ಇರುವುದು

೨೫. ಸಾಲಮನ್ನಾ ಮಾಡಲು ಅವಕಾಶ ಇಲ್ಲದಿರುವುದು

೨೬. ಬಡ್ಡಿಯನ್ನು ಕಡಿಮೆ ಮಾಡುವ ಅವಕಾಶ ಇಲ್ಲದೇ ಇರುವುದು

೨೭. ಒಂದೇ ಫಲಾನುಭವಿಗೆ ಅಥವಾ ಒಂದೇ ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ಸೌಲತ್ತುಗಳನ್ನು ನೀಡುವುದು

೨೮. ಫಲಾನುಭವಿಗಳಿಗೆ ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಲು ತರಬೇತಿಯನ್ನು ನೀಡದಿರುವುದು

೨೯. ಘಟಕದ ವೆಚ್ಚಗಳನ್ನು ಪರಿಷ್ಕರಿಸದೇ ಇರುವುದು

೩೦. ಯೋಜನೆಗಳ ಅನುಷ್ಠಾನದಲ್ಲಿ ಸಿಬ್ಬಂದಿಗಳಿಗೆ ತರಬೇತಿ ನೀಡದಿರುವುದು

೩೧. ನೀಡಿರುವ ಸ್ವತ್ತುಗಳನ್ನು ಕಾಲ ಕಾಲಕ್ಕೆ ಮೌಲ್ಯಮಾಪನ ಮಾಡದೇ ಇರುವುದು

ಈ ಮೇಲೆ ತಿಳಿಸಿರುವ ಅಂಶಗಳು ಸಮಸ್ಯೆಗಳೆಂದು ಮತ್ತು ಅಡಚಣೆಗಳೆಂದು ಗುರುತಿಸಿದ್ದು, ಅವುಗಳಲ್ಲಿ ಕೆಲವನ್ನು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಕೆಲವನ್ನು ರಾಜ್ಯ ಮಟ್ಟದಲ್ಲಿ ಬಗೆಹರಿಸಕೊಳ್ಳಬಹುದಾಗಿದೆ. ಮತ್ತೇ ಕೆಲವು ಸಮಸ್ಯೆಗಳಿಗೆ ಯಾವುದೇ ಪರಿಹಾರವಿಲ್ಲದೇ ಅವುಗಳನ್ನು ಇಲಾಖೆಗಳು ಅನಿವಾರ್ಯವಾಗಿ ಸಹಿಸಿಕೊಳ್ಳಬೇಕಾಗಿದೆ.

೧೬. ಗಿರಿಜನ ಉಪಯೋಜನೆಯ ಅಡಿಯಲ್ಲಿ ನೀಡಿದ ಸ್ವತ್ತುಗಳ ಮೇಲೆ ನೀಡಿರುವ ಸಾಲವನ್ನು ವಸೂಲಿಗಾಗಿ ಈ ಸಲಹೆಗಳನ್ನು ಸೂಚಿಸಲಾಗಿದೆ.

೧. ನಿಜವಾದ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡುವುದು

೨. ಸ್ವತ್ತುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಫಲಾನುಭವಿಗಳಿಗೆ ತಿಳುವಳಿಕೆ ನೀಡುವುದು

೩. ಫಲಾನುಭವಿಗಳನ್ನು ನಿಯತವಾಗಿ ಸಂಪರ್ಕಿಸುವುದು

೪. ಫಲಾನುಭವಿಗಳಿಗೆ ಪಾವತಿಯ ಸಾಲದ ನಿಗಧಿ ಪಟ್ಟಿಯನ್ನು ನೀಡುವುದು

೫. ಕಾನೂನಿನ ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡುವುದು

೬. ದೀರ್ಘಕಾಲಿಕ ಹಾಗೂ ಉದ್ದೇಶ ಪೂರ್ವಕ ಸುಸ್ತಿದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸುವುದು

೭. ಸುಸ್ತಿದಾರರ ಹೆಸರುಗಳನ್ನು ಸ್ಥಳೀಯ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಿಸುವುದು

೮. ಆರ್ಥಿಕ ವರ್ಷದ ಮೊದಲನೇ ತಿಂಗಳಿನಿಂದಲೇ ವಸೂಲಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು

೯. ಸ್ವತ್ತುಗಳನ್ನು ಸರಿಯಾಗಿ ಉಪಯೋಗಿಸಿಕೊಂಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು

೧೦.ಸುಸ್ತಿದಾರರ ಮೇಲೆ ಕಠಿಣ ಕ್ರಮಕೈಗೊಂಡರೆ ಬೇರೆಯವರಿಗೆ ಸಕಾಲಿಕ ಸಾಲ ಮರುಪಾವತಿಯ ಬಗ್ಗೆ ತಿಳುವಳಿಕೆ ಉಂಟಾಗುತ್ತದೆ.

೧೭. ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅಧಿಕಾರಿ ಮತ್ತು ಸಿಬ್ಬಂದಿಗಳಲ್ಲಿಯೂ ಸಹ ಕೆಲವು ಕರ್ತವ್ಯ ಮತ್ತು ಜವ್ದಾರಿಗಳು ಇರಬೇಕಾಗಿದೆ.

೧. ಫಲಾನುಭವಿಗಳ ಮತ್ತು ಹಣಕಾಸು ಸಂಸ್ಥೆಗಳ ನಡುವೆ ಅಧಿಕಾರಿಯು ಒಬ್ಬ ಸಂಪರ್ಕ ಅಧಿಕಾರಿಯಂತೆ ಕಾರ್ಯನಿರ್ವಹಿಸಬೇಕಾಗಿದೆ.

೨. ರೂಪಿಸಿರುವ ಕಾರ್ಯವಿಧಾನಗಳನ್ನು ಸರಿಯಾಗಿ ಪಾಲಿಸಬೇಕಾಗಿದೆ.

೩. ತುಳಿತಕ್ಕೆ ಒಳಗಾಗಿರುವ ಜನರ ಆರ್ಥಿಕ ಏಳಿಗೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ.

೪. ಅಧಿಕಾರಿಗಳು ಫಲಾನುಭವಿಗಳಿಗೆ ಗೆಳೆಯರಾಗಿ, ನೀತಿ ಬೋಧಕರಾಗಿ ಮಾರ್ಗದರ್ಶಕರಾಗಿರಬೇಕಾಗಿದೆ.

೫. ಸರ್ಕಾರಕ್ಕೆ ಹೊಣೆಗಾರರಾಗಿರಬೇಕಾಗಿದೆ.

೬. ನಿರ್ಗತಿಕ ಫಲಾನುಭವಿಗಳನ್ನು ಗುರುತಿಸಬೇಕಾಗಿದೆ.

೭. ಮಧ್ಯವರ್ತಿಗಳ ಕಾಟವನ್ನು ತಪ್ಪಿಸಬೇಕಾಗಿದೆ.

೮. ಸರ್ಕಾರ ನೀಡಿರುವ ಗುರಿಗಳನ್ನು ಸಾಧಿಸಬೇಕಾಗಿದೆ.

೯. ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿದೆ.

೧೦. ಫಲಾನುಭವಿಗಳಿಗೆ ಬಡತದ ರೇಖೆಯನ್ನು ದಾಟಲು ನೆರವು ನೀಡಬೇಕಾಗಿದೆ.

೧೧. ಸ್ವತ್ತುಗಳ ದುರುಪಯೋಗವನ್ನು ತಡೆಗಟ್ಟಬೇಕಾಗಿದೆ.

೧೨. ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ.

೧೩. ಸಿರಿತನ ಬಡತನದ ನಡುವಿನ ಅಂತರವನ್ನು ನಿವಾರಿಸಬೇಕಾಗಿದೆ.

೧೪. ಫಲಾನುಭವಿಗಳಿಗೆ ರಾಜ್ಯಾಡಳಿತದ ಬಗ್ಗೆ ತಿಳುವಳಿಕೆ ಕೊಡಬೇಕಾಗಿದೆ.

೧೫. ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕಾಗಿದೆ.

೧೬. ಫಲಾನುಭವಿಗಳಲ್ಲಿ ನೈತಿಕ ಸ್ಥೈರ್ಯವನ್ನು ಉಂಟುಮಾಡಬೇಕಾಗಿದೆ.

೧೭. ಅಸ್ಪೃಶ್ಯತೆ ಮತ್ತು ದೌರ್ಜನ್ಯವನ್ನು ಹೊಗಲಾಡಿಸುವುದು.

೧೮. ಬುಡಕಟ್ಟು ಜನರಲ್ಲಿರುವ ಸಂಸ್ಕೃತಿಯನ್ನು ವೃದ್ಧಿಗೊಳಿಸಬೇಕಾಗಿದೆ.

೧೯. ಬುಡಕಟ್ಟಿನವರ ಕುಲಕಸುಬುಗಳಲ್ಲಿ ನವೀನ ವೈವಿಧ್ಯತೆಯನ್ನು ತರಬೇಕಾಗಿದೆ.

೨೦. ಜನಸಂಖ್ಯೆ ನಿಯಂತ್ರಣಕ್ಕೆ ಶ್ರಮಿಸಬೇಕಾಗಿದೆ.

೨೧. ಬುಡಕಟ್ಟು ಜನರಲ್ಲಿರುವ ಕುರುಡು ನಂಬಿಕೆಗಳು ಮತ್ತು ಕಂದಾಚಾರಗಳನ್ನು ತೊರೆದುಹಾಕಬೇಕಾಗಿದೆ.

೨೨. ನಿರುದ್ಯೋಗ ಸಮಸ್ಯೆಗಳನ್ನು ಹೋಗಲಾಡಿಸಬೇಕಾಗಿದೆ.

೨೩. ಸಾಂಪ್ರದಾಯಿಕ ಉದ್ಯೋಗಗಳಲ್ಲಿ ಹೊಸ ತಂತ್ರಜ್ಞಾನವನ್ನು ಪರಿಚಯಿಸುವುದು.

೨೪. ಬುಡಕಟ್ಟಿನವರ ಬದುಕನ್ನು ಆಮೂಲಾಗ್ರ ಪರಿವರ್ತನೆ ಮಾಡುವುದು.

೨೫. ಮುಂದಿನ ಪೀಳಿಗೆಗೂ ಅನುಕೂಲವಾಗುವಂತಹ ಸಹಾಯವನ್ನು ಜನರಿಗೆ ಮಾಡಬೇಕು.

ಅ : ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆಯ ಪ್ರಯೋಜನವನ್ನು ಎಲ್ಲಾ ಬುಡಕಟ್ಟಿನ ಸಮುದಾಯದವರಿಗೆ ತಲುಪಲು ಈ ಕೆಳಕಂಡ ಸಲಹೆಗಳನ್ನು ನೀಡಲಾಗಿದೆ.

೧. ಕರ್ನಾಟಕದ ಪರಿಶಿಷ್ಟ ಪಂಗಡದ ಮೀಸಲಾತಿ ಶೇ. ೩ ರಿಂದ ೭ ಕ್ಕೆ ಹೆಚ್ಚಿಸಬೇಕಾಗಿದೆ.

೨. ಈ ೭ ಪ್ರತಿಶತ ಮೀಸಲಾತಿಯಲ್ಲಿ ಶೇ. ೬೦ ರಷ್ಟು ಅಂದರೆ ಶೇ. ೩ ರಷ್ಟು ನಿರ್ಲಕ್ಷಿತ ಅಲೆಮಾರಿ. ಅರೆ ಅಲೆಮಾರಿ ಮತ್ತು ಆದಿವಾಸಿ ಬುಡಕಟ್ಟುಗಳಿಗೆ ಮೀಸಲಿಡಬೇಕು. ಇದರಲ್ಲಿ ೨೦೦೧ರ ಜನಗಣತಿಯ ಪ್ರಕಾರ ೫೦೦೦ ಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿದ ಬುಡಕಟ್ಟುಗಳನ್ನು ಸೇರಿಸಬಹುದಾಗಿದೆ.

೩ ಶೇ. ೨೦ ರಷ್ಟು ಅಂದರೆ ಶೇ. ೨ ರಷ್ಟನ್ನು ಆರ್ಥಿಕವಾಗಿ ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದ ಅಸಂಘಟಿತ ಬುಡಕಟ್ಟುಗಳಿಗೆ ಮೀಸಲಿಡಬೇಕು.

೪. ಶೇ. ೨೦ ರಷ್ಟು ಅಂದರೆ ಶೇ. ೨ ರಷ್ಟನ್ನು ಅಧಿಕ ಜನಸಂಖ್ಯೆಯ ಸಂಘಟಿತ ಬುಡಕಟ್ಟುಗಳಿಗೆ ಮೀಸಲಿಡ ಬೇಕು.

ಆ : ಬಳ್ಳಾರಿ ಜಿಲ್ಲೆಯಲ್ಲಿರುವ ಅಲೆಮಾರಿ, ಅರೆ ಆಲೆಮಾರಿ ಸಮುದಾಯಗಳ ಗುಡಾರ ಗುಡಿಸಲು ನಿವಾಸಿಗಳನ್ನು ಗುರುತಿಸಿ ಈ ಕೆಳಗಿನ ವಿಶೇಷ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ.

೧. ಗುಡಾರ ಗುಡಿಸಲುಗಳಲ್ಲಿ ಅತಂತ್ರವಾಗಿ ವಾಸಿಸುವ ಆಲೆಮಾರಿಗಳನ್ನು ಸಮಗ್ರ ಸಮೀಕ್ಷೆಗೆ ಒಳಪಡಿಸಬೇಕಾಗಿದೆ.

೨. ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವುದು ಹಾಗೂ ಅ ನಿಗಮಕ್ಕೆ ಅಲೆಮಾರಿ ಸಮೂಹದವರನ್ನು ಪ್ರತಿನಿಧಿಯನ್ನಾಗಿ ನೇಮಿಸುವುದು.

೩. ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳಿಗೆ ಸರ್ಕಾರಿ ಹಾಗೂ ಸ್ಥಳೀಯ ಸೇವಾ ಸಂಸ್ಥೆಗಳಲ್ಲಿ ಮೀಸಲಾತಿ ಇಡುವುದು.

೪. ಅಲೆಮಾರಿ, ಆರೆ ಆಲೆಮಾರಿ, ಆದಿವಾಸಿ ಪಂಗಡಗಳನ್ನು ನಿರ್ಲಕ್ಷಿತ ಸಮುದಾಯಗಳೆಂದು ಪರಿಗಣಿಸಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ.

೫. ಅಲೆಮಾರಿ ಹಿನ್ನೆಲೆಯ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ವಿಶೇಷ ಶೈಕ್ಷಣಿಕ ಸೌಕರ್ಯಗಳನ್ನು ಕಲ್ಪಿಸುವುದು.

೬. ಅಲೆಮಾರಿಗಳು ಹಸಿವಿನಿಂದ ಅಥವಾ ಅಕಾಲಿಕ ಮರಣ ಹೊಂದಿದರೆ ಆಶ್ರಿತರಿಗೆ ಅರ್ಥಿಕ ಭದ್ರತೆಯನ್ನು ಒದಗಿಸ ಬೇಕಾಗಿದೆ.

೭. ಆಲೆಮಾರಿ ಕುಟುಂಬಗಳಿಗೆ ಅಶ್ರಯ ಮನೆಗಳನ್ನು ನೀಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದೆ.

೮. ಅಲೆಮಾರಿ ಸಮುದಾಯಗಳ ಸ್ವಶಕ್ತಿ ಕೇಂದ್ರಗಳಿಗೆ ವಿಶೇಷ ರಿಯಾಯ್ತಿ ಸೌಲಭ್ಯಗಳನ್ನು ನೀಡಬೇಕಾಗಿದೆ.

ಈ ರೀತಿಯ ಸ್ವತ್ತುಗಳನ್ನು ನೀಡಿದಾಗ ಮಾತ್ರ ಬುಡಕಟ್ಟು ಸಮುದಾಯದವರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಮುಂದೆತರಲು ಸಾಧ್ಯವಾಗುತ್ತದೆ.

ಈ ಅಧ್ಯಾಯದಲ್ಲಿ ಯೋಜನೆಯ ಸಾಧಕ ಬಾಧಕಗಳನ್ನು ವೈಜ್ಞಾನಿಕವಾಗಿ ಶೋಧಿಸಿ ಸೂಕ್ತಸಲಹೆಗಳನ್ನು ನೀಡಲಾಗಿದೆ.

ಅಧ್ಯಾಯ ೭

ಬಳ್ಳಾರಿ ಜಿಲ್ಲೆಯ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ

ಬಳ್ಳಾರಿ ಜಿಲ್ಲೆಯ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ

Might is right ಎಂಬ ಕಾಲದಲ್ಲಿ ಅಶಕ್ತ ಜೀವಿಗಳಿಗೆ ಉಳಿಗಾಲವಿರಲಿಲ್ಲ. ಬಲಿಷ್ಟವಾದವು ಬದುಕುತ್ತಿದ್ದುವು ಒಂದು ಇನ್ನೊಂದನ್ನು ತಿಂದು ಬದುಕುವುದು ಸಹಜವಾಗಿತ್ತು. ಅದು ಭಯಾನಕವಾದಾಗ ತಮ್ಮ ಸಂಸ್ಕೃತಿಯ ಉಳುವಿಗಾಗಿ ನೀತಿ ನಿಯಮಗಳನ್ನು ರೂಪಿಸಿಕೊಂಡು ತಾನು ಬದುಕಿ ಇತರರನ್ನು ಬದುಕುಳಿಯುವಂತೆ ಮಾಡಿಕೊಂಡ ಪ್ರಾಣಿಗಳಲ್ಲಿ ಮಾನವ ಮೊದಲಿಗ. ಹೀಗಾಗಿ ಮಾನವ ಸಾಮಾಜಿಕ ಪ್ರಾಣಿಯಾದ. ಇತರೆ ಜೀವಿಗಳು ಜೀವಿಗಳಾಗಿಯೇ, ಪ್ರಾಣಿಗಳು ಪ್ರಾಣಿಗಳಾಗಿಯೇ ಉಳಿದವು.

ಬುಡಕಟ್ಟು ಜನರ ಜೀವನ ತುಂಬಾ ಕಷ್ಟಕರವಾಗಿತ್ತು. ಅಪಾಯಗಳನ್ನು ಎದುರಿಸುವದೇ ಅವರ ಜೀವನವಾಗಿತ್ತು. ಸಂತೃಪ್ತಿಯಾದ ಆಹಾರದ ಭರವಸೆಗಳು ಇರುತ್ತಿರಲಿಲ್ಲ. ಅರ್ಧಕ್ಕಿಂತಲೂ ಹೆಚ್ಚಿನ ಜನರು ೩೦ ವರ್ಷ ಬದುಕುವುದು ಕಷ್ಟಕರವಾಗಿತ್ತು. ಕೆಲವರು ವನ್ಯ ಮೃಗಗಳಿಗೆ ಬಲಿಯಾದರೆ ಇನ್ನೂ ಕೆಲವರು ಹಸಿವು ಮತ್ತು ಅನಾರೋಗ್ಯದಿಂದ ಅಸುನೀಗುತ್ತಿದ್ದರು. ಆದಿಮಾನವ ಏಕಾಂಗಿಯಾಗಿ ಬದುಕುವಂತಿರಲಿಲ್ಲ. ಏಕಾಂಗಿಯಾಗಿ ಆಹಾರ ಸಂಗ್ರಹಿಸುವುದಾಗಲಿ, ಬೆಂಕಿಯ ವ್ಯವಸ್ಥೆ ಮಾಡುವುದಾಗಲಿ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆ ಕಾರಣದಿಂದ ಅನಿವಾರ್ಯವಾಗಿ ಗುಂಪುಜೀವನ ನಡೆಸುತ್ತಿದ್ದರು.

ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ೩೧ ಬುಡಕಟ್ಟುಗಳು ವಾಸಿಸುತ್ತಿದ್ದು ಇವರ ಜನಸಂಖ್ಯೆ ೩,೬೪,೬೩೮, ಇದ್ದು ಇವರು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೧೮ ರಷ್ಟು ಇರುವರು. ಈ ೩೧ ಬುಡಕಟ್ಟು ಪಂಗಡಗಳಲ್ಲಿ ಶೇ. ೯೭ ರಷ್ಟು ವಾಲ್ಮೀಕಿ, ನಾಯಕ, ಬೇಡ ಸಮುದಾಯಕ್ಕೆ ಸೇರಿದವರಿದ್ದು ಉಳಿದ ಶೇ.೩ ರಷ್ಟು ಇತರೆ ೩೦ ಬುಡಕಟ್ಟುಗಳಲ್ಲಿ ಹಂಚಿಹೋಗಿದೆ. ಈ ಜಿಲ್ಲೆಯಲ್ಲಿರುವ ೩೧ ಬುಡಕಟ್ಟುಗಳಲ್ಲಿ ಸುಮಾರು ೩೦ ಬುಡಕಟ್ಟುಗಳು ನಿರ್ಲಕ್ಷಿತ ಬುಡಕಟ್ಟುಗಳಾಗಿದ್ದು, ಸರ್ಕಾರದ ಯಾವುದೇ ಯೋಜನೆಯನ್ನು ಪಡೆಯದೇ ತಮ್ಮ ಹಳೆಯ ಜೀವನ ಪದ್ಧತಿಯನ್ನೇ ಮುಂದುವರಿಸುತ್ತಿವೆ. ಪ್ರತಿಯೊಂದು ಬುಡಕಟ್ಟುಗಳು ತಮ್ಮದೇ ಆದ ಭಾಷೆಯನ್ನು ಹೊಂದಿದ್ದು ಒಂದು ಮತ್ತೊಂದನ್ನು ಹೋಲುವುದಿಲ್ಲ. ಬುಡಕಟ್ಟು ಭಾಷೆಗೆ ಲಿಪಿ ಇಲ್ಲದ ಕಾರಣ ಸ್ಥಳೀಯ ಭಾಷೆಯ ಮೇಲೆ

ಅವಲಂಬಿತರಾಗಿರುತ್ತಾರೆ. ಪ್ರತಿಯೊಂದು ಬುಡಕಟ್ಟುಗಳು ತಮ್ಮದೇ ಆಚಾರ-ವಿಚಾರ, ಸಂಪ್ರದಾಯ, ಮದುವೆ, ಹಬ್ಬ-ಹರಿದಿನ, ಶವ-ಸಂಸ್ಕಾರ ಇತ್ಯಾದಿ ಕಾರ್ಯಗಳನ್ನು ಅವರದೇ ಆದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಇವರ ಸಮಾಜದಲ್ಲಿ ಜಾತಿ ಪದ್ಧತಿಯು ಕಠಿಣವಾಗಿತ್ತು. ಜಾತಿ ಪಂಚಾಯತಿಯ ನಿಯಮಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆ ನೀಡುವುದರ ಮೂಲಕ ಜಾತಿಯಿಂದ ಹೊರಗೆ ತೆಗೆದುಹಾಕಲಾಗುವುದು. ಈ ರೀತಿ ಜಾತಿಯಿಂದ ತೆಗೆದುಹಾಕಿದ ವ್ಯಕ್ತಿ ಸಮೂಹದ ಹೊರಗೆ ಜೀವನ ನಡೆಸುವುದು ಕಷ್ಟಕರವಾಗಿದ್ದು ಗೊತ್ತಿದ್ದರಿಂದ ಜಾತಿ ಪದ್ಧತಿಯ ನಿಯಮಗಳನ್ನು ಉಲ್ಲಂಘಿಸುವುದಿಲ್ಲ. ಬುಡಕಟ್ಟುಗಳಲ್ಲಿರುವ ನ್ಯಾಯ ವ್ಯವಸ್ಥೆ ಆಧುನಿಕ ವ್ಯವಸ್ಥೆಗೆ ಮುಖಾಮುಖಿಯಾಗಿರುವುದು. ಆಧುನಿಕ ನ್ಯಾಯ ವ್ಯವಸ್ಥೆಗೆ ಇವರು ಸ್ಪಂದಿಸುವುದಿಲ್ಲ. ತಮ್ಮ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಯನ್ನು ನಂಬಿ ಬದುಕುತ್ತಿದ್ದಾರೆ.

ಪ್ರತಿಯೊಂದು ಸಮಾಜವು ಪರಿವರ್ತನಾ ಶೀಲವಾದುದ್ದು. ಆದಿವಾಸಿ ಸಮುದಾಯಗಳಲ್ಲಿ ಪರಿವರ್ತನೆಯೆಂಬುದು ನಿಧಾನಗತಿಯಲ್ಲಿ ಸಾಗುತ್ತಿದೆ. ಕೆಲವು ಬುಡಕಟ್ಟುಗಳಲ್ಲಿ ಯಾವ ಪರಿವರ್ತನೆ, ಬದಲಾವಣೆಯು ಆಗುತ್ತಿಲ್ಲ ಎಂಬ ಭಾವನೆ ಒಂದು ಕಾಲಕ್ಕಿತ್ತು. ಗಿರಿಜನ ಬದುಕನ್ನು ಇಂದು ಗಮನಿಸಿದರೆ ಬುಡಕಟ್ಟಿನ ಸಮಾಜವು ಪರಿವರ್ತನೆ ಯಾಗುತ್ತಿದೆ ಎಂಬ ಅಭಿಪ್ರಾಯ ಎಲ್ಲರ ಗಮನಕ್ಕೆ ಬರುತ್ತದೆ. ನಾಗರಿಕ ಪ್ರಪಂಚದಿಂದ ದೂರವಿದ್ದು, ತಮ್ಮದೇ ಆದ ಜೀವನ ಕ್ರಮ ಅನುಸರಿಸಿಕೊಂಡು, ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದ ಬುಡಕಟ್ಟು ಸಮುದಾಯಗಳು ಇತ್ತೀಚೆಗೆ ಶಿಕ್ಷಣ, ನಾಗರಿಕತೆ ಹಾಗೂ ಆಧುನಿಕತೆಯ ಪ್ರಭಾವದಿಂದ ತಮ್ಮಮೂಲ ಲಕ್ಷಣಗಳನ್ನು ಕಳೆದುಕೊಳ್ಳುತ್ತಿವೆ. ಅವರ ಜೀವನದಲ್ಲಿ ಆಧುನಿಕ ಪರಿಸರದ ಗಾಳಿ ಬೀಸಿದ್ದರಿಂದ ನೂರಾರು ಸಾವಿರಾರು ವರ್ಷಗಳಿಂದ ಬೇರುಬಿಟ್ಟುಕೊಂಡಿದ್ದ ಅವರ ಸಂಸ್ಕೃತಿ ವಿಚಾರಗಳು ಸಡಿಲಗೊಳುತ್ತಿವೆ. ಆಧುನಿಕ ಸಮಾಜದ ಪ್ರಭಾವ ಪ್ರೇರಣೆಗಳು ಬುಡಕಟ್ಟು ಸಮುದಾಯದ ಮೇಲಾಗುತ್ತಿದೆ. ಇದರಿಂದಾಗಿ ಬುಡಕಟ್ಟಿನವರು ಪಾರಂಪರಿಕ ಜ್ಞಾನ, ಆಚಾರ, ವಿಚಾರ, ಸಂಸ್ಕೃತಿ ಮತ್ತು ಸಂಪ್ರದಾಯ ಪದ್ಧತಿಗಳನ್ನು ಬುಡಕಟ್ಟಿನ ಯುವಕರು ಅನುಸರಿಸುತ್ತಿಲ್ಲ. ಬುಡಕಟ್ಟು ಜನರ ಬದುಕು ಆಧುನಿಕ ಸಮಾಜದಲ್ಲಿ ಎತ್ತ ಸಾಗುತ್ತಿದೆ ಎಂಬದರ ಬಗೆಗೂ ವಿಚಾರ ಮಾಡುವ ಅಗತ್ಯವಿದೆ.

ಸಾಮಾನ್ಯವಾಗಿ ಕಾಡು-ಮೇಡು, ಬೆಟ್ಟ-ಗುಡ್ಡ, ಗಿರಿ-ಶಿಖರ, ದುರ್ಗಮಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಜನರು ಕಾಲಾನುಕ್ರಮದಲ್ಲಿ ಒಂದಲ್ಲಾ ಒಂದು ಕಾರಣದಿಂದ ಮೂಲ ವಾಸಸ್ಥಾನವನ್ನು ಬಿಟ್ಟು ನಗರ ಪ್ರದೇಶಗಳಿಗೆ ವಲಸೆ ಬಂದು ಟೆಂಟು ಗುಡಾರಗಳನ್ನು ಹಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಹಾಗೂ ಅಲ್ಲಿಯೂ ಶಾಶ್ವತವಾಗಿರದೇ ಉದ್ಯೋಗ ಹುಡುಕಿಕೊಂಡು ಅಥವಾ ಆಹಾರವನ್ನು ಹುಡುಕಿಕೊಂಡು ಬೇರೊಂದು ಸ್ಥಳಗಳಿಗೆ ವಲಸೆಹೋಗಿ ನೆಲಸುವ ಅಲೆಮಾರಿಗಳಾಗಿದ್ದಾರೆ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಕಾಂಕ್ರೀಟ್ ಸಂಸ್ಕೃತಿಯನ್ನು ಬುಡಕಟ್ಟು ಸಮುದಾಯಕ್ಕೆ ಪರಿಚಯಿಸಿಕೊಟ್ಟಿದೆ. ಕಾಡಿನಲ್ಲಿ ಸ್ವಚ್ಛಂದವಾಗಿ ಬದುಕು ಸಾಗಿಸುತ್ತಿದ್ದ ಬುಡಕಟ್ಟಿನವರನ್ನು ಸರ್ಕಾರ ಕಾಡಿನಿಂದ ಬೇರೆ ಸ್ಥಳಗಳಿಗೆ ಸ್ಥಳಾಂತರಿಸಿತು. ಆಧುನಿಕ ಸಮಾಜದಲ್ಲಿ ಅವರು ತಮ್ಮ ಬದುಕನ್ನು ಹೇಗೆ ಕಂಡುಕೊಳ್ಳಬೇಕು ಎಂಬುದರ ಬಗ್ಗೆ ಯೋಚಿಸಿ ಈ ಅಲೆಮಾರಿತನವನ್ನು ನಿಲ್ಲಿಸಲು, ಬುಡಕಟ್ಟು ಜನರನ್ನು ಒಂದೆಡೆ ನೆಲೆಸಲು ಶಾಶ್ವತ ನೆಲೆಯನ್ನು ಒದಗಿಸುವುದಕ್ಕೋಸ್ಕರ ಕರ್ನಾಟಕ ಸರ್ಕಾರ ವಸತಿ

ಯೋಜನೆಯಡಿ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಗಳ ಮತ್ತು ಐ.ಟಿ.ಡಿ.ಪಿ. ಗುಂಪು ಮನೆಗಳ ಮೂಲಕ ಕಳೆದ ೧೦ ವರ್ಷಗಳಿಂದ ಸುಮಾರು ೫೦೦೦ ಮನೆಗಳನ್ನು ಒದಗಿಸಿದೆ. ಆದರೂ ಬೆಳೆಯುತ್ತಿರುವ ಬುಡಕಟ್ಟು ಜನಸಂಖ್ಯೆಗೆ ಆ ಗುರಿ ಅತಿ ಕಡಿಮೆಯಾಗಿದ್ದು ಇನ್ನೂ ಬಳ್ಳಾರಿ ಜಿಲ್ಲೆಯಲ್ಲಿ ವಸತಿ ರಹಿತ ಮತ್ತು ನಿವೇಶನ ರಹಿತ ೨೦,೬೩೮ ಕುಟುಂಬಗಳು ಇವೆ. ಇವುಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಮೂಲತಃ ಬುಡಕಟ್ಟಿನವರು ಕಾಡು-ಮೇಡು, ಗಿರಿ-ಶಿಖರಗಳಲ್ಲಿ ದೊರೆಯುವ ಗೆಡ್ಡೆ-ಗೆಣಸು, ಹಣ್ಣು-ಹಂಪಲಗಳನ್ನು, ತಿನ್ನುವುದರ ಜೊತೆಗೆ ಬೇಟೆಯಾಡಿ ಪ್ರಾಣಿ, ಪಕ್ಷಿಗಳ ಮಾಂಸ ಮತ್ತು ಮೀನಿನಿಂದ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದರು. ಆಧುನಿಕತೆಯ ಪ್ರಭಾವದಿಂದ ನಗರಗಳಲ್ಲಿ ಬಂದು ನೆಲೆಸಲು ಪ್ರಾರಂಭಿಸಿದ ನಂತರ ಇತರೆ ಆಹಾರ ಪದಾರ್ಥಗಳನ್ನು ಸೇವಿಸಲು ಪ್ರಾರಂಭಿಸಿರುತ್ತಾರೆ. ಆದರೆ ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಕೂಲಿ ಪಡೆಯುವುದು ಕಷ್ಟಕರವಾಗಿದೆ. ಈ ಬುಡಕಟ್ಟಿನವರಿಗೆ ಬೇರೆ ವೃತ್ತಿಯಲ್ಲಿ ಕುಶಲತೆಇಲ್ಲದೇ ಇರುವುದು, ಕೂಲಿ ಕೆಲಸ ಪಡೆಯಲು ಅಡ್ಡಿಯಾಗಿದೆ. ದೈಹಿಕ ಶ್ರಮದ ಮೇಲೆ ದೊರೆಯುವ ಕೂಲಿಯಿಂದ ಅವರ ಕುಟುಂಬವನ್ನು ಸಾಗಿಸಲು ಸಾಕಾಗುತ್ತಿಲ್ಲ. ಇದರಿಂದ ಬುಡಕಟ್ಟು ಜನರು ಹಸಿವಿನಿಂದ ಅನಾರೋಗ್ಯದಿಂದ ಅಲ್ಪಾವಧಿಯಲ್ಲಿ ಅಕಾಲ ಮರಣಕ್ಕೆ ತುತ್ತಾಗುತ್ತಿದ್ದಾರೆ. ಬುಡಕಟ್ಟಿನವರು ಕುಟುಂಬ ಯೋಜನೆಯ ಕಡೆಗೆ ಕಿಂಚಿತ್ತು ಗಮನಕೊಡದೆ ಜನಸಂಖ್ಯೆ ಸ್ಫೋಟಕ್ಕೆ ಕಾರಣವಾಗಿದ್ದು, ಮುಂದಿನ ಪೀಳಿಗೆಗೆ ಬಡತನವನ್ನು ಬಳುವಳಿಯಾಗಿ ನೀಡುತ್ತಿದ್ದಾರೆ.

ಈ ಬುಡಕಟ್ಟು ಜನರಲ್ಲಿ ಸ್ತ್ರೀ ಪುರುಷರಿಬ್ಬರೂ ಅಲಂಕಾರ ಪ್ರಿಯರಾಗಿದ್ದು, ಮಾಂಸ ಮತ್ತು ಮದ್ಯವನ್ನು ಸೇವಿಸುತ್ತಾರೆ. ಇವರ ಆರ್ಥಿಕ ಸ್ಥಿತಿಯು ತುಂಬಾ ಕೆಳಮಟ್ಟದಲ್ಲಿದೆ. ಬಹುಸಂಖ್ಯಾತ ಬುಡಕಟ್ಟು ಜನರು ಕೃಷಿ ಕೂಲಿಗಳಾಗಿ ಜೀವನ ನಡೆಸುತ್ತಿದ್ದಾರೆ. ಬಹಳಷ್ಟು ಬುಡಕಟ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದು ಬೇಟೆ ಹಾಗೂ ಪಶುಪಾಲನೆಯನ್ನು ತಮ್ಮ ವೃತ್ತಿಯನ್ನಾಗಿ ಇಟ್ಟುಕೊಂಡಿದ್ದಾರೆ. ಇತ್ತೀಚಿನ ಅರಣ್ಯ ಕಾಯ್ದೆಗಳಿಂದ ಕದ್ದು ಬೇಟೆಯನ್ನು ನಡೆಸುತ್ತಿದ್ದಾರೆ. ಈ ಬುಡಕಟ್ಟು ಜನರು ಉತ್ಪಾದಕರೂ ಹಾಗೂ ಉಪಭೋಗಕರಾಗಿದ್ದು (Producers & Consumers) ಶೇ. ೮೦ ರಷ್ಟು ಬುಡಕಟ್ಟು ಜನರು ಕೃಷಿಯನ್ನು ಪ್ರಧಾನ ಕಸುಬನ್ನಾಗಿ ಅವಲಂಬಿಸಿದ್ದಾರೆ. **"ಇವರ ಅರ್ಥಿಕತೆಯು ಅವರ ಜೀವನಾಧಾರವನ್ನು ಅಲಂಬಿಸಿರುವ ವ್ಯವಸ್ಥೆಯಾಗಿದೆ"** (Subsistence Economy). ಬುಡಕಟ್ಟು ಜನರ ಆರ್ಥಿಕ ಚಟುವಟಿಕೆಗಳು ಅವರು ವಾಸಿಸುತ್ತಿರುವ ಅರಣ್ಯದ ಮೇಲೆ ಅವಲಂಬಿತವಾಗಿರುತ್ತದೆ. ಇವರ ಆರ್ಥಿಕ ಪರಿಸ್ಥಿತಿಯನ್ನು ಅಳೆಯುವಾಗ ಅವರಲ್ಲಿರುವ ಹಸು-ಕರು, ಕುರಿ-ಎಮ್ಮೆ, ಇತ್ಯಾದಿ ಸಾಕು ಪ್ರಾಣಿಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಕೃಷಿ, ಕೃಷಿ ಕೂಲಿ, ಪಶುಪಾಲನೆ ಮತ್ತು ಅವರ ಕಸುಬುಗಳು ಆರ್ಥಿಕತೆಯ ಮೂಲಾಧಾರವಾಗಿವೆ.

ಬುಡಕಟ್ಟು ಜನರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಮತ್ತು ಅಭಿವೃದ್ಧಿಗೊಳಿಸಲು, ಕೇಂದ್ರ ಸರ್ಕಾರ ಗಿರಿಜನ ಉಪಯೋಜನೆ ಎಂಬ ಕಾರ್ಯಕ್ರಮವನ್ನು ರೂಪಿಸಿ ಅಭಿವೃದ್ಧಿ ಇಲಾಖೆಗಳ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಅವುಗಳಿಂದ ನಿರಂತರ ಆದಾಯ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯ ಉದ್ದೇಶ.

೧. ಬುಡಕಟ್ಟು ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು.

೨. ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಅಲ್ಲದ ಪ್ರದೇಶಗಳ ಅಭಿವೃದ್ದಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು.

೩. ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಕ್ಯತೆಯನ್ನು ಪುನಃಶ್ಚೇತನ ಗೊಳಿಸುವುದು.

೪. ನಿರಂತರ ಆದಾಯ ತರುವ ಯೋಜನೆಗಳನ್ನು ಜಾರಿಗೊಳಿಸುವುದು.

೫. ಮೂಲಭೂತ ಸೌಕರ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ನೀಡುವುದು.

೬. ಬುಡಕಟ್ಟು ಜನರ ಶೋಷಣೆಯನ್ನು ತಪ್ಪಿಸುವುದು.

೭. ಉದ್ಯೋಗಾವಕಾಶವನ್ನು ಸೃಷ್ಟಿಸುವುದು.

೮. ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ಇದರ ಜೊತೆಗೆ ಬುಡಕಟ್ಟು ಜನರು ಸ್ವತಂತ್ರವಾಗಿ ಬದುಕಲು ಹಾಗೂ ಅವರ ಕುಟುಂಬಗಳನ್ನು ನಡೆಸಲು ಅವಶ್ಯಕವಾಗಿ ಬೇಕಾಗುವ ನಿರಂತರ ಆದಾಯಕ್ಕಾಗಿ ಆರ್ಥಿಕ ಚಟುವಟಿಕೆಗಳನ್ನು ಸರ್ಕಾರದ ಅಭಿವೃದ್ಧಿ ಇಲಾಖೆಗಳು, ನಿಗಮಗಳು, ಮಂಡಳಿಗಳು ತಮ್ಮ ವಾರ್ಷಿಕ ಅನುದಾನದಲ್ಲಿ ಶೆ.೩ ರಷ್ಟು ಅನುದಾನವನ್ನು ಬುಡಕಟ್ಟಿನವರ ಅಭಿವೃದ್ಧಿಗಾಗಿ ಕಾಯ್ದಿರಿಸಿ ಆರ್ಥಿಕ ಸೌಲತ್ತುಗಳ ಜೊತೆಗೆ ಬುಡಕಟ್ಟು ಜನರು ವಾಸಿಸುವಂತಹ ಕಾಲೋನಿ, ಹಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿವೆ. ಆದರೆ ಈ ಅನುದಾನ ಬುಡಕಟ್ಟು ಜನರ ಜನಸಂಖ್ಯೆಗೆ ಅತೀ ಕಡಿಮೆಯಾಗಿದ್ದು,ಇದರಿಂದ ಯಾವುದೇ ಪರಿಪೂರ್ಣ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗದ ಕಾರಣ ಈಗ ನಿಗಧಿಪಡಿಸಿರುವ ಶೇ. ೩ರ ಬದಲು ಶೆ. ೭ ರಷ್ಟು ಅನುದಾನವನ್ನು ನಿಗಧಿಪಡಿಸಲು ರಾಜ್ಯ ಸರ್ಕಾರ ಕ್ರಮಕೈಗೊಂಡಲ್ಲಿ ಈ ಯೋಜನೆಯು ಒಂದು ಅರ್ಥ ಪೂರ್ಣವಾಗುತ್ತದೆ.

ಮೊದಲನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಭಾರತದಾದ್ಯಂತ ಕೇವಲ ರೂ.೧೯.೦೩ ಕೋಟಿಗಳನ್ನು ಖರ್ಚುಮಾಡಿದ್ದು, ತದನಂತರ ೫ನೇ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ರೂ.೩೦೫ ಕೋಟಿಗಳಿಗೆ ಏರಿಸಲಾಯಿತು. ಇದರಿಂದ ಅವರ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿ ಸಾಧಿಸದೇ ಇರುವುದು ದಾಖಲೆಗಳಿಂದ ದೃಢಪಟ್ಟಿರುವುದರಿಂದ ಮತ್ತಷ್ಟು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹೆಚ್ಚು ಒತ್ತು ಕೊಡಲು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಬೇರ್ಪಡಿಸಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರಿಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ.

ಬುಡಕಟ್ಟು ಜನರ ಅಭಿವೃದ್ಧಿಗಾಗಿ ಗಿರಿಜನರ ಉಪಯೋಜನೆಯನ್ನು ಈ ಜಿಲ್ಲೆಯಲ್ಲಿ ೧೯೯೬-೯೭ ರಿಂದ ತಂದಿದ್ದರೂ ಈ ಯೋಜನೆಯ ಪೂರ್ಣ ಫಲವನ್ನು ಒಂದೇ ಬುಡಕಟ್ಟು ಪಡೆದುಕೊಳ್ಳುತ್ತಿರುವುದರಿಂದ, ಈ ಜಿಲ್ಲೆಯಲ್ಲಿರುವ ಇತರೆ ೩೦ ಬುಡಕಟ್ಟುಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿ ನಿರ್ಲಕ್ಷಿತ ಬುಡಕಟ್ಟುಗಳಾಗಿವೆ. ಕಾರಣ ಈ ಬುಡಕಟ್ಟುಗಳನ್ನು ಗುರುತಿಸುವುದು ಒಂದು ಸಮಸ್ಯೆಯಾಗಿದೆ. ಸರ್ಕಾರದ ಸಂಸ್ಥೆಗಳು ಅಥವಾ ಇಲಾಖೆಗಳು ಸಹ ಬುಡಕಟ್ಟಿನವರ ಬಗ್ಗೆ ಮಾಹಿತಿ, ಸಮೀಕ್ಷೆ ಇತ್ಯಾದಿ ಕಾರ್ಯಗಳಲ್ಲಿ ತೊಡಗಿದಾಗ, ಗುಡಾರ ಗುಡಿಸಿಲುಗಳನ್ನು

ಹಾಕಿಕೊಂಡು ವಾಸ ಮಾಡುತ್ತಿರುವ ಬುಡಕಟ್ಟು ಜನರ ಬಗ್ಗೆ ಚಿಂತಿಸದೇ, ಇವರು ಅಲೆಮಾರಿಗಳಾಗಿದ್ದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದರಿಂದ ಇವರನ್ನು ಗಣನೆಗೆ ತೆಗೆದುಕೊಳ್ಳದೇ ನಿರ್ಲಕ್ಷಿಸಿದ್ದಾರೆ. ಒಂದೇ ಸ್ಥಳದಲ್ಲಿ ಸುಮಾರು ವರ್ಷಗಳವರೆಗೆ ವಾಸಿಸಿದ್ದರು ಅದನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಆಕಾರಣದಿಂದ ಇವರುಗಳ ಹೆಸರನ್ನು ಮತದಾರರ ಪಟ್ಟಿಯಲ್ಲಾಗಲಿ, ಇನ್ನಿತರೇ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ದಾಖಲಿಸಿಕೊಳ್ಳದೇ ನಿರ್ಲಕ್ಷಿತರಾಗಿರುತ್ತಾರೆ. ಇದರಿಂದ ಇವರಿಗೆ ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, ವಾಸಸ್ಥಳದ ಚೀಟಿ ಸಿಕ್ಕದೇ, ಚುನಾವಣೆ ಪಟ್ಟಿಯಲ್ಲಿ ಸೇರದೇ, ಸರ್ಕಾರ ಸೌಲಭ್ಯಗಳನ್ನು ಪಡೆಯಲು ವಂಚಿತರಾಗಿದ್ದಾರೆ. ಇವೆಲ್ಲವುಕ್ಕಿಂತ ಮಿಗಿಲಾಗಿ ಇವರಲ್ಲಿ ಸಂಘ ಸಂಸ್ಥೆಗಳ ಕೊರತೆಯಿಂದಾಗಿ, ಅಸಂಘಟಿರಾಗಿ ತಮ್ಮ ಸಮಸ್ಯೆಗಳನ್ನು ಸರ್ಕಾರಕ್ಕೆ ಅಥವಾ ಇನ್ನಾವುದೇ ಪ್ರಾಧಿಕಾರದ ಗಮನಕ್ಕೆ ತರಲು ನಾಯಕರ ಕೊರತೆಯಿಂದಾಗಿ ಅಲಕ್ಷಿತ ವರ್ಗವಾಗಿಯೇ ಮುಂದುವರೆದಿದೆ. ಇದಕ್ಕೆಲಾ ಮುಖ್ಯ ಕಾರಣ ಅನಕ್ಷರತೆ.

ಬುಡಕಟ್ಟಿನವರು ದುಡಿಯುವ ಕೂಲಿಯಿಂದ ತಮ್ಮ ಜೀವನಕ್ಕೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಕೊಳ್ಳಲು ಸಾಕಾಗುತ್ತಿಲ್ಲ. ಇದರಿಂದ ಸಹಜವಾಗಿ ಸ್ಥಳೀಯ ಲೇವಾದೇವಿದಾರರ ಬಳಿ ಅಲ್ಪ ಸಾಲವನ್ನು ಅತೀ ಹೆಚ್ಚಿನ ಬಡ್ಡಿಗೆ ಪಡೆದು ಶೋಷಣೆಗೆ ಒಳಗಾಗುತ್ತಿದ್ದಾರೆ. ಅವರು ಉತ್ಪಾದಿಸುವ ವಸ್ತುಗಳನ್ನು ಮಾರಾಟ ಮಾಡಲು ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಯಿಲ್ಲದೆ, ಮಧ್ಯವರ್ತಿಗಳ ಹಾವಳಿಯಿಂದ ಅತಿಕಡಿಮೆ ಬೆಲೆಗೆ ಮಾರಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಆ ಕಾರಣಕ್ಕಾಗಿ ಕೇಂದ್ರ ಸರ್ಕಾರ ಬುಡಕಟ್ಟು ಜನರು ಹೆಚ್ಚಾಗಿ ವಾಸಿಸುವ ಸ್ಥಳದಲ್ಲಿ ಅವರನ್ನೇ ಸದಸ್ಯರನ್ನಾಗಿ ಮಾಡಿಕೊಂಡು ಲ್ಯಾಂಪ್ಸ್ ಎಂಬ ಸಂಘಗಳನ್ನು ಸ್ಥಾಪನೆ ಮಾಡಿ ಅವುಗಳ ಮೂಲಕ ಬುಡಕಟ್ಟು ಜನರಿಗೆ ಬೇಕಾಗುವ ದಿನನಿತ್ಯದ ಆಹಾರ ಪದಾರ್ಥಗಳನ್ನು ರಿಯಾಯ್ತಿ ದರದಲ್ಲಿ ಪೂರೈಸುವುದರ ಜೊತೆಗೆ ಅವರ ಆರ್ಥಿಕ ಚಟುವಟಿಕೆಗಳಿಗೆ ಕಡಿಮೆ ಬಡಿ ದರದಲ್ಲಿ ಸಾಲವನ್ನು ನೀಡಿ ನಿರಂತರ ಆದಾಯದ ಉತ್ಪತ್ತಿಗೆ ಅವಕಾಶ ಮಾಡಿಕೊಟ್ಟಿದೆ.

ಅರಣ್ಯ ಕಾಯ್ದೆ, ವನ್ಯಮೃಗ ಕಾಯ್ದೆ, ಮರಗಳ ಕಾಯ್ದೆಗಳು ಜಾರಿಗೆ ಬಂದು ಈ ಬುಡಕಟ್ಟು ಜನರ ಜೀವನವನ್ನು ಅತಂತ್ರ ಸ್ಥಿತಿಯಲ್ಲಿಟ್ಟಿವೆ.

ಜೀವನಕ್ಕೆ ಬೇಕಾಗುವ ಆದಾಯವನ್ನು ಗಳಿಸಲು ಕುಟುಂಬದ ಸ್ತ್ರೀ ಪುರುಷರಿಬ್ಬರೂ ಸಮಪ್ರಮಾಣದಲ್ಲಿ ದುಡಿಯುತ್ತಿದ್ದಾರೆ. ರಾಜ್ಯದ ಇತರೇ ಪ್ರದೇಶಗಳಲ್ಲಿ ಬುಡಕಟ್ಟು ಜನರ ದಿನ ನಿತ್ಯದ ಜೀವನಕ್ಕೆ ಬೇಕಾಗುವ ವಸ್ತುಗಳನ್ನು ಪೂರೈಸಲು ಹಾಗೂ ಕೃಷಿಗೆ ಬೇಕಾದ ಸಾಲ ಇತ್ಯಾದಿಗಳನ್ನು ನೀಡಲು ಬೃಹತ್ ವಿವಿದೊದ್ದೇಶ ಸಹಕಾರ ಸಂಘಗಳು (LAMPS) ಸ್ಥಾಪನೆಯಾಗಿದ್ದು, ಈ ಸಂಘಗಳು ಬುಡಕಟ್ಟು ಜನರಿಗೆ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅಲ್ಪ ಕಾಲದ ಸಾಲವನ್ನು ಅತಿ ಕಡಿಮೆ ಬಡ್ಡಿ ದರಕ್ಕೆ ನೀಡುವುದರ ಜೊತೆಗೆ, ಅವರು ಸಂಗ್ರಹಿಸಿದ ಅರಣ್ಯ ಉತ್ಪನ್ನಗಳನ್ನು ಮತ್ತು ಉತ್ಪದಿಸಿ ಕೃಷಿ ಉತ್ಪಾದನೆಯನ್ನು ಖರೀದಿಸಿ ಒಳ್ಳೆಯ ಬೆಲೆಯನ್ನು ಕೊಟ್ಟು, ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಿವೆ. ಆದರೆ ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಬುಡಕಟ್ಟು ಜನರನ್ನು ಹೊಂದಿರುವ ಬಳ್ಳಾರಿ ಜಿಲ್ಲೆಯಲ್ಲಿ ಈ ರೀತಿಯ ಯಾವುದೇ ಸಂಘಗಳು ಸ್ಥಾಪನೆಯಾಗದೇ ಇರುವುದು ಆಶ್ಚರ್ಯಕರ. ಸರ್ಕಾರ ಕೂಡಲೇ ಈ ರೀತಿಯ

ಲ್ಯಾಂಪ್ಸ್‌ಗಳನ್ನು ಬಳ್ಳಾರಿಯಲ್ಲಿ ಪ್ರಾರಂಭಿಸಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗೆ ಸಹಕರಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಬುಡಕಟ್ಟು ಜನರಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು ಅನಕ್ಷರತೆಯನ್ನು ಹೋಗಲಾಡಿಸಲು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬುಡಕಟ್ಟು ಜನರಿಗೆ ಶಿಕ್ಷಣ ನೀಡಲು ಅನೇಕ ಆಶ್ರಮ ಶಾಲೆಗಳಿದ್ದರೂ ಮಕ್ಕಳನ್ನು ಓದಿಸಲು ಶಾಲೆಗೆ ಕಳುಹಿಸುತ್ತಿಲ್ಲ. ಒಂದು ವೇಳೆ ಪ್ರಾರಂಭದಲ್ಲಿ ಕಳುಹಿಸಿದರೂ ಅರ್ಧಕ್ಕೆ ಶಾಲೆ ಬಿಡಿಸಿ ಕರೆತಂದು ದುಡಿಯಲು ಹಚ್ಚುವುದು ಕಂಡು ಬರುತ್ತಿದೆ. ದುಡಿಯಲು ಪ್ರಾರಂಭಿಸಿದ ಮಕ್ಕಳು ಅಪ್ರಾಪ್ತ ವಯಸ್ಸಿನಲ್ಲಿಯೇ ಅನೇಕ ದುಶ್ಚಟಗಳಿಗೆ ಬಲಿಯಾಗಿವೆ. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಆದರೆ ಅವಳು ಋತುಮತಿಯಾದ ತಕ್ಷಣ ಶಾಲೆ ಬಿಡಿಸಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಾರೆ. ಇದಕ್ಕೆ ಕಾರಣವನ್ನು ಕೆಲವರು ಹೀಗೆ ಹೇಳುತ್ತಾರೆ. ಹೆಣ್ಣು ಮಕ್ಕಳು ತಂದೆ-ತಾಯಿ, ಅಣ್ಣ-ಅತ್ತಿಗೆಯರ, ಲೈಂಗಿಕ ಸಂಪರ್ಕ ನೋಡಿ ಪ್ರಭಾವಿತರಾಗುತ್ತಾರೆ, ಅದರಿಂದ ಅವರು ಹಾಳಾಗುತ್ತಾರೆ ಎಂಬ ಅಂಜಿಕೆಯಿಂದ ಬೇಗ ಮದುವೆ ಮಾಡುತ್ತಾರೆ. ಶಿಕ್ಷಣದಿಂದ ಅವರು ತಮ್ಮ ಅಸ್ಥಿತ್ವವನ್ನು ತಾವೇ ರೂಪಿಸಿಕೊಳ್ಳುವಂತಾಗಬೇಕು ಎಂದು ಸರ್ಕಾರ ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ಬಳ್ಳಾರಿ ಜಿಲ್ಲೆಯ ಗಿರಿಜನ ಉಪಯೋಜನೆ ಅಡಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯಾಗಿರುವುದು ಬುಡಕಟ್ಟು ಮಕ್ಕಳು ಶಾಲೆಗಳಲ್ಲಿ ದಾಖಲಾಗಿರುವ ಸಂಖ್ಯೆಗಳಿಂದ ಧೃಡಪಟ್ಟಿದೆ. ಅವುಗಳ ಪೂರ್ಣವಿವರವನ್ನು ಅನುಬಂಧದಲ್ಲಿ ವಿವರಿಸಲಾಗಿದೆ. ಬುಡಕಟ್ಟು ಜನರ ಮಕ್ಕಳಿಗಾಗಿ ಇರುವ ಶೈಕ್ಷಣಿಕ ನೆರವಿನ ಯೋಜನೆಯಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಉತ್ತಮ ಶಿಕ್ಷಣವನ್ನು ನೀಡುವುದಕ್ಕಾಗಿ ಸರ್ಕಾರ ಪ್ರಯತ್ನ ನಡೆಸುತ್ತಿರುವುದು ನಿಜವಾಗಲೂ ಶ್ಲಾಘನೀಯ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಸೌಲಭ್ಯಗಳನ್ನು ಕೇವಲ ಬೇಡ ವಾಲ್ಮೀಕಿ, ಕಾಡುಕುರುಬ, ಮೇದ, ಹಕ್ಕಿಪಿಕ್ಕಿ, ಇತರೆ ಎಣಿಸುವಷ್ಟು ಬುಡಕಟ್ಟುಗಳು ಪ್ರಯೋಜನವನ್ನು ಪಡೆಯುತ್ತಿವೆ. ಬುಡಕಟ್ಟುಗಳ ಮೂಲ ಲಕ್ಷಣಗಳನ್ನು ಹೊಂದಿರುವ ಇತರೆ ಬುಡಕಟ್ಟುಗಳಾದ ಬಾರ್ಡ್ರಾ, ಅಡಿಯನ್, ಭಿಲ್‌ಗಳು ಈ ಕ್ಷೇತ್ರದಲ್ಲಿ ಯಾವುದೇ ಪ್ರಯೋಜನೆಯನ್ನು ಪಡೆಯದೇ ನಿರ್ಲಕ್ಷಿತವಾಗಿವೆ. ಸರ್ಕಾರ ಇವರಿಗಾಗಿಯೇ ಪ್ರತ್ಯೇಕ ಪ್ಯಾಕೇಜ್ ಯೋಜನೆಗಳನ್ನು ಪ್ರಾರಂಭಿಸಬೇಕಾಗಿದೆ. ಶಿಕ್ಷಣದ ಪ್ರಭಾವ ಈ ಬುಡಕಟ್ಟು ಜನರ ಜೀವನದ ಮೇಲೆ ಪರಿಣಾಮಕಾರಿಯಾಗಿದೆ. ಬುಡಕಟ್ಟು ಜನರಿಗೆ ಶಿಕ್ಷಣವನ್ನು ನೀಡುವಾಗ ಆದಷ್ಟು ಅವರ ಭಾಷೆ ಸಂಸ್ಕೃತಿಯ ಬಗ್ಗೆ ಹೆಚ್ಚಿಗೆ ಅರಿವು ಇರುವಂತಹ ಸ್ಥಳೀಯ ಶಿಕ್ಷಕರನ್ನು ನೇಮಿಸಬೇಕು. ನೇಮಿಸಿದಂತಹ ಶಿಕ್ಷಕರು ತಾವು ಬುಡಕಟ್ಟು ಸದಸ್ಯರಲ್ಲಿ ಒಬ್ಬರಾಗಿದ್ದೇವೆಂದು ಭಾವಿಸಿ ಕೆಲಸ ಮಾಡಲು ತೊಡಗಿದಾಗ ಮಾತ್ರ ಆ ಬುಡಕಟ್ಟು ಜನ ಸುಲಭವಾಗಿ ಸ್ಪಂದಿಸಿ ತಮ್ಮ ಸಮಸ್ಯೆಗಳನ್ನು ತೋಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ದೆಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

ಬುಡಕಟ್ಟು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಅನುದಾನವನ್ನು ಬಿಡುಗಡೆಮಾಡುತ್ತಿದೆ. ಈ ರೀತಿಯ ವಸತಿ ಶಾಲೆಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭವಾಗಿರುವುದಿಲ್ಲ. ಇದು ಬುಡಕಟ್ಟು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ನೆರವಾಗುವಂತಹ ಯೋಜನೆಯಾಗಿರುವುದರಿಂದ, ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯೂ ಅತ್ಯಂತ ಹೆಚ್ಚಿನ ಬುಡಕಟ್ಟು

ಜನಸಂಖ್ಯೆಯನ್ನು ಹೊಂದಿದ್ದು ಇಂತಹ ಜಿಲ್ಲೆಗೆ ಮೇಲೆ ತಿಳಿಸಿರುವ ಮಾದರಿ ವಸತಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

೧. ಶಿಕ್ಷಣ ಅಭಿವೃದ್ಧಿಗೆ ಅತ್ಯವಶ್ಯಕವಾಗಿದ್ದು, ಯೋಜನೆಯ ಶಕ ಪ್ರಾರಂಭವಾದ ದಿನದಿಂದ ಬುಡಕಟ್ಟು ಮತ್ತು ಬುಡಕಟ್ಟಲ್ಲದ ಜನರ ನಡುವೆ ಇರುವ ಶೈಕ್ಷಣಿಕ ತಾರತಮ್ಯಗಳನ್ನು ಹೋಗಲಾಡಿಸಲು, ಸರ್ಕಾರದ ಪ್ರಯತ್ನಗಳು ನಡೆದಿವೆ. ಬುಡಕಟ್ಟುಗಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಎರಡು ಸಾಮಾಜಿಕ ಚಳುವಳಿಗಳ ಪರಿಣಾಮವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

೨. ರಾಷ್ಟ್ರೀಯ ಚಳುವಳಿಯನ್ನು ಪ್ರಾರಂಭಿಸಿದ ಮಹತ್ಮಾಗಾಂಧೀಜಿ ಮತ್ತು ಅವರ ಅನುಯಾಯಿಗಳು, ಗುಜರಾತ್ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಿದ್ದರು. ಈ ಆಶ್ರಮ ಶಾಲೆಗಳು ಬುಡಕಟ್ಟು ಜನರಿಗೆ ಶಿಕ್ಷಣ ನೀಡುವುದಕ್ಕೆ ಬಹಳಷ್ಟು ಶ್ರಮಿಸಿವೆ.

೩. ಗೋದಾವರಿ ಪರುಲೇಕರ್‌ರವರಿಂದ ೧೯೪೦ರಲ್ಲಿ ಪ್ರಾರಂಭವಾದ ಸಾಮಾಜಿಕ ಚಳುವಳಿಗಳು ಸಹ ಬುಡಕಟ್ಟು ಜನರಿಗೆ ಶಿಕ್ಷಣವನ್ನು ನೀಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷ ಅವಕಾಶಗಳನ್ನು ನೀಡಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಬುಡಕಟ್ಟು ಜನರ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡಲು ವಿದ್ಯಾರ್ಥಿನಿಲಯಗಳ ಸೌಲಭ್ಯ, ಪಠ್ಯ ಪುಸ್ತಕಗಳು, ಸಮವಸ್ತ್ರಗಳು ಇತ್ಯಾದಿಗಳನ್ನು ನೀಡಲಾಗುತ್ತಿದೆ. ಇದರಿಂದ ಬುಡಕಟ್ಟು ವಿದ್ಯಾರ್ಥಿಗಳು ಶಾಲೆಗಳಿಗೆ ದಾಖಲಾಗುವ ಸಂಖ್ಯೆ ವಿವಿಧ ಹಂತಗಳಲ್ಲಿಹೆಚ್ಚಾಗುತ್ತಿರುವುದರ ಜೊತೆಗೆ ಬುಡಕಟ್ಟು ಜನರಲ್ಲಿ ಸಾಕ್ಷರತೆಯ ಮಟ್ಟವು ಸಹ ಏರುತ್ತಿದೆ.

ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಶಿಕ್ಷಣಕ್ಕೆ ಅತಿಹೆಚ್ಚಿನ ಆದ್ಯತೆಯನ್ನು ನೀಡಲಾಗಿತ್ತು.

೮ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಶಾಲೆಯನ್ನು ಬಿಡುವಂತಹ ಮಕ್ಕಳ ಸಂಖ್ಯೆ ೫೪.೫೮ ಇದ್ದ ಪ್ರಮಾಣ ೮ ನೇ ಯೋಜನೆ ಅವಧಿಯಲ್ಲಿ ಶೇ.೩೫ ಕ್ಕೆ ಇಳಿಸುವ ಗುರಿಯನ್ನು ಹೊಂದಿದ್ದು, ಆ ಪ್ರಕಾರ ೧೯೯೬-೯೭ನೇ ಸಾಲಿನಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ನಿಗಧಿತ ಗುರಿಗಿಂತ ಹೆಚ್ಚಾಗಿ ಶೇ. ೧೭.೬೧ ಇಳಿದಿರುವುದು. ಇದು ಶಿಕ್ಷಣ ಇಲಾಖೆಯ ವಾರ್ಷಿಕ ವರದಿಯಿಂದ ಧೃಡಪಟ್ಟಿದೆ. ಇದು ನಿಜವಾಗಲು ಉತ್ತಮ ಸಾಧನೆಯಾಗಿದೆ.

ಅಧ್ಯಾಯ ೮

ಉಪಸಂಹಾರ

ಉಪಸಂಹಾರ

ಭಾರತ ಸ್ವಾತಂತ್ರ್ಯ ಪಡೆದ ನಂತರ, ಬುಡಕಟ್ಟು ಸಮುದಾಯಗಳನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ತರವುದು ಸರ್ಕಾರದ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ಹಲವಾರು ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ಅನುಷ್ಠಾನಗೊಳಿಸಿ, ಬುಡಕಟ್ಟು ಅಭಿವೃದ್ಧಿಗಾಗಿ ಶ್ರಮಿಸಿದೆ. ೫ನೇ ಪಂಚವಾರ್ಷಿಕಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಗಿರಿಜನ ಉಪಯೋಜನೆ ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದದ್ದು ಈ ಕ್ಷೇತ್ರದಲ್ಲಿ ಒಂದು ಮೈಲುಗಲ್ಲಾಗಿದೆ.

ಬುಡಕಟ್ಟು ಜನರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಲ್ಲಿ ಅಧ್ಯಯನಕಾರರು ಅಧ್ಯಯನ ಮಾಡಿರುವುದು ಸರಿಯಷ್ಟೆ. ಆದರೆ ಗಿರಿಜನ ಉಪಯೋಜನೆ ಅಡಿಯಲ್ಲಿ ಅಭಿವೃದ್ಧಿಯ ಬಗ್ಗೆ ಅದರಲ್ಲೂ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ, ಯಾರೂ ಅಧ್ಯಯನ ಮಾಡದೇ ಇರುವ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಇದರ ಉದ್ದೇಶ ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ಬಾದಕಗಳನ್ನು ಪತ್ತೆ ಹಚ್ಚುವುದು, ಅವುಗಳಿಗೆ ಸೂಕ್ತ ಸಲಹೆಗಳನ್ನು ನೀಡುವುದು, ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗೆ, ಪೂರಕ ಯೋಜನೆಗಳನ್ನು ರೂಪಿಸಲು ಸಲಹೆಗಳನ್ನು ನೀಡುವುದು.

ಭಾರತ ಸಂವಿಧಾನದಲ್ಲಿ ಬುಡಕಟ್ಟು ಸಮುದಾಯಗಳ ಪ್ರಗತಿಗೆ ಅವಕಾಶ ನೀಡಿದ್ದು, ಅವರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಅಭಿವೃದ್ಧಿಗಾಗಿ ಹಲವಾರು ಅಭಿವೃದ್ಧಿ ಇಲಾಖೆಗಳ ಮೂಲಕ ಬುಡಕಟ್ಟುಪರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು, ಶೈಕ್ಷಣಿಕ ನೆರವಿನ ಯೋಜನೆಗಳು ಈ ಯೋಜನೆ ಅಡಿಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಅನಕ್ಷರತೆಯನ್ನು ಹೋಗಲಾಡಿಸಲು ಶಿಕ್ಷಣಕ್ಕೆ ಹೆಚ್ಚಿನ ಅದ್ಯತೆ ನೀಡಿ ಉಚಿತ ಶಿಕ್ಷಣವನ್ನು ನೀಡುವುದರ ಜೊತೆಗೆ ಶಿಕ್ಷಣವನ್ನು ಪಡೆಯಲು ಬೇಕಾಗುವ ವಿದ್ಯಾರ್ಥಿ ನಿಲಯಗಳ ಸೌಲಭ್ಯಗಳನ್ನು ಒದಗಿಸಲಾಗಿದೆ. ಬುಡಕಟ್ಟು ಜನರ ಜೀವನೋಪಾಯಕ್ಕಾಗಿ, ನಿರಂತರ ಅದಾಯ ಬರುವಂತಹ ಆರ್ಥಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಬಡತನ

ರೇಖೆಯಿಂದ ಮೇಲಕ್ಕೆ ತರಲು ಪ್ರಯತ್ನಿಸಿದೆ. ಬುಡಕಟ್ಟಿನವರು ಸಾಮಾನ್ಯವಾಗಿ ಅಲೆಮಾರಿ, ಅರೆಅಲೆಮಾರಿ ಸ್ವಭಾವದವರಾಗಿದ್ದು, ಅಹಾರಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗಿ ವಾಸಿಸುವುದು ಕಾಣುತ್ತಿದೆ. ಈ ವಲಸೆ ಹೋಗುವುದನ್ನು ತಪ್ಪಿಸಿ, ಒಂದಡೆ ನೆಲಸಲು ಶಾಶ್ವತ ನೆಲೆಯನ್ನು ಒದಗಿಸಲು, ವಸತಿಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ, ಮನೆಗಳನ್ನು ನಿರ್ಮಿಸಿ ಕೊಡಲಾಗುತ್ತದೆ. ನಿರುದ್ಯೋಗ ಯುವಕ ಯುವತಿಯರಿಗೆ, ಸ್ವಾವಲಂಬನಾ ಬದುಕನ್ನು ನಡೆಸಲು ನವಚೇತನ ಯೋಜನೆಯಡಿಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಸಾಮಾಜಿಕ ಭದ್ರತೆಯೋಜನೆ ಅಡಿಯಲ್ಲಿ ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ಜೀವ ವಿಮಾ ಸೌಲಭ್ಯಗಳನ್ನು ಒದಗಿಸಲಾಗುತ್ತಿವೆ.

ಅಸ್ಪೃಶ್ಯತೆ ನಿವಾರಣೆ ಯೋಜನೆ ಅಡಿಯಲ್ಲಿ ದೌರ್ಜನ್ಯಕ್ಕೆ ಒಳಗಾದ ಬುಡಕಟ್ಟು ಜನರಿಗೆ ರೂ ೨೫,೦೦೦ ದಿಂದ ೨ ಲಕ್ಷದವರೆಗೆ ವಿವಿಧ ರೀತಿಯಲ್ಲಿ ಪರಿಹಾರ ಧನವನ್ನು ನೀಡಲಾಗುತ್ತಿದೆ. ಜೊತೆಗೆ ಕಾನೂನಿನ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಈ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಸ್ವಯಂ ಸೇವಾ ಸಂಸ್ಥೆಗಳು ಸಹ ಕೆಲಸ ನಿರ್ವಹಿಸುತ್ತಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯ ಶೇ.೧೮ ರಷ್ಟು ಬುಡಕಟ್ಟು ಜನ ಸಂಖ್ಯೆಯನ್ನು ಹೊಂದಿದ್ದು, ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಬುಡಕಟ್ಟು ಜನರನ್ನು ಹೊಂದಿ ಮೊದಲನೇಯ ಸ್ಥಾನದಲ್ಲಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಯ ಒಟ್ಟು ಬುಡಕಟ್ಟು ಜನಸಂಖ್ಯೆಯ ಶೇ.೯೭ ರಷ್ಟು ವಾಲ್ಮೀಕಿ, ಬೇಡ, ನಾಯಕ ಜನಾಂಗಕ್ಕೆ ಸೇರಿರುವುದು ದಾಖಲಾತಿಗಳಿದ್ದು ಧೃಡಪಟ್ಟಿದೆ. ಕರ್ನಾಟಕ ರಾಜ್ಯದಲ್ಲಿ ೫೦ ಬುಡಕಟ್ಟು ಪಂಗಡಗಳಿದ್ದು, ಆ ಪೈಕಿ ೩೧ ಬುಡಕಟ್ಟು ಪಂಗಡಗಳು ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುತ್ತಿರುವುದು ಜನಗಣತಿ ವರದಿಯಿಂದ ಧೃಡಪಟ್ಟಿದೆ. ಈ ೩೧ ಬುಡಕಟ್ಟುಗಳ ಪೈಕಿ ೨೬ ಬುಡಕಟ್ಟಗಳು ನಿರ್ಲಕ್ಷಿತ ಬುಡಕಟ್ಟುಗಳಾಗಿವೆ.

ಕರ್ನಾಟಕದ ಘೋಷಿತ ಬುಡಕಟ್ಟುಗಳಲ್ಲಿ ಹಲವು ಅಲೆಮಾರಿತನ, ಅರೆ ಅಲೆಮಾರಿತನ ಮುಂದುವಾರಿಸುತ್ತಿದ್ದರೆ ಇನ್ನೂ ಕೆಲವು ಬುಡಕಟ್ಟುಗಳು, ಬೇಟೆ, ಪಶುಪಾಲನೆ, ಕೃಷಿ ಮತ್ತು ಕೃಷಿ ಕೂಲಿಯನ್ನು ಅವಲಂಭಿತವಾಗಿವೆ.

ಬುಡಕಟ್ಟು ಜನರ ಅಭಿವೃದ್ಧಿಗಾಗಿ ಮೊದಲನೇಯ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಯೋಜನೆಗಳನ್ನು ಕೈಗೊಂಡು ಅನುಷ್ಟನಗೊಳಿಸಲು ಪ್ರಾರಂಭಿಸಿದ್ದು, ಇದುವರೆಗೂ ಮುಂದುವರೆಯುತ್ತಿವೆ.

ಮೊದಲನೇಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಶಿಕ್ಷಣ ಮತ್ತು ಸಂಸ್ಕೃತಿ, ಬುಡಕಟ್ಟುಗಳ ಅರ್ಥಿಕತೆಯ ಅಭಿವೃದ್ಧಿ, ಸಮಾಜ ಕಲ್ಯಾಣ ಕ್ಷೇತ್ರಕ್ಕೆ ಹೆಚ್ಚಿನ ಅದ್ಯತೆ ನೀಡಿ ಪ್ರಗತಿಯನ್ನು ಸಾಧಿಸಲಾಯಿತು.

೨ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಬುಡಕಟ್ಟು ಅರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಈ ಅವಧಿಯಲ್ಲಿ ೪೩ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳನ್ನು ತೆರೆಯಲಾಯಿತು. ಬುಡಕಟ್ಟು ಜನರ ವಸತಿ ಪರಿಸ್ಥಿತಿ ಅತೃಪ್ತಿದಾಯಕವಾಗಿದ್ದುರಿಂದ ೮೦೦೦ ಮನೆಗಳನ್ನು ನಿರ್ಮಿಸಲಾಯಿತು.

೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಅಭಿವೃದ್ಧಿ, ಭೂ ಸಾರ ಸಂರಕ್ಷಣೆ, ಸಣ್ಣ ನೀರಾವರಿ ಕ್ಷೇತ್ರಕ್ಕೆ ಹಚ್ಚಿನ ಅದ್ಯತೆ ನೀಡಲಾಯಿತು. ಬುಡಕಟ್ಟು ಜನರ ಅರ್ಥಿಕ ಅಭಿವೃದಿಗೂ ಅದ್ಯತೆ ನೀಡಲಾಯಿತು. ೪೩ ಬುಡಕಟ್ಟು

ಅಭಿವೃದ್ಧಿ ಬ್ಲಾಕ್‌ಗಳನ್ನು ೪೫೮ ಬ್ಲಾಕ್‌ಗಳಿಗೆ ಹೆಚ್ಚಿಸಲಾಯಿತು. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆಸಕ್ತಿ ತೋರಿಸಿದ್ದರಿಂದ ಬುಡಕಟ್ಟು ಸಾಕ್ಷರತೆಯ ಮಟ್ಟ ೯.೧೬ ಕ್ಕೆ ಏರಿತು.

೪ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರ ಬುಡಕಟ್ಟು ಜನರ ಮತ್ತು ಪ್ರದೇಶದ ಅಭಿವೃದ್ಧಿಗಾಗಿ ೬ ಪೈಲೆಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಲಾಯಿತು. ಇದರ ಜೊತೆಗೆ ಕೃಷಿ, ಸಹಕಾರ, ಸಣ್ಣ ಕೈಗಾರಿಕೆ, ನೀರಾವರಿ ಕ್ಷೇತ್ರಗಳಿಗೆ ಆದ್ಯತೆ ನೀಡಲಾಯಿತು.

೫ ನೇ ಪಂಚವಾರ್ಷಿಕ ಯೋಜನೆಯು ಬುಡಕಟ್ಟು ಅಭಿವೃದ್ಧಿ ಕ್ಷೇತ್ರದಲ್ಲಿ ಒಂದು ಮೈಲುಗಲ್ಲಾಗಿದೆ. ಈ ಅವಧಿಯಲ್ಲಿ ರಾಜ್ಯದ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ ಮುಖ್ಯ ಗುರಿಯಾಗಿತ್ತು. ಇಷ್ಟೆಲ್ಲಾ ಯೋಜನೆಗಳನ್ನು ಕೈಗೊಂಡು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಶ್ರಮಿಸಿದರೂ ಸಾಕಷ್ಟು ಪ್ರಗತಿಯನ್ನು ಕಾಣದ ಪ್ರಯುಕ್ತ ಕೇಂದ್ರ ಸರ್ಕಾರ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ವಿಶೇಷ ಘಟಕ ಯೋಜನೆ ಮಾದರಿಯಲ್ಲಿಯೇ ಗಿರಿಜನ ಉಪಯೋಜನೆಯನ್ನು ಜಾರಿಗೆ ತಂದಿತು.

ಗಿರಿಜನ ಉಪಯೋಜನೆಯ ಮುಖ್ಯ ಉದ್ದೇಶ, ಬುಡಕಟ್ಟು ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು. ನಿರಂತರ ಆದಾಯ ಬರುವಂತಹ ಯೋಜನೆಗಳನ್ನು ಜಾರಿಗೊಳಿಸುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸವುದು. ಬುಡಕಟ್ಟು ಜನರ ಶೋಷಣೆ ತಪ್ಪಿಸುವುದು ಇತ್ಯಾದಿ.

ಬುಡಕಟ್ಟು ಜನರ ಮುಖ್ಯ ವೃತ್ತಿ ವ್ಯವಸಾಯ. ಇದು ಅವರ ಆದಾಯದ ಮೂಲವಾಗಿತ್ತು. ಆ ಕಾರಣ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಹಚ್ಚಿನ ಬಂಡವಾಳವನ್ನು ತೊಡಗಿಸಲಾಗಿತ್ತು.

೬ನೇ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲು ೧೮೧ ಐ.ಟಿ.ಡಿ.ಪಿ.ಗಳನ್ನು ಪ್ರಾರಂಭಿಸಲಾಯಿತು. ಈ ಪೈಕಿ ಕರ್ನಾಟಕದಲ್ಲಿಯೂ ೫ ಐ.ಟಿ.ಡಿ.ಪಿ.ಗಳನ್ನು ಸ್ಥಾಪಿಸಲಾಯಿತು. ಇದರ ಜೊತೆಗೆ ೨೪೫ ಎಮ್‌ಎಡಿಎ ಪ್ಯಾಕೇಜ್‌ಗಳನ್ನು ಪ್ರಾರಂಭಿಸಲಾಯಿತು. ೭೨ ಆದಿವಾಸಿ ಪಂಗಡಗಳ ಯೋಜನೆಯು ದೇಶಾದ್ಯಂತ ಕಾರ್ಯಚರಣೆಯಲ್ಲಿದ್ದವು. ಇಷ್ಟೆಲ್ಲಾ ಯೋಜನೆಗಳು ಪ್ರಾರಂಭವಾದರೂ ಬುಡಕಟ್ಟು ಅಭಿವೃದ್ಧಿಯ ಪ್ರಗತಿ ಕುಂಟುತ್ತಾ ಸಾಗುತ್ತಿದ್ದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುವ ಸಲುವಾಗಿ ೧೯೯೯ರಲ್ಲಿ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯವನ್ನು ರಚಿಸಲಾಯಿತು.

ಮೊದಲನೇಯ ಪಂಚವಾರ್ಷಿಕ ಯೋಜನೆಯಲ್ಲಿ ರೂ. ೧೯.೯೩ ಕೋಟಿಗಳನ್ನು ಖರ್ಚುಮಾಡಿ, ೫ನೇ ಪಂಚವಾರ್ಷಿಕ ಯೋಜನೆಯ ಸಮಯಕ್ಕೆ ೩೦೫ ಕೋಟಿಗಳಿಗೆ ಏರಿಸಲಾಯಿತು. ಆದರೂ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿಸಿದ ಪ್ರಗತಿ ದೊರೆಯದ ಕಾರಣ, ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲಾಯಿತು.

೬ನೇ ಪಂಚವಾರ್ಷಿಕ ಯೋಜನೆಯ ಸಮಯಕ್ಕೆ ಶೇ. ೭೫ ರಷ್ಟು ಗಿರಿಜನರು ಗಿರಿಜನ ಉಪಯೋಜನೆಯ ಪ್ರಯೋಜನವನ್ನು ಪಡೆದು ಕೊಂಡಿರುತ್ತಾರೆ. ೮ ಮತ್ತು ೯ ನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಭಾರತ ಸಂವಿದಾನದ ಅನುಚ್ಛೇದ ೨೭೫ (೧) ರ ಪ್ರಕಾರ ಭಾರತ ಸರ್ಕಾರ ರಾಜ್ಯ ಸರ್ಕಾರಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

ಇದರಲ್ಲಿ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಅದ್ಯತೆಯನ್ನು ನೀಡಲಾಗಿದೆ. ಆನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ೫೪,೫೮ ರಿಂದ ೧೭.೬೧ ಕ್ಕೆ ಇಳಿದಿರುವುದು ಉತ್ತಮ ಪ್ರಗತಿಯಾಗಿದೆ.

ಗಿರಿಜನ ಉಪಯೋಜನೆಯನ್ನು ಐ.ಟಿ.ಡಿ.ಪಿ, ಬುಡಕಟ್ಟು ಸಂಶೋಧನಾ ಕೇಂದ್ರಗಳು, ಸರ್ಕಾರೇತರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕದಲ್ಲಿ ಗಿರಿಜನ ಉಪಯೋಜನೆಯನ್ನು ೧೯೭೮-೮೩ರಲ್ಲಿ ಜಾರಿಗೊಳಿಸಲಾಯಿತು. ಇದನ್ನು "ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ" ಎಂಬ ಹೆಸರಿನಲ್ಲಿ ಆನುಷ್ಠಾನಗೊಳಿಸಲಾಯಿತು. ಆದರೆ ಈ ಯೋಜನೆಯಡಿಯಲ್ಲಿ ಶೇ.೧೪ ರಷ್ಟು ಬುಡಕಟ್ಟು ಜನರು ಬರುತ್ತಿದ್ದು, ಉಳಿದ ಶೇ.೮೬ ರಷ್ಟು ಬುಡಕಟ್ಟಿನವರು ಈ ಕ್ಷೇತ್ರದ ಹೊರಗೆ ಉಳಿದಿದ್ದರಿಂದ, ಎಲ್ಲಾ ಬುಡಕಟ್ಟು ಜನರಿಗೆ ಈ ಯೋಜನೆಯ ಫಲ ದೊರೆಯುವಂತೆ, ೧೯೯೪-೯೫ ರಿಂದ ರಾಜ್ಯಾದ್ಯಂತ ಜಾರಿಗೊಳಿಸಲಾತು.

ಬಳ್ಳಾರಿ ಜಿಲ್ಲೆಯಲ್ಲಿ ಗಿರಿಜನ ಉಪಯೋಜನೆಯನ್ನು ೧೯೯೬-೯೭ ರಲ್ಲಿ ಪ್ರಾರಂಭಿಸಿ, ಅಭಿವೃದ್ಧಿ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಶೇ.೭೫ ರಷ್ಟು ಸಹಾಯಧನ ಮತ್ತು ಶೇ.೨೫ ಬ್ಯಾಂಕ್ ಸಾಲದ ಮೂಲಕ ಸ್ವತ್ತುಗಳನ್ನು ನೀಡಲಾಗುತ್ತಿದೆ. ಒಟ್ಟಾರೆ ಗರಿಷ್ಠ ರೂ.೧೦,೦೦೦ ಸಹಾಯಧನವನ್ನು ನೀಡಲಾಗುತ್ತಿದೆ. ಇದಲ್ಲದೆ ಬುಡಕಟ್ಟು ಜನರ ಅಭಿವೃದ್ಧಿಗಾಗಿ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮವು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿ ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಯೋಗದ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಸಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗ ಸ್ಥಾಪನೆಯಾಗಿ, ಬುಡಕಟ್ಟು ಜನರ ಕಲ್ಯಾಣ ಮತ್ತು ಸಂರಕ್ಷಣೆ ಕಾರ್ಯಗಳನ್ನು ನಿರ್ವಹಿಸುತ್ತಿವೆ.

ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸಲು ಹಲವಾರು ಬಾದಕಗಳಿದ್ದು, ಅವುಗಳನ್ನು ಬಗೆಹರಿಸಲು ಪರಿಹಾರೋಪಾಯಗಳನ್ನು ಸಹ ಸೂಚಿಸಲಾಗಿದೆ. ಪ್ರಸ್ತುತ ಬುಡಕಟ್ಟು ಜನರ ಅಭಿವೃದ್ಧಿಯ ಬಗ್ಗೆ ಅಧ್ಯಯನವನ್ನು ನಡೆಸಿದಾಗ ಅವರ ಸಾಮಾಜಿಕ ಸ್ಥಿತಿಗತಿಗಳು ಆರ್ಥಿಕ ಸಂಕಷ್ಟಗಳು, ಶಿಕ್ಷಣ, ಆರೋಗ್ಯ, ನೈರ್ಮಲ್ಯ ರಕ್ಷಣೆ ಮತ್ತು ರಾಜಕೀಯ ಸ್ಥಿತಿಗತಿಗಳು ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಿ ಅನೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ, ಸಲಹೆಗಳನ್ನು ಸೂಚಿಸಲಾಗಿದೆ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳನ್ನು ತೌಲನಿಕ ಅಧ್ಯಯನದಿಂದ ಕೆಲವೊಂದು ಮಹತ್ವದ ಅಂಶಗಳನ್ನು ಕಂಡುಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ೩೧ ಬುಡಕಟ್ಟು ಜನಾಂಗಗಳು ವಾಸಿಸುತ್ತಿದ್ದರೂ ಅವರಲ್ಲಿ ೩೦ ಬುಡಕಟ್ಟುಗಳಿಗೆ ಸಂಘ ಸಂಸ್ಥೆ, ಸಂಘಟನೆಗಳ ಕೊರತೆ ಇರುವುದು ಅಧ್ಯಯನದಿಂದ ಕಂಡು ಬಂದಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಬಹಳ ಹಿಂದುಳಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿರುವ ನಿರ್ಲಕ್ಷಿತ ೩೦ ಬುಡಕಟ್ಟು ಜನಾಂಗಗಳ

ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಚಿಂತಿಸಿ, ಪ್ರತ್ಯೇಕವಾಗಿ ಪೈಲೆಟ್ ಪ್ರಾಜೆಕ್ಟ್‌ಗಳನ್ನು ರೂಪಿಸಬೇಕಾಗಿದೆ. ಈ ಅಧ್ಯಯನ ಕಾಲದಲ್ಲಿ ೧೯೯೯-೨೦೦೦, ೨೦೦೦-೦೧ರ ಈ ಎರಡು ವರ್ಷಗಳಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಕೈಗೊಂಡ ವಿವಿಧ ಕಾರ್ಯಕ್ರಮಗಳ ಅಭಿವೃದ್ಧಿ ಪ್ರಗತಿಯನ್ನು ಪರಿಶೀಲಿಸಲು ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ೯೯ ಆಯ್ದ ಗುಂಪು ಗ್ರಾಮಗಳಲ್ಲಿ, ೫೩೪ ಬುಡಕಟ್ಟು ಫಲಾನುಭವಿಗಳನ್ನು ಸಂದರ್ಶಿಸಿದಾಗ ದೊರೆತ ಮಾಹಿತಿ ಪ್ರಕಾರ ಶೇ.೭೦ ರಷ್ಟು ಯೋಜನೆ ಫಲಪ್ರದವಾಗಿರುವುದು ಸ್ವತ್ತುಗಳಿಂದ ಧೃಡಪಟ್ಟಿದೆ. ಉಳಿದ ಶೇ. ೨೦ ರಷ್ಟು ಸಾಧನೆಯಾಗದೆ ಇರಲು ಹಲವಾರು ಕಾರಣಗಳಿದ್ದು ಈ ಎಲ್ಲಾ ಕಾರಣಗಳನ್ನು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಸಾಧನೆಯಾಗಿರುವುದು ಬುಡಕಟ್ಟು ಮಕ್ಕಳ ಶಾಲೆ ದಾಖಲಾತಿಗಳಿಂದ ಧೃಡಪಟ್ಟಿದೆ.

ಈ ಅಧ್ಯಯನದ ಮಾಹಿತಿಯನ್ನು ಬಳ್ಳಾರಿ ಜಿಲ್ಲೆಯ ಇತರೆ ಬುಡಕಟ್ಟುಗಳ ಅಭಿವೃದ್ಧಿಗಾಗಿ ಪೈಲೆಟ್ ಪ್ರಾಜೆಕ್ಟ್‌ಗಳನ್ನು ರೂಪಿಸಲು, ನಿರ್ಲಕ್ಷಿತ ಬುಡಕಟ್ಟುಗಳಿಗೆ ಸರ್ಕಾರದ ಸೌಲತ್ತುಗಳು ತಲುಪದೇ ಇರುವ ಬಗ್ಗೆ ಸರ್ಕಾರ ಚಿಂತಿಸಲು ಅಥವಾ ಕ್ರಮಕೈಗೊಳ್ಳಲು ಈ ಮಾಹಿತಿಯನ್ನು ಉಪಯೋಗಿಸಿ ಕೊಳ್ಳಬಹುದಾಗಿದೆ. ಇಲ್ಲಿ ಸಂಗ್ರಹಿಸಿರುವ ಅಂಕಿ-ಅಂಶಗಳು, ಮಾಹಿತಿಗಳು, ಯೋಜನಾಕಾರರಿಗೆ, ಕಾನೂನು ತಜ್ಞರಿಗೆ, ಅಧ್ಯಯನಕಾರರಿಗೆ ಸಂಶೊಧಕರಿಗೆ ಮತ್ತು ಸರ್ಕಾರದ ಯೋಜನೆಗಳ ಬೋಧಕರಿಗೆ ಉಪಯುಕ್ತವಾಗಬಲ್ಲವು.

ಸಮಾರೋಪ

ಬದಲಾಗುತ್ತಿರುವ ಸಾಮಾಜಿಕ ಸಂದರ್ಭಗಳಲ್ಲಿ ಸರ್ಕಾರದ ಯೋಜನೆಗಳು ಬುಡಕಟ್ಟುಗಳಿಗೆ ಸಂಜೀವಿನಿಯಾಗುತ್ತಿವೆ. ಹಲವೊಮ್ಮೆ ಹಲವು ಯೋಜನೆಗಳ ಯೋಜನೆಯಲ್ಲಿ, ಯೋಜನೆಯ ಅನುಷ್ಠಾನದಲ್ಲಿ, ಯೋಜನೆಯ ಫಲಾನುಭವಿಗಳಲ್ಲಿಯ ಏರುಪೇರಿನಿಂದಾಗಿ ಅಥವಾ ಪರಸ್ಪರ ಹೊಂದಾಣಿಕೆ ಇಲ್ಲದಿರುವುದರಿಂದಾಗಿ ನಿಗಧಿತ ಸಾಧನೆ ಆಗುವುದಿಲ್ಲ. ಈ ಅಧ್ಯಯನ ಈ ಎಲ್ಲಾ ಮುಖಗಳನ್ನು ಪರಿಚಯಿಸುವ ಹಾಗೂ ಯೋಜನೆಯ ಧನಾತ್ಮಕ ಸ್ವರೂಪಕ್ಕೆ ಮತ್ತು ಅನುಷ್ಠಾನಕ್ಕೆ ಉಪಯುಕ್ತವಾಗಬಲ್ಲದು. ಗಿರಿಜನ ಉಪ ಯೋಜನೆಯನ್ನು ಅರ್ಥೈಸಲು ಸೂಕ್ತ ಕೋಷ್ಠಕ, ಛಾಯಾಚಿತ್ರ, ವೃತ್ತಚಿತ್ರ, ನಕಾಶೆ ಇತ್ಯಾದಿಗಳನ್ನು ಬಳಸಿಕೊಳ್ಳಲಾಗಿದೆ. ಮುಂದಿನ ಯೋಜಕರಿಗೆ ಈ ಅಧ್ಯಯನ ಒಂದು ಮಾದರಿಯಾಗುವುದೆಂದು ಆಶಿಸಲಾಗಿದೆ.

"ಗಿರಿಜನ ಉಪಯೋಜನೆಯ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ" ಎಂಬ ವಿಷಯದ ಮಹಾಪ್ರಬಂಧ ನನ್ನ ಪ್ರಮಾಣಿಕ ಪ್ರಯತ್ನವಾಗಿದೆ. ಅಧ್ಯಯನ ಕಾಲದಲ್ಲಿ ಗಿರಿಜನ ಉಪಯೋಜನೆಗೆ ಸಂಬಂಧಪಟ್ಟಂತೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಆದರೂ ಯಾವುದಾದರೂ ಮಾಹಿತಿ ಕಣ್ಣುತಪ್ಪಿನಿಂದ ನನ್ನ ಗಮನಕ್ಕೆ ಬಾರದೇ ಉಳಿದರಬಹುದು ಅವುಗಳನ್ನು ಮುಂದಿನ ಅಧ್ಯಯನಕಾರರ ಅಧ್ಯಯನಕ್ಕೆ ಬಿಡಲಾಗಿದೆ.

ಪರಾಮರ್ಶನ ಗ್ರಂಥಗಳು

ಭಾಗ ೧ : ಕನ್ನಡ

೧. ಉಮಾಪತಿ ಬಿ ಎ., (ಲೇ) ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು, ನಾಯಕ.ಹಾ.ಮಾ., (ಪ್ರ.ಸಂ) *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ* (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ, ೧೯೭೯)

೨. ಚಂದ್ರಶೇಖರ ಟಿ ಆರ್., *ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ* (ಹಂಪಿ : ಕನ್ನಡ ವಿಶ್ವವಿದ್ಯಾಲಯ,೧೯೯೯)

೩. ಕಮಲಾಕ್ಷ ಪಿ., *ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ* (ಬೆಂಗಳೂರು : ಕನ್ನಡ ಪುಸ್ತಕ ಪ್ರಾಧಿಕಾರ, ೧೯೯೪)

೪. ಕಾಮತ್, ಸೂರ್ಯನಾಥ್, ಉಪಾಧ್ಯಾಯ (ಪ್ರ.ಸಂ)., *ಕರ್ನಾಟಕ ರಾಜ್ಯ ಗ್ಯಾಜೇಟಿಯರ್* (ಬೆಂಗಳೂರು : ಸರ್ಕಾರಿ ಮುದ್ರಣಾಲಯ, ೧೯೮೪)

೫. ಕೋಡಿರಾಮಪುರ ರಂಗಾರೆಡ್ಡಿ., (ಲೇ) ಚೆಂಚು, ಚೆಂಚರು, ಲಕ್ಕಪ್ಪಗೌಡ ಹೆಚ್ ಜೆ (ಪ್ರ.ಸಂ)., *ಕರ್ನಾಟಕ ಬುಡಕಟ್ಟುಗಳು,* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦)

೬. ಗಂಗಾಧರ ದೈವಜ್ಞ., *ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೦)

೮. ಚಂದ್ರಶೇಖರ ಬಿ.ಎಸ್., *ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೦)

೯. ತಿಪ್ಪೇಸ್ವಾಮಿ ಜಿ ಆರ್ (ಲೇ) ಅಡವಿಚಂಚರು, ಲಕ್ಕಪ್ಪಗೌಡ ಹೆಚ್.ಜೆ. (ಪ್ರ.ಸಂ)., *ಕರ್ನಾಟಕ ಬುಡಕಟ್ಟುಗಳು* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦)

೧೦. ನಂಜಮ್ಮಣಿ (ಅನು)., *ಸಮಾಜ ಶಾಸ್ತ್ರ* (ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೭೩)

೧೧. ನಂಜಮ್ಮಣಿ., *ಪ್ರಾಚೀನ ಭಾರತ ಸಾಮಾಜಿಕ ಇತಿಹಾಸ,* (ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೮೦)

೧೨. ನಂಜಮ್ಮಣಿ ಎಂ., ಸಮಾಜ ಶಾಸ್ತ್ರ ಪರಿಚಯ (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ ,೧೯೭೪)

೧೩. ನಾಗಣ್ಣ ಡಿ.(ಲೇ) *ಕುಡಿಯಾ, ಮಲೈ ಕುಡಿಯಾ,* ಲಕ್ಕಪ್ಪಗೌಡ ಹೆಚ್.ಜೆ. (ಪ್ರ.ಸಂ.) (ಬೆಂಗಳೂರು : ಕರ್ನಾಟಕ ಬುಡಕಟ್ಟುಗಳು ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೮೮)

೧೪. ನಾಗಯ್ಯ ಜೆ.ಎಂ., *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,* (ಬಳ್ಳಾರಿ : ಲೋಹಿಯಾನ ಪ್ರಕಾಶ,೨೦೦೨)

೧೫. ನಾವಡ ಎ.ವಿ., (ಲೇ) *ಕೊರಗರು* ಲಕ್ಕಪ್ಪಗೌಡ ಹೆಚ್.ಜೆ. (ಪ್ರ ಸಂ) *ಕರ್ನಾಟಕ ಬುಡಕಟ್ಟುಗಳು* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦)

೧೬. ನಾಯಕ ಡಿ.ಬಿ. (ಲೇ) ಹಕ್ಕಿ ಪಿಕ್ಕಿಯರು ಲಕ್ಕಪ್ಪಗೌಡ ಹೆಚ್.ಜೆ. (ಪ್ರ.ಸಂ) *ಕರ್ನಾಟಕ ಬುಡಕಟ್ಟುಗಳು* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦)

೧೭. ನಿರಂಜನ., (ಸಂ) ಮನುಕುಲದ ಕಥೆ, ಜ್ಞಾನ ಗಂಗೋತ್ರಿ (ಬೆಂಗಳೂರು : ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ೧೯೭೦)

೧೮. ನಿರಂಜನ ವಾನಳ್ಳಿ., *ಜೇನು ಕುರುಬರ ಹಾದಿಯಲ್ಲಿ ಕೃಷಿ ಹಾಡು* (ಪ್ರಜಾವಾಣಿ : ಸಪ್ತಾಹಿಕ ಪುರವಣಿ ದಿನಾಂಕ ೯.೨.೧೯೯೭.)

೧೯. ಪೂರ್ಣ ಚಂದ್ರ ತೇಜಸ್ವಿ ಕೆ ಪಿ., *ಮಿಸ್ಸಿಂಗ್ ಲಿಂಕ್* (ಮೈಸೂರು : ಪುಸ್ತಕ ಪ್ರಕಾಶನ ಸರಸ್ವತಿ ಪುರಂ ೧೯೯೭)

೨೦. ಬಿಳಿಮಲೆ ಪುರುಷೋತ್ತಮ., *ಕೊರಗ ಸಂಸ್ಕೃತಿ* (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩)

೨೧. ಬೋರಲಿಂಗಯ್ಯ ಹೆಚ್ ಸಿ., *ಗಿರಿಜನ ನಾಡಿಗೆ ಪಯಾಣ* (ಬೆಂಗಳೂರು : ರಾಗಿರೋಟ್ಟಿ ಪ್ರಕಾಶನ, ೧೯೯೧)

೨೨. ಭೈರಪ್ಪ ಕೆ., *ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಮಾಜಿಕ ಚಿಂತನೆ* (ಬೆಂಗಳೂರು : ಎಸ್.ಬಿ.ಎಸ್. ಪಬ್ಲಿಷರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ , ೧೯೯೪)

೨೩. ಭೈರೇಗೌಡ ಎಂ., *ಇರುಳಿಗರ ಜನಾಪದ ಅಧ್ಯಯನ* (ಸಿ.ವಿ.ಜಿ. ಪಬ್ಲಿಕೇಷನ್, ೨೦೦೦)

೨೪. ಪ್ರಶಾಂತ್ ಹೆಚ್ ಡಿ., *ಜನ ಸಮುದಾಯ ಸಂಪುಟ* (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೦)

೨೫. ಮಲ್ಲಿನಾಥಯ್ಯ ಡಿ ಹೆಚ್.,(ಅನು) *ಸಮಾಜ ಶಾಸ್ತ್ರ ಕೈಪಿಡಿ* (ಮೈಸೂರು:ಕನ್ನಡ ಅಧ್ಯಯನ ಸಂಸ್ಥೆ ,೧೯೮೫)

೨೬. ಮಹೇಶ್ವರಯ್ಯ ಹೆಚ್ ಎಂ., *ಮಹಾರಾಷ್ಟ್ರ ಜಾನಪದ* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೭)

೨೭. ರಾಜಪ್ಪ ದಳವಾಯಿ., *ಹಕ್ಕಿ ಪಿಕ್ಕಿಯರ ಸಂಸ್ಕೃತಿ* (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡಿಮಿ ೧೯೯೩)

೨೮. ರಾಜಮಣಿ ಎಂ ಬಿ., (ಲೇ) 'ಕಾಡು ಕುರುಬರು' ಲಕ್ಕಪ್ಪಗೌಡ ಹೆಚ್ ಜೆ. (ಪ್ರ ಸಂ) ***ಕರ್ನಾಟಕ ಬುಡಕಟ್ಟುಗಳು*** (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮)

೨೯. ರಾಜಶೇಖರಯ್ಯ ಎ ಎ., (ಸಂ) *ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು* (ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೬)

೩೦. ಲಲಿತ ಎ ಸಿ., ***ಕಾಡು ಕುರುಬ ಮತ್ತು ಜೇನು ಕುರುಬರ ಸಂಸ್ಕೃತಿ*** (ಬೆಂಗಳೂರು : ಕರ್ನಾಟ ಸಾಹಿತ್ಯ ಅಕಾಡೆಮಿ, ೧೯೯೩)

೩೧. ಲೋಕೇಶ ಎಂ ಎಂ., (ಲೇ) ***ಗೌಡಾಲು*** . ಲಕ್ಕಪ್ಪಗೌಡ ಹೆಚ್.ಜೆ., (ಪ್ರ ಸಂ) ***ಕರ್ನಾಟಕ ಬುಡಕಟ್ಟುಗಳು*** (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮)

೩೨. ವಾಲಿಕರ್ ಚನ್ನಣ್ಣ., (ಲೇ) ಟೋಕ್ರೆಕೋಳಿ, ಲಕ್ಕಪ್ಪಗೌಡ ಹೆಚ್.ಜೆ. (ಪ್ರ ಸಂ) ***ಕರ್ನಾಟಕ ಬುಡಕಟ್ಟುಗಳು*** (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦)

೩೩. ಸಿದ್ದಗಂಗಯ್ಯ ಕಂಬಾಳು ಬಿ., *ಇಲ್ಲಿಗರ ಸಂಸ್ಕೃತಿ* (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩)

೩೪. ಶಂಕರನಾರಾಯಣ ತೀ.ನಂ., ***ಕಾಡು ಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು*** (ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೮೨)

೩೫. ಶಾಂತಿ ನಾಯಕ., (ಲೇ) **ಗೊಂಡರು** ಲಕ್ಕಪ್ಪಗೌಡ ಹೆಚ್.ಜೆ. (ಪ್ರ.ಸಂ) *ಕರ್ನಾಟಕ ಬುಡಕಟ್ಟುಗಳು* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೮)

೩೬. ಹನೂರು ಕೃಷ್ಣಮೂರ್ತಿ., *ಮ್ಯಾಸ ಬೇಡರ ಸಂಸ್ಕೃತಿ* (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩)

೩೭. ಹರೀಶ್ ಪಿ.ಎನ್., (ಲೇ) **ಕೊಡಗಿನ** ಬುಡಕಟ್ಟುಗಳು, *ಜಾನಪದ ಗಂಗೋತ್ರಿ* (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೪)

ಭಾಗ ೨ : ಇಂಗ್ಲೀಷ

1. Alexander K C., Prasad R R., Jahagirdar M P., ***Tribals Rehabilitation and development*** (Jaipur : Rawat Publication, 1991)
2. Aiyappan A., ***Report on the Socio-Economic Condition of the Aboriginal Tribes of the province of Madras,*** (Madras : Govt Press, 1948)
3. Amar Kumar Singh Jabbi M.K., ***Status of Tribals in India*** **(Health, Education, emplyament)** (Delhi : Har-Anand Publication, 1996)
4. Anantha Krishna Iyer L K., ***The Mysore Tribes and Castes,*** (Mysore : The Mysore University, 1935)
5. Anil Kumar Singh (Ed) ***Tribal Life in India*** (New Delhi : Sarup & Sons, 1994)
6. Awadhesh Kumar singh., ***Dynamics of Tribal Ecomnomy :*** (New Delhi : Serials Publications,2003)
7. Bandana Bhuyan., ***Child Development in Tribal Areas,*** (New Delhi : Anmol Publication Pvt Ltd, 1999)
8. Census of India 1991, Series II Karnataka, Primary Census Abstract Scs/ Sts Part II (B) (III), Bangalore Directorate of Census Operation .
9. Chaturbhuj Sahu., ***Indian Tribal Life*** (New Delhi : Sarup and Sons, 2001)
10. Das B K., ***Male Kudiya: Ethnographic Study of the Scheduled Tribes***(Bangalore : Director of Census Operation, 1984)
11. Devnajhan., (Ed) ***From Tribe to Caste*** (New Delhi : Indian Institute of Advanced Study, Shimala, 1997)
12. Devendra Thakur and Thakur D N., (Ed) ***Tribal Development and Planing*** (New Delhi : Deep and Deep Publication, 1977)
13. Doshi S L., ***Tribal Ethnicity, Class and Integration,*** (Jaipur : Rawat Publication, 1990)
14. Doshi S L., ***Emerging Tribal Image*** (Jaipur : Rawat Publication, 1997)
15. Enthoven R E., ***The Tribes & Castes of Bombay*** (Delhi : Delhi Cosmo Publication, 1975) Vol - I, Bombay Govt Central Press.
16. Furer - Haimendorf C Von., ***Tribes of India :A Struggle for Survival*** (Delhi : Oxford University Press, 1985)

17. Gavit M H & Attar Chand., *Tribal and Women Welfare,* (Delhi : H.K. Publishers and distributers, 1989)

18. *India 2004* Complied and edited by Rescarch., Reference and Training Divison (New Delhi : The Director, Publication Divison, Govt of India, 2004)

19. Jain P C., *Planned Development among Tribals* (New Delhi : Rawat Publication, Jaipur, 1999)

20. Iyer L K A., *The Coorg Tribes & Castes,* (Madras : 1948)

21. *Karnataka State Commission for Scheduled Castes and Scheduled Tribes* (Bangalore : Bangalore Annual Report, 2003-04)

22. Kishore C Padhy., *The Challanges of Tribal Development* (New Delhi : Sarup and Sons, 2000)

23. Korovkin M., *History of The Ancient World* (Moscow :Progress Publishers,1985)

24. Karnataka SC/ST Development Corparacation Ltd, Action Plan, 2003-04.

25. Lachman M & Khubchandani., *Tribal Identity* (New Delhi : Indian Institute of Advanced Study-Shimla, 1992)

26. Luiz A A D., *Tribes of Kerala* (New Delhi: Bharatiya Adimajati Sevak Sangh, 1962)

27. Luiz A A D., *Tribes of Mysore* (Bangalore : Viswa and Co, 1963)

28. Mahalingam S., *Tribal Co-Operative System* (Delhi : Rawat Publication, 1992)

29. Mann K., *Tribal Women in a Changing Society* (Delhi : Mittal Publication, 1987)

30. Mamoria C B., *Social Problems and Disorganistion in India* (Allahabad : Kitab Mahal, 1981)

31. Manis Kumar Raha., *Tribal India, Problem Development, Prospect* (New Dehli : Gian Publishing house,.)

32. Mehta D R & Satish K Batra., (Editars) *Administration for Rural Development* (Jaipur : The Center for Administrative Change, 1984)

33. Misra P K., *Jenu Kuruba Bulletin of the Anthropological Survery of India* (1995)

34. Mittal A C & Sharma J B., *Tribal Movement, Politics and Religion in India* (NewDelhi : Radha Publication, 1998)

35. Mohanty M K., *Tribal Society Programmes Planing and Economic Change* (Allahabad : Chugh Publication, 1990)

36. *Mysore State Gagetteer* (Bellary Dist : Govt Press, Bangalore 1972)
37. Nagi B S., *Educating Tribals in India* (New Delhi : Kanishka Publishers, 2000)
38. Nari Rustomji., *Verrier Elwin, Philanthropologist* (New Delhi : Oxford University, 1989)
39. Nanjundayya H V., & L.K.A. Iyer., *The Mysore Tribes and Castes* (Mysore : Mysore University, 1931)
40. *National Commission for Scheduled Castes and Scheduled Tribes* Third report 1994-95, 1995-96, Vol -II Karnataka.
41. *National Commission for Scheduled Castes and Scheduled Tribes* Fourth report 1996-97, 1997-98, Vol -II Karnataka.
42. Pandey A K., *Tribal Society in India* (Delhi : Manak Publication Pvt Ltd, 1997)
43. Parvathamma C., *Scheduled Castes and Tribes: A Socio - Economic Survey* (New Delhi : Ashish Publishing, 1984)
44. Raghavaiah V., *Tribes of India* (New Delhi : Bharatiya Adimajati Sevak Sang, 1972)
45. Sahay K N., *Dynamics and Dimensions of Tribal Societies,* (New Delhi : Commonwelth Publishers, 1998)
46. Sherring M A., *Hindu Tribes & Castes,* (New Delhi : Casmo Publication, 1987) Vol- III.
47. Shivaram Karanth., *The Headman of the little hill* (Bangalore : I.B.H. Prakashan, 1979)
48. Simhadri Y C., *Denotified Tribes (A Socialogical Analysis)* (New Delhi : Classical Publishing Co, 1991)
49. Singh K S., *The Scheduled Tribes* (Delhi : Oxford University Press, 1994) Vol - III.
50. Singh K S., (Ed) *Jawaharlal Nehru Tribes and Tribes Policy* (
51. Sing N K & Narayanan A K., (Edited) *Integrated rural development (Innovative approaches)* (New Delhi : Allied Publication Ltd, 1996)
52. *Social Welfare Govt of Karnataka Annual report* 2003-04.
53. Sundran Nair M K., *Tribal Economy in Transition* (New Delhi : Inter- India Publication, 1987)
54. Syed Siraj ul Hassan., *The Castes & Tribes of H.E.H The Nizam's Dominions* (New Delhi: Asian Educational Services, 1989)

55. Thurston E., *Castes and Tribes of Southern India* (New Delhi : Cosmo Publication, 1975) Vol - I

56. Tripathy S N., *Tribals in India: The Changing Scenario* (New Delhi : Discovery Publishing house, 1998)

57. Thurston E & Rangachari K., *Castes & Tribes of Southern India* (New Delhi : Madras Govt Press, 1909) (Rpt : Asian Education Services, 1988)

58. Upadhaya H C. (Ed) *Status of Scheduled Tribes in India* (New Delhi : Anmol Publication Pvt Ltd, 1999)

59. Vasudevan C., *Koragas : The Forgotten Lot* (Trichu: The Ethos ,1998)

60. Vidya Bhushan and Sachideva D R., *An Introduction to Sociology* (New Delhi : Kitab Mahal, 1985)

61. Vidyarthi L P., *Applied Anthropology in India* (New Delhi : Kitab Mahal, 2000)

62. *Warld Book Encyclopedia,* (U.S.A : 1991) Vol - T.19.

ಭಾಗ ೩ : ಇತರೆ

೧. *ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ* ಬೆಂಗಳೂರು ಕಾರ್ಯ ಚಟುವಟಿಕೆಗಳು ೨೦೦೩-೦೪.

೨. ಕರ್ನಾಟಕ ರಾಜ್ಯ ಪತ್ರ ಭಾಗ-೪, ಸೆಕ್ಷನ್ ೧-ಬಿ, ಕೇಂದ್ರ ಅಧಿನಿಯಮಗಳು ಮತ್ತು ಅಧ್ಯಾದೇಶಗಳು ಗುರುವಾರ ಡಿಸೆಂಬರ್ ೧೯, ೧೯೯೧.

೩. ಕರ್ನಾಟಕ ಸರ್ಕಾರದ ನಡುವಳಿಗಳು, ಸರ್ಕಾರಿ ಆದೇಶ ಸಂಖ್ಯೆ ಸಮಾಜ ಕಲ್ಯಾಣ ಇಲಾಖೆ ೧೭೭, ಎಸ್‌ಎಡಿ ೯೯ ಬೆಂಗಳೂರು ದಿನಾಂಕ ೧೫.೬.೨೦೦೩.

೪. ಪಂಚಾಯತ್ ಕಾರ್ಯಕ್ರಮಗಳು ಮಾರ್ಗದರ್ಶಿ, ಕರ್ನಾಟಕ ಸರ್ಕಾರ ೨೦೦೧.

೫. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮಾರ್ಗಸೂಚಿ ೨೦೦೧.

೬. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಪ್ರಕಟಣೆ ಜಿಲ್ಲಾ ಅಂಕಿ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬಳ್ಳಾರಿ ೧೯೯೯-೦೦, ೨೦೦೧- ೦೨, ೨೦೦೨-೦೩.

೭. ಭಾರತ ಸಂವಿಧಾನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೮೫.

೮. ಬೆಂಗಳೂರು ನಗರ ಜಿಲ್ಲಾ ವಾರ್ತಾ ಪತ್ರ ಜಿಲ್ಲಾ ಪಂಚಾಯತ್ ಬೆಂಗಳೂರು (ನಗರ) ಮೇ. ೨೦೦೪.

೯. ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೦೦-೦೧.

೧೦. ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೦೧-೦೨.

೧೧. ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೦೩-೦೪.

ಅನುಬಂಧಗಳು

ಅನುಬಂಧ ೨.೧

ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಸಂತ್ರಸ್ಥರಿಗೆ ನೀಡುತ್ತಿರುವ ಪರಿಹಾರದ ವಿವರಗಳು

೧. ಖಾದ್ಯವಲ್ಲದ ಅಥವಾ ಅಸಹ್ಯಕರವಾದ ಯಾವುದೇ ಪದಾರ್ಥವನ್ನು ತಿನ್ನುವುದಕ್ಕೆ ಅಥವಾ ಕುಡಿಯುವುದಕ್ಕೆ ಬಲತ್ಕರಿಸುವುದು (ಪ್ರಕರಣ ೩ (೧) (೧))	ಗಾಯ, ಕಿರುಕುಳ, ಅಪಮಾನದ ಸ್ವರೂಪ ಮತ್ತು ತೀವ್ರತೆಯನ್ನಾಧರಿಸಿ ೨೫,೦೦೦ ರೂ.ಗಳು ಅಥವಾ ಅವಕ್ಕೂ ಮೀರಿದ ಮೊಬಗಲನ್ನು ಪರಿಹಾರವಾಗಿ ಕೆಳಕಂಡಂತೆ ನೀಡಲಾಗುವುದು. ೧. ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ, ಸಂಪೂರ್ಣ ಪರಿಹಾರವನ್ನು ನೀಡಲಾಗುವುದು
೨. ಗಾಯ, ಅವಮಾನ, ಕಿರುಕುಳ ನೀಡುವುದು (ಪ್ರಕರಣ ೩ (i) (ii))	
೩. ಅಪಮಾನಿಸುವ ಕೃತ್ಯಗಳು (ಪ್ರಕರಣ ೩ (i) (iii))	
೪. ಜಮೀನು ಇತ್ಯಾದಿಗಳ ಅಕ್ರಮ ಸ್ವಾಧೀನ ಮತ್ತು ಸಾಗುವಳಿ (ಪ್ರಕರಣ ೩ (i) (iv))	ಮೇಲೆ ನಮೂದಿಸಿದ, ನಿಬಂಧನೆಯಂತೆ ರೂ. ೨೫,೦೦೦ ಪರಿಹಾರವನ್ನು ಅಪರಾಧದ ಸ್ವರೂಪ ಮತ್ತು ತೀವ್ರತೆಯನ್ನು ಅನುಸರಿಸಿ, ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಸಂಪೂರ್ಣ ಪರಿಹಾರದ ಮೊತ್ತವನ್ನು ನೀಡಲಾಗುವುದು. ಸರ್ಕಾರಿ ವೆಚ್ಚದಲ್ಲಿ ಅವಶ್ಯಕವಾದಲ್ಲಿ ಸ್ವಾಧೀನತೆಯನ್ನು ಪೂರ್ವಸ್ಥಿತಿಗೆ ತರುವುದು.
೫. ಜಮೀನು, ನಿವೇಶನ, ನೀರು ಮುಂತಾದವುಗಳನ್ನು ಅಕ್ರಮಿಸಿಕೊಳ್ಳುವುದು (ಪ್ರಕರಣ ೩ (i) (v))	
೬. ಜೀತದ ಕೆಲಸಕ್ಕೆ ಒತ್ತಾಯಿಸುವುದು (ಪ್ರಕರಣ ೩ (i) (vi))	ಪ್ರಥಮ ವರ್ತಮಾನ ವರದಿ ಸಲ್ಲಿಸುವಾಗ ಶೇ.೨೫ ಭಾಗ ಪರಿಹಾರ ಹಾಗೂ ನ್ಯಾಯಾಲಯದಲ್ಲಿ ದೋಷರೋಪಣಾ ಪಟ್ಟಿ ಸಲ್ಲಿಸಿದ ನಂತರ ಶೇ. ೭೫ರ ಸಂದಾಯ ಹೀಗೆ ಒಟ್ಟಾರೆ ಪ್ರತಿಯೊಬ್ಬರಿಗೆ ರೂ. ೨೫,೦೦೦ ಕ್ಕೆ ಮೀರದಂತೆ.
೭. ಮತಾಧಿಕಾರಕ್ಕೆ ಸಂಬಂಧಪಟ್ಟಂತೆ (ಪ್ರಕರಣ ೩ (i) (vii))	ಅಪರಾಧದ ಸ್ವರೂಪ ಮತ್ತು ತೀವ್ರತೆಯನ್ನಾಧರಿಸಿ ದೌರ್ಜನ್ಯಕ್ಕೆ ಒಳಪಟ್ಟ ಪ್ರತಿವ್ಯಕ್ತಿಗೆ ರೂ. ೨೦,೦೦೦ದವರೆಗೆ ಪರಿಹಾರ ನೀಡಲಾಗುವುದು.
೮. ಸುಳ್ಳಿನ, ಕೃತಿಮ ಅಥವಾ ವಂಚನೆಯ ಕಾನೂನು ವ್ಯವಹಾರ (ಪ್ರಕರಣ ೩ (i) (viii))	ವಿಚಾರಣೆ ಪೂರ್ಣಗೊಂಡ ನಂತರ ರೂ. ೨೫,೦೦೦ ಅಥವಾ ವಾಸ್ತವಿಕವಾಗಿ ಮಾಡಿದ ಕಾನೂನು ವೆಚ್ಚ ಅಥವಾ ಹಾನಿ, ಇದರಲ್ಲಿ ಯಾವುದು ಕಡಿಮೆಯೋ ಅದು.
೯. ಸುಳ್ಳು ಅಥವಾ ತಿರುಳಿಲ್ಲದ ಮಾಹಿತಿ ಸೃಷ್ಟಿ (ಪ್ರಕರಣ ೩ (1) (ix))	
